# ಎಣ್ಣೆ ಬತ್ತಿದ ಲಾಟೀನು

ಉಮ್ರಾ ಅನುಭವ

ಏ.ಕೆ. ಕುಕ್ಕಿಲ

ಓದು
ಪ್ರಕಾಶನ

**ENNE BATTIDA LATEENU**

**(UMRA ANUBHAVA)**

A Umra Journey Experience By A.K. Kukkila
Published by: Odu (Read) Prakashana
Flat No. 106, Royal Planet, Jeppu, Mangaluru
email: khyder75@yahoo.com
Cell : 08105033315, 9880096128

Copyright: Publisher

First Edition : September 2017
Second Edition : November 2017
Pages : 112
Size : 1/8 Demmy
Paper Used : N.S. Maplitho 80 Gsm
Copies : 500
Price : ₹ 130

**ಮೊದಲನೆ ಮುದ್ರಣ : ಸೆಪ್ಟೆಂಬರ್** 2017
**ದ್ವಿತೀಯ ಮುದ್ರಣ : ನವೆಂಬರ್ 2017**
**ಪುಟಗಳು:** 112
**ಅಳತೆ:** 1/8 ಡೆಮಿ
**ಬಳಸಿರುವ ಕಾಗದ :** ಎನ್.ಎಸ್. ಮ್ಯಾಪ್ಲಿತೊ 80 ಜಿ.ಎಸ್.ಎಂ.
**ಪ್ರತಿಗಳು:** 500
**ಬೆಲೆ:** ₹ 130
**ಮುಖಪುಟ ಚಿತ್ರ:** ತೌಸೀಫ್ ಅಹ್ಮದ್ ವೇಣೂರು (ಮದೀನಾ)
**ಮುಖಪುಟ ವಿನ್ಯಾಸ:** ಶೇಖ್ ಸಲ್ಮಾನ್

**ಪ್ರಕಾಶಕರು**
**ಓದು ಪ್ರಕಾಶನ**
ಫ್ಲಾಟ್ ನಂ. 106, ರೋಯಲ್ ಪ್ಲಾನೆಟ್, ಜೆಪ್ಪು, ಮಂಗಳೂರು
email: khyder75@yahoo.com
Cell : 08105033315, 9880096128

**ಮುದ್ರಣ: ಕಂಪ್ರಿಂಟ್, ಹಿದಾಯತ್ ಸೆಂಟರ್ ಮಂಗಳೂರು– 1**



**ಮುನ್ನುಡಿ**

# ಮಿನಾರದ ತುದಿಯ ಬೆಳಕು

**ಪ್ರಿಯ ಸೋದರ ಕುಕ್ಕಿಲ,**

"ಎಣ್ಣೆ ಬತ್ತಿದ ಲಾಟೀನ"ನ್ನು ನೀವು ಕಳುಹಿಸಿ ಎಷ್ಟು ವಾರಗಳಾದವೋ ನನಗೆ ಮರೆತೇ ಹೋಗಿದೆ. ಈ ಪುಸ್ತಕಕ್ಕೊಂದು ಮುನ್ನುಡಿ ಬರೆದುಕೊಡಿ ಎಂದು ನೀವು ಕೇಳಿದ್ದನ್ನು ನಾನು ಮರೆತಿರಲಿಲ್ಲ. ಹಾಗೆ ಮರೆತುಹೋಗಬಾರದೆಂದು ನನ್ನ ಕಂಪ್ಯೂಟರ್‌ನ ಡೆಸ್ಕ್‌ಟಾಪ್‌ನಲ್ಲಿಯೇ ನಿಮ್ಮ ಪುಸ್ತಕದ ಪಿಡಿಎಫ್ ಪ್ರತಿಯನ್ನು ಇಟ್ಟುಕೊಂಡಿದ್ದೆ. ಆದರೆ ಜಗತ್ತಿನ ಎಲ್ಲ ಉಸಾಬರಿಗಳನ್ನು ನನಗೇ ಅರಿವಿಲ್ಲದಂತೆ ತಲೆಗೆ ಹಚ್ಚಿಕೊಳ್ಳುತ್ತಿರುವ ನನಗೆ, ಪುಸ್ತಕ ಓದಲು ಪುರುಸೊತ್ತು ಸಿಗಲೇ ಇಲ್ಲ. ಆರಂಭದ ಕೆಲವು ವಾರಗಳಲ್ಲಿ ನಿರಾಳವಾಗಿದ್ದ ನೀವು ಆಮೇಲೆ ಒಂದೊಂದೇ ವಾಟ್ಸ್ಯಾಪ್ ಮತ್ತು ಮೊಬೈಲ್ ಮೆಸೇಜ್ ಗಳನ್ನು ಕ್ಷಿಪಣಿಗಳಂತೆ ಹಾರಿಸಿದಿರಿ. ಸಮಯ ಸಿಕ್ಕಿದಾಗೆಲ್ಲ ಫೋನ್ ಮಾಡಿದಿರಿ. ನಾನೂ ಹೂಂ ಅಂದೆ. ಆದರೆ ಓದಲು ಸಮಯ ಸಿಗಲಿಲ್ಲ. ಒಂದು ವಾರ ಕುರ್ಚಿಗೆ ಅಂಟಿ ಕೂತರೆ ಸತ್ತೇ ಹೋಗುವಷ್ಟು ಬೇಸರಪಡುವ ನಾನು ಸದಾ ಕಾಲಿಗೆ ಚಕ್ರ ಕಟ್ಟಿಕೊಂಡೇ ಇರುವವನು. ಹಾಗೆ ಊರೂರು ಅಲೆಯುವಾಗೆಲ್ಲ ಅನ್ನಿಸಿದ್ದುಂಟು– ಹೀಗೆ ತಿರುಗಾಡುವ ಬದಲು ಕುಕ್ಕಿಲ ಕಳಿಸಿದ ಪುಸ್ತಕವನ್ನು ಒಂದೇ ಒಂದು ದಿನ ಸುಮ್ಮನೆ ಕುಳಿತು ಓದಿದ್ದರೆ ಎಷ್ಟು ಚೆನ್ನಾಗಿತ್ತು– ಅಂತ.

ಇರಲಿ, ಇವತ್ತು ಮುಹೂರ್ತ ಕೂಡಿ ಬಂತು. ಬೆಳಿಗ್ಗೆ ಕಂಪ್ಯೂಟರ್ ಮುಂದೆ ಕುಳಿತವನು ಒಂದೇ ಗುಕ್ಕಿಗೆ ಪುಸ್ತಕವನ್ನು ಓದಿ ಮುಗಿಸಿದೆ. ಓದುತ್ತಾ ಓದುತ್ತಾ ಟೇಬಲ್ ಮೇಲೆ ಹರವಿಕೊಂಡಿದ್ದ ಐದಾರು ಹಾಳೆಗಳ ಮೇಲೆ ಟಿಪ್ಪಣಿಗಳನ್ನು ಹಾಕಿಕೊಳ್ಳುತ್ತಾ ಹೋದೆ. ನೀವು ಸಾಫ್ಟ್ ಪ್ರತಿ ಕಳುಹಿಸಿದಾಗ ಇದೊಂದು ಪ್ರವಾಸ

ಕಥನ ಎಂದಿದ್ದಿರಿ. ಭಾರತದ ದಕ್ಷಿಣ ಕರಾವಳಿಯ ಪುಟ್ಟ ನಗರವೊಂದರಿಂದ ಮರುಭೂಮಿಯ ನಡುವಿನ ಕೊಲ್ಲಿ ದೇಶದಲ್ಲಿರುವ ಪವಿತ್ರ ನಗರವೊಂದಕ್ಕೆ ಪ್ರವಾಸ ಹೋಗುವುದು ಇವತ್ತು ಅತ್ಯಂತ ಪ್ರಯಾಸದ ಕೆಲಸವೇನಲ್ಲ. ಅಷ್ಟೊಂದು ಸೌಕರ್ಯಗಳಿವೆ. ಜಗತ್ತಿನಾದ್ಯಂತ ಕೋಟ್ಯಂತರ ಮುಸ್ಲಿಮರ ಆಜೀವಪರ್ಯಂತ ಕನಸು ಈ ಮಕ್ಕಾ ಯಾತ್ರೆ. ಅದು ಹಜ್ ಇರಬಹುದು ಅಥವಾ ಉಮ್ರಾ ಇರಬಹುದು. ಎಲ್ಲ ಕಾಲಗಳಲ್ಲೂ, ಎಲ್ಲ ದೇಶಗಳಲ್ಲೂ ಜೀವಂತ ಇದ್ದ/ ಇರುವ ಕೋಟ್ಯಂತರ ಮುಸ್ಲಿಮರ ಪ್ರಶ್ನಾತೀತ ಶ್ರದ್ಧಾಕೇಂದ್ರವಾದ ಮಕ್ಕಾ ನಗರವನ್ನೊಮ್ಮೆ ನೋಡಬೇಕೆಂಬುದು ಕಾಲ–ದೇಶಗಳನ್ನು ಮೀರಿದ ಒಂದು ನಿರಂತರ ಹಂಬಲ. ಜಗತ್ತಿನ ಎಲ್ಲ ದೇಶಗಳಲ್ಲಿರುವ ಮುಸ್ಲಿಮರಲ್ಲೂ ಈ ಹಂಬಲದ ಮೊಳಕೆ ಉಚ್ವಾಸ–ನಿಶ್ವಾಸದಂತೆ ಸದಾ ಚಲಿಸುತ್ತಿರುತ್ತದೆ.

ಹಾಗೆಂದು ಎಲ್ಲರೂ ಮಕ್ಕಾ ಯಾತ್ರೆ ಕೈಗೊಳ್ಳಲು ಆಗಿದೆಯೆ? ಖಂಡಿತಾ ಇಲ್ಲ. ಎಲ್ಲ ಸೌಕರ್ಯಗಳಿದ್ದೂ, ಕೋಟ್ಯಂತರ ರೂಪಾಯಿ ಪದತಲದಲ್ಲಿದ್ದೂ ಹಜ್ ಯಾತ್ರೆ ನಿರ್ವಹಿಸಲಾಗದ ಎಷ್ಟೊಂದು ಶ್ರೀಮಂತರಿದ್ದಾರೆ; ಮದುವೆ ಹಾಲ್‌ನ ಮುಂದೆ ಬರಿಗಾಲಿನಲ್ಲಿ ಸೆಂಟ್ ಬಾಟಲಿಗಳನ್ನು ಮಾರಿ ಪೈಸೆಗೆ ಪೈಸೆ ಕೂಡಿಟ್ಟು ಮೂರು ಮೂರು ಹಜ್‌ಗಳನ್ನು ನಿರ್ವಹಿಸಿದ ಬಡವರೂ ಇದ್ದಾರೆ! ಎಲ್ಲದಕ್ಕೂ ಅಲ್ಲಾಹನ ಕರುಣೆ ಬೇಕು. ನಿಮ್ಮ ಉದಾಹರಣೆಯನ್ನೇ ನೋಡಿ– ಕವಿಗೋಷ್ಠಿಯೊಂದರ ಅಧ್ಯಕ್ಷತೆಯನ್ನು ಮುಗಿಸಿ ವೇದಿಕೆಯಿಂದ ಕೆಳಗಿಳಿದು ಬಂದಾಗ ನಿಮ್ಮ ಗೆಳೆಯನೊಬ್ಬ ನಿಮಗೆ ನೀಡಿದ ಉಮ್ರಾ ಯಾತ್ರೆಯ ಆಹ್ವಾನವನ್ನು ನೀವು ನಂಬಲೇ ಇಲ್ಲ! ಅಲ್ಲಾಹು ಎಲ್ಲವನ್ನೂ ಮೊದಲೇ ಬರೆದಿಡುತ್ತಾನೆ ಎನ್ನುವುದಷ್ಟೇ ಅಂತಿಮ ಸತ್ಯ.

ಈ ಆಹ್ವಾನ ಸಿಕ್ಕಿದ ಸಮಯವಾದರೂ ಎಂತಹದ್ದು! ಒಂದೆಡೆ ನಿಮ್ಮ ವೃದ್ಧ ತಂದೆ ವಿಪರೀತ ಅಸೌಖ್ಯದಿಂದ ಹಾಸಿಗೆ ಹಿಡಿದಿದ್ದರು. ಇನ್ನೊಂದೆಡೆ ನಿಮ್ಮ ಪತ್ನಿ ತುಂಬು ಗರ್ಭಿಣಿ. ಇಬ್ಬರ ಹತ್ತಿರವೂ ಇರಲೇಬೇಕಾಗಿದ್ದ ನೀವು ಸಾವಿರಾರು ಮೈಲಿ ದೂರದಲ್ಲಿರುವ ಅಲ್ಲಾಹನ ಪರಮ ಪವಿತ್ರ ಕಾಬಾದ ಸನ್ನಿಧಾನಕ್ಕೆ ಹೋಗಲು ಉಚಿತ ಅವಕಾಶವೊಂದು ಅರಸಿ ಬಂದಿದೆ. ಇಂತಹ ಅವಕಾಶ ಒಮ್ಮೆ ಬಿಟ್ಟರೆ ಇನ್ನೊಮ್ಮೆ ಸಿಗುವುದೋ ಗೊತ್ತಿಲ್ಲ! ಆದರೆ ಅಪ್ಪನನ್ನು ಬಿಟ್ಟು ಯಾತ್ರೆಗೆ ಹೊರಟರೆ ಮರಳಿ ಬರುವಾಗ ಅವರು ಇರುವರೋ ಇಲ್ಲವೋ ಎಂಬ ಆತಂಕ.

ಅವಕಾಶಗಳನ್ನು, ಸವಾಲುಗಳನ್ನು ನಮ್ಮೆದುರಿಗಿಡುವ ಅಲ್ಲಾಹುವೇ ಅವುಗಳಿಗೆ ಪರಿಹಾರವನ್ನೂ ಸೂಚಿಸುತ್ತಾನೆ. ನಿಮ್ಮ ಉಮ್ರಾ ಯಾತ್ರೆಗೆ 14 ದಿನಗಳ ಮುಂಚೆಯೇ ಅಲ್ಲಾಹು ನಿಮ್ಮ ತಂದೆಯನ್ನು ತನ್ನ ಬಳಿಗೆ ಕರೆಸಿಕೊಂಡು ಬಿಟ್ಟ. ನಿಮ್ಮ ಮಟ್ಟಿಗೆ ಅದು ಸಂದಿಗ್ಧಕ್ಕೆ ಪರಿಹಾರವಲ್ಲ. ಆದರೆ ಅಲ್ಲಾಹುವಿನ ಮಟ್ಟಿಗೆ ಅರ್ಹ ನಿರ್ಧಾರ. ಅಲ್ಲಾಹನ ಪ್ರತಿಯೊಂದು ನಿರ್ಧಾರಗಳಿಗೂ ಅವನದ್ದೇ ಆದ ಸಕಾರಣಗಳಿರುತ್ತವೆ. ಅದು ನಮ್ಮ ಮನ ಮಸ್ತಿಷ್ಕಗಳ ಅರಿವಿಗೆ ನಿಲುಕುವುದಿಲ್ಲ.



■ ಎಣ್ಣೆ ಬತ್ತಿದ ಲಾಟೀನು ■

ನನ್ನ ಪ್ರಕಾರ ಇದು ಕೇವಲ ಒಂದು ಪ್ರವಾಸ ಕಥನವಲ್ಲ. ಮಂಗಳೂರಿನಿಂದ ಮಕ್ಕಾವರೆಗೆ ಹೋಗಿ ಬಂದ ನೀವು ಅಲ್ಲಿ ಹೆಜ್ಜೆ ಹೆಜ್ಜೆಗೂ ಇಸ್ಲಾಮಿನ ಹೆಜ್ಜೆ ಗುರುತುಗಳನ್ನು ವಿಶ್ಲೇಷಿಸಿದ ಅತ್ಯಪೂರ್ವ ವೈಚಾರಿಕ ಓದು ಇದು. ಇಸ್ಲಾಮೀ ಇತಿಹಾಸದ ತಳಸ್ಪರ್ಶಿ ಓದಿನ ಹಿನ್ನೆಲೆ ನಿಮಗೆ ಇದ್ದುದರಿಂದಲೇ ಈ ಓದಿಗೆ ಭಾವುಕ ಸ್ಪರ್ಶದ ಜತೆಗೆ ಒಂದು ವೈಚಾರಿಕ ಗಾಂಭೀರ್ಯವೂ ದಕ್ಕಿದೆ. ಎಷ್ಟೊಂದು ಸಣ್ಣ ಪುಟ್ಟ ವಿವರಗಳನ್ನೂ ಇಲ್ಲಿ ನಮ್ಮ ಕಣ್ಣಿಗೆ ಕಟ್ಟುವಂತೆ ವಿವರಿಸಿದ್ದೀರಿ! ಒಂದು ಅಪರಿಚಿತ ಸ್ಥಳವನ್ನು ನೋಡುತ್ತಾ ಅಕ್ಷರಗಳಲ್ಲಿ ಅದು ಜೀವಂತವಾಗುವಂತೆ ವಿವರಿಸುವುದು ಬೇರೆ; ಸಮಕಾಲೀನ ಸಂದರ್ಭದ ಎಚ್ಚರವನ್ನು ಇಟ್ಟುಕೊಂಡು, ಇತಿಹಾಸದ ಪಳೆಯುಳಿಕೆಗಳನ್ನು ಸ್ಪರ್ಶಿಸಿ ಓದುಗರ ದರ್ಶನಕ್ಕೆ ದಕ್ಕಿಸುವುದೇ ಬೇರೆ. ನಿಮ್ಮದು ಎರಡನೆಯ ಕ್ರಮದ ಬರವಣಿಗೆ. ಅದು ಪುಸ್ತಕದ ಉದ್ದಕ್ಕೂ ಕಣ್ಣಿಗೆ ಕಟ್ಟುವಂತಿದೆ. 40 ವರ್ಷಗಳ ನಿಮ್ಮ ಜೀವಿತಾವಧಿಯಲ್ಲಿ ಮೊತ್ತ ಮೊದಲ ಬಾರಿಗೆ ವಿಮಾನದೊಳಕ್ಕೆ ಹೋದ ನೀವು ಆ ವಿಮಾನ ಪ್ರಯಾಣದ ಬಗ್ಗೆ ಬರೆದದ್ದಾಗಲೀ, ಮಕ್ಕಾದಲ್ಲಿ ಹೆಜ್ಜೆಯೂರಿದ ಮೊದಲ ಕ್ಷಣವನ್ನು ನೆನಪಿಸಿಕೊಂಡದ್ದಾಗಲೀ, ನಿಮ್ಮ ಜೀವನದುದ್ದಕ್ಕೂ ಐದು ಹೊತ್ತಿನ ನಮಾಜಿನಲ್ಲಿ ನಿಮ್ಮ ಒಳಗಣ್ಣಿನ ಮುಂದೆ ಪ್ರತ್ಯಕ್ಷವಾಗುತ್ತಿದ್ದ ಕಾಬಾವನ್ನು ನೇರ ಕಣ್ಣುಗಳಿಂದ ಮೊದಲ ಬಾರಿಗೆ ನೋಡಿದ್ದಾಗಲೀ..– ಎಲ್ಲ ವಿಷಯಗಳೂ ಇಲ್ಲಿ ಎಷ್ಟೊಂದು ಆಪ್ತವಾಗಿ ಬರವಣಿಗೆಯಲ್ಲಿ ಬಂದಿದೆಯೆಂದರೆ ನಿಮ್ಮ ಜತೆಗೆ ನಾವೂ ಈ ಉಮ್ರಾ ಯಾತ್ರೆಯನ್ನು ಕೈಗೊಂಡ ಅನುಭವವಾಗುತ್ತದೆ.

ಎಷ್ಟು ಚೆಂದ ಬರೆದಿದ್ದೀರಿ ಕುಕ್ಕಿಲ! ವಿಷಯಗಳನ್ನು ಗ್ರಹಿಸುವ ಮತ್ತು ಅದನ್ನು ಮೂಲ ಇಸ್ಲಾಮಿನ ನಿಕಷಕ್ಕೆ ಒಡ್ಡುವ ನಿಮ್ಮ ಸಾಮರ್ಥ್ಯ ಅಪರೂಪದ್ದು. ನಿಮ್ಮ ಕನ್ನಡ ನಿಜಕ್ಕೂ ರಸಬಾಳೆಯ ಸ್ವಾದ ಹೊಂದಿದೆ. ಹಾಗೆಯೇ ಅದಕ್ಕೆ ವಿಶ್ಲೇಷಣೆಯ ಜೇನಿನ ಸವಿ ತಾಗಿದಂತಿದೆ. ನೀವು ಬರೆಯುತ್ತೀರಿ:

"ನಾನು ಉಮ್ರಾ ಉಡುಪನ್ನು ಬ್ಯಾಗ್‌ನಿಂದ ಹೊರತೆಗೆದೆ. ಎಲ್ಲರೂ ಉಡುಪು ಧರಿಸುವ ತುರ್ತಿನಲ್ಲಿದ್ದರು. ನನ್ನ ಮಟ್ಟಿಗೆ ಅಂತಹದ್ದೊಂದು ಉಡುಪನ್ನು ಧರಿಸುತ್ತಿರುವುದು ಅದೇ ಮೊದಲು. ಎರಡು ಅಚ್ಚ ಬಿಳಿ ಬಣ್ಣದ ಬಟ್ಟೆಯ ತುಂಡುಗಳು. ಒಂದು ಉಡಲು ಮತ್ತು ಇನ್ನೊಂದನ್ನು ಹೊದೆಯಲು. ಈ ಎರಡನ್ನು ಬಿಟ್ಟರೆ ಶರೀರದಲ್ಲಿ ಇನ್ನಾವ ಬಟ್ಟೆಯ ತುಂಡುಗಳೂ ಇಲ್ಲ... ಆದರೆ ಆಗ ನನ್ನನ್ನು ಆ ಬಟ್ಟೆ ಅಷ್ಟಾಗಿ ಸೆಳೆದಿರಲಿಲ್ಲ. ಎಲ್ಲ ಉಡುಪುಗಳಂಥ ಒಂದು ಉಡುಪು ಎಂಬ ಭಾವದ ಆಚೆಗೆ ಅದು ಒಳಗೊಂಡಿರಬಹುದಾದ ಮಾಂತ್ರಿಕ ಶಕ್ತಿಯನ್ನು ನಾನು ಅಂದಾಜಿಸಿರಲಿಲ್ಲ. ನನ್ನ ಈವರೆಗಿನ ಬದುಕಿನ ಉದ್ದಕ್ಕೂ ಇಷ್ಟದಿಂದ ಧರಿಸುತ್ತಾ ಬಂದಿರುವ ಉಡುಪಿನಿಂದ ಸಂಪೂರ್ಣ ಕಳಚಿಕೊಂಡು ಬೇರೆಯೇ ಆದ ಮತ್ತು ಈವರೆಗೆ ಜೀವನದಲ್ಲಿ ಒಮ್ಮೆಯೂ ಧರಿಸಿಲ್ಲದ, ತೀರಾ ಜುಜುಬಿಯಂತೆ ಕಾಣುವ ಎರಡು ತುಂಡು ಬಿಳಿಬಟ್ಟೆಯನ್ನು ಧರಿಸಿದ ಆ ಸಂದರ್ಭ ಅಭೂತಪೂರ್ವ.

ಅದರಲ್ಲೊಂದು ಆಯಸ್ಕಾಂತೀಯ ಗುಣ ಇದೆ. ಅದರಲ್ಲೊಂದು ಏಕಾಗ್ರತೆ ಇದೆ... ಪ್ರತಿ ಉಡುಪೂ ಯಾವುದೋ ಒಂದು ಕಥೆ ಹೇಳುತ್ತದೆ, ಒಂದು ಸೂಚನೆಯನ್ನು ಕೊಡುತ್ತದೆ, ಏನೋ ಹೇಳಬಯಸುತ್ತದೆ. ಬಹುಶಃ ಈ ಎಲ್ಲ ಭಾವಬಿಂಬವನ್ನೂ ಅನಾಮತ್ತಾಗಿ ಕಿತ್ತೆಸೆಯುವ ಸಾಮರ್ಥ್ಯ ಇರುವುದು ಉಮ್ರಾ ಉಡುಪಿಗೆ ಮಾತ್ರ. ಈ ಉಡುಪನ್ನು ಧರಿಸುವುದಕ್ಕಾಗಿ ಈ ಮೊದಲು ಧರಿಸಿದ ಉಡುಪನ್ನು ನಾವು ಕಳಚುತ್ತೇವಲ್ಲ, ಅದು ದಿನನಿತ್ಯ ನಾವು ಬಟ್ಟೆಯನ್ನು ಕಳಚಿದಷ್ಟು ಸಲೀಸಲ್ಲ. ಅಲ್ಲಿಯವರೆಗಿನ ಎಲ್ಲದರಿಂದಲೂ ನಾವು ಕಳಚಿಕೊಂಡಂತೆ ಅನ್ನಿಸುತ್ತದೆ. ಮಾನವಸಹಜ ಸರ್ವ ದೌರ್ಬಲ್ಯಗಳಿಂದಲೂ ಬಿಡುಗಡೆಗೊಂಡಂತೆ ತೋರುತ್ತದೆ."

ಉಮ್ರಾ ಯಾತ್ರೆಯ ಅತ್ಯಂತ ಪುಟ್ಟ ಸಂದರ್ಭವನ್ನೂ, ಇತಿಹಾಸ ಮತ್ತು ಸಮಕಾಲೀನ ದೃಷ್ಟಿಕೋನದಿಂದ ಸಮಚಿತ್ತವಾಗಿ ಗ್ರಹಿಸುವ ನಿಮ್ಮ ಸೂಕ್ಷ್ಮತೆಯನ್ನು ಈ ಬರವಣಿಗೆ ಎತ್ತಿ ತೋರುತ್ತದೆ. ಇದು ಇಹ್ರಾಮ್ ಧರಿಸುವ ಸಂದರ್ಭ ಮಾತ್ರವಲ್ಲ, ಇನ್ನೂ ಅನೇಕ ಸಂದರ್ಭಗಳಲ್ಲಿ ಸ್ಪಷ್ಟಗೋಚರವಾಗುತ್ತದೆ. ಪ್ರವಾದಿ ಮುಹಮ್ಮದರು ತಮ್ಮ 63 ವರ್ಷಗಳ ಜೀವನದಲ್ಲಿ 53 ವರ್ಷಗಳನ್ನು ಕಳೆದ ಮಸ್ಜಿದುಲ್ ಹರಾಂ ಮಸೀದಿಯ ಪಕ್ಕದಲ್ಲಿ ನಿಂತು ಆ ಮಸೀದಿಯನ್ನು ಪ್ರವೇಶಿಸುವ ಬಾಗಿಲುಗಳ ಬಗ್ಗೆ ನೀವು ಗಮನ ಹರಿಸುತ್ತೀರಿ. ಇಲ್ಲಿ ಹೆಣ್ಣಿಗೆ ಮತ್ತು ಗಂಡಿಗೆ ಪ್ರತ್ಯೇಕ ಬಾಗಿಲುಗಳಿಲ್ಲ ಎಂದು ಬೆರಗು ಹೊಂದುತ್ತೀರಿ. ಇಸ್ಲಾಮಿನ ವೈಚಾರಿಕ ವೈವಿಧ್ಯತೆಗೆ ಇರುವ ಅತಿದೊಡ್ಡ ಪುರಾವೆಯಾಗಿ ಮಸ್ಜಿದುಲ್ ಹರಾಂ ಮತ್ತು ಮಸ್ಜಿದುನ್ನಬವಿ ಎರಡರ ಪದ್ಧತಿಗಳನ್ನೂ ಅವಲೋಕಿಸುತ್ತೀರಿ.

ಈ ಪುಸ್ತಕದಲ್ಲಿ ನನಗೆ ಇಷ್ಟವಾದ ಹಲವು ಪುಟಗಳಿವೆ. ಎಲ್ಲವನ್ನೂ ಇಲ್ಲಿ ನೆನಪಿಸಿಕೊಳ್ಳಲು ಹೋಗುವುದಿಲ್ಲ. ಒಂದೆರಡನ್ನಷ್ಟೇ ಪ್ರಸ್ತಾಪಿಸುತ್ತೇನೆ. ಅದರಲ್ಲೊಂದು ಕಂದ ಇಸ್ಮಾಯೀಲನ ತಾಯಿ ಹಾಜಿರಾ, ಸಫಾ– ಮರ್ವಾ ಬೆಟ್ಟಗಳ ನಡುವೆ ಮಗುವಿನ ಪ್ರಾಣವನ್ನು ಉಳಿಸುವ ನೀರಿಗಾಗಿ ಓಡುವುದರ ಪ್ರಸ್ತಾಪ. ಆ ಸ್ಥಳದಲ್ಲಿ ನಿಂತು ಇತಿಹಾಸದ ಆ ಘಟನೆಯನ್ನು ಮನಃಪಟಲದಲ್ಲಿ ತಂದುಕೊಳ್ಳುತ್ತಾ ನೀವು ಬರೆಯುತ್ತೀರಿ– "ಹಾಜಿರಾರ ಆ ಓಟ ಮುಸ್ಲಿಮರ ಪಾಲಿಗೆ ಆರಾಧನೆಯಾಗಿರುವುದರ ಔಚಿತ್ಯ ಸ್ಪಷ್ಟವಾಗುವುದು ಇಲ್ಲಿಯೇ. ಸಫಾ ಮತ್ತು ಮರ್ವಾದ ಮಧ್ಯೆ ಮುಸ್ಲಿಮರು ಓಡಬೇಕಿರುವುದು ಹಾಜಿರಾರಂತಹ ತಾಯಿ ಹೃದಯವನ್ನು ಹೊಂದುವುದಕ್ಕಾಗಿ. ಇಸ್ಮಾಯೀಲರಂತಹ ಮಕ್ಕಳ ಸಂಕಟಕ್ಕೆ ಸ್ಪಂದಿಸುವುದಕ್ಕಾಗಿ. ಓರ್ವ ತಾಯಿ ಎಂಬ ನೆಲೆಯಲ್ಲಿ ಈ ಜಗತ್ತಿನಲ್ಲಿ ಕೋಟ್ಯಂತರ ಹಾಜಿರಾರು ಇದ್ದಾರೆ. ಒಂದು ಮಗು ಎಂಬ ದೃಷ್ಟಿಯಲ್ಲಿ ಕೋಟ್ಯಂತರ ಇಸ್ಮಾಯೀಲ್ ಇದ್ದಾರೆ. ಇವತ್ತು ಈ ಮಕ್ಕಳಲ್ಲಿ ಹಿಂದಿನ ಇಸ್ಮಾಯೀಲ್‌ರಂತೆ ಪ್ರಾಣಸಂಕಟದಿಂದ ಚಡಪಡಿಸುವ ಮಕ್ಕಳು ಎಷ್ಟಿರಬಹುದು? ಹಾಜಿರಾರಂತೆ ಸಂಕಟಪಡುವ ತಾಯಂದಿರು ಎಷ್ಟಿರಬಹುದು? ಅಪೌಷ್ಟಿಕತೆ, ಕೋಮುಗಲಭೆ, ವಲಸೆ, ಯುದ್ಧ, ಪ್ರಕೃತಿ ವಿಕೋಪ ಇತ್ಯಾದಿಗಳು ಎಷ್ಟು





ಇಸ್ಮಾಯೀಲರನ್ನು ಸೃಷ್ಟಿಸಿರಬಹುದು?" ನಿಜಕ್ಕೂ ಅಂತಃಕರಣವುಳ್ಳ, ಕವಿಹೃದಯದ ಲೇಖಕನೊಬ್ಬ ಮಾತ್ರ ಹೀಗೆ ಇತಿಹಾಸ ಮತ್ತು ವರ್ತಮಾನದ ಮಧ್ಯೆಯ ಬಿಂದುವಿನಲ್ಲಿ ನಿಂತುಕೊಂಡು ಖಚಿತವಾಗಿ ಯೋಚಿಸಬಲ್ಲ.

ಜಗತ್ತಿನಾದ್ಯಂತ ಬರುವ ಲಕ್ಷಾಂತರ ಮುಸ್ಲಿಮರು ಕರಿಯ– ಬಿಳಿಯ, ಬಡವ– ಶ್ರೀಮಂತ, ಎತ್ತರದವ– ಕುಳ್ಳಗಿನವ, ಗಂಡು–ಹೆಣ್ಣು ಎಂಬ ಯಾವ ಬೇಧಭಾವವೂ ಇಲ್ಲದೆ ಪ್ರದಕ್ಷಿಣೆ ಹೊಡೆಯುವ ಕಾಬಾ ಎಂಬ ಜಗತ್ತಿನ ಅತ್ಯಂತ ಪುರಾತನ ಆರಾಧನಾ ಗೃಹದ ಬಗ್ಗೆಯೂ ನಿಮ್ಮ ವಿಶ್ಲೇಷಣೆ ಅತ್ಯಂತ ಮನನೀಯವಾಗಿದೆ. "ಹಾಗಂತ ಕಾಬಾ ಜಗತ್ತಿನ ಅದ್ಭುತ ಶಿಲ್ಪ ಕಲಾಕೃತಿಯೇನಲ್ಲ. 12 ಮೀಟರ್ ಉದ್ದದ, 10 ಮೀಟರ್ ಅಗಲದ, 15 ಮೀಟರ್ ಎತ್ತರದ ಒಂದು ಸಾಮಾನ್ಯ ಕಟ್ಟಡ. ಆದರೆ ಜಗತ್ತಿನಾದ್ಯಂತ ಈ ಆರಾಧಾನಾಲಯಕ್ಕೆ ಭೇಟಿ ಕೊಡುವಷ್ಟು ಜನ ಜಗತ್ತಿನ ಇನ್ಯಾವ ಆರಾಧನಾಲಯಕ್ಕೂ ಭೇಟಿ ಕೊಡುವುದಿಲ್ಲ" ಎಂದು ಸಮಚಿತ್ತದಿಂದ ಗುರುತಿಸಿದ್ದೀರಿ. ಜತೆಗೇ– "ಕಾಬಾದ ಎದುರು ಅವರೆಲ್ಲರೂ ಕೇವಲ ಮನುಷ್ಯರು ಮಾತ್ರ. ಇಲ್ಲಿ ಹೆಣ್ಣು ಕೂಡಾ ಅಸಮಾನಳಲ್ಲ, ಅಸ್ಪೃಶ್ಯಳಲ್ಲ, ಪ್ರತ್ಯೇಕಳಲ್ಲ. ಗಂಡಿನ ಜತೆ ಜತೆಗೇ ನಮಾಜ್, ತವಾಫ್, ಸಅಈ ಕೈಗೊಳ್ಳುವ ಆಕೆಯ ಹಕ್ಕಿನ" ಕುರಿತು ಗಮನ ಸೆಳೆದಿದ್ದೀರಿ. ನೀವು ಬರೆದದ್ದು ನೂರು ಶೇಕಡಾ ನಿಜ– ಮಸ್ಜಿದುಲ್ ಹರಾಂನ ವೈವಿಧ್ಯದಿಂದ ಪಾಠ ಕಲಿಯದವರು ಇನ್ನೆಲ್ಲಿಂದ ಕಲಿಯುತ್ತಾರೆ?

ಸಹಸ್ರಾರು ಸಹಾಬಿಗಳ ಮೃತದೇಹ ದಫನ್‌ಗೊಂಡಿರುವ ಜನ್ನತುಲ್ ಬಕೀ ಖಬರಸ್ತಾನದಲ್ಲಿ ನಿಂತು ನೀವು ಬರೆಯುವುದು ಕೂಡಾ ಎಷ್ಟೊಂದು ಆಪ್ತವಾಗಿದೆ! – ಮನುಷ್ಯರೆಲ್ಲ ಅಸಹಾಯಕರಾಗಿ ಬೋರಲಾಗಿ ಬಿದ್ದಿರುವಂತೆ ಕಾಣುವ ದೃಶ್ಯವದು. ಅಲ್ಲಿಗೆ ಪ್ರವೇಶಿಸುವುದೆಂದರೆ ನಿಮ್ಮದೇ ಖಬರಿಗೆ ನೀವು ಪ್ರವೇಶಿಸಿದಂತೆ...– ಎಂದು ನೀವು ಬರೆಯುವ ಶೈಲಿ ನಿಮಗೇ ವಿಶಿಷ್ಟವಾದ ಶೈಲಿ. ಸೌರ್ ಪರ್ವತದ ಬುಡದಲ್ಲಿ ನಿಂತು ಅತ್ಯಂತ ಎತ್ತರದ ಕಡಿದಾದ ತುದಿಯನ್ನು ಅವಲೋಕಿಸುತ್ತಾ – "ಅದರ ಮಧ್ಯದಲ್ಲಿರುವ ಹಿರಾ ಗುಹೆಯಲ್ಲಿ ಧ್ಯಾನಮಗ್ನರಾಗಿದ್ದ 40ರ ಹರೆಯದ ಪ್ರವಾದಿ ಮುಹಮ್ಮದರಿಗೆ 55ರ ಇಳಿವಯಸ್ಸಿನ ಪ್ರಿಯಪತ್ನಿ ಖತೀಜಾ ಅವರು ಊಟದ ಬುತ್ತಿಯನ್ನು ತಲುಪಿಸಲು ಕೈಯಲ್ಲಿ ಹಿಡಿದುಕೊಂಡು ಏದುಸಿರು ಬಿಡುತ್ತಾ ಹತ್ತುತ್ತಿರುವಾಗ ಅವರು ಏನನ್ನು ಯೋಚಿಸುತ್ತಿದ್ದಿರಬಹುದು?" ಎಂದು ನೀವು ಕೇಳುವ ಪ್ರಶ್ನೆ, ಒಂದು ಅತ್ಯಪರೂಪದ ದಾಂಪತ್ಯದ ಬಗ್ಗೆ ನಮ್ಮಲ್ಲೂ ನೂರು ಅಚ್ಚರಿಗಳನ್ನು ಹುಟ್ಟಿಸುತ್ತದೆ.

ಈ ಪುಸ್ತಕಕ್ಕೆ ನೀವು ನೀಡಿರುವ ತಲೆಬರಹ "ಎಣ್ಣೆ ಬತ್ತಿದ ಲಾಟೀನು" ನಿಮ್ಮೊಳಗೊಬ್ಬ ಕವಿಯೂ, ವಿಮರ್ಶಕನೂ ಏಕಕಾಲದಲ್ಲಿ ಬದುಕಿದ್ದಾರೆ ಎನ್ನುವುದಕ್ಕೆ ಸಾಕ್ಷಿ. "ಮದೀನಾ ಮಾರುಕಟ್ಟೆಯಲ್ಲಿ ಬೋರಲಾಗಿ ನಿಂತಿರುವ ಖರ್ಜೂರದ ಕಂಭದಂತೆ ನಮ್ಮ ಸಮುದಾಯ ಯಾವ ಪರಿವರ್ತನೆಯ ಕುರುಹೂ ಇಲ್ಲದೆ

ಸ್ಥಾವರವಾಗಿ ನಿಂತಿದೆ" ಎಂದು ನೀವು ಗುರುತಿಸಿರುವುದು ಸರಿಯಾಗಿಯೇ ಇದೆ. ಆ ಕಂಭಕ್ಕೆ ತೂಗುಹಾಕಲಾಗಿರುವ ಎಣ್ಣೆ ಬತ್ತಿದ ಲಾಟೀನನ್ನು ವಿಶ್ವ ಮುಸ್ಲಿಂ ಸಮುದಾಯದ ಇವತ್ತಿನ ಹತಾಶ ಸ್ಥಿತಿಗೆ ಹೋಲಿಸಿರುವುದು ನಿಜಕ್ಕೂ ಅದ್ಭುತ ರೂಪಕ.

ಪುಸ್ತಕದ ಕೊನೆಯ ಪ್ಯಾರಾವನ್ನು ಓದುತ್ತಾ ನಾನು ನಿಜಕ್ಕೂ ಕಣ್ಣೀರಾದೆ ಕುಕ್ಕಿಲ.

"ಊರಿಗೆ ಮರಳಿದ ಕೂಡಲೇ ತಾಯಿಯನ್ನು ಭೇಟಿಯಾದೆ. ಅವರು ನನ್ನ ಹತ್ತಿರ ಕುಳಿತರು. ಕಣ್ತುಂಬ ನೋಡಿದರು. ಬಳಿಕ ನನ್ನ ಎರಡೂ ಅಂಗೈಯನ್ನು ಮುಂದೆ ಮಾಡುವಂತೆ ವಿನಂತಿಸಿದರು. ಕಣ್ಣಿಗೊತ್ತಿಕೊಂಡರು. ಆ ಸಂದರ್ಭದಲ್ಲಿ ತಾಯಿಯ ಮುಖದಲ್ಲಿ ಕಂಡ ತೃಪ್ತಿ ಮತ್ತು ಆನಂದವನ್ನು ನಾನೆಂದೂ ಮರೆಯಲಾರೆ. ನನ್ನೆರಡೂ ಕೈಗಳಿಂದ ಅವರು ಪಡೆದುಕೊಂಡ ಆಧ್ಯಾತ್ಮಿಕ ಅನುಭೂತಿಯು, ನಾನು ಸ್ವತಃ ಯಾತ್ರೆಗೈದು ಪಡೆದುಕೊಂಡದ್ದಕ್ಕಿಂತಲೂ ಹೆಚ್ಚಿರುವಂತೆ ಅನಿಸಿತು. ಮಾತು ಮೌನವಾಯಿತು."

ಈ ವಾಕ್ಯಗಳನ್ನು ಓದಿದಾಗ ನನಗೆ ನನ್ನ ಉಮ್ಮನ ನೆನಪಾಯಿತು. ಅವರ ಜೀವನದಲ್ಲಿ ಅವರಿಗೆ ಪವಿತ್ರ ಕಾಬಾ ಸಂದರ್ಶಿಸುವ ಭಾಗ್ಯ ದೊರಕಲಿಲ್ಲ. ಹತ್ತು ಸಲ ಕಾಬಾಗೆ ಹೋಗಿಬರಬಹುದಾದಷ್ಟು ಹಣವನ್ನು ನಾನು ಪ್ರತಿ ವರ್ಷ ದುಡಿಯುತ್ತಿದ್ದರೂ ನನಗೂ ಆ ಭಾಗ್ಯ ಇದುವರೆಗೆ ದೊರಕಿಲ್ಲ. ನಿಮ್ಮ ಪುಸ್ತಕ ಓದಿ ಮುಗಿಸಿದ ಬಳಿಕ ಶೀಘ್ರದಲ್ಲೇ ಮಕ್ಕಾ ನೆಲದಲ್ಲಿ ಕಾಲಿಡಬೇಕೆಂಬ ನನ್ನ ಮನದಿಚ್ಛೆ ಇನ್ನಷ್ಟು ದೃಢಗೊಂಡಿದೆ. ಅದಕ್ಕೆ ಬೇಕಾದ ಮಾನಸಿಕ ಸಿದ್ಧತೆಯನ್ನೂ ಈ ಪುಸ್ತಕ ಸಾಕಷ್ಟು ಪ್ರೇರೇಪಿಸಿದೆ. ಇದನ್ನು ಓದಿದ ಪ್ರತಿಯೊಬ್ಬರ ಮನದಲ್ಲೂ ಇಂತಹ ಪ್ರೇರಣೆಯನ್ನು ಉಕ್ಕಿಸಿದರೆ ಒಂದು ಪುಸ್ತಕಕ್ಕೆ ಅದಕ್ಕಿಂತ ದೊಡ್ಡ ಸಾರ್ಥಕ್ಯ ಇನ್ನೊಂದಿಲ್ಲ.



**ಬಿ.ಎಂ. ಹನೀಫ್, ಬೆಂಗಳೂರು**
**7760350244**





## ನನ್ನುಡಿ

# ನನ್ನ 15 ದಿನಗಳ ಬಗ್ಗೆ..

ಯಾತ್ರೆ ಹೋಗುವುದು ಮತ್ತು ಯಾತ್ರೆಯನ್ನು ಅನುಭವಿಸುವುದು ಇವೆರಡೂ ಬೇರೆ ಬೇರೆ. ಜಗತ್ತಿನಲ್ಲಿ ಪ್ರತಿದಿನ ಲಕ್ಷಾಂತರ ಮಂದಿ ತೀರ್ಥಯಾತ್ರೆಯನ್ನೋ ಪ್ರವಾಸವನ್ನೋ ಮಾಡುತ್ತಲೇ ಇದ್ದಾರೆ. ಹಾಗಂತ ಅವರೆಲ್ಲ ಆ ಯಾತ್ರೆಯನ್ನು ಅನುಭವಿಸಿದ್ದಾರೆ ಎಂದು ಹೇಳಲಾಗದು. ಇನ್ನು, ಅನುಭವಿಸಿದವರಲ್ಲೂ ತರಹೇವಾರಿ ಅನುಭವಗಳು ಇರಬಹುದು. ಇಬ್ಬರು ಒಂದೇ ಸ್ಥಳಕ್ಕೆ ಜೊತೆಯಾಗಿ ಯಾತ್ರೆ ಹೋದರೆಂಬ ಕಾರಣದಿಂದ ಅವರಿಬ್ಬರೂ ಆ ಯಾತ್ರೆಯನ್ನು ಏಕ ಪ್ರಕಾರವಾಗಿ ಅನುಭವಿಸಿದರು ಎಂದು ಹೇಳುವ ಹಾಗಿಲ್ಲ. ನಾನು ಉಮ್ರಾ ಯಾತ್ರೆಗೆ ಹೊರಟ ತಂಡದಲ್ಲಿ 150 ಮಂದಿ ಇದ್ದೆವು. ಇವರಲ್ಲಿ ಮಕ್ಕಳು, ವೃದ್ಧರು, ನಡು ಹರೆಯದವರು, ಯುವಕ/ಯುವತಿ ಎಲ್ಲರೂ ಇದ್ದರು. ಮಾತ್ರವಲ್ಲ, ಇವರೆಲ್ಲರ ಭಾವಾಭಿವ್ಯಕ್ತಿಗಳಲ್ಲೂ ಧಾರಾಳ ವ್ಯತ್ಯಾಸಗಳಿದ್ದುವು. ಮಸ್ಜಿದುಲ್ ಹರಾಮ್‌ಗೆ ಪ್ರವೇಶಿಸಿದಾಗ, ಕಅಬಾವನ್ನು ಕಂಡಾಗ, ತವಾಫ್ ಮಾಡುವಾಗ... ಇತ್ಯಾದಿ ಎಲ್ಲದರ ಅಭಿವ್ಯಕ್ತಿಯಲ್ಲಿ ಎಲ್ಲರೂ ಬೇರೆ ಬೇರೆಯಾಗಿದ್ದರು. ನಾನೂ ಇದಕ್ಕೆ ಹೊರತಲ್ಲ. ನನ್ನ ಪಾಲಿಗೆ ಉಮ್ರಾ ಯಾತ್ರೆ ಹೊಸತೊಂದು ಲೋಕಕ್ಕೆ ಪ್ರವೇಶ ಪಡೆದ ಘಳಿಗೆ. ಈ ಇಡೀ ಸನ್ನಿವೇಶವನ್ನು ಮನಸ್ಸಲ್ಲಿ ಕಾಪಿಟ್ಟುಕೊಂಡು ಅಕ್ಷರ ರೂಪಕ್ಕೆ ಇಳಿಸುವುದಂತೂ ಬಹುದೊಡ್ಡ ಸವಾಲು. ಸಂಪಾದಕನಾಗಿ ಪ್ರತಿವಾರ ಸಂಪಾದಕೀಯ ಮತ್ತು ಅಂಕಣ ಬರೆಯುವ ಸವಾಲನ್ನು ಎದುರಿಸಿ ಗೊತ್ತಿರುವ ನನಗೆ ಸವಾಲು ಹೊಸತಲ್ಲವಾದರೂ ಯಾತ್ರಾನುಭವವನ್ನು ಕಟ್ಟಿಕೊಡುವ ಸವಾಲು ಸುಲಭದ್ದಾಗಿರಲಿಲ್ಲ. ಅನುಭವವನ್ನು ದಾಖಲಿಸುವುದು ಕತೆ, ಕವನ, ಲೇಖನಗಳನ್ನು ಬರೆದಂಥಲ್ಲ. ಇಲ್ಲಿಯ ಅನುಭವಗಳು ಬಿಡಿ ಬಿಡಿಯಾಗಿರುತ್ತವೆ. ಮಸ್ಜಿದುಲ್ ಹರಾಮ್‌ನಲ್ಲಿ ಕಂಡದ್ದು, ತವಾಫ್‌ನಲ್ಲಿ ಅನಿಸಿದ್ದು, ಝಂ ಝಂ ಕುಡಿಯುವಾಗ ಅನುಭವಿಸಿದ್ದು,

ವಿಮಾನ ಪ್ರಯಾಣ, ಐತಿಹಾಸಿಕ ಕುರುಹುಗಳು, ಸಫಾ–ಮರ್ವಾ, ಖರ್ಜೂರದ ತೋಟಗಳು, ಯುದ್ಧಕ್ಕೆ ಸಾಕ್ಷಿಯಾದ ಸ್ಥಳಗಳು... ಎಲ್ಲವೂ ಬಿಡಿ ಬಿಡಿ ಅನುಭವಗಳೇ. ಬರೆಯುವಾಗ ಈ ಬಿಡಿಗಳ ನಡುವೆ ಪರಸ್ಪರ ಸಂಪರ್ಕ ಕಲ್ಪಿಸಬೇಕಿತ್ತು. ಒಂದನ್ನೊಂದು ಪೋಣಿಸಿಕೊಂಡು ಓದಿನ ಓಘಕ್ಕೆ ಹೊಂದಿಕೊಳ್ಳುವಂತೆ ಮಾಡಬೇಕಿತ್ತು. 15 ದಿನಗಳ ಯಾತ್ರಾನುಭವದ ಆರಂಭ ಹೇಗಿರಬೇಕು, ಯಾವ ಅನುಭವವನ್ನು ಎಲ್ಲಿ ನಮೂದಿಸಬೇಕು, ಎಲ್ಲಿ ವಿವರಣೆಯ ಅಗತ್ಯ ಇದೆ, ಯಾವುದಕ್ಕೆ ಪ್ರಾಶಸ್ತ್ಯ ನೀಡಬೇಕು... ಮುಂತಾದ ಸವಾಲುಗಳನ್ನು ಸಮಚಿತ್ತದಿಂದ ನಿರ್ವಹಿಸಬೇಕಿತ್ತು. ಆದ್ದರಿಂದಲೇ ನನ್ನ 15 ದಿನಗಳ ಉಮ್ರಾ ಯಾತ್ರೆಯ ಉದ್ದಕ್ಕೂ ಪ್ರತಿದಿನ ನಾನು ಡೈರಿಯಲ್ಲಿ ದಾಖಲಿಸಿಟ್ಟ ಅನುಭವಗಳನ್ನು ಮೊದಲು ಸಾವಧಾನದಿಂದ ಓದಿದೆ. ಮತ್ತೆ ಮತ್ತೆ ಓದಿ ಅನುಭವಿಸಿದ ಬಳಿಕ ಈ ಕೃತಿಯನ್ನು ಬರೆಯಲು ಸಿದ್ಧನಾದೆ. ಇದರ ಹೆಚ್ಚಿನ ಭಾಗವನ್ನು ರಾತ್ರಿ ವೇಳೆಯೇ ಬರೆದೆ. ರಾತ್ರಿ 2 ಗಂಟೆಯವರೆಗೆ ಬರೆದದ್ದೂ ಇದೆ. ಈ ಅನುಭವವನ್ನು ಬರೆಯುತ್ತಿರುವಾಗ ಇದಕ್ಕೆ ಶೀರ್ಷಿಕೆ ಏನಾಗಬೇಕೆಂದು ನಾನು ನಿರ್ಧರಿಸಿರಲಿಲ್ಲ. ಬರೆಯುತ್ತಾ ಹೋದೆ ಮತ್ತು ಅನುಭವಿಸುತ್ತಾ ಬರೆದೆ. ಇಡೀ ಅನುಭವವನ್ನು ಅಕ್ಷರ ರೂಪಕ್ಕಿಳಿಸಿದ ಬಳಿಕ 'ಎಣ್ಣೆ ಬತ್ತಿದ ಲಾಟೀನು' ಇದಕ್ಕೆ ಶೀರ್ಷಿಕೆಯಾಗಬಹುದೆಂದು ಅನಿಸಿತು. ಅದನ್ನೇ ಇಟ್ಟುಕೊಂಡೆ.

ಹೆಚ್ಚೇನೂ ಹೇಳಲಾರೆ. ಈ ಸಂದರ್ಭದಲ್ಲಿ ನಾನು ಕೆಲವರನ್ನು ಇಲ್ಲಿ ಸ್ಮರಿಸಿಕೊಳ್ಳಲೇಬೇಕು. ಮುಖ್ಯವಾಗಿ, ಅಸಾಧ್ಯವೆಂದುಕೊಂಡಿದ್ದ ಉಮ್ರಾ ಯಾತ್ರೆಯನ್ನು ನನ್ನ ಪಾಲಿಗೆ ಸುಲಭ ಸಾಧ್ಯವಾಗಿಸಿದ ಗೆಳೆಯನಿಗೆ ನಾನು ಆಭಾರಿಯಾಗಿದ್ದೇನೆ. ಯಾತ್ರೆಯುದ್ದಕ್ಕೂ ಅವರ ಕುಟುಂಬದ ಓರ್ವ ಸದಸ್ಯನಾಗಿ ನಾನು ಕಳೆದ ದಿನಗಳು ಸ್ಮರಣೀಯ. ಈ ಬರಹದ ಕರಡು ಪ್ರತಿಯನ್ನು ಓದಿ ಸೂಕ್ತ ಸಲಹೆ ಸೂಚನೆಗಳನ್ನು ನೀಡಿದ ಸನ್ಮಾರ್ಗ ಪ್ರಕಾಶಕರಾದ ಎಂ. ಸಾದುಲ್ಲಾ, ಕೆ.ಎಂ. ಶರೀಫ್, ಸಮೀನಾ ಅಫ್ವಾನ್, ತಂಗಿ ಅಫೀಫಾ, ನಾದಿನಿಯರಾದ ಅನೀಶಾ, ಆರಿಫಾ, ಇಶ್ರತ್ ಮತ್ತು ಬಾಳಸಂಗಾತಿ ಶಮೀಮರಿಗೆ ನಾನು ಕೃತಜ್ಞ . ನಾನು ಏನೂ ಆಗಿಲ್ಲದಿದ್ದ ಸಮಯದಲ್ಲಿ ಕಾಗದದ ಕಟ್ಟನ್ನು ಕೊಟ್ಟು ಬರೆಯುವಂತೆ ಒತ್ತಾಯಿಸಿದ ಡಿ.ಕೆ. ಇಬ್ರಾಹೀಮ್ ಮತ್ತು ಎಂ.ಎ. ಶುಕೂರ್‌ರ ಬೆಂಬಲವನ್ನು ನಾನೆಂದೂ ಮರೆಯಲಾರೆ. ನನ್ನನ್ನು ಸನ್ಮಾರ್ಗ ಸಂಪಾದಕೀಯ ಬಳಗದಲ್ಲಿ ಸೇರ್ಪಡೆಗೊಳಿಸಿ ಬೆನ್ನು ತಟ್ಟಿ ಪ್ರೋತ್ಸಾಹಿಸಿದ ಇಬ್ರಾಹೀಮ್ ಸಈದ್, ನೂರ್ ಮುಹಮ್ಮದ್ ಮತ್ತು ಸನ್ಮಾರ್ಗದ ಸಹೋದ್ಯೋಗಿ ವೃಂದಕ್ಕೆ ನಾನು ಋಣಿ. ಹಳ್ಳಿಗಾಡಿನ ಅಬ್ದುಲ್ ಕಾದರ್ ಎಂಬವ ಏ.ಕೆ. ಕುಕ್ಕಿಲ ಆಗುವುದರಲ್ಲಿ ಇಬ್ರಾಹೀಮ್ ಸಈದ್, ನೂರ್ ಮುಹಮ್ಮದ್ ಮತ್ತು





ಸಾದುಲ್ಲಾರ ಶ್ರಮ, ಪ್ರೀತಿ ಮತ್ತು ಬೆಂಬಲಕ್ಕೆ ಬಹಳ ದೊಡ್ಡ ಪಾತ್ರ ಇದೆ. ಜೊತೆಗೇ ನನ್ನ ಉಮ್ಮ ಮತ್ತು ಬಾಪ. ಇವರೆಲ್ಲರ ಮೇಲೆ ಕರುಣಾಮಯಿ ಅಲ್ಲಾಹನ ಅನುಗ್ರಹ ಸದಾ ಇರಲಿ.

ಅಲ್ಲದೆ, ನಿಭಿಡತೆಯ ನಡುವೆಯೂ ಈ ಬರಹಕ್ಕೆ ಮುನ್ನುಡಿ ಬರೆದುಕೊಟ್ಟ ಪತ್ರಕರ್ತ ಮತ್ತು ಸುಧಾ ವಾರಪತ್ರಿಕೆಯ ಹಿರಿಯ ಉಪ ಸಂಪಾದಕ ಬಿ.ಎಂ. ಹನೀಫ್, ಪ್ರೋತ್ಸಾಹ ತುಂಬಿದ ಗೆಳೆಯರಾದ ಶಬ್ಬೀರ್ ಅಹ್ಮದ್, ಇರ್ಶಾದ್ ವೇಣೂರು ಮತ್ತು ತಲ್ಹಾ ಇಸ್ಮಾಈಲ್, ಮುಖಪುಟ ಚಿತ್ರವನ್ನು ಕ್ಲಿಕ್ಕಿಸಿ ಕಳುಹಿಸಿಕೊಟ್ಟ ಮದೀನಾದ ಗೆಳೆಯ ತೌಸೀಫ್ ಅಹ್ಮದ್ ವೇಣೂರು, ಅಂದವಾದ ಮುಖಪುಟ ರಚಿಸಿಕೊಟ್ಟ ಇಷ್ಟದ ಗೆಳೆಯ ಸಲ್ಮಾನ್ ಶೇಖ್, ಪುಟ ವಿನ್ಯಾಸ ಮಾಡಿರುವ ತೌಸೀಫ್, ಮುಜೀಬ್, ಕಂಪ್ರೀಟ್‌ನ ಇರ್ಶಾದ್ ಹಾಶ್ಮಿ ಮತ್ತು ಪ್ರಕಟಣೆಯ ಹೊಣೆಹೊತ್ತ 'ಓದು' ಪ್ರಕಾಶನ ಸಂಸ್ಥೆಗೂ ನಾನು ಆಭಾರಿಯಾಗಿದ್ದೇನೆ.

ಜೊತೆಗೇ ನನ್ನ ಬೆನ್ನಿಗೆ ನಿಂತು ಪ್ರೋತ್ಸಾಹಿಸುತ್ತಿರುವ ಎಲ್ಲ ಗೆಳೆಯರಿಗೂ...

**ಏ.ಕೆ. ಕುಕ್ಕಿಲ**
**9880096128**

# ದ್ವಿತೀಯ ಆವೃತ್ತಿಯ ಖುಷಿ

ಇದು ‘ಎಣ್ಣೆ ಬತ್ತಿದ ಲಾಟೀನು’ ಕೃತಿಯ ದ್ವಿತೀಯ ಆವೃತ್ತಿ. ಬಿಡುಗಡೆಯಾದ ಎರಡೇ ತಿಂಗಳೊಳಗೆ ಈ ಕೃತಿ ದ್ವಿತೀಯ ಮುದ್ರಣವನ್ನು ಕಂಡಿದೆ ಎಂಬುದೇ ಇದರ ಜನಪ್ರಿಯತೆಗೆ ಸಾಕ್ಷಿ. ಆದ್ದರಿಂದ ಈ ಕೃತಿಯಲ್ಲಿ ಏನಿದೆ ಎಂದು ನಾನು ಹೇಳುವುದಿಲ್ಲ. ಇದು ಹೇಗಿದೆ ಎಂದೂ ಹೇಳಬೇಕಿಲ್ಲ. ಕೃತಿ ಕೈ ಸೇರಿದ ಪ್ರತಿಯೊಬ್ಬರಿಗೂ ಅದು ಗೊತ್ತಾಗುತ್ತದೆ. ಈ ಲಾಟೀನನ್ನು ಪ್ರಕಟಿಸುವಿರಾ ಎಂದು ಕುಕ್ಕಿಲ ಅವರು ಕೇಳಿಕೊಂಡರು. ಈ ಕೃತಿಯನ್ನು ಪ್ರಕಟಿಸುವುದು ನಮ್ಮ ಮಟ್ಟಿಗೆ ಹೆಮ್ಮೆ ಎಂದು ನಾನು ಭಾವಿಸಿದೆ. ಕನ್ನಡದಲ್ಲಿ ಪ್ರವಾಸ ಕಥನಗಳು ನೂರಾರು ಬಂದಿರಬಹುದು. ಆದರೆ ಉಮ್ರಾ ಯಾತ್ರೆಯ ಕುರಿತು ಪುಸ್ತಕ ರಚನೆಯಾಗಿರುವುದು ಬಹುಶಃ ಇದುವೇ ಮೊದಲು ಎಂಬುದು ನನ್ನ ಅಭಿಪ್ರಾಯ. ಅದರಲ್ಲೂ ಈ ಕಾಲದಲ್ಲಿ ನಿಂತು ಐತಿಹಾಸಿಕ ಸಂಗತಿಗಳನ್ನು ವಿಶ್ಲೇಷಣೆಗೆ ಒಳಪಡಿಸುತ್ತಾ ಪ್ರತಿ ಬಿಡಿ ಸಂಗತಿಗೂ ಈ ಕಾಲದ ಟಚ್ ಕೊಡುತ್ತಾ ಸಾಗುವ ಈ ಕೃತಿಯನ್ನು ಬರೇ ಯಾತ್ರಾನುಭವದ ದೃಷ್ಟಿಯಿಂದ ನೋಡುವ ಬದಲು ವೈಚಾರಿಕ ನೆಲೆಗಟ್ಟಿನಿಂದ ನೋಡುವುದೇ ಉತ್ತಮ. ಒಳ್ಳೆಯ ಕೃತಿಯೊಂದನ್ನು ಪ್ರಕಟಿಸುವುದಕ್ಕೆ ಅವಕಾಶ ಒದಗಿಸಿದ ಏ.ಕೆ. ಕುಕ್ಕಿಲರಿಗೆ ಧನ್ಯವಾದವನ್ನು ಸಲ್ಲಿಸುತ್ತೇನೆ. ಹಾಗೆಯೇ, ಬಿಡುಗಡೆಗೊಂಡ ಕೂಡಲೇ ಮುಗಿಬಿದ್ದು ಖರೀದಿಸಿ ದ್ವಿತೀಯ ಮುದ್ರಣ ಕಾಣುವಂತೆ ಮಾಡಿದ ಓದುಗರಿಗೆ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

**ಖತೀಜತ್ ರಾಬಿಯ**
**ಪ್ರಕಾಶಕರು**
**ಮೊ: 8105033315**



ಎಣ್ಣೆ ಬತ್ತಿದ ಲಾಟೀನು

## ಏ.ಕೆ. ಕುಕ್ಕಿಲ

ಹುಟ್ಟಿದ್ದು ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ವಿಟ್ಲ-ಕೋಡಪದವು ಸಮೀಪದ ಕುಕ್ಕಿಲದಲ್ಲಿ. ವಿಠಲ ಪದವಿ ಪೂರ್ವ ಕಾಲೇಜಿನಲ್ಲಿ ಓದು. ಬಳಿಕ ಮಂಗಳೂರಿನ ಕದ್ರಿಯಲ್ಲಿರುವ ಕೈಗಾರಿಕಾ ತರಬೇತಿ ಕೇಂದ್ರ(ITI)ದಲ್ಲಿ ಎರಡು ವರ್ಷ ಕಲಿಕೆ. 2000ನೇ ಇಸವಿಯಲ್ಲಿ ಸನ್ಮಾರ್ಗ ವಾರ ಪತ್ರಿಕೆಯ ಸಂಪಾದಕೀಯ ಬಳಗದಲ್ಲಿ ಸೇರ್ಪಡೆ. ಕಳೆದ 8 ವರ್ಷಗಳಿಂದ ಸಂಪಾದಕನಾಗಿ ದುಡಿಮೆ. ಕನ್ನಡದ ಹೆಚ್ಚಿನ ಎಲ್ಲಾ ಪತ್ರಿಕೆಗಳಲ್ಲಿ ಲೇಖನ, ಕಥೆ, ಲಲಿತ ಪ್ರಬಂಧಗಳು ಪ್ರಕಟ. ನ್ಯೂಸ್ ಕನ್ನಡ ವೆಬ್ ಪತ್ರಿಕೆಯ ಗೌರವ ಸಂಪಾದಕ ಮತ್ತು ಚಾಲಕವಾಣಿ ಪತ್ರಿಕೆಯ ಸಂಪಾದಕೀಯ ಸಲಹೆಗಾರ. ಟಿ.ವಿ. ಚರ್ಚೆಗಳಲ್ಲಿ ಭಾಗವಹಿಸುವಿಕೆ. ಬಾಳಸಂಗಾತಿ ಶಮೀಮ. ಮಕ್ಕಳು- ಅಮನ್, ಇಶಲ್, ಮಿಶಲ್.

## ಕೃತಜ್ಞ

ತುಂಬು
ಗರ್ಭಿಣಿಯಾಗಿದ್ದೂ
ಶುಭಹಾರೈಸಿ
ನನ್ನನ್ನು
ಯಾತ್ರೆಗೆ
ಬೀಳ್ಕೊಟ್ಟ
ಬಾಳಸಂಗಾತಿ
ಶಮೀಮಳಿಗೆ
ನಾನು
ಕೃತಜ್ಞ





## ಅರ್ಪಣೆ

ಕರುಣಾಮಯಿ
ಅಲ್ಲಾಹುವನ್ನು
ಇನ್ನಷ್ಟು ಚೆನ್ನಾಗಿ
ಅರ್ಥೈಸಿ ಅನುಭವಿಸುವುದಕ್ಕೆ
ಹೊರಡುವ
ಜಗತ್ತಿನ ಎಲ್ಲ
ಯಾತ್ರಾರ್ಥಿಗಳಿಗೆ

# ಭಾಗ: 1

**ಜೀ**ವನದಲ್ಲಿ ಮೊಟ್ಟ ಮೊದಲ ಬಾರಿ ಸೌದಿ ಅರೇಬಿಯಾದಲ್ಲಿರುವ ಮಕ್ಕಾದ ಮಸ್ಜಿದುಲ್ ಹರಾಮ್ ಅನ್ನು ಪ್ರವೇಶಿಸಿ ನಮಾಝ್ ನಿರ್ವಹಿಸಿದ ಬಳಿಕ ನನ್ನನ್ನು ಎರಡು ಪ್ರಶ್ನೆಗಳು ತೀವ್ರವಾಗಿಯೇ ಕಾಡಿದುವು.

**1. ಇಸ್ಲಾಮ್‌ನಲ್ಲಿ ಇದು ಸಾಧ್ಯವೇ?**

**2. ಹೊರ ಜಗತ್ತು ಇದನ್ನು ತಿಳಿಯುವಂತಿದ್ದರೆ ಪ್ರತಿಕ್ರಿಯೆ ಏನಿರುತ್ತಿತ್ತು?**

ಇಸ್ಲಾಮ್‌ನ ಮೇಲಿರುವ ಅತಿ ದೊಡ್ಡ ಆರೋಪಗಳಲ್ಲಿ ಒಂದು ಏನೆಂದರೆ, ಅದು ಮಹಿಳೆಯರನ್ನು ಸಮಾನವಾಗಿ ಕಾಣಲ್ಲ ಮತ್ತು ಪುರುಷರಿಂದ ಮಹಿಳೆಯರನ್ನು ಇಸ್ಲಾಮ್ ಪ್ರತ್ಯೇಕಗೊಳಿಸುತ್ತದೆ ಎಂಬುದು. ಇದಕ್ಕೆ ಆಧಾರವಾಗಿ, ಮಹಿಳೆಯರಿಗೆ ಪ್ರವೇಶವಿಲ್ಲದ ಮಸೀದಿಗಳನ್ನು ತೋರಿಸಲಾಗುತ್ತದೆ. ಕೆಲವು ಮುಸ್ಲಿಮ್ ಸಂಘಟನೆಗಳು ಮುದ್ರಿಸುವ ಕರಪತ್ರಗಳಲ್ಲಿ, 'ಮಹಿಳೆಯರಿಗೆ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದೆ...' ಎಂದಿರುವುದನ್ನೂ ಉಲ್ಲೇಖಿಸಲಾಗುತ್ತದೆ. ಒಂದು ವೇಳೆ, ಯಾರಾದರೂ ಮಸ್ಜಿದುಲ್ ಹರಾಮ್‌ಗೆ ಭೇಟಿಕೊಟ್ಟರೆ ಮತ್ತು ಅಲ್ಲಿನ ಚಟುವಟಿಕೆಗಳನ್ನು ಮುಕ್ತ ಮನಸ್ಸಿನಿಂದ ವೀಕ್ಷಿಸಿದರೆ, ಇಸ್ಲಾಮ್‌ನಲ್ಲಿ ಸ್ತ್ರೀ-ಪುರುಷರ ನಡುವಿನ ಸಮಾನತೆ ಮತ್ತು ಸ್ವಾತಂತ್ರ್ಯವನ್ನು ಕಂಡು ಅಸೂಯೆ ಪಡಬಹುದು. ಮಸ್ಜಿದುಲ್ ಹರಾಮ್ ಎಂಬುದು ಇಸ್ಲಾಮ್‌ನ ಮಟ್ಟಿಗೆ ಅತಿ ಪವಿತ್ರ ಮತ್ತು ಅತಿ ಶ್ರೇಷ್ಠ ದೇವಭವನ. ಈ ಮಸೀದಿಗೆ ಜಗತ್ತಿನ ಉಳಿದೆಲ್ಲ ಮಸೀದಿಗಳಿಗಿಂತ ಹೆಚ್ಚು ಶ್ರೇಷ್ಠತೆಯಿದೆ. ಈ ಮಸೀದಿಯಲ್ಲಿ ಮಾಡುವ ನಮಾಝ್‌ಗೆ ಉಳಿದೆಲ್ಲ ಮಸೀದಿಗಳಲ್ಲಿ ಮಾಡುವ ನಮಾಝ್‌ಗಿಂತ ಒಂದು ಲಕ್ಷದಷ್ಟು ಹೆಚ್ಚು ಪುಣ್ಯವಿದೆ. ಪ್ರವಾದಿಯವರು(ಸ) ಜನಿಸಿದ ಮನೆ ಮಸ್ಜಿದುಲ್ ಹರಾಮ್‌ನ ಪಕ್ಕವೇ ಇದೆ. ತನ್ನ ಬಾಲ್ಯವನ್ನು, ಯೌವನವನ್ನು ಮಾತ್ರವಲ್ಲ ತನ್ನ ಆಯುಷ್ಯದ 63 ವರ್ಷಗಳಲ್ಲಿ 53 ವರ್ಷಗಳನ್ನೂ ಪ್ರವಾದಿ ಮುಹಮ್ಮದ್(ಸ) ಅವರು ಕಳೆದದ್ದು ಈ ಮಸ್ಜಿದುಲ್ ಹರಾಮ್‌ನ ಪಕ್ಕದ ಮನೆಯಲ್ಲೇ. ಮಸ್ಜಿದುಲ್ ಹರಾಮ್ ಅವರ ಪ್ರತಿದಿನದ ಬದುಕಾಗಿತ್ತು. ಅವರ

ಜೀವನದ ಉಸಿರಾಗಿತ್ತು. ಮಸ್ಜಿದುಲ್ ಹರಾಮ್‌ನಲ್ಲಿ ಪವಿತ್ರ ಕಅಬಾ ಇದೆ. ಹಜರುಲ್ ಅಸ್ವದ್ ಇದೆ. ಪ್ರವಾದಿ ಇಬ್ರಾಹೀಮರು(ಅ) ತನ್ನ ಪತ್ನಿ ಹಾಜರಾ(ರ) ಮತ್ತು ಮಗ ಇಸ್ಮಾಈಲ್‌ರನ್ನು(ಅ) ದೇವ ನಿರ್ದೇಶನದ ಪ್ರಕಾರ ಬಿಟ್ಟು ಹೋದ ಜಾಗವೂ ಇದುವೇ. ಹಾಜರಾ ಅವರು ಗುಟುಕು ನೀರಿಗಾಗಿ ಸಫಾ ಮತ್ತು ಮರ್ವಾ ಎಂಬ ಬೆಟ್ಟಗಳ ನಡುವೆ ಓಡಾಡಿ ಹುಡುಕಾಡಿದ ಸ್ಥಳವೂ ಇಲ್ಲಿಯೇ. ಜಗತ್ತಿನ ಸರ್ವ ಮುಸ್ಲಿಮರೂ ನಮಾಝ್‌ಗಾಗಿ ಮುಖ ತಿರುಗಿಸುವುದೂ ಈ ಕಅಬಾದ ಕಡೆಗೇ ಎಂಬುದನ್ನು ಈ ಎಲ್ಲ ವಿವರಗಳ ಜೊತೆಗೆ ಇಟ್ಟು ನೋಡಿದರೆ, ಮಸ್ಜಿದುಲ್ ಹರಾಮ್‌ನ ಪ್ರಾಮುಖ್ಯತೆ ಮತ್ತು ಮುಸ್ಲಿಮ್ ಜಗತ್ತು ಅದಕ್ಕೆ ಕೊಡುವ ಮಹತ್ವ ಮನದಟ್ಟಾಗುತ್ತದೆ. ಇಂಥ ಮಸ್ಜಿದುಲ್ ಹರಾಮ್ ಮಹಿಳೆಯರನ್ನು ಹೇಗೆ ಸ್ವೀಕರಿಸುತ್ತದೆ, ಮಹಿಳೆಯರ ಬಗ್ಗೆ ಮಸ್ಜಿದುಲ್ ಹರಾಮ್‌ನ ಧೋರಣೆ ಏನು ಅನ್ನುವ ಕುತೂಹಲ ಸಹಜವಾದದ್ದೇ. ವಿಶೇಷ ಏನೆಂದರೆ, ಮಸ್ಜಿದುಲ್ ಹರಾಮ್ ಯಾರನ್ನೂ ಬಹಿಷ್ಕೃತರು ಎಂದು ಪರಿಗಣಿಸುವುದೇ ಇಲ್ಲ. ಎಲ್ಲರನ್ನೂ ಮುಕ್ತವಾಗಿ ಸ್ವಾಗತಿಸುತ್ತದೆ. ಮಸ್ಜಿದುಲ್ ಹರಾಮ್‌ನಲ್ಲಿ ಹೆಣ್ಣಿಗೆ ಮತ್ತು ಗಂಡಿಗೆ ಎಂದು ಪ್ರತ್ಯೇಕ ಬಾಗಿಲುಗಳಿಲ್ಲ. ಎಲ್ಲ ಬಾಗಿಲುಗಳೂ ಹೆಣ್ಣಿಗೆ ಮುಕ್ತವಾಗಿರುತ್ತವೆ. ಗಂಡಿಗೂ ಮುಕ್ತವಾಗಿರುತ್ತವೆ. ಕಅಬಾಕ್ಕೆ 7 ಬಾರಿ ತವಾಫ್ ಮಾಡುವಲ್ಲಿಂದ ಹಿಡಿದು ಸಫಾ–ಮರ್ವಾಗಳಲ್ಲಿ ಸಈ (ಓಟ) ಮಾಡುವವರೆಗೆ ಮತ್ತು ಪ್ರಾರ್ಥನೆ, ನಮಾಝ್ ಎಲ್ಲವುಗಳವರೆಗೆ ಇಲ್ಲಿ ಹೆಣ್ಣು–ಗಂಡು ಎಂಬ ಪ್ರತ್ಯೇಕತೆ ಇಲ್ಲವೇ ಇಲ್ಲ. ಹೆಣ್ಣು ಮತ್ತು ಗಂಡು ಲಿಂಗದ ಹಂಗಿಲ್ಲದೇ, ಜೊತೆ ಜೊತೆಯಾಗಿ, ಪರಿಚಿತರು ಅಪರಿಚಿತರು ಎಂಬ ಭೇದವಿಲ್ಲದೇ ಕಅಬಾಲಯಕ್ಕೆ 'ತವಾಫ್ (ಸುತ್ತು ಬರುವುದು)' ಮಾಡುತ್ತಾರೆ. ಇಲ್ಲಿ ಹೆಣ್ಣು ಮತ್ತು ಗಂಡನ್ನು ಪ್ರತ್ಯೇಕಗೊಳಿಸಲಾಗಿಲ್ಲ. ತವಾಫ್ ಮಾಡಲು ಗಂಡಿಗೆ ಬೇರೆಯದೇ ಜಾಗ, ಹೆಣ್ಣಿಗೆ ಬೇರೆಯದೇ ಜಾಗ ಮಾಡಲಾಗಿಲ್ಲ. ಅದು ಮುಗಿದರೆ ಪ್ರವಾದಿ ಇಬ್ರಾಹೀಮರ(ಅ) ಪತ್ನಿ ಹಾಜರಾ ಅವರು ನೀರನ್ನು ಹುಡುಕಾಡಿ ಓಡಾಡಿದ ಸಫಾ ಮತ್ತು ಮರ್ವಾ ಎಂಬ ಬೆಟ್ಟಗಳ ನಡುವೆ 7 ಬಾರಿ ಓಡುವ ಕ್ರಮ ಇದೆ. ಇಲ್ಲೂ ಹೆಣ್ಣು–ಗಂಡು ಜೊತೆ ಜೊತೆಯಾಗಿಯೇ ಸಾಗುತ್ತಾರೆ. ದೇಶ–ಭಾಷೆ, ಪರಿಚಿತ–ಅಪರಿಚಿತ, ಬಿಳಿಯ–ಕರಿಯ, ರಾಜ–ಪ್ರಜೆ ಎಂಬ ಯಾವ ವಿಂಗಡಣೆಯೂ ಇಲ್ಲದೆ ನಿರಾತಂಕವಾಗಿ ಈ ಕರ್ಮವನ್ನು ನೆರವೇರಿಸಲಾಗುತ್ತದೆ. ನಮಾಝೂ ಅಷ್ಟೇ. ಹೆಣ್ಣು ಒಂದು ಕಡೆ, ಗಂಡು ಒಂದು ಕಡೆ ಎಂದು ಪ್ರತ್ಯೇಕಿಸುವ ಅಡ್ಡಗೋಡೆಯೇನೂ ಇಲ್ಲ. ಪುರುಷರ ಹಿಂದೆಯೇ ಮಹಿಳೆಯರ ಸರತಿ ಸಾಲು ಇರುತ್ತದೆ. ಕನಿಷ್ಠ ಈ ಸಾಲುಗಳ ಮಧ್ಯೆ ಪುಟ್ಟ ಪರದೆಯೂ ಇರುವುದಿಲ್ಲ. ಇನ್ನು ಸಫಾ–ಮರ್ವಾಗಳ ನಡುವೆ ಸಈ (ಓಟ) ಮಾಡುತ್ತಾ ಇರುವ ಹೆಣ್ಣು–ಗಂಡು, ಇಕಾಮತ್ ಕೇಳಿದ ಕೂಡಲೇ ಅಲ್ಲೇ ಸಾಲುಗಟ್ಟಿ ನಮಾಝ್‌ಗಾಗಿ ನಿಲ್ಲುತ್ತಾರೆ. ಈ ಸಂದರ್ಭದಲ್ಲಿ, ಕೆಲವೊಮ್ಮೆ ಗಂಡಿನ ಪಕ್ಕವೇ ಹೆಣ್ಣು ನಮಾಝ್‌ಗಾಗಿ ನಿಲ್ಲುತ್ತಾಳೆ.





ಮೈ ಮರೆತು ಪ್ರಾರ್ಥಿಸುತ್ತಾಳೆ. ಕುರ್‌ಆನ್ ಪಠಿಸುತ್ತಾಳೆ. ಬಹುಶಃ, ಜಗತ್ತಿನ ಯಾವ ಸ್ಥಳದಲ್ಲೂ ಕಾಣದಷ್ಟು ಸ್ವಶಿಸ್ತು ಮತ್ತು ಸ್ತ್ರೀ–ಪುರುಷರ ಒಟ್ಟು ಸೇರುವಿಕೆಯು ಮಸ್ಜಿದುಲ್ ಹರಾಮ್‌ನಲ್ಲಿ ಕಾಣಸಿಗುತ್ತದೆ. ಬಹುಶಃ, ಇವತ್ತು ಯುರೋಪಿಯನ್ ಸಂಸ್ಕೃತಿ ಎಂದು ನಾವು ಯಾವುದನ್ನು ಹೇಳುತ್ತೇವೋ ಮತ್ತು ಸ್ತ್ರೀ–ಪುರುಷ ಸಮಾನತೆಯ ಪರಮ ಪವಿತ್ರ ಮಾದರಿಯಾಗಿ ಯಾವುದನ್ನು ತೋರಿಸಲಾಗುತ್ತದೋ ಅದರ ಅತ್ಯಂತ ಶಿಸ್ತುಬದ್ಧ ಮತ್ತು ಅತ್ಯಂತ ಆಕರ್ಷಕ ರೂಪವೊಂದು ಮಸ್ಜಿದುಲ್ ಹರಾಮ್‌ನಲ್ಲಿ ಕಂಡುಬರುತ್ತದೆ. ಇಲ್ಲಿ ಒಟ್ಟು ಸೇರುವಿಕೆಯಿದೆ. ಆದರೆ ಅಷ್ಟೇ ಸ್ವಶಿಸ್ತೂ ಇದೆ. ಮಸ್ಜಿದುಲ್ ಹರಾಮ್ ನನ್ನನ್ನು ಮತ್ತೆ ಮತ್ತೆ ಕಾಡಿದ್ದು ಮತ್ತು ನನ್ನೊಳಗನ್ನು ಆಳವಾಗಿ ಆವರಿಸುತ್ತಾ ಹೋದದ್ದು ಈ ಕಾರಣಕ್ಕಾಗಿ. ಮಸ್ಜಿದುಲ್ ಹರಾಮ್ ಸ್ತ್ರೀ–ಪುರುಷ ಸಮಾನತೆಯನ್ನು ಸಾರುವ ಅತೀ ಪವಿತ್ರ ದೇವಭವನ. ಇಲ್ಲಿ ಯಾರು ಯಾರಿಗೂ ಅನ್ಯರಲ್ಲ. ಯಾರು ಯಾರಿಂದಲೂ ಪ್ರತ್ಯೇಕಿತರಲ್ಲ. ಯಾರು ಯಾರಿಗೂ ಅಸ್ಪೃಶ್ಯರಲ್ಲ. ಸ್ತ್ರೀ–ಪುರುಷ ಒಟ್ಟು ಸೇರುವಿಕೆಯ ಹೆಸರಲ್ಲಿ ಇಸ್ಲಾಮನ್ನು ದೂಷಿಸುವವರೆಲ್ಲ ಮತ್ತು ಸ್ತ್ರೀಗೆ ಮಸೀದಿ ಬಾಗಿಲುಗಳನ್ನು ತೆರೆಯಲು ಹಿಂದೇಟು ಹಾಕುವವರೆಲ್ಲ ಒಮ್ಮೆ ಕಡ್ಡಾಯವಾಗಿ ಮಸ್ಜಿದುಲ್ ಹರಾಮ್‌ಗೆ ಭೇಟಿ ಕೊಡಲೇಬೇಕು.

### ಮಸ್ಜಿದುನ್ನಬವಿ

ಮಸ್ಜಿದುಲ್ ಹರಾಮ್‌ನ ಬಳಿಕ ಭೂಮಿಯಲ್ಲಿರುವ ಮಸೀದಿಗಳ ಪೈಕಿ ಅತ್ಯಂತ ಹೆಚ್ಚು ಪಾವಿತ್ರ್ಯ ಹೊಂದಿರುವ ಮತ್ತು ಅತೀ ಮಹತ್ವವಿರುವ ಮಸೀದಿಯಾಗಿ ಮದೀನದಲ್ಲಿರುವ ಮಸ್ಜಿದುನ್ನಬವಿ ಗುರುತಿಸಿಕೊಂಡಿದೆ. ಪ್ರವಾದಿ ಮುಹಮ್ಮದ್(ಸ), ಖಲೀಫಾ ಅಬೂಬಕರ್(ರ) ಮತ್ತು ಖಲೀಫ ಉಮರ್ ಬಿನ್ ಖತ್ತಾಬ್(ರ)ರ ಸಮಾಧಿಗಳು ಇರುವ ಮಸೀದಿ. ಆದರೆ ಇಲ್ಲಿಯ ವಾತಾವರಣ ತೀರಾ ಭಿನ್ನ. ಮಸ್ಜಿದುಲ್ ಹರಾಮ್‌ಗೆ ಬಹುತೇಕ ವಿಷಯಗಳಲ್ಲಿ ಯಾವ ರೀತಿಯಲ್ಲೂ ಹೋಲಿಕೆಯಾಗದ ವೈಶಿಷ್ಟ್ಯಪೂರ್ಣ ವಾತಾವರಣ ಇಲ್ಲಿನದು. ಮಸ್ಜಿದುಲ್ ಹರಾಮ್‌ನಲ್ಲಿರುವಂತೆ ಇಲ್ಲಿ ಗಂಡು ಮತ್ತು ಹೆಣ್ಣು ಪ್ರತ್ಯೇಕತೆಯ ಹಂಗಿಲ್ಲದೇ ನಮಾಝ್ ಮಾಡಲು ಅವಕಾಶ ಇಲ್ಲ. ಇಬ್ಬರಿಗೂ ಪ್ರತ್ಯಪ್ರತ್ಯೇಕ ವ್ಯವಸ್ಥೆಯನ್ನು ಮಾಡಲಾಗಿದೆ. ಮಹಿಳೆಯರು ಮಸೀದಿಗೆ ಪ್ರವೇಶಿಸಲು ಪ್ರತ್ಯೇಕ ದ್ವಾರಗಳಾದರೆ ಪುರುಷರಿಗೂ ಪ್ರತ್ಯೇಕ ದ್ವಾರಗಳೇ. ದ್ವಿತೀಯ ಖಲೀಫಾ ಉಮರ್ ಬಿನ್ ಖತ್ತಾಬ್‌ರ(ರ) ಆಡಳಿತ ಕಾಲದಲ್ಲಿ ಮಸ್ಜಿದುನ್ನಬವಿಗೆ ಮಹಿಳೆಯರ ಪ್ರವೇಶಕ್ಕೆಂದೇ ಪ್ರತ್ಯೇಕ ಬಾಗಿಲನ್ನು (ಬಾಬುನ್ನಿಸಾ) ತೆರೆದಿದ್ದರು. ಪುರುಷರ ಜೊತೆ ಮಸೀದಿ ಪ್ರವೇಶಿಸುವ ಮಹಿಳೆಯರಿಗೆ ತೊಂದರೆ ಆಗದಿರಲಿ ಎಂಬ ಕಾರಣದಿಂದ ಈ ಏರ್ಪಾಡನ್ನು ಅವರು ಮಾಡಿದ್ದರು. ಅಂದರೆ ಪುರುಷರು ಮತ್ತು ಮಹಿಳೆಯರು ಜೊತೆ ಜೊತೆಯಾಗಿಯೇ ಪ್ರತ್ಯೇಕ ಬಾಗಿಲುಗಳ ಮೂಲಕ ಮಸ್ಜಿದುನ್ನಬವಿಗೆ

ಪ್ರವೇಶಿಸುತ್ತಿದ್ದರು ಎಂಬುದಕ್ಕೆ ಪುರಾವೆ ಇದು. ಆದರೆ ಬರಬರುತ್ತಾ ಬಾಬುನ್ನಿಸಾದಲ್ಲಿ ಮಹಿಳಾ ಪ್ರವೇಶಕ್ಕೆ ತಡೆ ಹಾಕಲಾಯಿತಲ್ಲದೇ, ಮಹಿಳೆಯರಿಗೆ ಪ್ರತ್ಯೇಕ ವ್ಯವಸ್ಥೆ ಮಾಡಲಾಯಿತು. ಖಲೀಫರ ಕಾಲದಲ್ಲಿ ಮಹಿಳೆಯರ ಸುಗಮ ಮಸೀದಿ ಪ್ರವೇಶಕ್ಕಾಗಿ ತೆರೆಯಲಾದ ಬಾಬುನ್ನಿಸಾ ಎಂಬ ದ್ವಾರ ಇವತ್ತಿಗೂ ಅದೇ ಹೆಸರಿನಲ್ಲಿ ಅಸ್ತಿತ್ವದಲ್ಲಿದ್ದರೂ ಆ ದ್ವಾರದ ಮೂಲಕ ಮಸೀದಿ ಪ್ರವೇಶಕ್ಕೆ ಮಹಿಳೆಯರಿಗೆ ಅವಕಾಶ ನೀಡಲಾಗುತ್ತಿಲ್ಲ. ಇದಕ್ಕೆ ಕಾರಣ ಏನೆಂದರೆ, ಖಲೀಫ ಉಮರ್ ಬಿನ್ ಖತ್ತಾಬ್(ರ) ಕಾಲದ ಮಸ್ಜಿದುನ್ನಬವಿಯು ಬರಬರುತ್ತಾ ಸಾಕಷ್ಟು ವಿಸ್ತರಣಾ ಪ್ರಕ್ರಿಯೆಗೆ ಒಳಗಾಗಿರುವುದು. ಈ ವಿಸ್ತರಣೆಯಿಂದಾಗಿ ಮಸ್ಜಿದುನ್ನಬವಿಯ ಆಕಾರ, ಗಾತ್ರ, ಉದ್ದಳತೆಯಲ್ಲಿ ಸಾಕಷ್ಟು ಬದಲಾವಣೆ ಉಂಟಾಗಿದೆ. ಮದೀನದಲ್ಲಿ ತೀರಾ ಕಡಿಮೆ ಜನಸಂಖ್ಯೆ ಇದ್ದ ಕಾಲದಲ್ಲಿ ಮಹಿಳೆಯರು ಬಾಬುನ್ನಿಸಾದ ಮೂಲಕ ಮಸ್ಜಿದುನ್ನಬವಿಯನ್ನು ಪ್ರವೇಶಿಸುವುದು ಮತ್ತು ಪುರುಷರ ಹಿಂದೆ ನಿಂತು ನಮಾಝ್ ಮಾಡುವುದೆಲ್ಲ ಸಹಜವಾಗಿತ್ತು. ಆದರೆ ಜನಸಂಖ್ಯೆ ಹೆಚ್ಚಾದಂತೆಲ್ಲ ಈ ಸಹಜತೆಯಲ್ಲಿ ಬದಲಾವಣೆಯನ್ನು ತರಬೇಕಾದ ಅನಿವಾರ್ಯತೆ ಎದುರಾಯಿತು. ಅದರಿಂದಾಗಿ ಬಾಬುನ್ನಿಸಾವನ್ನು ಪುರುಷರಿಗೆ ಮೀಸಲಿಟ್ಟು ಮಹಿಳೆಯರ ಪ್ರವೇಶಕ್ಕೆ ಮಸೀದಿಯ ಹಿಂಭಾಗದಲ್ಲಿ ಬೇರೆಯದೇ ಆದ ದ್ವಾರಗಳನ್ನು ತೆರೆಯಲಾಯಿತು. ಅಲ್ಲದೇ ಪುರುಷ ಮತ್ತು ಮಹಿಳೆಯರನ್ನು ಪ್ರತ್ಯೇಕಗೊಳಿಸುವುದರ ಸಂಕೇತವಾಗಿ ಮಸ್ಜಿದುನ್ನಬವಿಯ ಒಳಗಡೆ ಕರ್ಟನ್‌ಗಳನ್ನೂ ಹಾಕಲಾಗಿದೆ.

ಒಂದು ರೀತಿಯಲ್ಲಿ, ಮಸ್ಜಿದುಲ್ ಹರಾಮ್ ಮತ್ತು ಮಸ್ಜಿದುನ್ನಬವಿಗಳು ಎರಡು ಸಾಧ್ಯತೆಗಳ ಪ್ರತೀಕ. ಇಸ್ಲಾಮ್‌ನಲ್ಲಿ ಸ್ತ್ರೀ–ಪುರುಷ ಒಟ್ಟು ಸೇರುವಿಕೆಯನ್ನು ನಿಷೇಧಿಸಲಾಗಿಲ್ಲ ಎಂಬುದು ಈ ಸಾಧ್ಯತೆಗಳ ಪೈಕಿ ಒಂದಾದರೆ, ಈ ಒಟ್ಟು ಸೇರುವಿಕೆಯನ್ನು ತಡೆ ಹಿಡಿಯುವುದಕ್ಕೂ ಅವಕಾಶ ಇದೆ ಎಂಬುದು ಇನ್ನೊಂದು. ಸಂದರ್ಭ, ಸನ್ನಿವೇಶ ಮತ್ತು ಸೂಕ್ತ ಕಾರಣಗಳು ಈ ಎರಡಕ್ಕೂ ಅವಕಾಶವನ್ನು ಒದಗಿಸುತ್ತವೆ ಎಂಬುದಾಗಿ ಮಸ್ಜಿದುಲ್ ಹರಾಮ್ ಮತ್ತು  ಮಸ್ಜಿದುನ್ನಬವಿಯ ವಾತಾವರಣ ಸ್ಪಷ್ಟಪಡಿಸುತ್ತದೆ. ಅಷ್ಟಕ್ಕೂ, ಭೂಮಿಯಲ್ಲಿರುವ ಮಸೀದಿಗಳ ಪೈಕಿ ಅತ್ಯಂತ ಶ್ರೇಷ್ಠ ಮಸೀದಿಯಾಗಿರುವ ಮಸ್ಜಿದುಲ್ ಹರಾಮ್ ಮತ್ತು ಪ್ರವಾದಿ ಮುಹಮ್ಮದ್(ಸ) ಅವರ ಕಬರ್ (ಸಮಾಧಿ) ಇರುವ ಮಸ್ಜಿದುನ್ನಬವಿಯನ್ನು ನಾವು ಬರೇ ನಮಾಝ್‌ನ ಪುಣ್ಯಗಳ ದೃಷ್ಟಿಯಿಂದ ಮಾತ್ರ ನೋಡಬೇಕಾಗಿಲ್ಲ. ಒಂದು ವೇಳೆ, ಸಹಾಬಿಗಳು ಆ ದೃಷ್ಟಿಯಿಂದ ಮಾತ್ರ ಈ ಎರಡು ಮಸೀದಿಗಳನ್ನು ನೋಡಿದ್ದಿದ್ದರೆ ಜಗತ್ತಿನೆಲ್ಲೆಡೆಗೆ ಅವರು ಪ್ರಯಾಣ ಬೆಳೆಸುವ ಸಾಧ್ಯತೆಯೇ ಇರಲಿಲ್ಲ. ಈ ಎರಡು ಮಸೀದಿಗಳಲ್ಲೇ ಎಲ್ಲ ನಮಾಝ್‌ಗಳನ್ನೂ ನಿರ್ವಹಿಸುತ್ತಾ ಪುಣ್ಯದ ಕೊಯ್ಲಿನಲ್ಲಿ ನಿರತರಾಗುವುದನ್ನು ತಮ್ಮ ಪೂರ್ಣಕಾಲಿಕ ಉದ್ಯೋಗವಾಗಿ ಪರಿಗಣಿಸುತ್ತಿದ್ದರು. ಆದರೆ ಸಹಾಬಿಗಳು ಹಾಗೆ ಮಾಡಿಯೇ ಇಲ್ಲ. ಯಾಕೆಂದರೆ, ಈ ಎರಡು





ಮಸೀದಿಗಳಿಗೆ ಅಲ್ಲಾಹನು ಶ್ರೇಷ್ಠತೆಯನ್ನು ದಯಪಾಲಿಸಿರುವುದರ ಹಿಂದೆ ಅವರು ಹಲವು ಸಾಧ್ಯತೆಗಳನ್ನು ಗ್ರಹಿಸಿದ್ದರು. ಶ್ರೇಷ್ಠತೆಯಲ್ಲಿ ಪುಣ್ಯದ ಹೊರತಾದ ಇತರ ಅಂಶಗಳನ್ನು ಕಂಡುಕೊಂಡಿದ್ದರು. ಯಾವುದೇ ಓರ್ವ ವ್ಯಕ್ತಿ ಅಥವಾ ಒಂದು ಮಸೀದಿ ಅಥವಾ ಒಂದು ಸಿದ್ಧಾಂತವು ವಿನಾ ಕಾರಣ ಶ್ರೇಷ್ಠ ಅನ್ನಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಕೆಲವು ವಿಶಿಷ್ಟ ಅಂಶಗಳೇ ಅವನ್ನು ಶ್ರೇಷ್ಠಗೊಳಿಸುತ್ತವೆ. ಮಸ್ಜಿದುಲ್ ಹರಾಮ್ ಮತ್ತು ಮಸ್ಜಿದುನ್ನಬವಿಯ ಶ್ರೇಷ್ಠತೆಯನ್ನು ನಾವು ವಿಶ್ಲೇಷಿಸಬೇಕಾದದ್ದು ಈ ಮಾನದಂಡದ ಆಧಾರದಲ್ಲೇ. ಇವೆರಡೂ ಜಗತ್ತಿನ ಪಾಲಿಗೆ ಸಾರ್ವಕಾಲಿಕ ಮಾದರಿ. ಈ ಎರಡೂ ಮಸೀದಿಗಳ ಎಲ್ಲವೂ ಸಾರ್ವಕಾಲಿಕ ಮಾದರಿಯೇ. ನಮಾಝ್‌ನಿಂದ ಹಿಡಿದು ಕೆತ್ತನೆ ಕಲೆಗಾರಿಕೆಯ ವರೆಗೆ, ಸ್ತ್ರೀ–ಪುರುಷ ಒಟ್ಟು ಸೇರುವಿಕೆಯಿಂದ ಹಿಡಿದು ಪ್ರತ್ಯೇಕತೆಯವರೆಗೆ ಎಲ್ಲವೂ ಮಾದರಿಯೇ. ನಮಾಝ್‌ನಲ್ಲಿ ಎದೆಗೆ ಕೈಕಟ್ಟುವವನೂ/ಳೂ ಕೈ ಕಟ್ಟದೆಯೇ ನಮಾಝ್ ಮಾಡುವವನೂ/ಳೂ ಇಲ್ಲಿ ಅಕ್ಕ–ಪಕ್ಕದಲ್ಲೇ ನಿಲ್ಲುತ್ತಾರೆ. ಓರ್ವ ಮುಂಡಾಸುಧಾರಿಯಾದರೆ ಇನ್ನೋರ್ವ ತಲೆಗೆ ಏನನ್ನೂ ಧರಿಸದೆ ಖಾಲಿ ಬಿಟ್ಟವ. ಧರಿಸುವ ಬಟ್ಟೆಗಳಲ್ಲೂ, ಕುರ್‌ಆನನ್ನು ಪಠಿಸುವ ಶೈಲಿಗಳಲ್ಲೂ, ಪ್ರಾರ್ಥಿಸುವ ವಿಧಾನದಲ್ಲೂ, ನಮಾಝ್‌ಗೆ ಸಾಲಾಗಿ ನಿಲ್ಲುವುದರಲ್ಲೂ, ಬಟ್ಟೆಯ ಉದ್ದಳತೆಯಲ್ಲೂ... ಹೀಗೆ ಎಲ್ಲದರಲ್ಲೂ ಇಲ್ಲಿ ಅದ್ಭುತವಾದ ವೈವಿಧ್ಯತೆ ಕಾಣಸಿಗುತ್ತದೆ. ಇವೂ ಮಾದರಿಯೇ. ಈ ಎರಡೂ ಮಸೀದಿಗಳು ವೈಚಾರಿಕವಾಗಿ ವಿಭಿನ್ನ ನಿಲುವು ಹೊಂದಿರುವವರನ್ನು ಹತ್ತಿರ ನಿಲ್ಲಿಸುತ್ತದೆ. ಪರಸ್ಪರ ಮಾತಾಡಿಸುತ್ತದೆ. ಸಹಾಯ–ಸಹಕಾರಗಳನ್ನು ಪರಸ್ಪರ ವಿನಿಮಯಗೊಳಿಸುತ್ತದೆ. ಇವೂ ಕೂಡ ಮಾದರಿಯೇ. ಇವು ಮತ್ತು ಇಲ್ಲಿ ಉಲ್ಲೇಖಕ್ಕೆ ಒಳಗಾಗದ ಇಂಥ ಅನೇಕಾರು ಸಂಗತಿಗಳೂ ಈ ಮಸೀದಿಯ ಶ್ರೇಷ್ಠತೆಯಲ್ಲಿ ಪಾಲು ಪಡೆದಿವೆ. ಆದರೆ, ನಮ್ಮಲ್ಲಿ ಅನೇಕರು ಈ ಎರಡು ಮಸೀದಿಗಳ ಶ್ರೇಷ್ಠತೆಗೆ ಕಾರಣವಾಗಿ ಕಅಬಾ, ಸಫಾ–ಮರ್ವಾ, ಪ್ರವಾದಿಯವರ ಸಮಾಧಿ... ಮುಂತಾದುವುಗಳನ್ನು ಮಾತ್ರ ಪರಿಗಣಿಸಿರುವುದರಿಂದಲೇ ಮಹಿಳೆಯರ ಮಸೀದಿ ಪ್ರವೇಶಕ್ಕೆ, ಸ್ತ್ರೀ–ಪುರುಷರ ಒಟ್ಟು ಸೇರುವಿಕೆಗೆ, ವೈಚಾರಿಕ ವೈವಿಧ್ಯತೆಯನ್ನು ಮಾನ್ಯ ಮಾಡುವುದಕ್ಕೆ... ಇತ್ಯಾದಿಗಳಿಗೆ ಈ ಶ್ರೇಷ್ಠತೆಯಲ್ಲಿ ಯಾವ ಮಾದರಿಯನ್ನೂ ಅವರು ಕಾಣುತ್ತಿಲ್ಲ. ಆ ಮೂಲಕ ಎರಡೂ ಮಸೀದಿಗಳ ಶ್ರೇಷ್ಠತೆಯಲ್ಲಿ ಬರೇ 'ಪುಣ್ಯ' ಗಳಿಕೆಯನ್ನಷ್ಟೇ ಕಾಣುತ್ತಿದ್ದಾರೆ. ಒಂದು ವೇಳೆ, ಯಾವುದೇ ವಿಶ್ವಾಸಿ ಮಸ್ಜಿದುಲ್ ಹರಾಮ್ ಮತ್ತು ಮಸ್ಜಿದುನ್ನಬವಿಯನ್ನು ಭೂಮಿಯಲ್ಲಿರುವ ಮಸೀದಿಗಳ ಪೈಕಿ ಎರಡು ಶ್ರೇಷ್ಠ ಮಸೀದಿಗಳಾಗಿ ಮತ್ತು ತಮ್ಮ ಪಾಲಿನ ಮಾದರಿ ಮಸೀದಿಯಾಗಿ ಪರಿಗಣಿಸುತ್ತಾರಾದರೆ, ಅವರು ಮಹಿಳೆಗೆ ಮಸೀದಿ ಪ್ರವೇಶವನ್ನು ನಿರಾಕರಿಸಲು ಸಾಧ್ಯವೇ ಇಲ್ಲ. ಸ್ತ್ರೀ–ಪುರುಷರ ಒಟ್ಟು ಸೇರುವಿಕೆಯನ್ನು ಶಾಶ್ವತ ನಿಷೇಧದ ಪಟ್ಟಿಯಲ್ಲಿರಿಸುವುದಕ್ಕೂ ಸಾಧ್ಯವಿಲ್ಲ. ಇವೆರಡೂ ಕಾಲ, ಸಂದರ್ಭ, ಸನ್ನಿವೇಶಗಳಿಗೆ

ಹೊಂದಿಕೊಂಡು ಸಾಧ್ಯ–ಅಸಾಧ್ಯಗಳಾಗಿ ಗುರುತಿಸಿಕೊಳ್ಳಬೇಕೇ ಹೊರತು, ಶಾಶ್ವತವಾಗಿ ನಿಷೇಧಕ್ಕೆ ಒಳಗಾಗುವುದು ಇಸ್ಲಾಮಿನ ಚೈತನ್ಯಕ್ಕೆ ವಿರುದ್ಧ. ಅಲ್ಲದೆ, ಎರಡು ಶ್ರೇಷ್ಠ ಮಸೀದಿಗಳ ಪರಂಪರೆಗೂ ವಿರುದ್ಧ. ಹಾಗೆಯೇ ಎದೆಗೆ ಕೈಕಟ್ಟುವವ/ಳು ಅಥವಾ ಕಟ್ಟದೇ ಇರುವವ, ಕಾಲು ಆಗಲಿಸುವವ ಅಥವಾ ಅಗಲಿಸದವ, ಟೊಪ್ಪಿಯನ್ನೋ ಮುಂಡಾಸನ್ನೋ ಉಪಯೋಗಿಸುವವ ಮತ್ತು ಉಪಯೋಗಿಸದವ, ಗಡ್ಡದಾರಿ ಮತ್ತು ಗಡ್ಡರಹಿತ ವ್ಯಕ್ತಿ, ಬುರ್ಖಾ ಧರಿಸುವವರು ಮತ್ತು ಧರಿಸದವರು... ಎಲ್ಲರನ್ನೂ ಏಕರೂಪ ಮತ್ತು ಏಕೀ ಭಾವದಲ್ಲಿ ಈ ಎರಡೂ ಮಸೀದಿಗಳು ಸ್ವಾಗತಿಸುತ್ತವೆ. ಇಸ್ಲಾಮಿನಲ್ಲಿ ವೈಚಾರಿಕ ವೈವಿಧ್ಯತೆಗೆ ಇರುವ ಅತಿದೊಡ್ಡ ಪುರಾವೆ ಕೂಡ ಈ ಎರಡು ಮಸೀದಿಗಳೇ. ಆದರೆ, ಮಸ್ಜಿದುಲ್ ಹರಾಮ್ ಮತ್ತು ಮಸ್ಜಿದುನ್ನಬವಿಯ ಈ ಮಾದರಿಯನ್ನು ನಮ್ಮ ನಡುವಿನ ಅನೇಕ ವಿಶ್ವಾಸಿಗಳು ಇವತ್ತು ಇಸ್ಲಾಮಿನ ಮಾದರಿಯಾಗಿ ಸ್ವೀಕರಿಸಲು ಹಿಂದೇಟು ಹಾಕುತ್ತಿದ್ದಾರೆ. ಈ ಎರಡೂ ಮಸೀದಿಗಳಿಗೆ ಭೇಟಿಕೊಟ್ಟೂ, ಇವೆಲ್ಲವನ್ನೂ ಕಣ್ಣಾರೆ ಕಂಡೂ, ಅನುಭವಿಸಿಯೂ ತಮ್ಮೂರಿನಲ್ಲಿ ಒಂದು ಮಾದರಿ ವಾತಾವರಣವನ್ನು ಹುಟ್ಟು ಹಾಕಲು ಇವರು ಯತ್ನಿಸುತ್ತಿಲ್ಲ. ಆ ಬಗ್ಗೆ ಸಮಾಜಕ್ಕೆ ತಿಳಿ ಹೇಳುತ್ತಿಲ್ಲ. ಬದಲು, ಅವೆರಡೂ ಮಸೀದಿಯಲ್ಲಿ ಕಂಡದ್ದನ್ನು ಅಲ್ಲಿಗೇ ಮೀಸಲಾಗಿಸಿ ತಮ್ಮೂರಿನಲ್ಲಿ ತನ್ನದೇ ಹಳೆಯ ನೀತಿಯನ್ನು ಕಡ್ಡಾಯವಾಗಿ ಪಾಲಿಸುತ್ತಿದ್ದಾರೆ. ನಿಜವಾಗಿ, ಮಸ್ಜಿದುಲ್ ಹರಾಮ್ ಮತ್ತು ಮಸ್ಜಿದುನ್ನಬವಿಗಳು ಮುಸ್ಲಿಮ್ ಸಮುದಾಯದ ಪಾಲಿಗೆ ಎಲ್ಲಾ ರೀತಿಯಲ್ಲೂ ಮಾದರಿಯಾಗದ ಹೊರತು ಪವಿತ್ರ ಕುರ್‌ಆನ್ ಸಾರಿರುವ 'ಸುಮಧ್ಯ ಸಮುದಾಯ'ವಾಗಿ ಮುಸ್ಲಿಮ್ ಸಮುದಾಯ ಮಾರ್ಪಡಲು ಸಾಧ್ಯವೇ ಇಲ್ಲ. ಎಲ್ಲವನ್ನೂ 'ನಿಷಿದ್ಧ'ಗಳ ಪಟ್ಟಿಯಲ್ಲಿಡುವ ಉಗ್ರ ನಿಲುವು ಮತ್ತು ಎಲ್ಲವನ್ನೂ 'ಮುಕ್ತ'ಗಳ ಪಟ್ಟಿಯಲ್ಲಿಡುವ ಉದಾರ ನಿಲುವುಗಳ ನಡುವಿನ ನಿಲುವು ಇಸ್ಲಾಮಿನದ್ದು. ಸಂತುಲಿತ ನೀತಿಯನ್ನು ಅತ್ಯಂತ ಸುಂದರವಾಗಿ ಪ್ರತಿಪಾದಿಸುವ ಎರಡು ಕುರುಹುಗಳೇ ಮಸ್ಜಿದುಲ್ ಹರಾಮ್ ಮತ್ತು ಮಸ್ಜಿದುನ್ನಬವಿ. ಇದನ್ನು ತಿರಸ್ಕರಿಸಿ ನಡೆಯುವಷ್ಟು ದಿನ ಮುಸ್ಲಿಮ್ ಸಮುದಾಯ ಆಂತರಿಕ ಮತ್ತು ಬಾಹ್ಯ ಸವಾಲುಗಳನ್ನು ಎದುರಿಸುತ್ತಲೇ ಇರಬೇಕಾಗುತ್ತದೆ.





## ಭಾಗ: 2

ಉಮ್ರಾ ಯಾತ್ರೆ ನನ್ನ ಪಾಲಿಗೆ ತೀರಾ ತೀರಾ ಅನಿರೀಕ್ಷಿತ ವಿದ್ಯಮಾನ. ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಕಲ್ಲಡ್ಕದಲ್ಲಿರುವ ಅನುಗ್ರಹ ಪದವಿ ಕಾಲೇಜಿನ ಸಭಾಂಗಣದಲ್ಲಿ ಒಂದು ರಾತ್ರಿ ಕವಿಗೋಷ್ಠಿ ಏರ್ಪಾಟಾಗಿತ್ತು. ನಾನದರ ಅಧ್ಯಕ್ಷತೆ ವಹಿಸಿದ್ದೆ. ಕಾರ್ಯಕ್ರಮ ಮುಗಿಸಿ ವೇದಿಕೆಯಿಂದ ಕೆಳಗಿಳಿದ ನನ್ನಲ್ಲಿ ಆತ್ಮೀಯರೊಬ್ಬರು ಉಮ್ರಾ ಯಾತ್ರೆಯ ಕೊಡುಗೆಯನ್ನು ಅಚಾನಕ್ಕಾಗಿ ನನ್ನ ಮುಂದಿಟ್ಟರು. ನಾನು ಕ್ಷಣ ಆಘಾತಕ್ಕೆ ಒಳಗಾದೆ. ಕ್ಷಣ ಮಾತೇ ಹೊರಡದಷ್ಟು ಅಚ್ಚರಿಯಲ್ಲಿ ತೇಲಿಹೋದೆ. ನಾನೆಷ್ಟು ಭಾವಾವೇಶಕ್ಕೆ ಒಳಗಾಗಿದ್ದೆನೆಂದರೆ, ಗರ್ಭಿಣಿಯಾದ ಪತ್ನಿಯಲ್ಲಿ ಒಂದು ಮಾತೂ ಕೇಳದೆಯೇ, ಸನ್ಮಾರ್ಗ ಆಡಳಿತ ಮಂಡಳಿಯಲ್ಲಿ ಅನುಮತಿಯನ್ನೂ ಪಡೆಯದೆಯೇ ಮತ್ತು ಹಿಂದು–ಮುಂದು ಏನನ್ನೂ ಆಲೋಚಿಸದೆಯೇ 'ಖಂಡಿತ ಬರುತ್ತೇನೆ' ಎಂದು ಹೇಳಿಬಿಟ್ಟೆ.

ಸಾಮಾನ್ಯವಾಗಿ, ಉಮ್ರಾ ಮತ್ತು ಹಜ್ಜ್ ಯಾತ್ರೆಗೆ ತೆರಳುವವರು ಕಚೇರಿಗೆ ಬಂದು ನನ್ನನ್ನು ಭೇಟಿಯಾಗುವುದಿದೆ. ಪರಸ್ಪರ ಅಲಿಂಗನಗಳ ವಿನಿಮಯವಾಗುವುದಿದೆ. ಪ್ರಾರ್ಥನೆಗಾಗಿ ಕೋರಿಕೊಳ್ಳುವುದಿದೆ. ಆಗೆಲ್ಲ ನನ್ನೊಳಗೂ ಅಂಥದ್ದೊಂದು ಯಾತ್ರೆಯ ಆಸೆ ಹುಟ್ಟಿಕೊಳ್ಳುತ್ತಿತ್ತು. ಮಕ್ಕಾ–ಮದೀನಾದ ಬಗ್ಗೆ ಕೇಳಿ ಮತ್ತು ಓದಿ ತಿಳಿದುಕೊಂಡಿದ್ದ ನನಗೆ ಅವನ್ನು ಪ್ರತ್ಯಕ್ಷವಾಗಿ ಕಣ್ತುಂಬಿಸಿಕೊಳ್ಳಬೇಕೆಂಬ ಬಯಕೆ ಉಂಟಾಗುತ್ತಿತ್ತು. ಸನ್ಮಾರ್ಗ ಪತ್ರಿಕೆಯು ವರ್ಷಂಪ್ರತಿ ಸೀರತ್ ವಿಶೇಷಾಂಕ ಮತ್ತು ಹಜ್ಜ್ ವಿಶೇಷಾಂಕವನ್ನು ಕಡ್ಡಾಯವಾಗಿ ಪ್ರಕಟಿಸುತ್ತಾ ಬರುತ್ತಿದೆ. ಒಂದರಲ್ಲಿ ಪ್ರವಾದಿ ಮುಹಮ್ಮದ್(ಸ)ರ ಕುರಿತಂತೆ ವಿಸ್ತೃತ ವಿವರ, ವಿಶ್ಲೇಷಣೆಗಳಿದ್ದರೆ ಇನ್ನೊಂದರಲ್ಲಿ ಹಜ್ಜ್‌ಗೆ ಸಂಬಂಧಿಸಿ ವಿವರಗಳಿರುತ್ತವೆ. ಎರಡರ ಕೇಂದ್ರ ಬಿಂದುವೂ ಮಕ್ಕಾ–ಮದೀನವೇ. ಪ್ರವಾದಿ ಮುಹಮ್ಮದ್‌ರು(ಸ) ಬಾಳಿ–ಬದುಕಿದ ಮತ್ತು ಅಪೂರ್ವ ಕ್ರಾಂತಿಯೊಂದನ್ನು ಸಾಧ್ಯವಾಗಿಸಿದ ಮಣ್ಣಿನ ಬಗ್ಗೆ ಓರ್ವ ಸಂಪಾದಕನಾಗಿ ಲೇಖನಗಳನ್ನು ಓದುವ ಸಂದರ್ಭ ಆಗಾಗ ಬರುತ್ತಲೇ ಇರುತ್ತವೆ. ಸೀರತ್

ವಿಶೇಷಾಂಕದ ಸಂದರ್ಭದಲ್ಲಂತೂ ಡಜನ್‌ಗಟ್ಟಲೆ ಲೇಖನಗಳನ್ನು ಓದುವ, ಎಡಿಟ್ ಮಾಡುವ ಅನಿವಾರ್ಯತೆಯೂ ಇರುತ್ತದೆ. ಆಗೆಲ್ಲ ಪ್ರವಾದಿಯವರನ್ನು(ಸ) ಹತ್ತಾರು ರೀತಿಯಲ್ಲಿ ಕಲ್ಪಿಸಿಕೊಂಡು ವಿಶ್ಲೇಷಣೆ ಮಾಡುವುದಿದೆ. ಅವರು ಬಾಳಿ ಬದುಕಿದ ಮನೆ, ಪರಿಸರ, ಮರಳುಗಾಡು, ಖರ್ಜೂರ, ವಿರೋಧಿಗಳು, ಹೋರಾಟ ಭೂಮಿ, ಧ್ಯಾನಾಸಕ್ತ ಪರ್ವತ, ಕಅಬಾ, ಹರಮ್... ಎಂಬುದೆಲ್ಲಾ ನನ್ನೆದುರು ವೃತ್ತಾಕಾರವಾಗಿ ಸುತ್ತುವುದಿದೆ. ಮಕ್ಕಾಕ್ಕಿಂತ ಸಾವಿರಾರು ಕಿಲೋ ಮೀಟರ್ ದೂರ ಇರುವ ಓರ್ವ ವ್ಯಕ್ತಿಯ ಮುಂದೆ ಅಕ್ಷರಗಳಲ್ಲಿ ಮೂಡುವ ಪ್ರವಾದಿಗೂ ಮಕ್ಕಾದಲ್ಲೇ ಇರುವ ವ್ಯಕ್ತಿಯೋರ್ವ ನಿಲುಕಿಸಿಕೊಳ್ಳುವ ಪ್ರವಾದಿಗೂ(ಸ) ನಡುವೆ ಇರುವ ಅಂತರ ಅಗಾಧವಾದುದು. ಅಕ್ಷರಕ್ಕೆ ಅದರದ್ದೇ ಆದ ಮಿತಿಯಿದೆ. ಅಕ್ಷರವನ್ನು ಬಳಸಿ ಮರಳುಗಾಡು ಎಂದು ಬರೆಯಬಹುದೇ ಹೊರತು ನಿಜ ಮರಳನ್ನು ಓದುಗರಿಗೆ ನೀಡಲು ಸಾಧ್ಯವಿಲ್ಲ. ಉಹುದ್ ಯುದ್ಧವನ್ನು ಅಕ್ಷರಗಳ ಮೂಲಕ ಅತ್ಯಂತ ಭಾವುಕವಾಗಿ ಕಟ್ಟಿ ಕೊಡಬಹುದು. ಅಲ್ಲಿ ನಡೆದ ಕಾಳಗದಲ್ಲಿ ಪ್ರವಾದಿಯವರಿಗೆ(ಸ) ಆದ ಗಾಯ, ಹಂಝ(ರ)ರ ಹುತಾತ್ಮತೆ, ಹಿಂದ್‌ರ ನೃತ್ಯ, ಮುಸ್ಲಿಮ್ ಸೇನೆಗೆ ಎದುರಾದ ಕಠಿಣ ಪ್ರತಿರೋಧಗಳನ್ನೆಲ್ಲಾ ಅಕ್ಷರಗಳಲ್ಲಿ ಅತ್ಯಂತ ಮಾರ್ಮಿಕವಾಗಿ ನಿರೂಪಿಸಬಹುದು. ಉಹುದ್ ಬೆಟ್ಟದ ಗಾತ್ರ, ಎತ್ತರ, ಉದ್ದಳತೆಯನ್ನೆಲ್ಲಾ ಅಕ್ಷರಗಳಲ್ಲಿ ಹೇಳಬಹುದು. ಆದರೆ, ಇವು ಯಾವುದೂ ಉಹುದ್‌ನಲ್ಲಿ ಸ್ವತಃ ನಿಂತು ಅನುಭವಿಸಿದ ಸ್ವಾದವನ್ನು ನೀಡಲಾರವು. ಆದ್ದರಿಂದಲೇ, ಮಕ್ಕಾದಲ್ಲಿರುವ ವ್ಯಕ್ತಿ ಪ್ರವಾದಿಯವರನ್ನು ಮತ್ತು ಅವರ ಹೋರಾಟದ ಬದುಕನ್ನು ಕಂಡುಕೊಳ್ಳುವುದನ್ನೂ ಮಕ್ಕಾಕ್ಕೆ ಒಮ್ಮೆಯೂ ಕಾಲಿಡದ ವ್ಯಕ್ತಿ ಕಂಡುಕೊಳ್ಳುವುದನ್ನೂ ಬೇರೆ ಬೇರೆಯಾಗಿಯೇ ನೋಡಬೇಕಾಗುತ್ತದೆ. ಮಕ್ಕಾ ಬಿಡಿ, ದಕ್ಷಿಣ ಮತ್ತು ಉತ್ತರ ಕರ್ನಾಟಕವನ್ನೇ ಎತ್ತಿಕೊಳ್ಳಿ ಅಥವಾ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಬಳ್ಳಾರಿ ಜಿಲ್ಲೆಗಳನ್ನೇ ಆಯ್ಕೆ ಮಾಡಿಕೊಳ್ಳಿ. ಬಳ್ಳಾರಿಯನ್ನು ಬರೇ ಅಕ್ಷರಗಳಲ್ಲಿ ಮಾತ್ರ ಓದಿದ ವ್ಯಕ್ತಿ ಸ್ವತಃ ಬಳ್ಳಾರಿಗೆ ಹೋದರೆ ಅಕ್ಷರಗಳಲ್ಲಿ ಓದಿದ ಬಳ್ಳಾರಿಗಿಂತ ಭಿನ್ನವಾದುದನ್ನು ಖಂಡಿತ ಅನುಭವಿಸುತ್ತಾನೆ/ಳೆ. ಅಲ್ಲಿಯ ಮಣ್ಣು, ವಾತಾವರಣ, ಮಾತು-ಆಹಾರ, ಉಡುಪಿನ ರೀತಿ-ನೀತಿ.. ಎಲ್ಲದರಲ್ಲೂ ಹೊಸ ಅನುಭವ ಉಂಟಾಗುತ್ತದೆ. ಹೀಗಿರುವಾಗ ಮಕ್ಕಾವನ್ನು ಅಕ್ಷರಗಳಲ್ಲಿ ಓದಿ ತಿಳಿದುಕೊಳ್ಳುವುದಕ್ಕೂ ಸ್ವತಃ ಅಲ್ಲಿದ್ದು ಅನುಭವಿಸುವುದಕ್ಕೂ ಇರಬಹುದಾದ ವ್ಯತ್ಯಾಸವನ್ನು ನೀವೇ ಊಹಿಸಿ. ಹಜ್ಜ್ ವಿಶೇಷಾಂಕವನ್ನು ತಯಾರಿಸುವ ವೇಳೆಯಲ್ಲೂ ನಾನು ಈ ತಳಮಳವನ್ನು ಅನುಭವಿಸಿದ್ದಿದೆ. ಪ್ರವಾದಿ ಇಬ್ರಾಹೀಮ್(ಅ), ಹಾಜರಾ(ರ), ಇಸ್ಮಾಈಲ್(ಅ)ರನ್ನು ಕೇಂದ್ರೀಕರಿಸಿ ತೆರೆದುಕೊಳ್ಳುವ ಒಂದು ದೀರ್ಘ ಇತಿಹಾಸದ ಪುಟಗಳ ತುಂಬ ಮಕ್ಕಾವೇ ತುಂಬಿರುತ್ತದೆ. ಹಾಜರಾರ ಸ್ಮರಣಾರ್ಥ ಹಜ್ಜ್ ಯಾತ್ರಿಕರು ಸಫಾ-ಮರ್ವಾ ಬೆಟ್ಟಗಳ ನಡುವೆ ಸಈ ಮಾಡುತ್ತಾರೆ ಎಂಬುದನ್ನು ವಿಶೇಷಾಂಕಕ್ಕಾಗಿ ಲೇಖನ ಸಿದ್ಧಪಡಿಸುವ ಸಂದರ್ಭದಲ್ಲಿ



ಎಣ್ಣೆ ಬತ್ತಿದ ಲಾಟೀನು

ಅಸಂಖ್ಯ ಬಾರಿ ಓದಿದ್ದಿದೆ. ಝಮ್ ಝಮ್‌ನ ಬಗ್ಗೆ ಕುತೂಹಲ ಉಂಟಾದದ್ದಿದೆ. ಹಾಜರಾ(ರ) ಮತ್ತು ಇಬ್ರಾಹೀಮ್(ಅ)ರ ಚರಿತ್ರೆಯನ್ನು ಆಧುನಿಕ ಕಾಲದಲ್ಲಿ ನಿಂತು ಹೊಸದಾಗಿ ಓದುವ ಪ್ರಯತ್ನ ಮಾಡಿದ್ದೂ ಇದೆ. ಆದರೆ ಈ ಅಕ್ಷರಗಳ ಹೊರಗೆ ನಿಜಕ್ಕೂ ಸಫಾ-ಮರ್ವಾ ಬೆಟ್ಟ, ಝಮ್ ಝಮ್ ನೀರಿನ ಉಗಮ, ಹರಮ್, ಹಜರುಲ್ ಅಸ್ವದ್, ಕಅಬಾ...ಗಳೆಲ್ಲ ಏನು ಮತ್ತು ಅವು ಹೇಗಿವೆ ಎಂಬ ಬಗ್ಗೆ ಸ್ವತಃ ಕಣ್ಣಾರೆ ಕಂಡ ವ್ಯಕ್ತಿಯ ಅನುಭವಕ್ಕೆ ಹೋಲಿಸಿದರೆ, ಖಂಡಿತ ನಾನೋರ್ವ ಪುಟ್ಟ ಮಗು. ಏನನ್ನು ಓದಿರುವೆನೋ ಅದಕ್ಕೆ ನಾನು ದೃಕ್ ಸಾಕ್ಷಿಯಲ್ಲ. ಓದಿಗೆ ಹೊಂದಿಕೊಂಡು ನಾನು ನನ್ನೊಳಗೆ ಕಲ್ಪಿಸಿಕೊಂಡ ದೃಶ್ಯಗಳಲ್ಲಿ ಅತಿರೇಕ ನುಸುಳಿರಲೂ ಬಹುದು. ವಾಸ್ತವಗಳ ಆಚೆಗೆ ನಾನು ಭ್ರಮಾಧೀನನಾಗಿರಲೂ ಬಹುದು. ಮಕ್ಕಾದ ಮರಳನ್ನು, ಬೆಟ್ಟಗಳನ್ನು, ಯುದ್ಧಭೂಮಿಯನ್ನು, ತವಾಫನ್ನು, ಜೀವನ ಕ್ರಮವನ್ನು... ನಾನು ಕಲ್ಪಿಸಿಕೊಂಡಿರುವುದರಲ್ಲಿ ವಿಪರೀತ ಅನ್ನಿಸುವಷ್ಟು ಅಸಂಬದ್ಧಗಳಿರಬಹುದು. ಭಾವತೀವ್ರತೆಯಿಂದಾಗುವ ಸಹಜ ಎಡವಟ್ಟುಗಳಿರಬಹುದು... ಇವು ಮತ್ತು ಇಂಥ ಇನ್ನಿತರ ಸರಿ-ತಪ್ಪುಗಳಿಗೆ ಬಾಗಿಲು ತೆರೆದಿಡಬಹುದಾದ ಓದಿನ ಮಕ್ಕಾವನ್ನು ಅನುಭವಾತ್ಮಕ ಮಕ್ಕಾ ಆಗಿ ಪರಿವರ್ತಿಸಿಕೊಳ್ಳುವ ಅವಕಾಶ ಒದಗಿದರೆ, ಆ ಕ್ಷಣದ ಪುಳಕವನ್ನು ಹೇಗೆ ಹೇಳುವುದು? ಈ ವರೆಗೆ ನಾನು ಹಜ್ಜ್ ಮತ್ತು ಉಮ್ರಾಕ್ಕೆ ತೆರಳುವ ಯಾತ್ರಿಕರಲ್ಲಿ ನಮಗಾಗಿ ದುಆ ಮಾಡಿ... ಎಂದು ಕೋರಿಕೊಳ್ಳುವ ವ್ಯಕ್ತಿಯಷ್ಟೇ ಆಗಿದ್ದೆ. ಈಗ ಸ್ವತಃ ನನಗೇ ಆ ಯಾತ್ರಿಕನಾಗುವ ಅವಕಾಶ ಬಂದೊದಗಿದೆ. ನಿಜವಾಗಿ, ನಾನು ಇಂಥದ್ದೊಂದು ಅವಕಾಶವನ್ನು ನಿರೀಕ್ಷಿಸಿಯೇ ಇರಲಿಲ್ಲ. ಹಜ್ಜ್ ಮತ್ತು ಉಮ್ರಾ ಯಾತ್ರೆಗಾಗಿ ಹೊರಟು ನಿಂತವರು ಆಲಂಗಿಸುವಾಗ ನನ್ನೊಳಗೆ ಉಂಟಾಗುತ್ತಿದ್ದ ಆಸೆಯ ಪುಳಕವನ್ನು ಬಿಟ್ಟರೆ, 'ಉಮ್ರಾ ಮಾಡಲೇಬೇಕು...' ಎಂದು ಪ್ರತ್ಯೇಕವಾಗಿ ಸಂಕಲ್ಪ ಮಾಡಿದುದು ನನ್ನ ಅರಿವಿನಲ್ಲಿ ಇಲ್ಲ. ಉಮ್ರಾ ಯಾತ್ರೆಗೆ ಕನಿಷ್ಠವೆಂದರೆ 65-70 ಸಾವಿರ ರೂಪಾಯಿಯಷ್ಟಾದರೂ ಬೇಕು. ನನ್ನ ಪಾಲಿಗೆ ಇದು ಬೃಹತ್ ಮೊತ್ತ. ಈ ಮೊತ್ತವನ್ನು ಭರಿಸಿ ಯಾತ್ರೆ ಕೈಗೊಳ್ಳುವುದು ನನ್ನ ಮಟ್ಟಿಗೆ ಪ್ರಾಯೋಗಿಕವಲ್ಲದ ಕಾರಣ, ಈ ಯಾತ್ರೆಯ ಬಗ್ಗೆ ಕುತೂಹಲಿಯಾಗುವುದಕ್ಕಿಂತ ಹೊರತಾದುದನ್ನು ನಾನು ಕಲ್ಪಿಸಿಕೊಳ್ಳುವ ಹಾಗಿರಲಿಲ್ಲ. ಆದ್ದರಿಂದಲೇ, ಕವಿಗೋಷ್ಠಿಯ ಆ ರಾತ್ರಿಯು ನನ್ನ ಬದುಕಿನ ಮರೆಯಲಾರದ ರಾತ್ರಿಯಾಗಿ ನನ್ನ ಮನದಲ್ಲಿ ಸದಾ ಉಳಿದಿರುವುದು. ಆ ಗೆಳೆಯನ ಆಫರ್ ಅನ್ನು ಜೀವನದ ಅತಿ ಉನ್ನತ ಆಫರ್ ಆಗಿ ನಾನು ಪರಿಗಣಿಸಿರುವುದು.

## ಭಾಗ: 3

2016 ಎಪ್ರಿಲ್ 2ರ ಶನಿವಾರದಂದು ಸಂಜೆ 7:30ಕ್ಕೆ ಮಂಗಳೂರಿನಿಂದ ಕೊಚ್ಚಿನ್‌ಗೆ ಹೋಗುವ ರೈಲಿನಲ್ಲಿ ನನ್ನ ಪ್ರಯಾಣ ನಿಗದಿಯಾಗಿತ್ತು. ಮರುದಿನ ಎಪ್ರಿಲ್ 3ರ ಮಧ್ಯಾಹ್ನ 1 ಗಂಟೆಗೆ ಸೌದಿ ಏರ್‌ಲೈನ್ಸ್‌ನಲ್ಲಿ ರಿಯಾದ್‌ನ ದಾರಿಯಾಗಿ ಜಿದ್ದಾಕ್ಕೆ ತೆರಳುವ ವೇಳಾಪಟ್ಟಿ ನನ್ನದು. ಈ ದಿನಾಂಕಕ್ಕಿಂತ ತಿಂಗಳುಗಳ ಮೊದಲೇ ನನ್ನೊಳಗೆ ನಾನು ಯಾತ್ರಾ ತಯಾರಿಯನ್ನು ಮಾಡಿಕೊಳ್ಳುತ್ತಿದ್ದೆ. ಒಂದು ಬಗೆಯ ರೋಮಾಂಚನ, ತಳಮಳಗಳ ಅನುಭವವನ್ನು ಪಡೆಯುತ್ತಿದ್ದೆ. ಅನಿರೀಕ್ಷಿತವಾಗಿ ಸಿಕ್ಕ ಅವಕಾಶ ಮತ್ತು ಆ ಅವಕಾಶವನ್ನು ಸಂಪೂರ್ಣ ಸದುಪಯೋಗಪಡಿಸಿಕೊಳ್ಳುವ ಬಗ್ಗೆ ನನ್ನನ್ನು ನಾನು ಸಿದ್ಧಪಡಿಸಿಕೊಳ್ಳುತ್ತಿದ್ದೆ. ಬೆಳಗ್ಗೆ ಮನೆಯಿಂದ ಕಚೇರಿಗೆ ಬರುವಾಗ, ಕಚೇರಿಯಲ್ಲಿರುವಾಗ ಮತ್ತು ಕಚೇರಿಯಿಂದ ಮನೆಗೆ ಹೋಗುವಾಗ.. ಹೀಗೆ ಸಮಯ ಸಿಕ್ಕಾಗಲೆಲ್ಲ ನನ್ನೊಳಗೇ ಯಾತ್ರಾ ಸುಖವನ್ನು ಕಲ್ಪಿಸಿಕೊಂಡು ವಿಚಿತ್ರ ತೃಪ್ತಿ ಪಡೆಯುತ್ತಿದ್ದೆ. ನನ್ನ ಯಾತ್ರಾ ವಿವರವನ್ನು ತಿಳಿದವರು ಕಚೇರಿಗೆ ಬಂದು ನನ್ನನ್ನು ಆಲಂಗಿಸುವಾಗ ಆಗುತ್ತಿದ್ದ ರೋಮಾಂಚಕ ಅನುಭವವು ಈಗಲೂ ನನ್ನೊಳಗೆ ಹಚ್ಚ ಹಸುರಾಗಿದೆ. ಒಂದು ಕಡೆ ನಾನು ಖುಷಿಯಿಂದ ತೇಲುತ್ತಿದ್ದೆ. ನನ್ನ ಬದುಕಿನ ಅಪೂರ್ವ ಕ್ಷಣಕ್ಕಾಗಿ ಕಾಯುತ್ತಿದ್ದೆ. ಇನ್ನೊಂದು ಕಡೆ, ಅಂತಿಮ ಕ್ಷಣದಲ್ಲಿ ಏನಾದರೂ ತೊಂದರೆಗಳಾಗಿ ಬಿಟ್ಟರೆ ಎಂಬೊಂದು ಭಯವೂ ಕಾಡುತ್ತಿತ್ತು. ನನಗೆ ಉಮ್ರಾ ಯಾತ್ರೆಯ ಅವಕಾಶವನ್ನು ಮಾಡಿಕೊಟ್ಟ ಗೆಳೆಯನ ಕೈಯಲ್ಲಿ ಪಾಸ್‌ಪೋರ್ಟ್ ಮತ್ತು 6 ಫೋಟೋಗಳನ್ನು ಕೊಟ್ಟಿದ್ದೆ. ಒಂದೆರಡು ಫೋಟೋಗಳನ್ನು ಜಾಸ್ತಿ ಕೊಡಬಹುದಿತ್ತು ಎಂದು ಅನಿಸುತ್ತಿತ್ತು. ಫೋಟೋ ಕಡಿಮೆಯಿದೆಯೆಂದು ಹೇಳಿ ಪ್ರಯಾಣ ರದ್ದುಗೊಳ್ಳಬಾರದಲ್ಲ. ಆರಂಭದಲ್ಲಿ ನಾನು ತೆಗೆಸಿಕೊಂಡ ಫೋಟೋದ ಗಾತ್ರ ಚಿಕ್ಕದಾಗಿತ್ತು. ಗೆಳೆಯ ಹೇಳಿದ ಬಳಿಕ ದೊಡ್ಡ ಗಾತ್ರದ ಫೋಟೋವನ್ನು ಕೊಟ್ಟಿದ್ದೆ. ಫೋಟೋದ ಗಾತ್ರದ ಹೆಸರಲ್ಲಿ, ಸಂಖ್ಯೆಯ ಹೆಸರಲ್ಲಿ ಅಥವಾ ಪಾಸ್‌ಪೋರ್ಟ್‌ನಲ್ಲಿರಬಹುದಾದ ವಿವರಗಳ ಹೆಸರಲ್ಲಿ ಯಾತ್ರೆಗೆ ವಿಘ್ನ





ಬಾರದಿರಲಿ ಎಂದೂ ಪ್ರಾರ್ಥಿಸುತ್ತಿದ್ದೆ. ಈ ಸಂದರ್ಭದಲ್ಲಿ ನನ್ನನ್ನು ಬಹುವಾಗಿ ಕಾಡಿದ ಪ್ರಶ್ನೆಯೇನೆಂದರೆ, ನನ್ನ ತಂದೆಯವರ ಅನಾರೋಗ್ಯ. 92 ವರ್ಷದ ನನ್ನ ತಂದೆಯವರ ಆರೋಗ್ಯದಲ್ಲಿ ಏರು-ಪೇರು ಸಾಮಾನ್ಯವೇ ಆಗಿದ್ದರೂ ಕಳೆದ ಫೆಬ್ರವರಿಯಿಂದೀಚೆಗೆ ಆರೋಗ್ಯ ತುಸು ಬಿಗಡಾಯಿಸುತ್ತಾ ಬರುತ್ತಿತ್ತು. ಅವರದ್ದು ಮೂತ್ರಕೋಶದ ಸಮಸ್ಯೆ, ಜೊತೆಗೇ ವೃದ್ಧಾಪ್ಯ ಸಹಜ ಮರೆವು ಕಾಯಿಲೆಯೂ ಇತ್ತು. ಅತ್ತ ಶಸ್ತ್ರ ಚಿಕಿತ್ಸೆಯನ್ನು ನಡೆಸಲಾಗದ ಮತ್ತು ಇತ್ತ ಅವರಿಗೆ ನೆಮ್ಮದಿಯನ್ನೂ ಒದಗಿಸಲಾಗದ ನೋವು ನಮ್ಮದಾಗಿತ್ತು. ಫೆಬ್ರವರಿ ಕೊನೆಗಂತೂ ತಂದೆಯವರ ಆರೋಗ್ಯ ಇನ್ನಷ್ಟು ಬಿಗಡಾಯಿಸಿತು. ಎರಡು ವಾರಗಳ ತನಕ ಆಸ್ಪತ್ರೆಯಲ್ಲಿ ದಾಖಲಿಸಿ ಚಿಕಿತ್ಸೆ ಕೊಡಿಸುವ ಸಂದರ್ಭವೂ ಎದುರಾಯಿತು. ನಾನೊಂದು ವಿಚಿತ್ರ ಸಂಕಟಕ್ಕೆ ಸಿಲುಕಿಕೊಂಡೆ. ನನ್ನ ಪ್ರೀತಿಯ ತಂದೆ ಮತ್ತು ನನ್ನ ಉಮ್ರಾ ಯಾತ್ರೆ. ಈ ಎರಡಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳುವ ಸಂದರ್ಭ ಎದುರಾಗಬಹುದೇ? ಹಾಗಾದರೆ ನಾನು ಏನು ಮಾಡಬೇಕು, ಏನು ಮಾಡಬಹುದು? ಆಸ್ಪತ್ರೆಯಲ್ಲಿ ತಂದೆಯವರ ಪಕ್ಕದಲ್ಲಿ ಕೂತು ಅವರನ್ನು ಮತ್ತು ನನ್ನ ಯಾತ್ರೆಯನ್ನು ಮುಖಾಮುಖಿಗೊಳಿಸಿ ನಿರ್ಧಾರಕ್ಕೆ ಬರಲಾಗದೇ ಪೇಚಾಡುತ್ತಿದ್ದೆ. ತಂದೆ- ನಾನು ಅತ್ಯಂತ ಹೆಚ್ಚು ಇಷ್ಟಪಡುವವರಲ್ಲಿ ಓರ್ವರಾಗಿದ್ದರು. ನನ್ನ ಬದುಕಿನ ಅತ್ಯಂತ ಸವಾಲಿನ ಸಂದರ್ಭಗಳಲ್ಲೆಲ್ಲಾ ನನಗೆ ಬೆನ್ನೆಲುಬಾಗಿ ನಿಂತವರು ಅವರೇ. ನನ್ನ ಪ್ರತಿ ನಿರ್ಧಾರವನ್ನೂ ಬೆಂಬಲಿಸಿದವರು. ಬೆನ್ನು ತಟ್ಟಿದವರು. ಮಾತ್ರವಲ್ಲ, ನನ್ನನ್ನು ಅತಿಯಾಗಿ ಇಷ್ಟಪಡುತ್ತಿದ್ದವರು. ಅಂಥ ಅಪ್ಪನಿಗೆ ನನ್ನ ಉಪಸ್ಥಿತಿ ಅತ್ಯಂತ ಅಗತ್ಯವಾಗಿರುವ ಸಂದರ್ಭ ಇದು. ಇಂಥ ಹೊತ್ತಲ್ಲಿ ಅವರನ್ನು ತೊರೆದು ಯಾತ್ರೆ ಹೊರಡುವುದೆಂಬುದು ನನ್ನ ಪಾಲಿಗೆ ನೈತಿಕ, ಧಾರ್ಮಿಕ ಪ್ರಶ್ನೆಯಷ್ಟೇ ಆಗಿರಲಿಲ್ಲ. ಅದೊಂದು ಭಾವನಾತ್ಮಕ ಸನ್ನಿವೇಶ. ಉಮ್ರಾ ಯಾತ್ರೆ 15 ದಿನಗಳದ್ದಾಗಿದ್ದರೂ ಕೂಡ, ಅನಾರೋಗ್ಯ ಪೀಡಿತ ತಂದೆಯವರಿಗೆ ಸಂಬಂಧಿಸಿ ಈ ಅವಧಿಯನ್ನು ಅಷ್ಟು ಸರಳ ಮತ್ತು ಹ್ರಸ್ವವಾಗಿ ಕಾಣಬೇಕಿಲ್ಲ. ಆ 15 ದಿನಗಳಲ್ಲಿ ಏನೂ ಆಗಬಹುದು. ನಾನು ಪಶ್ಚಾತ್ತಾಪ ಪಡಬಹುದಾದ ಸಂದರ್ಭಕ್ಕೂ ಅದು ಕಾರಣವಾಗಬಹುದು. ನನ್ನ ಅನುಪಸ್ಥಿತಿಯಿಂದ ತಂದೆಯವರು ನೊಂದುಕೊಳ್ಳಬಹುದು. ನನ್ನೊಳಗೆ ಹುಟ್ಟಿಕೊಳ್ಳಬಹುದಾದ ಕೃತಘ್ನತೆಯ ಭಾವ ಶಾಶ್ವತವಾಗಿ ಕಾಡಲೂಬಹುದು.. ಇಂಥ ಪ್ರಶ್ನೆ ಮತ್ತು ಅನುಮಾನಗಳು ನನ್ನನ್ನು ಪದೇ ಪದೇ ಮುತ್ತಿಕೊಳ್ಳುತ್ತಿದ್ದುವು. ತಂದೆಯವರ ಆರೋಗ್ಯ ಸುಧಾರಿಸಲಿ ಮತ್ತು ನನ್ನ ಉಮ್ರಾ ಯಾತ್ರೆ ನಿರ್ವಿಘ್ನವಾಗಿ ನೆರವೇರಲಿ ಎಂದು ಸದಾ ಪ್ರಾರ್ಥಿಸುತ್ತಿದ್ದೆ. ಆದರೆ ಅಲ್ಲಾಹನ ತೀರ್ಮಾನ ಬೇರೆಯೇ ಆಗಿತ್ತು. ಮಾರ್ಚ್ 19ರಂದು ಬೆಳಗಾತ ತಂದೆಯವರು ನಿಧನರಾದರು. ಉಮ್ರಾ ಯಾತ್ರೆಗೆ 14 ದಿನಗಳಿರುವಾಗ ನನ್ನ ಪಾಲಿಗೆ ಎದುರಾದ ಬಹುದೊಡ್ಡ ಆಘಾತ ಅದು. ನಾನು ಅಧೀರನಾದೆ. ಯಾತ್ರೆಯ ಅನುಭವವನ್ನು ತಂದೆಯೊಂದಿಗೆ

ಹಂಚಿಕೊಳ್ಳುವ ಅವಕಾಶವನ್ನು ನಾನು ಶಾಶ್ವತವಾಗಿ ಕಳೆದುಕೊಂಡುಬಿಟ್ಟೆ. ನನ್ನ ಉಮ್ರಾ ಯಾತ್ರೆಯ ವೇಳೆ ತಂದೆಯವರ ಹೆಸರಲ್ಲೂ ಉಮ್ರಾ ನಿರ್ವಹಿಸಬೇಕು ಎಂದು ತೀರ್ಮಾನಿಸಿದೆ.

ಕಲ್ಲಡ್ಕದಲ್ಲಿ ನಡೆದ ಕವಿಗೋಷ್ಠಿಯ ಸಂದರ್ಭದಲ್ಲಿ ಗೆಳೆಯ ನನ್ನನ್ನು ಉಮ್ರಾ ಯಾತ್ರೆಗೆ ಆಹ್ವಾನಿಸಿದಾಗ ಉಮ್ರಾಕ್ಕೆ ಹೋಗುವ ತಿಂಗಳು ಮತ್ತು ದಿನಾಂಕ ಸ್ಪಷ್ಟವಿರಲಿಲ್ಲ. ಆದರೆ, ಬಸುರಿಯಾದ ನನ್ನ ಪತ್ನಿಯ ಪ್ರಸವ ದಿನಾಂಕ ಎಪ್ರಿಲ್ 21 ಎಂಬುದು ಸ್ಪಷ್ಟವಾಗಿತ್ತು. ಪತ್ನಿಯೊಂದಿಗೆ ನಾನು ಯಾತ್ರೆಯ ಕುರಿತು ಹೇಳಿದಾಗ ದಿನಾಂಕ ಮತ್ತು ತಿಂಗಳ ಬಗ್ಗೆ ವಿಚಾರಿಸದೆಯೇ ಬೆಂಬಲಿಸಿದ್ದಳು. ನೀವು ಹೋಗಿ ಬನ್ನಿ ಎಂದು ಹುರಿದುಂಬಿಸಿದ್ದಳು. ಕೊನೆಗೆ, ಯಾತ್ರೆಗೆ ತೆರಳುವ ದಿನಾಂಕ ಎಪ್ರಿಲ್ 2 ಮತ್ತು ಹಿಂತಿರುಗುವ ದಿನಾಂಕ ಎಪ್ರಿಲ್ 18 ಎಂದು ಖಚಿತವಾದಾಗಲೂ ಆಕೆ ತನ್ನ ನಿಲುವಿನಿಂದ ಹಿಂದೆ ಸರಿಯಲಿಲ್ಲ. 'ಚಿಂತಿಸಬೇಡಿ, ನೀವು ಹೋಗಿಬನ್ನಿ, ನಮಗಾಗಿ ಪ್ರಾರ್ಥಿಸಿ' ಎಂದೇ ಪ್ರೀತಿಸಿದ್ದಳು. ನನ್ನ ತಾಯಿ, ಅಕ್ಕ, ಅಣ್ಣಂದಿರು, ತಂಗಿಯಂದಿರು, ಅತ್ತಿಗೆಯಂದಿರು, ನಾದಿನಿಯರು ನನ್ನ ಮೇಲೆ ವಿಶೇಷ ಅಭಿಮಾನ ವ್ಯಕ್ತಪಡಿಸಿದರು. ನನ್ನನ್ನು ಓರ್ವ ಗೌರವಾರ್ಹ ವ್ಯಕ್ತಿಯಂತೆ ಕಂಡರು. ನಮಗಾಗಿ ಪ್ರಾರ್ಥಿಸಬೇಕು ಎಂದು ಮನಃಪೂರ್ವಕ ವಿನಂತಿಸಿದರು. ತಾಯಿ ದುಆ ಮಾಡಬೇಕೆಂದು ಪ್ರತ್ಯೇಕವಾಗಿ ಕೇಳಿಕೊಂಡರು. ಸಾಮಾನ್ಯವಾಗಿ, ಒಡ ಹುಟ್ಟಿದವರ ನಡುವೆ ಎಷ್ಟೇ ಸಲುಗೆಯ ಸಂಬಂಧ ಇದ್ದರೂ ಪರಸ್ಪರರು ದುಆ ಮಾಡುವಂತೆ ಕೋರಿಕೊಳ್ಳುವುದು ಕಡಿಮೆ. ಗೆಳೆಯರು ಪರಸ್ಪರ ಭೇಟಿಯಾಗಿ ಬೇರ್ಪಡುವಾಗ ಕೋರಿಕೊಳ್ಳುವಂತೆ ಒಡಹುಟ್ಟಿದವರು ದುಆಕ್ಕಾಗಿ ಪರಸ್ಪರ ಕೋರಿಕೊಳ್ಳುವುದಿಲ್ಲ. ಅಲ್ಲೊಂದು ಗೊತ್ತಿದ್ದೋ ಗೊತ್ತಿಲ್ಲದೆಯೋ ಮುಜುಗರದ ಪರದೆಯೊಂದು ಬಿದ್ದಿರುತ್ತದೆ. ಒಂದು ಸಂಪ್ರದಾಯವೆಂಬಂತೆ ಅದು ಬಹುತೇಕ ಪಾಲನೆಯಲ್ಲೂ ಇರುತ್ತದೆ. ಗೆಳೆಯರಲ್ಲೂ ಒಡಹುಟ್ಟಿದವರಲ್ಲೂ ನಡುವೆ ಇರುವ ಸಂಬಂಧಗಳ ವ್ಯತ್ಯಾಸವೇ ಇದಕ್ಕೆ ಕಾರಣ ಆಗಿರಬಹುದು. ಒಡಹುಟ್ಟಿದವರ ನಡುವಿನ ಮಾತುಕತೆಯಲ್ಲಿ ಇರುವ ಗಂಭೀರತೆ ಗೆಳೆಯರ ನಡುವೆ ಇರುವುದಿಲ್ಲ. ಗೆಳೆಯರಂತೆ ಒಡಹುಟ್ಟಿದವರು ಸಲುಗೆಯಿಂದ ವರ್ತಿಸುವುದೂ ಕಡಿಮೆ. ಅಲ್ಲೊಂದು ನಿಯಂತ್ರಿತ ನೀತಿಯಿರುತ್ತದೆ. ಅಳೆದೂ ತೂಗಿ ಮಾತಾಡುವ ಸಂಪ್ರದಾಯ ಇರುತ್ತದೆ. ಗೆಳೆಯರ ನಡುವೆ ಆ ಮಿತಿಗಳಿರುವುದಿಲ್ಲ. ಆದ್ದರಿಂದಲೋ ಏನೋ ನನ್ನ ಒಡಹುಟ್ಟಿದವರು ನನ್ನೊಂದಿಗೆ ದುಆಕ್ಕಾಗಿ ಕೋರಿಕೊಂಡಾಗ ಅವರಂತೆಯೇ ನಾನೂ ಭಾವುಕನಾಗಿದ್ದೆ. ನನ್ನಲ್ಲಿ ಅವರು ಹಿಂದಿಗಿಂತ ಭಿನ್ನ ವ್ಯಕ್ತಿತ್ವವನ್ನು ಹುಡುಕುತ್ತಿದ್ದರು. ಮಹತ್ವಪೂರ್ಣ ವ್ಯಕ್ತಿಯಂತೆ ನೋಡುತ್ತಿದ್ದರು. ಹಾಗಂತ, ಆ ಭಾವುಕ ಸನ್ನಿವೇಶಕ್ಕೆ ನಾನು ಉಮ್ರಾ ಯಾತ್ರೆ ಕೈಗೊಳ್ಳುತ್ತಿದ್ದೇನೆ ಎಂಬುದು ಮಾತ್ರ ಕಾರಣವಾಗಿರಲಿಲ್ಲ, ಬದಲು ನನ್ನ ಒಡಹುಟ್ಟಿದವರಲ್ಲಿ ಯಾರೂ ಉಮ್ರಾ ನಿರ್ವಹಿಸಿರಲಿಲ್ಲ ಎಂಬುದೂ ಕಾರಣವಾಗಿತ್ತು.





ಮಾತ್ರವಲ್ಲ, ನನ್ನ ಒಡಹುಟ್ಟಿದವರಲ್ಲಿ ಮೊಟ್ಟಮೊದಲು ವಿಮಾನದಲ್ಲಿ ಪ್ರಯಾಣ ಮಾಡುವವ ಕೂಡಾ ನಾನೇ ಎಂಬುದೂ ಕಾರಣವಾಗಿತ್ತು. ಈ ವರೆಗೆ ನನ್ನ ಸಹಿತ ನನ್ನ ಒಡಹುಟ್ಟಿದವರಲ್ಲಿ ಯಾರೂ ವಿಮಾನ ಪ್ರಯಾಣ ಮಾಡಿರಲಿಲ್ಲ. ವಿದೇಶಕ್ಕೆ ಹೋಗಿರಲಿಲ್ಲ. ಆದ್ದರಿಂದ, ನನ್ನ ಉಮ್ರಾ ಯಾತ್ರೆ ನನಗೂ ನನ್ನ ಒಡಹುಟ್ಟಿದವರ ಪಾಲಿಗೂ ವಿಶೇಷ ಅನುಭೂತಿಯಾಗಿತ್ತು.

ಎಪ್ರಿಲ್ 2 ರಂದು ಬೆಳಗಿನಿಂದಲೇ ಯಾತ್ರಾ ತಯಾರಿಯ ಒಂದೊಂದೇ ಏರ್ಪಾಡುಗಳನ್ನು ಮಾಡ ತೊಡಗಿದೆ. (ಎಪ್ರಿಲ್ 1ರ ವರೆಗೆ ಕಚೇರಿಗೆ ಹೋಗಿದ್ದೆ). ಪತ್ನಿ, ನಾದಿನಿಯರೆಲ್ಲ ನನ್ನ ಜೊತೆ ಸೇರಿದರು. ಮಕ್ಕಳೂ ಸೇರಿಕೊಂಡರು. (ನನ್ನ ತಾಯಿ ಸಹಿತ ಒಡಹುಟ್ಟಿದವರು ಮಂಗಳೂರಿನ ನನ್ನ ಮನೆಗಿಂತ 45 ಕಿಲೋ ಮೀಟರ್ ದೂರದ ಕುಕ್ಕಿಲ ಎಂಬಲ್ಲಿರುವುದರಿಂದ ಅವರಿಗೆ ಇದರಲ್ಲಿ ಭಾಗಿಯಾಗಲು ಸಾಧ್ಯವಾಗಿರಲಿಲ್ಲ.) ಮನೆಯ ವಾತಾವರಣದಲ್ಲಿ ಒಂದು ಬಗೆಯ ಖುಷಿ ಮತ್ತು ವಿಷಾದ ಬೆರೆತುಕೊಂಡಿತ್ತು. ಮಂಗಳೂರಿನಿಂದ ಸಂಜೆ 7.30ಕ್ಕೆ ಹೊರಡುವ ಮಂಗಳೂರು–ಕೊಚ್ಚಿನ್ ರೈಲಿನಲ್ಲಿ ನಾನು ಪ್ರಯಾಣಿಸಬೇಕಾಗಿತ್ತು. ನನ್ನ ಮನೆಯಿಂದ ರೈಲ್ವೆ ನಿಲ್ದಾಣಕ್ಕೆ ವಾಹನದಲ್ಲಿ ತೆರಳುವುದಾದರೆ 45 ನಿಮಿಷಗಳ ಅಂತರವಿದ್ದುದರಿಂದ ಸಂಜೆ 6 ಗಂಟೆಗೇ ಮನೆಯಿಂದ ಹೊರಡುವುದೆಂದು ತೀರ್ಮಾನಿಸಿದೆವು. ವಾಹನಗಳ ದಟ್ಟಣೆ ಮತ್ತು ರಸ್ತೆ ಕಾಮಗಾರಿಯ ಕಾರಣದಿಂದಾಗಿ ಯಾತ್ರೆಗೆ ಭಂಗ ಉಂಟಾಗಬಾರದೆಂಬ ಮುಂಜಾಗರೂಕತೆಯಿಂದ ಈ ನಿರ್ಧಾರವನ್ನು ಕೈಗೊಂಡಿದ್ದೆವು. ರೈಲ್ವೆ ನಿಲ್ದಾಣಕ್ಕೆ ನನ್ನ ಪತ್ನಿ, ಇಬ್ಬರು ಮಕ್ಕಳಾದ 9 ವರ್ಷದ ಮಗ ಅಮನ್ ಮತ್ತು 5 ವರ್ಷದ ಮಗಳು ಇಶಲ್, ನನ್ನ ಅಣ್ಣನ ಮಗ ಯಾಸಿರ್ ಹಾಗೂ ಮಾವ ಬಂದಿದ್ದರು. ನಿಲ್ದಾಣಕ್ಕೆ ರೈಲು ಆಗಮಿಸುತ್ತಿರುವಂತೆಯೇ ಪತ್ನಿಯ ಕಣ್ಣು ಮಂಜಾಯಿತು. ಆಕೆ ತುಂಬಿದ ಕಣ್ಣಲ್ಲೂ ನನ್ನಲ್ಲಿ ಆತ್ಮವಿಶ್ವಾಸವನ್ನು ತುಂಬಿದಳು. ಇದಕ್ಕಿಂತ ಮೊದಲು ಎಷ್ಟೋ ಪ್ರಯಾಣಗಳನ್ನು ಮಾಡಿದ್ದ ನನಗೆ ಇಂಥದ್ದೊಂದು ಸನ್ನಿವೇಶ ಈ ಮೊದಲು ಎದುರಾಗಿರಲೇ ಇಲ್ಲ. ಸಾಮಾನ್ಯವಾಗಿ ವಿದೇಶದಲ್ಲಿರುವವರು ಬಸುರಿ ಪತ್ನಿಯ ಪ್ರಸವಕ್ಕೆ ಸಮಯ ಹೊಂದಿಸಿಕೊಂಡು ಊರಿಗೆ ಬರುವುದಿದೆ. ಪ್ರಸವದ ಸಂದರ್ಭದಲ್ಲಿ ಮತ್ತು ಪ್ರಸವಪೂರ್ವದಲ್ಲಿ ಪತಿಯ ಉಪಸ್ಥಿತಿಯನ್ನು ಪತ್ನಿ ಬಯಸುತ್ತಾಳೆ. ಪತಿಯಿಂದ ಧೈರ್ಯದ ಮಾತುಗಳನ್ನು ನಿರೀಕ್ಷಿಸುತ್ತಾಳೆ. ಪ್ರಸವ ಎಂಬುದು ಎಷ್ಟೇ ಅನುಭವಿ ಮಹಿಳೆಯನ್ನೂ ಕ್ಷಣ ಅಧೀರಗೊಳಿಸುವ ಘಳಿಗೆ. ಅಲ್ಲೊಂದು ಆತಂಕ ಇರುತ್ತದೆ. ತಣ್ಣಗೆ ಭಯ ದೇಹವನ್ನು ಆಕ್ರಮಿಸಿಕೊಳ್ಳುತ್ತದೆ. ನಿಧಾನಕ್ಕೆ ಆರಂಭವಾಗುವ ಪ್ರಸವದ ನೋವು ಕ್ರಮೇಣ ದೇಹವನ್ನು ಹಿಂಡಿ ಹಿಪ್ಪೆಗೊಳಿಸುತ್ತದೆ. ಎಷ್ಟೇ ಆತ್ಮವಿಶ್ವಾಸವನ್ನು ಹೊಂದಿದ್ದರೂ ಮತ್ತು ನೋವನ್ನು ಸಹಿಸುವ ಸಾಮರ್ಥ್ಯ ಯಾವ ಮಟ್ಟದಲ್ಲೇ ಇದ್ದರೂ ಪ್ರಸವ ಆ ಎಲ್ಲ ಅನುಭವವನ್ನೂ ಜುಜುಬಿಗೊಳಿಸುವಷ್ಟು ತೀವ್ರವಾದುದು. ಹಾಗಂತ, ಓರ್ವ ಬಸುರಿಗೆ

ಇವೆಲ್ಲ ಗೊತ್ತಿಲ್ಲ ಎಂದಲ್ಲ. ಗರ್ಭ ಮತ್ತು ಪ್ರಸವದ ಬಗ್ಗೆ ಇವತ್ತು ಮಾಹಿತಿಗಳ ಕೋಶವೇ ಲಭ್ಯ ಇದೆ. ಗೂಗಲ್‌ನಲ್ಲಿ ಹುಡುಕಿದರೆ ವೈದ್ಯರನ್ನೂ ನಾಚಿಸುವಷ್ಟು ವಿವರಗಳು ಸಿಗುತ್ತವೆ. ಧಾರಾಳ ಪುಸ್ತಕಗಳೂ ಪ್ರಕಟವಾಗಿವೆ. ತಂತ್ರಜ್ಞಾನದಲ್ಲಿ ತೀರಾ ಮುಂದುವರಿದಿರುವ ಇಂದಿನ ಕಾಲದ ಬಸುರಿ ಹಿಂದಿನ ಕಾಲದ ಬಸುರಿಯಂತೆ ಅಲ್ಲ. ಅವರೆಲ್ಲರನ್ನೂ ಬೆಚ್ಚಿ ಬೀಳಿಸುವಷ್ಟು ವಿಪುಲ ಜ್ಞಾನವನ್ನು ಇವತ್ತಿನ ಇನ್ನೂ ಮದುವೆಯಾಗದ ತರುಣಿ ಪ್ರದರ್ಶಿಸಬಲ್ಲಳು. ಹತ್ತು ಹೆತ್ತ ತಾಯಿಗಿಂತ ಹೆಚ್ಚಿನ ವಿವರವನ್ನು ಇಂದಿನ ಚೊಚ್ಚಲ ಬಸುರಿ ನೀಡಬಲ್ಲಳು. ಆದರೆ ಪ್ರಸವ ಪ್ರಸವವೇ. ಓದಿ ಅನುಭವಿಸುವುದಕ್ಕೂ ಪ್ರಾಯೋಗಿಕವಾಗಿ ಅನುಭವಿಸುವುದಕ್ಕೂ ಇರುವ ವ್ಯತ್ಯಾಸ ಇಲ್ಲೂ ಇದೆ. ಆದ್ದರಿಂದ, ಮಾಹಿತಿ ಎಷ್ಟೇ ಇದ್ದರೂ ಪ್ರಸವದ ಬಗ್ಗೆ ಬಸುರಿಯಲ್ಲಿ ಭಯ ಇದ್ದೇ ಇರುತ್ತದೆ. ನನ್ನ ಪತ್ನಿಯಂತೂ ಪ್ರಸವದ ಕುರಿತಂತೆ ಆಗಾಗ ಭಯ ವ್ಯಕ್ತಪಡಿಸುತ್ತಲೇ ಇದ್ದಳು. ಈ ಹಿಂದಿನ ಎರಡು ಪ್ರಸವಗಳನ್ನು ಜ್ಞಾಪಿಸಿಕೊಂಡು ಹಿಡಿಯಷ್ಟಾಗುತ್ತಿದ್ದಳು. ನಾನೇನಾದರೂ ಆಕ್ಷೇಪಿಸಿದರೆ ಮತ್ತು ಪ್ರಸವವು ಮಹಿಳೆಗೆ ಪ್ರಕೃತಿ ಒದಗಿಸಿದ ವರ, ಹಾಗೆ–ಹೀಗೆ ಎಂದೆಲ್ಲಾ ವ್ಯಾಖ್ಯಾನಿಸಲು ಹೊರಟರೆ ಗರಂ ಆಗುತ್ತಿದ್ದಳು. ಇಂಥವಳನ್ನು ನಾನು ಬಿಟ್ಟು ಹೋಗಬೇಕಿತ್ತು. ಹತ್ತಿರ ಇರಬೇಕಾದ ಸಂದರ್ಭದಲ್ಲಿ ದೂರ ಹೋಗುವ ಸನ್ನಿವೇಶ. ನಿಲ್ದಾಣದಿಂದ ರೈಲು ಚಲಿಸಲು ಪ್ರಾರಂಭಿಸಿದಾಗ ಮಗ ಅಮನ್ ನಿಲ್ದಾಣದಲ್ಲಿ ರೈಲಿನ ಜೊತೆಗೇ ಓಡ ತೊಡಗಿದ. ಕಣ್ಣಲ್ಲಿ ಗಳಗಳನೇ ಕಣ್ಣೀರು. ನನ್ನೊಳಗೆ ಖಾಲಿ ಖಾಲಿ ಅನುಭವ.





## ಭಾಗ: 4

ಎಪ್ರಿಲ್ 3 ರಂದು ಮುಂಜಾನೆ ಮೊದಲೇ ನಿಗದಿಪಡಿಸಿದ್ದ ಕೇರಳದ ಕೊಚ್ಚಿನ್‌ನ ಮಸೀದಿಗೆ ತೆರಳಿದೆ. ನನ್ನ ಜೊತೆ ನನಗೆ ಉಮ್ರಾ ಯಾತ್ರೆಗೆ  ಅವಕಾಶವನ್ನು ಮಾಡಿಕೊಟ್ಟ ಗೆಳೆಯ ಮತ್ತು ಅವರ ಕುಟುಂಬದ 7 ಮಂದಿ ಸದಸ್ಯರಿದ್ದರು. ಬೆಳಗಾತ ನಾವು ಮಸೀದಿಗೆ ತಲುಪುವ ಹೊತ್ತಲ್ಲಿ ನಮ್ಮ ಉಮ್ರಾ ತಂಡದ ಬಹುತೇಕ ಎಲ್ಲರೂ ಅಲ್ಲಿಗೆ ತಲುಪಿದ್ದರು. 150 ಮಂದಿಯ ತಂಡ ನಮ್ಮದು. ಕರ್ನಾಟಕದಿಂದ ನನ್ನನ್ನು ಮತ್ತು ನನ್ನ ಗೆಳೆಯನ ಕುಟುಂಬವನ್ನು (ಒಟ್ಟು 8 ಮಂದಿ) ಬಿಟ್ಟರೆ ಉಳಿದೆಲ್ಲ ಮಂದಿ ಕೇರಳಿಗರೇ. ಸುಬ್‌ಹಿ ನಮಾಝ್‌ನ ಬಳಿಕ ನಮ್ಮ ಉಮ್ರಾ ಯಾತ್ರೆಯ ತಂಡದ ಅಮೀರ್ ಅವರು ಎಲ್ಲರನ್ನೂ ಮಸೀದಿಯಲ್ಲಿ ಒಟ್ಟು ಸೇರಿಸಿದರು. ಉಮ್ರಾ ಯಾತ್ರೆಯ ಸಂಕ್ಷಿಪ್ತ ವಿವರಗಳನ್ನು ನೀಡಿದರು. ಎಲ್ಲರೂ ಉಮ್ರಾ ಉಡುಪನ್ನು (ಇಹ್ರಾಮ್) ಧರಿಸಿಕೊಳ್ಳುವಂತೆಯೂ ಮೇಲಿನ ಅಂತಸ್ತಿನಲ್ಲಿ ಸೌದಿ ರಿಯಾಲ್‌ಗೆ ಭಾರತೀಯ ರೂಪಾಯಿಯನ್ನು ಬದಲಿಸಿಕೊಳ್ಳುವ ವ್ಯವಸ್ಥೆ ಮಾಡಲಾಗಿದೆಯೆಂದೂ  ತಿಳಿಸಿದರು.

ನಾನು ಉಮ್ರಾ ಉಡುಪನ್ನು ಬ್ಯಾಗ್‌ನಿಂದ ಹೊರತೆಗೆದೆ. ಎಲ್ಲರೂ ಉಡುಪು ಧರಿಸುವ ತುರ್ತಿನಲ್ಲಿದ್ದರು. ನನ್ನ ಮಟ್ಟಿಗೆ ಅಂಥದ್ದೊಂದು ಉಡುಪನ್ನು ಧರಿಸುತ್ತಿರುವುದು ಅದೇ ಮೊದಲು. ಎರಡು ಅಚ್ಚ ಬಿಳಿ ಬಣ್ಣದ ಬಟ್ಟೆಯ ತುಂಡುಗಳು. ಒಂದು ಉಡಲು ಮತ್ತು ಇನ್ನೊಂದು ಹೊದೆಯಲು. ಈ ಎರಡನ್ನು ಬಿಟ್ಟರೆ ಶರೀರದಲ್ಲಿ ಇನ್ನಾವ ಬಟ್ಟೆ ತುಂಡುಗಳೂ ಇಲ್ಲ. ಈ ಯಾತ್ರೆಗಿಂತ ಎರಡ್ಮೂರು ವಾರಗಳ ಮೊದಲು ಕೇರಳದ ಕ್ಯಾಲಿಕಟ್‌ನಲ್ಲಿ ಯಾತ್ರಾರ್ಥಿಗಳಿಗೆ ಅರ್ಧ ದಿನದ ತರಬೇತಿಯನ್ನು ನೀಡಲಾಗಿತ್ತು. ಆಗ ಈ ಎರಡು ತುಂಡು ಬಿಳಿ ಉಡುಪಿನ ಜೊತೆಗೇ ಯಾತ್ರೆಗೆ ಬೇಕಾದ ಕೊಡೆ, ಎರಡು ಬ್ಯಾಗ್‌ಗಳು, ಉಮ್ರಾ ಗೈಡ್ ಮುಂತಾದವುಗಳನ್ನು ನೀಡಲಾಗಿತ್ತು. ಮನೆಗೆ ಬಂದ ತಕ್ಷಣ ಪತ್ನಿ ಅವೆಲ್ಲವನ್ನೂ

ಒಂದೊಂದಾಗಿ ಹೊರತೆಗೆದಿದ್ದಳು. ಅದರಲ್ಲಿ ಬಿಳಿ ಉಮ್ರಾ ಉಡುಪೂ ಒಂದು. ಆದರೆ ಆಗ ನನ್ನನ್ನು ಆ ಬಟ್ಟೆ ಅಷ್ಟಾಗಿ ಸೆಳೆದಿರಲಿಲ್ಲ. ಎಲ್ಲ ಉಡುಪುಗಳಂಥ ಒಂದು ಉಡುಪು ಎಂಬ ಭಾವದ ಆಚೆಗೆ ಅದು ಒಳಗೊಂಡಿರಬಹುದಾದ ಮಾಂತ್ರಿಕ ಶಕ್ತಿಯನ್ನು ಅಂದಾಜಿಸಿರಲಿಲ್ಲ. ಎಪ್ರಿಲ್ 2 ರಂದು ನನ್ನ ಯಾತ್ರಾ ತಯಾರಿಯ ವೇಳೆ ಈ ಉಡುಪನ್ನು ಬ್ಯಾಗ್‌ಗೆ ತುಂಬಿಸಿದ್ದೂ ಸಹಜವಾಗಿಯೇ. ಆ ಸಂದರ್ಭದಲ್ಲೂ ನನ್ನಲ್ಲಿ ವಿಶೇಷ ಅನುಭೂತಿಯೇನೂ ಉಂಟಾಗಿರಲಿಲ್ಲ. ಆದರೆ ನನ್ನ ಈ ವರೆಗಿನ ಬದುಕಿನ ಉದ್ದಕ್ಕೂ ಇಷ್ಟದಿಂದ ಧರಿಸುತ್ತಾ ಬಂದಿರುವ ಉಡುಪಿನಿಂದ ಸಂಪೂರ್ಣ ಕಳಚಿಕೊಂಡು, ಬೇರೆಯೇ ಆದ ಮತ್ತು ಈವರೆಗೂ ಜೀವನದಲ್ಲಿ ಒಮ್ಮೆಯೂ ಧರಿಸಿಲ್ಲದ, ತೀರಾ ಜುಜುಬಿಯಂತೆ ಕಾಣುವ ಎರಡು ತುಂಡು ಬಿಳಿ ಬಟ್ಟೆಯನ್ನು ಧರಿಸಿದ ಆ ಸಂದರ್ಭ ಅಭೂತಪೂರ್ವ. ಅದರಲ್ಲೊಂದು ಅಯಸ್ಕಾಂತೀಯ ಗುಣ ಇದೆ. ಆ ಬಟ್ಟೆಯನ್ನು ಧರಿಸುವುದಕ್ಕೂ ಇತರ ಬಟ್ಟೆಗಳನ್ನು ಧರಿಸುವುದಕ್ಕೂ ನಡುವೆ ಇರುವ ಪ್ರಮುಖ ವ್ಯತ್ಯಾಸ ಏನೆಂದರೆ, ಇದರಲ್ಲೊಂದು ಏಕಾಗ್ರತೆಯಿದೆ. ನಮ್ಮ ಗಮನವನ್ನು ನಿಶ್ಚಿತ ಗುರಿಯೆಡೆಗೆ ಕೇಂದ್ರೀಕರಿಸುವ ವಿಶೇಷ ಸಾಮರ್ಥ್ಯವಿದೆ. ನಿಜವಾಗಿ, ಬಟ್ಟೆಯೆಂಬುದು ಸೌಂದರ್ಯದ ಪ್ರತೀಕವಷ್ಟೇ ಅಲ್ಲ, ಶ್ರೀಮಂತಿಕೆ, ಮೇಲರಿಮೆ, ದರ್ಪ, ಪ್ರದರ್ಶನಭಾವ.. ಮುಂತಾದ ಮಾನವ ಸಹಜ ದೌರ್ಬಲ್ಯಗಳ ಪ್ರತಿಬಿಂಬವೂ ಹೌದು. ನಾವು ನಿತ್ಯ ಪ್ಯಾಂಟನ್ನೋ, ಶರ್ಟನ್ನೋ, ಲುಂಗಿ, ಕುರ್ತಾ–ಪೈಜಾಮವನ್ನೋ ಅಭಿರುಚಿಗೆ ತಕ್ಕಂತೆ ಧರಿಸುತ್ತಿರುತ್ತೇವೆ. ಹಾಗೆ ಧರಿಸುವಾಗ, ಯಾವುದಾದರೇನು– ಒಂದು ಪ್ಯಾಂಟು ಮತ್ತು ಒಂದು ಶರ್ಟು ಆದರಾಯಿತು ಎಂಬ ಉಡಾಫೆತನವನ್ನು ಪ್ರದರ್ಶಿಸುವುದು ತೀರಾ ಕಡಿಮೆ. ಒಂದಕ್ಕೊಂದು ಹೊಂದದ ಅಥವಾ ಹೋಲಿಕೆಯಾಗದ ಉಡುಪನ್ನು ನಾವು ಧರಿಸುವುದಿಲ್ಲ. ಅಲ್ಲೊಂದು ತಣ್ಣನೆಯ ಮ್ಯಾಚಿಂಗ್ ಮನೋಭಾವ ಇರುತ್ತೆ. ನಿರ್ದಿಷ್ಟ ಕುರ್ತಾಕ್ಕೆ ನಿರ್ದಿಷ್ಟ ಪೈಜಾಮವನ್ನು ಆಯ್ಕೆ ಮಾಡಿಕೊಳ್ಳುವ ಸನ್ನಿವೇಶ ಇರುತ್ತೆ. ಇನ್ನು, ಕಚೇರಿಗೆ ಹೋಗುವಾಗ ಧರಿಸುವ ಉಡುಪನ್ನೇ ನಾವು ಮದುವೆಗೆ ಹೋಗುವಾಗಲೂ ಧರಿಸುವುದಿಲ್ಲ. ಪಾರ್ಟಿಯ ಉಡುಪು ಬೇರೆ. ಕಾರ್ಯಕ್ರಮಕ್ಕೆ ಹೋಗುವಾಗ ಧರಿಸುವ ಉಡುಪು ಬೇರೆ. ರಾತ್ರಿಯ ಉಡುಪು ಬೇರೆ. ಮನೆಯಲ್ಲಿ ಸಣ್ಣ–ಪುಟ್ಟ ಕೆಲಸ ಮಾಡುವಾಗ ಧರಿಸುವ ಉಡುಪು ಬೇರೆ. ಹೀಗೆ ಉಡುಪು ಎಂಬುದು ಬರೇ ಮೈ ಮುಚ್ಚುವ ವಸ್ತುವಾಗಿಯಷ್ಟೇ ಇವತ್ತು ಉಳಿದಿಲ್ಲ. ಪ್ರತಿ ಉಡುಪೂ ಯಾವುದೋ ಒಂದು ಕತೆಯನ್ನು ಹೇಳುತ್ತೆ. ಒಂದು ಸೂಚನೆಯನ್ನು ಕೊಡುತ್ತೆ. ಏನನ್ನೋ ಹೇಳಬಯಸುತ್ತೆ. ಬಹುಶಃ, ಈ ಎಲ್ಲ ಭಾವಬಿಂಬವನ್ನೂ ಅನಾಮತ್ತಾಗಿ ಕಿತ್ತೆಸೆಯುವ ಸಾಮರ್ಥ್ಯ ಇರುವುದು ಉಮ್ರಾ ಉಡುಪಿಗೆ ಮಾತ್ರ. ಈ ಉಡುಪನ್ನು ಧರಿಸುವುಕ್ಕಾಗಿ ಈ ಮೊದಲು ಧರಿಸಿರುವ ಉಡುಪನ್ನು ನಾವು ಕಳಚುತ್ತೇವಲ್ಲ, ಅದು ದಿನನಿತ್ಯ ನಾವು ಬಟ್ಟೆಯನ್ನು ಯಾಂತ್ರಿಕವಾಗಿ ಕಳಚಿದಷ್ಟು





ಸಲೀಸಲ್ಲ. ಆವರೆಗಿನ ಎಲ್ಲದರಿಂದಲೂ ನಾವು ಕಳಚಿಕೊಂಡಂತೆ ಅನಿಸುತ್ತದೆ. ಮಾನವ ಸಹಜ ಸರ್ವ ದೌರ್ಬಲ್ಯಗಳಿಂದಲೂ ಬಿಡುಗಡೆಗೊಂಡಂತೆ ತೋರುತ್ತದೆ. ನನ್ನ ಬ್ಯಾಗ್‌ನಲ್ಲಿ ತಣ್ಣಗೆ ಮಲಗಿದ್ದ ಎರಡು ತುಂಡು ಬಟ್ಟೆಗಳಿಗೆ ಈ ಮಟ್ಟದ ಸಾಮರ್ಥ್ಯವಿದೆ ಎಂಬುದು ಅರಿವಿಗೆ ಬಂದದ್ದು ಅದನ್ನು ಧರಿಸಿದಾಗಲೇ. ನನ್ನೊಳಗೆ ಖಾಲಿತನದ ಅನುಭವ. ಒಂದು ಬಗೆಯ ಶೂನ್ಯ ಭಾವ. ಎಲ್ಲರಿಂದಲೂ, ಎಲ್ಲದರಿಂದಲೂ ಕಳಚಿಕೊಂಡು ಒಂಟಿಯಾಗಿ ನಿಂತ ವಿಷಣ್ಣತೆ. ನನ್ನದು, ನನ್ನವರು, ನನ್ನ ದೇಶ, ನನ್ನ ಹಣ, ನನ್ನ ಆಸ್ತಿ, ನನ್ನ ಜ್ಞಾನ, ನನ್ನ ಬರಹ, ನನ್ನ ಭಾಷಣ... ಮುಂತಾದ 'ನನ್ನತನ'ವನ್ನೆಲ್ಲ ಒಂದೇ ಏಟಿಗೆ ಧರಾಶಾಹಿಗೊಳಿಸುವ ಸಾಮರ್ಥ್ಯ ಒಂದು ಬಟ್ಟೆಗಿದ್ದರೆ ಅದು ಉಮ್ರಾದ ಎರಡು ತುಂಡು ಬಿಳಿ ಬಟ್ಟೆಗೆ ಮಾತ್ರ. ಆದ್ದರಿಂದಲೇ ಅದರ ಬಣ್ಣ ಬಿಳಿಯಾಗಿರುವುದರ ಹಿಂದೆ ನಿರ್ದಿಷ್ಟ ಉದ್ದೇಶ ಇದೆ ಎಂದೇ ಅನಿಸುತ್ತದೆ. ಅದು ಅನುದ್ದೇಶಿತ ಅಲ್ಲ. ಅದನ್ನು ಧರಿಸುವವ ತನ್ನ ಮನಸನ್ನೂ ಅದರಂತೆ ಬಿಳಿಯಾಗಿಸಬೇಕು. ತಿಳಿಯಾಗಿಸಬೇಕು. ಅದನ್ನು ಧರಿಸಿದ ಆ ಕ್ಷಣದಿಂದ ಧರಿಸಿದವನ ಪಾಲಿಗೆ ಪರೀಕ್ಷೆಯೊಂದು ಆರಂಭವಾಗುತ್ತದೆ. ಆ ಪರೀಕ್ಷೆಯಲ್ಲಿ ಸವಾಲೂ ಇದೆ. ಈ ಕ್ಷಣದಿಂದ ನನ್ನೊಳಗನ್ನು ನಾನು ಸದಾ ಬಿಳಿಯಾಗಿಟ್ಟಿರುತ್ತೇನೆ. ಕಪ್ಪುಗೊಳಿಸುವ ಯಾವುದನ್ನೂ ನಾನು ಹೃದಯದ ಹತ್ತಿರಕ್ಕೆ ಬಿಟ್ಟುಕೊಡಲಾರೆ. ಇನ್ನು ಮುಂದಕ್ಕೆ ನಾನು ನನ್ನ ಉಡುಪಿನಲ್ಲಿ, ಆಹಾರದಲ್ಲಿ, ಆರಾಧನೆಯಲ್ಲಿ, ಮಾತಿನಲ್ಲಿ, ಏಕಾಂತತೆಯಲ್ಲಿ, ವ್ಯವಹಾರದಲ್ಲಿ, ನಡತೆಯಲ್ಲಿ... ಎಲ್ಲದರಲ್ಲೂ ನನ್ನನ್ನು ಈ ಬಿಳಿ ಬಟ್ಟೆಯಂತೆ ಸದಾ ಶುಭ್ರವಾಗಿರಿಸಿಕೊಳ್ಳುತ್ತೇನೆ. ನಾನಿನ್ನು ಆ ಹಿಂದಿನ ನಾನಲ್ಲ. ಮುಂದಕ್ಕೆ ನಾನು ಈ ಎರಡು ತುಂಡು ಬಿಳಿ ಬಟ್ಟೆ ಮಾತ್ರ. ಅದೆಷ್ಟು ಶುಭ್ರವೋ ನಾನೂ ಅಷ್ಟೇ ಶುಭ್ರ. ಮಾನವ ಸಹಜ ದೌರ್ಬಲ್ಯಗಳೆಂಬ ಮಲಿನಗಳಿಂದ ಮುಕ್ತ... ಈ ಪ್ರತಿಜ್ಞೆಯನ್ನು ಘಂಟಾ ಘೋಷವಾಗಿ ಸಾರುವ ಕ್ಷಣವೇ ಉಮ್ರಾ ಬಟ್ಟೆಯನ್ನು ಧರಿಸುವ (ಇಹ್ರಾಮ್) ಸಂದರ್ಭವಾದರೆ ಈ ಪ್ರತಿಜ್ಞೆಯನ್ನು ಸಾಕಾರಗೊಳಿಸುವ ಆರಂಭಿಕ ಹೆಜ್ಜೆಯೇ ತವಾಫ್. ಬಳಿಕ ಮಕಾಮು ಇಬ್ರಾಹೀಮ್‌ನಲ್ಲಿ ಎರಡು ರಕಅತ್ ನಮಾಝ್. ಬಳಿಕ ಸಫಾ–ಮರ್ವಾಗಳಲ್ಲಿ ಸಈ ಮತ್ತು ತಲೆಗೂದಲಿನಿಂದ ಮುಕ್ತವಾಗುವುದು. ಉಮ್ರಾ ಯಾತ್ರಿಕ ಬಿಳಿಗೊಳ್ಳುವ ಪ್ರಕ್ರಿಯೆ ಇದು. ಎರಡು ತುಂಡು ಬಟ್ಟೆಯನ್ನು ಧರಿಸುವಲ್ಲಿಂದ ತೊಡಗಿ ತಲೆಗೂದಲಿನಿಂದ ಬಿಡಿಸಿಕೊಳ್ಳುವವರೆಗೆ.

ಆದ್ದರಿಂದಲೇ ಬ್ಯಾಗ್‌ನಲ್ಲಿದ್ದಾಗ ಭಾರವೆನಿಸದಿದ್ದ ಬಿಳಿ ಬಟ್ಟೆ, ಧರಿಸಿದಾಗ ನನಗೆ ಭಾರವಾದಂತೆ ಅನಿಸಿತು. ಭಯವಾಯಿತು. ಅದು ನನ್ನ ಮೇಲೆ ಬಹು ಅಮೂಲ್ಯ ಭಾರವೊಂದನ್ನು ಹೊರಿಸಿದೆ. ಈ ಭಾರವನ್ನು ತಗ್ಗಿಸಿಕೊಳ್ಳುವ ಏಕೈಕ ಮಾರ್ಗ ನಾನು ಬಿಳಿಯಾಗುವುದು. ಸದಾ ಬಿಳಿಯಾಗಿರುವುದು. ಎದೆ ಡವಗುಟ್ಟ ತೊಡಗಿತು. ನಾನು ಈ ಭಾರವನ್ನು ಹೊರಬಲ್ಲೆನೇ, ಎಲ್ಲಿಯವರೆಗೆ, ಎಷ್ಟರ ವರೆಗೆ?

ನಿಜವಾಗಿ, ಉಮ್ರಾ ಬಟ್ಟೆ ಧರಿಸಬೇಕಾದುದು ಮತ್ತು ಅಧಿಕೃತವಾಗಿ ಉಮ್ರಾ ಸಂಕಲ್ಪ ಮಾಡಬೇಕಾದುದು ಮಸೀದಿಯಲ್ಲಲ್ಲ. ವಿಮಾನ ಪ್ರಯಾಣದ ವೇಳೆ ದಾರಿ ಮಧ್ಯೆಯೇ ನಿರ್ದಿಷ್ಟ ಗಡಿರೇಖೆ(ಮೀಖಾತ್)ಯೊಂದು ಸಿಗುತ್ತದೆ. ಆ ಗಡಿ ರೇಖೆಯನ್ನು ದಾಟುವುದರೊಂದಿಗೆ ಇಹ್ರಾಮ್ ಧರಿಸುವುದು ಮತ್ತು ಸಂಕಲ್ಪ ಮಾಡುವುದು ಕಡ್ಡಾಯವಾಗುತ್ತದೆ. ವಿಮಾನದಲ್ಲಿ (ಸೌದಿ ಏರ್‌ಲೈನ್ಸ್) ಆ ಬಗ್ಗೆ ಲೌಡ್ ಸ್ಪೀಕರ್‌ನಲ್ಲಿ ಸೂಚನೆಯನ್ನು ನೀಡಲಾಗುತ್ತದೆ. ಆದರೆ, ವಿಮಾನ ಪ್ರಯಾಣದ ವೇಳೆ ಹಳೆ ಬಟ್ಟೆಯನ್ನು ಕಳಚುವುದು ಮತ್ತು ಉಮ್ರಾ ಬಟ್ಟೆಯನ್ನು ಧರಿಸುವುದು ಕಷ್ಟಕರ ಎಂಬ ಕಾರಣದಿಂದ ವಿಮಾನವೇರುವ ಮೊದಲೇ ಉಮ್ರಾ ಬಟ್ಟೆಯನ್ನು ಧರಿಸುವ ಮತ್ತು ಸಂಕಲ್ಪ ಮಾಡುವ ಪ್ರಕ್ರಿಯೆ ನಡೆಯುತ್ತದೆ. ವಿಮಾನ ಪ್ರಯಾಣದ ವೇಳೆ ನಿರ್ದಿಷ್ಟ ಗಡಿಯನ್ನು ದಾಟುವಾಗ ಸಂಕಲ್ಪವನ್ನು ಪುನಃ ನವೀಕರಿಸಲಾಗುತ್ತದೆ. ಹಾಗಂತ, ಇದು ನನ್ನ ಉಮ್ರಾ ತಂಡ ವಿಶೇಷವಾಗಿ ಆಯ್ಕೆ ಮಾಡಿಕೊಂಡ ವಿಧಾನವೇನಲ್ಲ. ಉಮ್ರಾಕ್ಕೆ ಹೋಗುವ ಎಲ್ಲ ವಿದೇಶಿ ತಂಡಗಳು ಹೀಗೆಯೇ ನಡಕೊಳ್ಳುತ್ತವೆ. ಹೀಗೆ ನಮ್ಮ 150 ಮಂದಿಯ (ಹೆಣ್ಣು–ಗಂಡು) ತಂಡ ಕೊಚ್ಚಿನ್ ವಿಮಾನ ನಿಲ್ದಾಣಕ್ಕೆ ತೆರಳಿ ಅಲ್ಲಿ ಸುಮಾರು 3–4 ಗಂಟೆಗಳ ವರೆಗೆ ಕಾದು ಬಳಿಕ ವಿಮಾನ ಏರುವ ಬಹುಮುಖ್ಯ ಘಟ್ಟಕ್ಕೆ ನಾನು ಮುಖಾಮುಖಿಯಾದೆ. ಬಹುಮುಖ್ಯ ಯಾಕೆ ಅಂದರೆ, ನನ್ನ 40 ವರ್ಷಗಳ ಬದುಕಿನಲ್ಲಿ ನಾನು ವಿಮಾನದಲ್ಲಿ ಪ್ರಯಾಣಿಸುವುದು ಇದೇ ಮೊದಲು. ವಿಮಾನ ನಿಲ್ದಾಣದ ಹೊರಾಂಗಣಕ್ಕೆ ನಾನು ಈ ಮೊದಲು ಹೋಗಿರುವೆನೇ ಹೊರತು ಅದರಾಚೆಗೆ ವಿಮಾನ ನಿಲ್ದಾಣದ ಒಳಾಂಗಣವನ್ನು ನಾನು ಸ್ಪರ್ಶಿಸಿಯೇ ಇರಲಿಲ್ಲ. ಅದರ ಕಾರ್ಯಚಟುವಟಿಕೆಗಳಿಗೆ ದೃಕ್‌ಸಾಕ್ಷಿ ಆಗಿರಲಿಲ್ಲ. ಇಮಿಗ್ರೇಶನ್, ಚೆಕ್ಕಿಂಗ್ ಮುಂತಾದ ಪದಗಳನ್ನು ವಿದೇಶಕ್ಕೆ ತೆರಳುವವರ ಬಾಯಿಂದ ಕೇಳಿದ್ದೆ. ವಿಮಾನ ನಿಲ್ದಾಣದಲ್ಲಿ ತಪಾಸಣಾ ಪ್ರಕ್ರಿಯೆ ತುಂಬಾ ಕಠಿಣವಾಗಿರುತ್ತದೆ ಎಂಬ ಮಾತನ್ನೂ ಆಲಿಸಿದ್ದೆ. ಸಿನಿಮಾ ನಟ ಶಾರುಖ್ ಖಾನ್, ಕಮಲ್ ಹಾಸನ್ ಮತ್ತಿತರ ಖ್ಯಾತ ನಾಮರು ವಿಮಾನ ನಿಲ್ದಾಣದ ತಪಾಸಣೆಯ ಬಿಸಿಯನ್ನು ಅನುಭವಿಸಿ ಸುದ್ದಿಯಾದುದನ್ನು ಓದಿದ್ದೆ. ಇದಕ್ಕೆ ಪೂರಕವಾಗಿ ಉಮ್ರಾ ತರಬೇತಿ ಶಿಬಿರದಲ್ಲೂ ಕೆಲವು ವಿಷಯಗಳನ್ನು ಪ್ರಸ್ತಾಪಿಸಿದ್ದರು. ವಿಮಾನ ನಿಲ್ದಾಣದ ಅಧಿಕಾರಿಗಳಿಗೆ ನೀವು ಒದಗಿಸಿರುವ ದಾಖಲೆಗಳು ಖಚಿತ ಅನಿಸದಿದ್ದರೆ ಬದಿಗೆ ನಿಲ್ಲಿಸುತ್ತಾರೆ, ನೀವು ಆತಂಕಪಡಬೇಡಿ, ನಾವು ಸರಿಪಡಿಸುತ್ತೇವೆ ಎಂಬ ಭರವಸೆಯನ್ನೂ ನೀಡಿದ್ದರು. ಆದರೂ ಪುಟ್ಟದೊಂದು ಸಂದೇಹ. ಈ ಸಂದೇಹಕ್ಕೆ ಕಾರಣ ಏನೆಂದರೆ ನನ್ನ ಪಾಸ್‌ಪೋರ್ಟ್, ರೇಶನ್ ಕಾರ್ಡ್, ವೋಟರ್ ಐಡಿ, ಆಧಾರ್ ಕಾರ್ಡ್ ಮುಂತಾದ ದಾಖಲೆಗಳು. ಪಾಸ್‌ಪೋರ್ಟ್‌ನಲ್ಲಿ ನನ್ನ ಮನೆ ಸಂಖ್ಯೆ 37/16–18(21) ಎಂದು ನಮೂದಾಗಿದ್ದರೆ ಇತರ ದಾಖಲೆಗಳಲ್ಲಿ (21)ರ ಬದಲು ಎರಡು (2) ಎಂದು ನಮೂದಾಗಿತ್ತು.





ಈ ವ್ಯತ್ಯಾಸ ತನ್ನನ್ನು ತಡೆದು ನಿಲ್ಲಿಸಬಹುದೇ ಎಂಬೊಂದು ಅನುಮಾನ ನನ್ನನ್ನು ಕಾಡುತ್ತಿತ್ತು. ಅಲ್ಲದೆ ನಾನೊಂದು ಭಂಡ ಸಾಹಸವನ್ನೂ ಮಾಡಿದ್ದೆ. ಗಲ್ಫ್‌ನಲ್ಲಿರುವ ಗೆಳೆಯರಿಗೆ ನೀಡಲೆಂದು ನನ್ನ ಬ್ಯಾಗ್‌ನಲ್ಲಿ ಎರಡು ಪುಟ್ಟ ಪಾರ್ಸೆಲ್‌ಗಳನ್ನೂ ಇರಿಸಿಕೊಂಡಿದ್ದೆ. ಇದು ಕೇರಳ ಹಜ್ಜ್ ಗ್ರೂಪ್‌ನವರ ಮಾತಿಗೆ ವಿರುದ್ಧವಾಗಿತ್ತು. ಯಾವ ಕಾರಣಕ್ಕೂ ಬ್ಯಾಗ್‌ನಲ್ಲಿ ಇತರರ ಪಾರ್ಸೆಲ್‌ಗಳನ್ನು ಇರಿಸಬೇಡಿ ಎಂದವರು ತಾಕೀತು ಮಾಡಿದ್ದರು. ಇಂತಿಷ್ಟು ವಸ್ತುಗಳನ್ನು ಮಾತ್ರ ತನ್ನಿ ಎಂಬ ಪಟ್ಟಿಯನ್ನೂ ಎರಡು ಬ್ಯಾಗ್‌ಗಳನ್ನೂ ಉಮ್ರಾ ಪೂರ್ವ ತರಬೇತಿ ಶಿಬಿರದಲ್ಲಿ ನೀಡಿದ್ದರು. ಯಾತ್ರಿಕರ ಸುರಕ್ಷತೆಯ ದೃಷ್ಟಿಯಿಂದ ಇಂಥ ನಿರ್ದೇಶನಗಳನ್ನು ನೀಡಬೇಕಾದ ಅನಿವಾರ್ಯತೆ ಅವರಿಗಿದೆ ಎಂಬುದು ನನಗೆ ಗೊತ್ತು. ಕೇವಲ ಪಾರ್ಸೆಲ್‌ನ ಕಾರಣದಿಂದಾಗಿ ಅನೇಕರು ಜೈಲು ಪಾಲಾದದ್ದಿದೆ. ಅಪಾಯಕಾರಿ ಕೇಸ್‌ಗಳಿಗೆ ತುತ್ತಾದದ್ದಿದೆ. ಗಲ್ಫ್‌ನಲ್ಲಿ ಇಂತಿಂಥವರಿಗೆ ತಲುಪಿಸಿ ಎಂದು ಅಪರಿಚಿತ ಮಂದಿ ನೀಡಿದ ಪಾರ್ಸೆಲ್‌ಗಳನ್ನು ನಂಬಿ ಕೆಟ್ಟವರಿದ್ದಾರೆ. ಆ ಪಾರ್ಸೆಲ್‌ಗಳು ಗಾಂಜಾ, ಚರಸ್ ಮತ್ತಿತರ ನಿಷೇಧಿತ ವಸ್ತುಗಳನ್ನು ಒಳಗೊಂಡಿದ್ದೂ ಇದೆ. ಆದ್ದರಿಂದ ಹಜ್ಜ್ ಗ್ರೂಪ್‌ನವರ ಎಚ್ಚರಿಕೆಗೆ ಖಂಡಿತ ಮಹತ್ವವಿದೆ. ನಾನು ಈ ಎಲ್ಲವನ್ನೂ ಆಲೋಚಿಸುತ್ತಾ ತಪಾಸಣೆಯ ಉದ್ದ ಸಾಲಲ್ಲಿ ನಿಂತುಕೊಂಡೆ. ಕೊನೆಗೂ ಹಾಗಾದರೆ... ಹೀಗಾದರೆ... ಮುಂತಾದ ನಾನೇ ಸೃಷ್ಟಿಸಿಕೊಂಡ ಕೆಲವು 'ರೆ'ಗಳು ಸೋಲೊಪ್ಪಿಕೊಂಡವು. ತಪಾಸಣಾ ಪ್ರಕ್ರಿಯೆಯನ್ನು ನಿರ್ವಿಘ್ನವಾಗಿ ದಾಟಿ ವಿಮಾನವೇರಲು ಸಜ್ಜಾದೆ. ಅಲ್‌ಹಮ್ದುಲಿಲ್ಲಾಹ್.

ನಾನೀಗ ತುಂಬಾ ನಿರಾಳವಾಗಿದ್ದೆ. ತಪಾಸಣಾ ಪ್ರಕ್ರಿಯೆಯಲ್ಲಿ ಗೆದ್ದು ಬಂದ ಖುಷಿಯಲ್ಲಿದ್ದೆ. ಆದ್ದರಿಂದ ವಿಮಾನ ನಿಲ್ದಾಣದಲ್ಲಿ ನಡೆಯುತ್ತಿರುವ ಚಟುವಟಿಕೆಗಳನ್ನು ಕುತೂಹಲ ದೃಷ್ಟಿಯಿಂದ ವೀಕ್ಷಿಸತೊಡಗಿದೆ. ವಿಮಾನವೇರಲು ಇನ್ನೂ ತುಸು ಸಮಯವಿತ್ತು. ನಮ್ಮ ತಂಡದಂತೆಯೇ ಬೇರೆ ತಂಡಗಳೂ ನಮ್ಮ ವಿಮಾನದಲ್ಲಿಯೇ ಉಮ್ರಾಕ್ಕೆ ಪ್ರಯಾಣಿಸಲಿವೆ ಎಂಬುದನ್ನು ಅಲ್ಲಿನ ವಾತಾವರಣದಿಂದ ನಾನು ಅರಿತುಕೊಂಡೆ. ಒಂದು ತಂಡ ಗುಂಪಾಗಿ ಸೇರಿಕೊಂಡು ದುಆ ಮಾಡುತ್ತಿತ್ತು. ಮೌಲಾನಾರೊಬ್ಬರು ದುಆ ಮಾಡುತ್ತಿದ್ದರು. ಉಳಿದವರು ಆಮೀನ್ ಹೇಳುತ್ತಿದ್ದರು. ಫಾತಿಹಾ, ಸೂರಃಗಳ ಪಠಣವೂ ನಡೆಯುತ್ತಿತ್ತು. ಮಹಿಳೆಯರೆಲ್ಲ ಹಸಿರು ಬಣ್ಣದ ಸ್ಕಾರ್ಫನ್ನು ಯುನಿಫಾರ್ಮ್‌ನಂತೆ ಧರಿಸಿದ್ದರು. ನಮ್ಮ ತಂಡದ ಮಹಿಳೆಯರ ಸ್ಕಾರ್ಫ್‌ನ (ಶಿರವಸ್ತ್ರ) ಬಣ್ಣ ಬಿಳಿಯಾಗಿರುವುದನ್ನು ನಾನು ಜ್ಞಾಪಿಸಿಕೊಂಡೆ. ಆವರೆಗೆ ಬಿಳಿ ಬಣ್ಣದ ಸ್ಕಾರ್ಫ್‌ನಲ್ಲಿ ನಾನು ವಿಶೇಷತೆಯೇನನ್ನೂ ಕಂಡಿರಲಿಲ್ಲ. ಪುರುಷರು ಬಿಳಿ ಉಡುಪು ಧರಿಸುವಂತೆ ಮಹಿಳೆಯರು ಬಿಳಿ ಸ್ಕಾರ್ಫ್ ಧರಿಸಿದ್ದಾರೆ ಎಂದೇ ಅಂದುಕೊಂಡಿದ್ದೆ. ಆದರೆ ಸ್ಕಾರ್ಫ್‌ನ ಬಣ್ಣ ಬಿಳಿಯಾಗಿರುವುದರಲ್ಲಿ ತಂಡಗಳನ್ನು ಗುರುತು ಹಿಡಿಯುವ ಉದ್ದೇಶವೂ ಇದೆ ಎಂಬುದು ಗೊತ್ತಾದದ್ದು ಆಗಲೇ.

ಮಹಿಳೆಯರು ಸಾಮಾನ್ಯವಾಗಿ ಕಪ್ಪು ಬುರ್ಖಾ ಧರಿಸುವುದರಿಂದಾಗಿ ಯಾರು ಯಾವ ಟೂರ್ಸ್‌ಗೆ ಸಂಬಂಧಿಸಿದವರು, ಎಲ್ಲಿಯವರು... ಎಂಬುದೆಲ್ಲ ಗೊತ್ತಾಗುವುದು ಕಡಿಮೆ. ನಮ್ಮ ತಂಡದಂತೆಯೇ ಜಗತ್ತಿನ ಎಲ್ಲೆಡೆಯಿಂದ ಇಂಥ ನೂರಾರು ತಂಡಗಳು ಉಮ್ರಾ ನಿರ್ವಹಿಸಲು ಮಕ್ಕಾಕ್ಕೆ ಆಗಮಿಸುತ್ತವೆ. ಆರಂಭದಿಂದ ಕೊನೆಯವರೆಗೆ ಒಂದು ತಂಡವಾಗಿ ಅವರು ಒಟ್ಟಾಗಿರಬೇಕಾದುದು ಅಗತ್ಯ. ಹೀಗೆ ಒಟ್ಟಾಗಿ ಇರಬೇಕಾದರೆ ಪರಸ್ಪರರನ್ನು ದೂರದಿಂದಲೇ ಗುರುತಿಸಲು ಸಾಧ್ಯವಾಗುವಂತಹ ಏನಾದರೊಂದು ವ್ಯವಸ್ಥೆ ಇರಬೇಕಾಗುತ್ತದೆ. ಮಹಿಳೆಯರಿಗೆ ಮಾತ್ರವಲ್ಲ, ಪುರುಷರನ್ನೂ ಈ ಸಮಸ್ಯೆ ಕಾಡುತ್ತದೆ. ಅದೇ ಮೊದಲ ಬಾರಿ ಉಮ್ರಾ ಮಾಡುವವರಿಗಂತೂ ಮಕ್ಕಾ, ತವಾಫ್, ಸಈ, ಝುಂಝುಂ, ಮದೀನಾ, ಮಸ್ಜಿದುನ್ನಬವಿ... ಎಲ್ಲವೂ ಹೊಸತೇ. ಲಕ್ಷಾಂತರ ಮಂದಿ ಪ್ರತಿದಿನ ಭೇಟಿಕೊಡುವ ಸ್ಥಳವೊಂದರಲ್ಲಿ 150 ಮಂದಿಯ ತಂಡವೊಂದು ಸದಾ ತಂಡವಾಗಿಯೇ ಗುಂಪುಗೂಡಿ ಇರಲು ಸಾಧ್ಯವೇ ಇಲ್ಲ. ಜನ ಪ್ರವಾಹದ ನಡುವೆ ಗುಂಪು ಚೆಲ್ಲಾಪಿಲ್ಲಿಯಾಗುತ್ತದೆ. ಪತಿ ಮತ್ತು ಪತ್ನಿಯೇ ಒಂಟಿ ಒಂಟಿಯಾಗಿ ಬಿಡುವಷ್ಟು ರಶ್ ಇರುತ್ತದೆ. ನಫ್ಸಿ ನಫ್ಸಿ (ನನಗೆ ನಾನೇ) ಎಂದು ಅನಿಸಿಬಿಡಬಹುದಾದಂತಹ ಸನ್ನಿವೇಶ ನಿರ್ಮಾಣವಾಗುತ್ತದೆ. ಅಲ್ಲದೇ ಮಸ್ಜಿದುಲ್ ಹರಾಮ್‌ನಿಂದ ಅಥವಾ ಮಸ್ಜಿದುನ್ನಬವಿಯಿಂದ ನಾವು ಉಳಿದುಕೊಂಡಿರುವ ಹೊಟೇಲ್ ರೂಮ್‌ಗೆ ದಾರಿ ಎಲ್ಲಿ ಎಂಬುದೂ ಬಹುತೇಕ ಬಾರಿ ಮಹಾನ್ ಸಮಸ್ಯೆಯಾಗಿ ಕಾಡುವುದಿದೆ. ಒಂದು ಕಡೆ ಲಕ್ಷಾಂತರ ಮಂದಿಯ ಪ್ರವಾಹ, ಇನ್ನೊಂದು ಕಡೆ, ಈ ಎರಡೂ ಮಸೀದಿಗಳ ಸುತ್ತ-ಮುತ್ತಲಲ್ಲಿ ಮತ್ತು ಕೆಲವೊಮ್ಮೆ ಬಹು ದೂರದಲ್ಲಿ ಹರಡಿಕೊಂಡಿರುವ ಹೊಟೇಲ್ ರೂಮುಗಳು. ಒಂದೇ ಏಟಿಗೆ ತಾನು ಉಳಿದುಕೊಳ್ಳಬೇಕಾದ ಹೊಟೇಲನ್ನೂ, ಅದಕ್ಕಿರುವ ರಸ್ತೆಯನ್ನೂ ಪತ್ತೆಹಚ್ಚಿ ಬಿಡಬಹುದಾದಂತಹ ವಾತಾವರಣ ಅಲ್ಲಿಯದಲ್ಲ. ಎಲ್ಲೆಲ್ಲೂ ಜನರನ್ನೇ ಕಾಣುವಾಗ ತಾನೆಲ್ಲಿದ್ದೇನೆ ಎಂಬುದೇ ಗೊತ್ತಾಗದಂತಹ ಸ್ಥಿತಿ ನಿರ್ಮಾಣವಾಗುತ್ತದೆ. ಇಲ್ಲಿ ಹೊಂದಿಕೊಳ್ಳಲು ನಾಲ್ಕೈದು ದಿನಗಳಾದರೂ ಬೇಕು. ಆದ್ದರಿಂದ ಒಂದು ತಂಡದ ಪುರುಷ ಮತ್ತು ಮಹಿಳೆಯರಿಬ್ಬರನ್ನೂ ಒಂದೆಡೆ ಸೇರಿಸುವುದಕ್ಕೆ ವಿಶಿಷ್ಟ ಗುರುತಿನ ಅಗತ್ಯವಂತೂ ಇದ್ದೇ ಇರುತ್ತದೆ. ಅಲ್ಲದೆ ಇದರ ಅಗತ್ಯವನ್ನು ಸೂಚಿಸುವ ಇನ್ನೊಂದು ಅಂಶವೇನೆಂದರೆ, ಮಕ್ಕಾ ಮತ್ತು ಮದೀನಾದ ಸುತ್ತ-ಮುತ್ತ ಹರಡಿಕೊಂಡಿರುವ ಐತಿಹಾಸಿಕ ಸ್ಥಳಗಳಿಗೆ ಭೇಟಿಕೊಡುವ ಸನ್ನಿವೇಶ ಇರುವಾಗ. ಆ ಸಂದರ್ಭದಲ್ಲಿ ಒಂದು ತಂಡವಾಗಿ ಒಂದೆಡೆ ಸೇರಿ, ಬಳಿಕ ಅಲ್ಲಿಂದ ಒಟ್ಟಾಗಿ ಹೊರಡಬೇಕಾಗುತ್ತದೆ. ತಮ್ಮ ಗುಂಪಿನವರನ್ನು ಗುರುತಿಸುವ ಸಾಮಾನ್ಯ ಐಡೆಂಟಿಟಿಯೊಂದರ ಅಗತ್ಯ ಇಂಥ ಸಂದರ್ಭಗಳಲ್ಲಿ ಸಾಕಷ್ಟು ಇರುತ್ತದೆ. ಉಮ್ರಾ ಪೂರ್ವ ತರಬೇತಿ ಶಿಬಿರದಲ್ಲಿ ಸಂಘಟಕರು ಎರಡು ಬ್ಯಾಗ್‌ಗಳನ್ನೂ ಮತ್ತು ಯಾತ್ರೆಯ ವೇಳೆ ಒಯ್ಯಬಹುದಾದ ಹಾಗೂ ಒಯ್ಯಬಾರದ ಪಟ್ಟಿಯನ್ನೂ





ನೀಡಿದ್ದರೆಂದು ಈ ಮೊದಲು ಹೇಳಿರುವೆನಲ್ಲವೇ? ಅದರಲ್ಲಿ ಒಂದು ಬಿಳಿ ಕೊಡೆಯೂ ಇತ್ತು. ಕಠಿಣ ಬಿಸಿಲಿನಿಂದ ರಕ್ಷಿಸಿಕೊಳ್ಳಲು ಅದನ್ನು ನೀಡಿರಬಹುದು ಎಂದೇ ನಾನು ಅಂದುಕೊಂಡಿದ್ದೆ. ಆದರೆ, ಅದು ಬಿಸಿಲಿನಿಂದ ತಡೆದುಕೊಳ್ಳುವ ವಸ್ತುವಷ್ಟೇ ಅಲ್ಲ, ಗುರುತು ಚಿಹ್ನೆಯೂ ಹೌದು ಎಂಬುದು ಮಕ್ಕಾದಲ್ಲಿ ನನಗೆ ಅರಿವಾಯಿತು. ನಮ್ಮ ಯಾತ್ರೆಯ ಅಮೀರ್ (ನಾಯಕ) ಮಸ್ಜಿದುನ್ನಬವಿ ಅಥವಾ ಮಸ್ಜಿದುಲ್ ಹರಾಮ್‌ನ ಹೊರಗೆ ಆ ಕೊಡೆಯನ್ನು ಅರಳಿಸಿ ಎತ್ತರಿಸಿ ಹಿಡಿದಿರುತ್ತಾರೆ. ಆ ಕೊಡೆಯನ್ನು ನೋಡಿಕೊಂಡು ನಾವು ಅವರೆಡೆಗೆ ತೆರಳಿ ಒಟ್ಟು ಸೇರುತ್ತಿದ್ದೆವು. ಬೀದಿಯಲ್ಲಿ ಈ ಕೊಡೆಯನ್ನು ಬಿಡಿಸಿಕೊಂಡು ನಡೆಯುವಾಗ ನಮ್ಮನ್ನು ನಮ್ಮ ತಂಡದವರಿಗೆ ಗುರುತಿಸುವುದಕ್ಕೂ ಇದು ಉಪಯೋಗಕ್ಕೆ ಬರುತ್ತದೆ. ಹಾಗಂತ, ಇದು ನಮ್ಮ ಉಮ್ರಾ ತಂಡದ ನಿಯಮವಷ್ಟೇ ಆಗಿರಲಿಲ್ಲ. ಇತರ ಅನೇಕಾರು ತಂಡಗಳೂ ಇದೇ ಮಾದರಿಯನ್ನು ಅನುಸರಿಸುತ್ತಿರುವುದನ್ನು ನಾನು ಕಂಡೆ.

## ಭಾಗ: 5

ವಿಮಾನವೇರುವ ಸಮಯವಾಯಿತು. ಅಪಾರ ಕುತೂಹಲದೊಂದಿಗೆ ನಾನು ಸರತಿ ಸಾಲಿನಲ್ಲಿ ನಡೆದೆ. ಆದರೆ ವಿಮಾನದ ಒಳಗೆ ಪ್ರವೇಶಿಸಿದಂತೆಯೇ ನಾನೆಷ್ಟು ನಿರಾಶೆಗೆ ಒಳಗಾದೆನೆಂದರೆ ಇದುವಾ, ಇಷ್ಟೇನಾ... ಎಂಬ ಉದ್ಗಾರ ನನ್ನಿಂದ ಹೊರಟಿತು. ಮಂಗಳೂರಿನಿಂದ ಬೆಂಗಳೂರಿಗೆ ರಾತ್ರಿ ಹೊರಡುವ ಬಸ್ಸಿನಲ್ಲಿ ಪ್ರಯಾಣಿಸಿ ಅಭ್ಯಾಸವಿದ್ದ ನನಗೆ, ಆ ಬಸ್ಸಿಗೂ ಇದಕ್ಕೂ ಹೆಚ್ಚು ವ್ಯತ್ಯಾಸ ಕಾಣಿಸಲಿಲ್ಲ. ಬಹುತೇಕ ಅಂಥದ್ದೇ ಸೀಟು. ಬ್ಯಾಗುಗಳನ್ನು ಇರಿಸುವುದಕ್ಕೆ ತಲೆಯ ಮೇಲ್ಭಾಗದಲ್ಲಿ ಕ್ಯಾಬಿನು. ಸೀಟು ಸಂಖ್ಯೆಗಾಗಿ ಥೇಟು ಬಸ್ಸಿನಲ್ಲಿ ಹುಡುಕಾಡುವಂಥ ಹುಡುಕಾಟ. ಅದೇ ನೂಕು ನುಗ್ಗಲು. ಅಲ್ಲಿ ಓರ್ವ ಕಂಡಕ್ಟರ್ ಮತ್ತು ಕ್ಲೀನರ್ ಇದ್ದರೆ ಇಲ್ಲಿ ಪರಿಚಾರಕ ಮತ್ತು ಪರಿಚಾರಕಿಯರು ಇರುತ್ತಾರೆ. ಬಸ್ ಕಂಡಕ್ಟರ್‌ಗೆ ಹೋಲಿಸಿದರೆ ಇವರಲ್ಲಿ ಸ್ವಲ್ಪ ವ್ಯತ್ಯಾಸ ಇದೆ. ಇವರು ಟಿಕೇಟ್ ಕೊಡುವುದಿಲ್ಲ. ಕಂಡಕ್ಟರ್‌ಗಳಂತೆ ಕೈಯಲ್ಲಿ ಪರ್ಸ್ ಹಿಡಿದಿರುವುದಿಲ್ಲ. ಉಡುಪು ನೀಟಾಗಿ–ಶಿಸ್ತು ಬದ್ಧವಾಗಿರುತ್ತದೆ. ವಿಮಾನದ ಒಳಗಡೆಯೇ ಟಾಯ್ಲೆಟ್ ಇರುತ್ತದೆ. ಇಂಥ ಸಣ್ಣ–ಪುಟ್ಟ ವ್ಯತ್ಯಾಸಗಳನ್ನು ಹೊರತುಪಡಿಸಿದರೆ ವಿಮಾನದ ಒಳಗಿನ ವಾತಾವರಣಕ್ಕೂ ಬಸ್ಸಿನ ಒಳಗಿನ ವಾತಾವರಣಕ್ಕೂ ಅಬ್ಬಾ ಅನ್ನಬಹುದಾದ ಯಾವ ವ್ಯತ್ಯಾಸವೂ ಇಲ್ಲ. ನಾನಂತೂ, ವಿಮಾನವೆಂದರೆ ಇದರಾಚೆಗೆ ಏನೇನೋ ಕಲ್ಪಿಸಿಕೊಂಡಿದ್ದೆ. ಆ ಕಲ್ಪನೆಯಲ್ಲಿ ಬಸ್ಸಿನಲ್ಲಿರುವ ಸೀಟುಗಳಂಥ ಸೀಟುಗಳಿಗೆ ಸ್ಥಾನವೇ ಇರಲಿಲ್ಲ. ಏನೋ ಹೊಸತನ್ನು ಮತ್ತು ಹೊಸತೇ ಆದ ಅನುಭವವನ್ನು ನಿರೀಕ್ಷಿಸಿದ್ದೆ. ಆದ್ದರಿಂದಲೋ ಏನೋ ಅತೀವ ನಿರಾಸಕ್ತಿಯೊಂದಿಗೆ ವಿಮಾನದಲ್ಲಿ ಕುಳಿತೆ. ನನಗೆ ಹೊಸ ಅನುಭವವನ್ನು ಕೊಟ್ಟದ್ದು ವಿಮಾನದ ಟೇಕ್‌ಅಪ್. ನೆಲದಿಂದ ಮೇಲಕ್ಕೆ ಚಿಮ್ಮುವ ಪರಿ ಕೌತುಕಮಯ ಮತ್ತು ಅಷ್ಟೇ ಆಶ್ಚರ್ಯಕರ. ಅಷ್ಟು ದೊಡ್ಡ ಗಾತ್ರದ ಮತ್ತು ಅಷ್ಟು ಭಾರದ ಲೋಹದ ಉಪಕರಣವೊಂದು ನೆಲವನ್ನು ಬಿಟ್ಟು ಆಕಾಶದಲ್ಲಿ





ಹಾರಾಡುವುದೆಂದರೆ, ಅದು ಅದ್ಭುತ. ಅದನ್ನು ಸಂಶೋಧಿಸಿದ ರೈಟ್ ಸಹೋದರರು ಎಷ್ಟು ಬುದ್ಧಿವಂತರು ಎಂಬುದಾಗಿ ಆಲೋಚಿಸುವುದಕ್ಕೆ ಒದಗುವ ಸಂದರ್ಭ ಅದು. ನೆಲವನ್ನು ಬಿಟ್ಟು ಎತ್ತರಕ್ಕೆ ಏರಿದಂತೆಯೇ ನನ್ನೊಳಗೆ ಅಳುಕೂ ಖುಷಿಯೂ ಒಟ್ಟೊಟ್ಟಿಗೆ ಉಂಟಾಯಿತು. ನೆಲ ನೋಡುವಾಗ ಆಗುವ ಭಯವು ಮೋಡಗಳಿಗೆ ಮುತ್ತಿಕ್ಕಲು ಹತ್ತಿರವಾಗುವ ಖುಷಿಯಲ್ಲಿ ಕಳೆದುಹೋಗುತ್ತಿರುವಂತೆ ಅನಿಸಿತು. ನಿಧಾನಕ್ಕೆ ಮೇಲೇರಿ ಆ ಬಳಿಕ ವೇಗವನ್ನು ಒಮ್ಮೆಲೆ ಹೆಚ್ಚಿಸಿಕೊಳ್ಳುವ ಆರಂಭಿಕ ಹಂತವನ್ನು ಬಿಟ್ಟರೆ ಬಳಿಕ ಅಂಥ ವಿಶೇಷವಾದದ್ದೇನೂ ಇಲ್ಲ. ಮೋಡಗಳನ್ನು ಸೀಳಿಕೊಂಡು ರಭಸದಿಂದ ಮುನ್ನುಗ್ಗುವಾಗ ನೆಲವೂ ಕಾಣುವುದಿಲ್ಲ. ಪರ್ವತವೂ ಕಾಣುವುದಿಲ್ಲ. ಸುರಂಗ ಮಾರ್ಗದಲ್ಲಿ ರೈಲು ಹೋಗುವಾಗ ಉಂಟಾಗುವ ಜೂಮ್... ಎಂಬ ಏಕತಾನತೆಯ ಅನುಭವ.

ವಿಮಾನ ಪ್ರಯಾಣದ ಬಗ್ಗೆ ನನ್ನಲ್ಲಿ ತೀವ್ರ ಭಯವಿತ್ತು. ಹಾಗಂತ, ಅಪರೂಪದಲ್ಲಾಗುವ ವಿಮಾನಾಪಘಾತ ಘಟನೆಗಳೇ ಈ ಭಯದ ಉತ್ಪಾದಕ ಎಂದು ಖಚಿತವಾಗಿ ನಾನು ಹೇಳಲಾರೆ. ಆದರೆ ದಶಕಗಳ ಹಿಂದೆ ಮಂಗಳೂರಿನ ವಿಮಾನ ನಿಲ್ದಾಣದಲ್ಲಾದ ಅಪಘಾತ ಪ್ರಕರಣ ಈ ಭಯವನ್ನು ಹೆಚ್ಚು ಬಲಗೊಳಿಸಿರುವ ಸಾಧ್ಯತೆ ಖಂಡಿತ ಇದೆ. ನನ್ನ ಪರಿಸರದಲ್ಲೇ ಈ ಅಪಘಾತ ಆದುದರಿಂದ ಮತ್ತು ಸುಟ್ಟು ಹೋದ ಜೀವಗಳ ಹಸಿ ಹಸಿ ವಿವರಗಳ ಅನುಭವ ಇರುವುದರಿಂದ 'ವಿಮಾನ ಪ್ರಯಾಣ ಅಪಾಯಕಾರಿ' ಎಂಬ ಭಾವನೆ ನನ್ನೊಳಗೆ ಉಂಟಾಗಿರಲೂ ಬಹುದು. ಆದರೆ, ಈ ಅಪಘಾತವೊಂದೇ ನನ್ನ ಭಯಕ್ಕೆ ಕಾರಣ ಅಲ್ಲ. ಬಹುಶಃ ಇನ್ನಾವುದೋ ಅಸ್ಪಷ್ಟ ಮತ್ತು ಅವ್ಯಕ್ತವಾದ ವಿಷಯವೊಂದು ನನ್ನಲ್ಲಿ ಅದನ್ನು ಉತ್ಪಾದಿಸಿರಬೇಕು. ಆದ್ದರಿಂದಲೋ ಏನೋ ನನ್ನ ಉಮ್ರಾ ಪ್ರಯಾಣ ಖಚಿತಗೊಂಡ ಬಳಿಕ ಪ್ರತಿದಿನ ಸುರಕ್ಷಿತ ಪ್ರಯಾಣಕ್ಕಾಗಿ ಪ್ರಾರ್ಥಿಸುತ್ತಿದ್ದೆ. ಹಾಗಂತ, ಈಗ ನಾನು ಭಯಮುಕ್ತವಾದೆ ಎಂದಲ್ಲ. ಆದರೆ, ನನ್ನ ನಿರೀಕ್ಷೆಯನ್ನು ಸುಳ್ಳು ಮಾಡಿದ ವಿಮಾನ ಪ್ರಯಾಣದಿಂದಾಗಿ ನನ್ನಲ್ಲುಂಟಾಗಿರುವ ನಿರಾಶೆ ಎಷ್ಟು ತೀವ್ರವಾಗಿತ್ತೆಂದರೆ ಮೊದಲ ಪ್ರಯಾಣವಾಗಿದ್ದೂ ರಿಯಾದ್‌ಗೆ ತಲುಪುವ ವೇಳೆ ನಾನು ನಿದ್ರಾ ಜೊಂಪಿನಲ್ಲಿದ್ದೆ. ರಿಯಾದ್‌ನಲ್ಲಿ ತುಸು ತಂಗಿದ ವಿಮಾನ ಬಳಿಕ ಜಿದ್ದಾದಲ್ಲಿ ಇಳಿಯಿತು. ಇನ್ನು ಜಿದ್ದಾದಿಂದ ಬಸ್ಸಿನಲ್ಲಿ ಮಕ್ಕಾಕ್ಕೆ ತೆರಳಬೇಕು. ಆದರೆ, ಜಿದ್ದಾ ವಿಮಾನ ನಿಲ್ದಾಣದಲ್ಲಿ ತಪಾಸಣಾ ಕಾರ್ಯ ಎಷ್ಟು ನಿಧಾನವಾಗಿತ್ತೆಂದರೆ, ಸುಮಾರು 5 ಗಂಟೆಗಳ ಕಾಲ ನಾವೆಲ್ಲ ಅಲ್ಲೇ ಉಳಿಯಬೇಕಾಯಿತು. ರಾತ್ರಿ ಬೇರೆ. ದಾಖಲೆಗಳನ್ನು ನೋಡಿ, ನಮ್ಮ ಫೋಟೋ ಕ್ಲಿಕ್ಕಿಸಿ, ಒಬ್ಬೊಬ್ಬರನ್ನೇ ಒಳ ಕಳಿಸುವ ಪ್ರಕ್ರಿಯೆ ಅಷ್ಟು ಸರಳವಲ್ಲದಿದ್ದರೂ ಮಕ್ಕಳು ವೃದ್ಧರನ್ನೊಳಗೊಂಡ ಜಗತ್ತಿನ ಎಲ್ಲೆಡೆಯ ಮಂದಿ ಹಾಗೆ ಗಂಟೆಗಟ್ಟಲೆ ಸರತಿ ಸಾಲಿನಲ್ಲಿ ನಿಲ್ಲುವುದೂ ಸುಲಭವಾಗಿರಲಿಲ್ಲ. ನಮ್ಮ ರೈಲು ನಿಲ್ದಾಣಗಳಲ್ಲಿ ಸರತಿ ಸಾಲಿನಲ್ಲಿ ನಡೆಯುವಂತಹ

ಒಂದೆರಡು ವಾಗ್ವಾದ ಪ್ರಕರಣಗಳು ಇಲ್ಲೂ ಅಧಿಕಾರಿಗಳು ಮತ್ತು ಸರತಿ ಸಾಲಿನಲ್ಲಿರುವ ಪ್ರಯಾಣಿಕರ ನಡುವೆ ನಡೆಯಿತು. ಇಷ್ಟು ದೊಡ್ಡ ಸಂಖ್ಯೆಯಲ್ಲಿ ಪ್ರಯಾಣಿಕರು ಜಿದ್ದಾ ವಿಮಾನ ನಿಲ್ದಾಣಕ್ಕೆ ಆಗಮಿಸುತ್ತಿರುವಾಗ ಅವರನ್ನು ನಿಭಾಯಿಸುವುದಕ್ಕಾಗಿ ಮಾಡಲಾದ ವ್ಯವಸ್ಥೆ ಏನೇನೂ ಸಾಲದಂತೆ ಅನಿಸಿತು.

ಅಂತೂ ಇಂತೂ ತಪಾಸಣಾ ಕಾರ್ಯ ಮುಗಿದು ಹೊರಬಂದೆವು. ಸತತ ಐದು ಗಂಟೆಗಳಷ್ಟು ಕಾಲ ಸರತಿ ಸಾಲಿನಲ್ಲಿ ನಿಂತೂ–ಕುಳಿತೂ ಸುಸ್ತಾಗಿತ್ತು. ಅಲ್ಲೇ ಮಗ್ರಿಬ್ ಮತ್ತು ಇಶಾ ನಮಾಝುನ್ನು (ಜಮ್‌ಅ್–ಕಸ್ರ್) ನಿರ್ವಹಿಸಿದೆವು. ಝುಹ್ರ್ ಮತ್ತು ಅಸರ್ ನಮಾಝುನ್ನು ವಿಮಾನದಲ್ಲೇ ನಿರ್ವಹಿಸಿದ್ದೆವು. ಇದೇವೇಳೆ, ವಿಮಾನ ನಿಲ್ದಾಣದ ಪರಿಚಾರಕರು (ಕ್ಲೀನರ್ಸ್) ಮೊಬೈಲ್ ಸಿಮ್ ಬೇಕಾ ಎಂದು ವಿಚಾರಿಸುತ್ತಾ ಹತ್ತಿರ ಬಂದರು. ಅವರು ಜೇಬಲ್ಲಿ ಸಿಮ್ ಇಟ್ಟುಕೊಂಡಿದ್ದರು. ಫೋಟೋ, ದಾಖಲೆ ಪತ್ರ ಯಾವುದನ್ನೂ ನಮ್ಮಿಂದ ಪಡೆಯದೆಯೇ ಅವರು ಸಿಮ್ ವಿವರಿಸುತ್ತಿದ್ದರು. ನಮ್ಮಲ್ಲಿ ಹೆಚ್ಚಿನವರು ಸಿಮ್ ಖರೀದಿಸಿದರು. ಒಂದು ಸಿಮ್‌ಗೆ 50 ರಿಯಾಲ್, ಅಂದರೆ ಸುಮಾರು 900 ರೂಪಾಯಿ. 25 ರಿಯಾಲ್ ಸಿಮ್‌ಗೆ ಮತ್ತು 25 ರಿಯಾಲ್ ರಿಚಾರ್ಜ್‌ಗೆ. ನಾನು ಆರಂಭದಲ್ಲಿ ಸಿಮ್ ಖರೀದಿಸಲು ಹಿಂದೇಟು ಹಾಕಿದೆ. ನನ್ನ ಮಟ್ಟಿಗೆ ಈ ಬೆಲೆ ತೀರಾ ದುಬಾರಿಯಾಗಿತ್ತು. ಒಂದು ಸಿಮ್‌ಗೆ ಇಷ್ಟೊಂದು ದುಡ್ಡು ಪಾವತಿಸಬೇಕೆ ಎಂದು ಅನಿಸಿತಾದರೂ ನನ್ನ ಮುಂದೆ ಬೇರೆ ಆಯ್ಕೆಯಿರಲಿಲ್ಲ. ಮನೆಯವರನ್ನು ಸಂಪರ್ಕಿಸಬೇಕಾಗಿತ್ತು. ಈ ಸಿಮ್‌ನ ಹೊರತು ಸಂಪರ್ಕಕ್ಕೆ ಬೇರೆ ದಾರಿಯಿಲ್ಲ. ಒಲ್ಲದ ಮನಸ್ಸಿನಿಂದ ಸಿಮ್ ಖರೀದಿಸಿ ತಾಯಿ ಮತ್ತು ಪತ್ನಿಯನ್ನು ಸಂಪರ್ಕಿಸಿದೆ. ನಿಜವಾಗಿ ಇಲ್ಲಿ ತುಟ್ಟಿಯಾಗಿರುವುದು ಸಿಮ್ ಮಾತ್ರ ಅಲ್ಲ, ಇಲ್ಲಿ ಯಾವ ವಸ್ತುವನ್ನು ಮುಟ್ಟಿದರೂ ಕೈ ಸುಡುವಷ್ಟು ಬಿಸಿಯಾಗಿದೆ ಎಂಬುದು ನನ್ನ 14 ದಿನಗಳ ಯಾತ್ರೆಯುದ್ದಕ್ಕೂ ನನಗೆ ಪದೇ ಪದೇ ಅನುಭವಕ್ಕೆ ಬಂತು. ಒಂದು ಬಾಳೆ ಹಣ್ಣಿಗೆ ಭಾರತದ ಸುಮಾರು 18 ರೂಪಾಯಿ. ಉಮ್ರಾ ನಿರ್ವಹಿಸಿದ ಬಳಿಕ ಕೂದಲು ಕತ್ತರಿಸಿಕೊಳ್ಳಲು ಸೆಲೂನ್‌ಗೆ ಹೋದೆ. 10 ರಿಯಾಲ್. ಅಂದರೆ ಭಾರತದ ಸುಮಾರು 180 ರೂಪಾಯಿ. ಹಾಗಂತ, ಈ ಕೂದಲು ಕತ್ತರಿಸುವುದು ಅಥವಾ ಬೋಳಿಸುವುದು 5 ನಿಮಿಷಗಳಲ್ಲಿ ಮುಗಿದು ಹೋಗುವ ಪ್ರಕ್ರಿಯೆ. ಇಲ್ಲಿ ಪೊಲೀಸ್ ಕಟ್, ವೆಜ್ ಕಟ್, ನೇಮಾರ್ ಕಟ್, ರಸೆಲ್ ಕಟ್... ಮುಂತಾದ ಕೇಶ ವಿನ್ಯಾಸಗಳಿಗೇನೂ ಅವಕಾಶ ಇರುವುದಿಲ್ಲ. ಉಮ್ರಾ ನಿರ್ವಹಿಸಿದವರು ಒಂದೋ ಕೂದಲನ್ನು ಚಿಕ್ಕದಾಗಿ ಕತ್ತರಿಸಿಕೊಳ್ಳುತ್ತಾರೆ ಅಥವಾ ಬೋಳಿಸಿಕೊಳ್ಳುತ್ತಾರೆ. ಈ ಕ್ಷಿಪ್ರ ಕ್ರಿಯೆಗೆ 180 ರೂಪಾಯಿ ಪಡೆಯುವವರು ಇನ್ನು ಗಂಟೆಗಟ್ಟಲೆ ನಡೆಯುವ ಕೇಶ ವಿನ್ಯಾಸಗಳಿಗೆ ಎಷ್ಟು ದುಡ್ಡು ಕೇಳುವರೋ?

ಜಿದ್ದಾದ ವಿಮಾನ ನಿಲ್ದಾಣದಲ್ಲಾದ ವಿಳಂಬದಿಂದಾಗಿ ಸುಸ್ತಾಗಿದ್ದ ನಮ್ಮ ತಂಡ ಅಲ್ಲಿಂದ ಬಸ್ ಮೂಲಕ 73 ಕಿ. ಮೀಟರ್ ದೂರದ ಮಕ್ಕಾಕ್ಕೆ ತಲುಪಿದಾಗ





ಸರಿ ಸುಮಾರು ಅರ್ಧ ರಾತ್ರಿ ಕಳೆದಿತ್ತು. ದೂರ ಪ್ರಯಾಣ ಅಂದ ಮೇಲೆ ಎಲ್ಲವೂ ನಾವೆಣಿಸಿದಂತೆಯೇ ಆಗುವುದಿಲ್ಲ ಎಂಬ ಸಮರ್ಥನೆಯನ್ನು ನನಗೆ ನಾನೇ ಕೊಟ್ಟುಕೊಂಡು ಸಮಾಧಾನ ಪಟ್ಟೆ. ಬಸ್ ಮಕ್ಕಾಕ್ಕೆ ತಲುಪಿತು ಎಂದು ಗೊತ್ತಾದ ಕೂಡಲೇ ಮನಸ್ಸಲ್ಲಿ ಒಂದು ಬಗೆಯ ರೋಮಾಂಚನ. ಸಾಮಾನ್ಯವಾಗಿ ಯಾವುದೇ ಪ್ರಯಾಣದಲ್ಲಿ ನಾವು ತಲುಪಬೇಕಾದ ಸ್ಥಳಕ್ಕೆ ತಲುಪಿದಾಗ ಒಂದು ಬಗೆಯ ನಿಟ್ಟುಸಿರು ಬಿಡುವುದು ಸಹಜ. ಅದು ನೆಮ್ಮದಿ ಮತ್ತು ತೃಪ್ತಿಯ ಉದ್ಗಾರ. ಆದರೆ ಮಕ್ಕಾ ಹಾಗಲ್ಲ. ಆ ಎರಡಕ್ಷರಕ್ಕೆ ವಿಶೇಷ ಅನುಭೂತಿಯಿದೆ. ಇತರೆಲ್ಲ ಪಟ್ಟಣಗಳಂತೆ ಮಕ್ಕಾ ಅಲ್ಲ. ಪವಿತ್ರ ಕುರ್‌ಆನಿನಲ್ಲಿ ಮಕ್ಕಾದ ಪ್ರಸ್ತಾಪ ಇದೆ. ಬಕ್ಕ, ಉಮ್ಮುಲ್ ಖುರಾ, ಅಲ್ ಬಲದುಲ್ ಅಮೀನ್ ಎಂಬೆಲ್ಲ ಹೆಸರುಗಳಿಂದ ಪವಿತ್ರ ಕುರ್‌ಆನ್ ಅದನ್ನು ಗುರುತಿಸಿದೆ. ಅಲ್ಲದೆ, ಮಕ್ಕಾವು ಪ್ರವಾದಿಯವರ ಹೆಜ್ಜೆ ಗುರುತುಗಳಿರುವ ನಗರ. ಅವರ ಮಾತುಗಳನ್ನು ಆಲಿಸಿರುವ ನಗರ. ಅವರ ಉಸಿರನ್ನು ಅನುಭವಿಸಿರುವ ನಗರ. ಅವರ ಬಾಲ್ಯ, ಯೌವನ ಮತ್ತು ಅನಂತರದ ಬದುಕಿಗೂ ಈ ನಗರ ಸಾಕ್ಷಿಯಾಗಿದೆ. ಅವರು ಈ ನಗರದಲ್ಲೇ ಬೈಗುಳವನ್ನು ತಿಂದಿದ್ದಾರೆ. ದೈಹಿಕ ಆಕ್ರಮಣಕ್ಕೆ ಒಳಗಾಗಿದ್ದಾರೆ. ವ್ಯಾಪಾರಿಯಾಗಿ ಅಲೆದಿದ್ದಾರೆ. ನಾಯಕನಾಗಿ ನಿರ್ದೇಶನ ನೀಡಿದ್ದಾರೆ. ಫಾತಿಮಾರ ಕೈ ಹಿಡಿದು ನಡೆದಿದ್ದಾರೆ. ಖತೀಜರನ್ನು ಈ ನಗರದಲ್ಲೇ ಅಂತಿಮ ಸಂಸ್ಕಾರಗೊಳಿಸಿದ್ದಾರೆ. ಮಗ ಇಬ್ರಾಹೀಮ್‌ರ ನಿಧನಕ್ಕೆ ಕಣ್ಣೀರಾಗಿದ್ದಾರೆ. ಅಬೂಬಕರ್, ಉಮರ್, ಉಸ್ಮಾನ್, ಅಲೀ, ಮಿಸ್‌ಅಬ್, ಅಬ್ದುರ್ರಹ್ಮಾನ್ ಬಿನ್ ಔಫ್, ಅಬೂಸುಫಿಯಾನ್, ಅಬೂಜಹಲ್, ಉತ್ಬಾ, ಶೈಬಾ ಬಿಲಾಲ್, ಅಬೂತಾಲಿಬ್... ಹೀಗೆ ಗೆಳೆಯರನ್ನೂ ವೈರಿಗಳನ್ನೂ ಹೊಂದಿದ್ದು ಮತ್ತು ಅವರಿಂದ ಪ್ರೀತಿ ಹಾಗೂ ದ್ವೇಷವನ್ನು ಪಡೆದದ್ದು ಇದೇ ನಗರದಲ್ಲಿ. ಮನದ ತಲ್ಲಣಗಳಿಗೆ ಸಾಂತ್ವನವನ್ನು ಬಯಸಿ ಅವರು ಧ್ಯಾನಾಸಕ್ತರಾದದ್ದೂ ಈ ನಗರದ ವ್ಯಾಪ್ತಿಯಲ್ಲೇ. ಮಕ್ಕಾದ ಮಣ್ಣು, ಗಾಳಿ, ನೀರು, ಮರಳು, ಬೆಟ್ಟ–ಗುಡ್ಡ.. ಎಲ್ಲವೂ ಪ್ರವಾದಿಯವರ ಪಾದಸ್ಪರ್ಶವನ್ನೋ ಉಪಸ್ಥಿತಿಯನ್ನೋ ಅನುಭವಿಸಿವೆ. 1500 ವರ್ಷಗಳ ಹಿಂದೆ ಕೇವಲ 63 ವರ್ಷಗಳವರೆಗೆ ಮಾತ್ರ ಜೀವಿಸಿ ಹೊರಟು ಹೋದ ವ್ಯಕ್ತಿಯೋರ್ವರಿಗೆ ಇವತ್ತು ಜಾಗತಿವಾಗಿ ಇರುವ ಅನುಯಾಯಿಗಳ ಸಂಖ್ಯೆಯನ್ನು ನೋಡಿದರೆ ಮತ್ತು ಈ ಸಂಖ್ಯೆಯಲ್ಲಿ ಪ್ರತಿದಿನ ವೃದ್ಧಿಯಾಗುತ್ತಿರುವ ಪ್ರಮಾಣವನ್ನು ಪರಿಗಣಿಸಿದರೆ, ಅವರೆಷ್ಟು ಅನನ್ಯ, ಅಮೂಲ್ಯ, ಅಪ್ರತಿಮ, ಅನೂಹ್ಯ, ಅಸಾಧಾರಣ, ಅದ್ಭುತ ವ್ಯಕ್ತಿ ಎಂಬುದರ ಅರಿವು ಉಂಟಾಗುತ್ತದೆ. ಪ್ರವಾದಿ ಮುಹಮ್ಮದ್(ಸ) ಇವತ್ತಿಗೂ ಜಾಗತಿಕವಾಗಿ ಅತ್ಯಂತ ಆಕರ್ಷಣೀಯ ವ್ಯಕ್ತಿ. ಅವರ ವಿಚಾರಧಾರೆಯಲ್ಲಿ ಅನುರಕ್ತರಾಗುವಷ್ಟು ಮಂದಿ ಜಗತ್ತಿನ ಇನ್ಯಾವ ವಿಚಾರಧಾರೆಯಲ್ಲೂ ಅನುರಕ್ತರಾಗುತ್ತಿಲ್ಲ. ಅವರು ಮಂಡಿಸಿದ ಪವಿತ್ರ ಕುರ್‌ಆನ್ ಎಂಬ ಸಿದ್ಧಾಂತದಲ್ಲಿ ಹೊಸತನವಿದೆ. ಅದರ ತರ್ಕ ವಿಧಾನ, ವಾದ ಶೈಲಿ, ನಿಖರ ಮತ್ತು ನಿಸ್ಪೃಹ ಮಾತಿನ ಧಾಟಿಗೆ

ಪ್ರತಿದಿನ ವಿಶ್ವಾದ್ಯಂತ ಮನ ಸೋಲುವವರಿದ್ದಾರೆ. ಅದರ ಅನುಯಾಯಿಗಳಾಗುತ್ತಿದ್ದಾರೆ. ಓದಿದಷ್ಟೂ ಹೊಸ ಹೊಳಹುಗಳನ್ನು ಕೊಡಬಲ್ಲ ಅಚ್ಚರಿಯ ಗ್ರಂಥವಾಗಿ ಅದು ಗುರುತಿಸಿಕೊಳ್ಳುತ್ತಿದೆ. ಸಾಮಾನ್ಯವಾಗಿ, ಯಾವುದೇ ಒಂದು ಗ್ರಂಥದ ಪಾಲಿಗೆ 1500 ವರ್ಷಗಳು ಎಂಬುದು ಬಹಳ ದೀರ್ಘ ಅವಧಿ ಏನಲ್ಲ. ಯಾವುದೇ ಗ್ರಂಥದ ಭಾಷಗೆ, ನಿರೂಪಣೆಗೆ, ಮಂಡನಾ ಶೈಲಿಗೆ, ವಿಷಯಕ್ಕೆ ಸ್ಥಳೀಯತೆ ಇರುತ್ತೆ. ಒಂದು ನಿರ್ದಿಷ್ಟ ಭೌಗೋಳಿಕ ವ್ಯಾಪ್ತಿ ಇರುತ್ತೆ. ಈ ಭೌಗೋಳಿಕ ವ್ಯಾಪ್ತಿಯನ್ನು ಮೀರಿ ಆ ಭಾಷೆ ಮತ್ತು ಅದು ಹೇಳುವ ವಿಷಯ ಜಾಗತೀಕರಣಗೊಳ್ಳುವುದು ಹಾಗೂ ಸರ್ವರನ್ನೂ ಅಕರ್ಷಿತಗೊಳಿಸುವುದು ಸಣ್ಣ ಸಾಧನೆ ಏನಲ್ಲ. ನೇರವಾಗಿ ಹೇಳುವುದಾದರೆ ಪವಿತ್ರ ಕುರ್‌ಆನ್‌ನ ಭಾಷೆ ಅರಬಿ. ಅದರ ವಿಷಯ ಮಂಡನಾ ಶೈಲಿಯೂ ಸ್ಥಳೀಯ ಮೂಲದ್ದೇ. ಅದು ಕೊಡುವ ಉದಾಹರಣೆಗಳು, ಘಟನೆಗಳು, ಉಪಮೆಗಳು, ಕತೆಗಳು, ಹೋಲಿಕೆಗಳು.. ಎಲ್ಲವೂ ಅರಬ್ ರಾಷ್ಟ್ರಗಳನ್ನೇ ಅವಲಂಬಿತವಾಗಿರುವಂತಹವು. ಅದು ಕರ್ನಾಟಕದ ಕಾಫಿ ಬೀಜವನ್ನು ಉದಾಹರಣೆಯಾಗಿ ಕೊಡುವುದಿಲ್ಲ. ಕೋಳಿಯ ಪ್ರಸ್ತಾಪ ಅದರಲ್ಲಿ ಸಿಗಲಾರದು. ಗುಲಾಬಿ, ಮಲ್ಲಿಗೆ, ಸೇವಂತಿಗೆ..ಗಳ ಉಲ್ಲೇಖ ಅದರಲ್ಲಿಲ್ಲ. ಪೇರಳೆ, ಮಾವು, ತೆಂಗು, ಅಡಿಕೆ, ಕಾಳುಮೆಣಸು, ಬಟಾಟೆ, ಬಸಳೆ, ಮಾಂಜಿ ಮೀನು, ಬಂಗುಡೆ, ಭೂತಾಯಿ... ಇಂಥವುಗಳನ್ನು ಆ ಗ್ರಂಥ ಪಟ್ಟಿ ಮಾಡಿಲ್ಲ. ನಮ್ಮದೇ ನಡುವಿನ ಭೂತ ಕೋಲ, ಗಣೇಶೋತ್ಸವ, ದೀಪಾವಳಿ, ಜೀರ್ಣೋದ್ಧಾರ, ಕಂಬಳ, ಪಾಡ್ದನ ಮುಂತಾದುವುಗಳ ಬಗ್ಗೆ ಆ ಗ್ರಂಥ ನೇರವಾಗಿ ಉಲ್ಲೇಖಿಸಿಯೇ ಇಲ್ಲ. ಹೀಗೆ ಪವಿತ್ರ ಕುರ್‌ಆನ್ ನೇರವಾಗಿ ಹೆಸರೆತ್ತಿ ಹೇಳದ ಇಂಥ ನೂರಾರು ವಿಷಯಗಳನ್ನು ಇಲ್ಲಿ ಪಟ್ಟಿ ಮಾಡಬಹುದು. ಕೇವಲ ಕರ್ನಾಟಕಕ್ಕೆ ಸಂಬಂಧಿಸಿಯೇ ಹೀಗೆ ನೂರಾರು ಉಲ್ಲೇಖರಹಿತ ಅಂಶಗಳನ್ನು ಎತ್ತಿ ಹೇಳಬಹುದೆಂದಾದರೆ, ಇನ್ನು ಇಡೀ ಭಾರತಕ್ಕೆ ಸಂಬಂಧಿಸಿ ಮತ್ತು ಭಾರತದಂಥ 200 ಕ್ಕಿಂತಲೂ ಅಧಿಕ ವಿಶ್ವ ರಾಷ್ಟ್ರಗಳಿಗೆ ಸಂಬಂಧಿಸಿ ಇಂಥ ಅಂಶಗಳು ಎಷ್ಟಿರಬಹುದು? ಭೂಮಂಡಲದ ಪ್ರತಿ ರಾಷ್ಟ್ರದ ಪ್ರತಿ ಗ್ರಾಮಕ್ಕೂ ಅದರದೇ ಆದ ಸ್ಥಳೀಯತೆ ಇರುತ್ತದೆ. ಭಾಷಾ ವೈವಿಧ್ಯತೆ ಇರುತ್ತದೆ. ಆಹಾರ, ಆಚಾರ, ಉಡುಪು, ಅಭಿರುಚಿ, ಸಾಂಸ್ಕೃತಿಕ ವೈಶಿಷ್ಟ್ಯಗಳಿರುತ್ತವೆ. ಈ ಎಲ್ಲ ವೈವಿಧ್ಯತೆಗಳನ್ನು ಒಂದೇ ಕಡೆ ರಾಶಿ ಹಾಕಿ ನೋಡುವುದಾದರೆ ಪವಿತ್ರ ಕುರ್‌ಆನ್‌ನಲ್ಲಿ ಇವುಗಳ ನೇರ ಉಲ್ಲೇಖ ಒಂದು ಬಿಂದುವಿನಷ್ಟೂ ಇಲ್ಲ. ಇಷ್ಟಿದ್ದೂ 1500 ವರ್ಷಗಳೆಂಬ ಈ ಹ್ರಸ್ವ ಅವಧಿಯಲ್ಲಿ ಈ ಎಲ್ಲ ವೈವಿಧ್ಯತೆಗಳುಳ್ಳ ಜನರೊಂದಿಗೆ ಮತ್ತು ಜಗತ್ತಿನೊಂದಿಗೆ ಸಂವಾದಿಸಲು ಪವಿತ್ರ ಕುರ್‌ಆನ್‌ಗೆ ಹೇಗೆ ಸಾಧ್ಯವಾಯಿತು? ಈ 1500 ವರ್ಷಗಳ ಅವಧಿಯಲ್ಲಿ 160 ಕೋಟಿಗಿಂತಲೂ ಅಧಿಕ ಅನುಯಾಯಿಗಳನ್ನು (ಮೃತ ಪಟ್ಟವರನ್ನು ಹೊರತುಪಡಿಸಿ) ಅದು ಪಡೆದುಕೊಂಡದ್ದು ಹೇಗೆ? ಅರಬಿ ಭಾಷೆಯಲ್ಲಿರುವ ಮತ್ತು ಅರಬ್ ಸಾಂಸ್ಕೃತಿಕ ವಲಯದ ಹೊರಗಿನ ನೇರ ಛಾಪನ್ನು





ಹೊಂದಿಲ್ಲದ ಗ್ರಂಥವೊಂದು ಎಲ್ಲರ ಗ್ರಂಥವಾದದ್ದು ಹೇಗೆ ಮತ್ತು ಯಾಕೆ? ಪ್ರವಾದಿ ಮುಹಮ್ಮದ್‌ರಿಗೆ(ಸ) ಪವಿತ್ರ ಕುರ್‌ಆನಿನ ಮೊದಲ ವಾಣಿ ಅವತೀರ್ಣವಾದದ್ದು ಮಕ್ಕಾದ ಹೊರ ವಲಯದಲ್ಲಿರುವ, ಕಲ್ಲು-ಬಂಡೆಗಳಿಂದ ಆವೃತ್ತವಾಗಿರುವ ಬೆಟ್ಟದ ಸಣ್ಣ ಪೊಟರೆಯಂಥ ಗುಹೆ(ಹಿರಾ)ಯಲ್ಲಿ. ಅಂಥ ಬೆಟ್ಟವು ಆ ಪರಿಸರ ಪ್ರದೇಶವನ್ನು ಬಿಟ್ಟರೆ ಉಳಿದ ಕಡೆ ಕಾಣಸಿಗುವ ಸಾಧ್ಯತೆ ಬಹಳ ಕಡಿಮೆ. ಕರ್ನಾಟಕದ ಪಶ್ಚಿಮ ಘಟ್ಟದ ಹಸಿರು ಮರಗಳಿಂದ ತುಂಬಿದ ಬೆಟ್ಟದಿಂದ ಕಣ್ತುಂಬಿಸಿಕೊಂಡವರಿಗೆ ಜಬಲುನ್ನೂರ್ ಎಂಬ ಆ ಪರ್ವತವನ್ನು (ಇದರಲ್ಲೇ ಹಿರಾ ಗುಹೆ ಇರುವುದು) ನೋಡಿದರೆ ಗಾಢ ನಿರಾಶೆಯಾಗುವುದು ಸಹಜ. ಬಂಡೆಗಳ ಹೊರತು ಜಬಲುನ್ನೂರಿನಲ್ಲಿ (ನೂರ್ ಪರ್ವತ) ಹಸಿರು ಅನ್ನುವಂತಹದ್ದು ಏನೇನೂ ಇಲ್ಲ. ಕಲ್ಲುಗಳನ್ನೇ ಹಾಸಿಕೊಂಡು ಉದ್ದಕ್ಕೆ ಮಲಗಿರುವ ಪರ್ವತ. ಬಿಸಿಲಿನ ಸಮಯದಲ್ಲಂತೂ ಅತ್ತ ಸರಿಯಾಗಿ ನೋಡಲೂ ಆಗದು. ಬರೇ ಬೋಳು ಬೆಟ್ಟ. ಇನ್ನು ನಮ್ಮದೇ ಕುದುರೆಮುಖ ರಕ್ಷಿತಾರಣ್ಯ, ಚಾರ್ಮಾಡಿ ಘಾಟಿ, ಶಿರಾಡಿ ಘಾಟಿ, ಕೋಟೆ-ಕೊತ್ತಲಗಳು, ತೋಡುಗಳು, ಕಾಲುವೆಗಳು, ಗದ್ದೆ, ತೋಟ, ಕನ್ನಂಬಾಡಿ ಅಣೆಕಟ್ಟು, ಜೋಗ... ಇತ್ಯಾದಿಗಳನ್ನು ಕಲ್ಪಿಸಿಕೊಳ್ಳುವುದಕ್ಕೂ ಸಾಧ್ಯವಿಲ್ಲದಷ್ಟು ಮಕ್ಕಾ ಬರೇ ಒಣ ಪ್ರದೇಶ. ಬೋರು ನೆಲ. ಆದರೂ ಈ ನೆಲದಲ್ಲಿ ಅವತೀರ್ಣಗೊಂಡ ವಾಣಿಯೊಂದು ಆ ನೆಲಕ್ಕೆ ತದ್ವಿರುದ್ಧವಾದ ಮಲೆನಾಡಿಗೆ ಒಗ್ಗಿಕೊಂಡದ್ದು ಹೇಗೆ? ಅಲ್ಲಿನ ಜನ ಅದನ್ನು ಸ್ವಾಗತಿಸಿದ್ದು ಮತ್ತು ನೆಚ್ಚಿಕೊಂಡದ್ದು ಹೇಗೆ? ಇದು ಕೇವಲ ಮಲೆನಾಡಿಗೆ ಅಥವಾ ಕರ್ನಾಟಕಕ್ಕೆ ಸಂಬಂಧಿಸಿದ ಸಂಗತಿ ಮಾತ್ರ ಅಲ್ಲ. ಈ ಭೂಗೋಳದ ಎಲ್ಲ ಖಂಡಗಳೂ ಮತ್ತು ಕರಿಯ-ಬಿಳಿಯ, ನೀಳಕಾಯ-ಕುಬ್ಜಕಾಯ, ಹೆಣ್ಣು-ಗಂಡು.. ಎಲ್ಲರೂ ಏಕ ಪ್ರಕಾರವಾಗಿ ಆ ಒಣಭೂಮಿಯ ವಾಣಿಯನ್ನು ತಮ್ಮದಾಗಿಸಿಕೊಂಡಿದ್ದಾರಲ್ಲ, ಅದಕ್ಕಿರುವ ಪ್ರೇರಣೆಯೇನು? ಬಹುಶಃ ಪವಿತ್ರ ಕುರ್‌ಆನಿನ ಅತಿದೊಡ್ಡ ಸಾಮರ್ಥ್ಯ ಅದು. ಅದು ಭೌಗೋಳಿಕ, ಪ್ರಾದೇಶಿಕ, ಸಾಂಸ್ಕೃತಿಕ ಮತ್ತು ಸ್ಥಾನಿಕ ಮಿತಿಗಳನ್ನು ನಗಣ್ಯಗೊಳಿಸುವ ಸಾಮರ್ಥ್ಯ ಉಳ್ಳದ್ದು. ಅದರ ನಿಜವಾದ ಭಾಷೆ ಅರಬಿಯಲ್ಲ, ಮನುಷ್ಯ ಭಾಷೆ. ಮನುಷ್ಯನಲ್ಲಿ ಅಂತರಂಗದ ಒಂದು ಭಾಷೆಯಿದೆ. ಅದಕ್ಕೆ ಲಿಪಿಯಿಲ್ಲ. ಅದೊಂದು ಬಗೆಯ ಸಂವೇದನೆ. ಭಾವ ತೀವ್ರತೆ. ಈ ಅಂತರಂಗದ ಭಾಷೆಯನ್ನು ಮೀಟುವ ಶಕ್ತಿ ಪವಿತ್ರ ಕುರ್‌ಆನ್‌ಗಿದೆ. ಅದನ್ನು ಓದುವ ಪ್ರತಿ ವ್ಯಕ್ತಿಯನ್ನೂ ಅದು ಬೇರೆ ಬೇರೆಯಾಗಿಯೇ ಕಾಡುತ್ತದೆ. ಪ್ರತಿಯೋರ್ವರಲ್ಲೂ ಭಿನ್ನ ವಿಚಾರಮಂಥನವನ್ನು ನಡೆಸುತ್ತದೆ. ಅದನ್ನು ಅಧ್ಯಯನ ನಡೆಸುವ ಯಾರಿಗೂ ಅದರ ಗುರಿ ಅರಬಿಗಳು ಎಂದು ಅನಿಸುವುದೇ ಇಲ್ಲ. ನಮ್ಮ ನಡುವೆ ಇರುವ ಇತರ ಗ್ರಂಥಗಳಿಗೂ ಪವಿತ್ರ ಕುರ್‌ಆನಿಗೂ ನಡುವೆ ಇರುವ ಬಹುದೊಡ್ಡ ವ್ಯತ್ಯಾಸ ಇದು. ಅದು ಓದುವವರ ಸ್ವತ್ತು. ಓದುವವರೇ ಅದರ ಸಂಬೋಧಿತರು. ಯಾರು ಅದರ ಅಧ್ಯಯನಕ್ಕೆ ತೊಡಗುತ್ತಾರೋ ಅವರಿಗೆ

‘ಇದು ತನ್ನೊಂದಿಗೇ ಮಾತಾಡುತ್ತಿದೆ’ ಎಂದು ಅನಿಸುವಂತಹ ಶೈಲಿ ಅದರದು. ಅದು ಮನುಷ್ಯನನ್ನು ವಿಶ್ವಮಾನವಗೊಳಿಸ ಬಯಸುತ್ತದೆ. ಭೌಗೋಳಿಕ ಗಡಿಗಳನ್ನೆಳೆದು ಸಂಕುಚಿತಗೊಂಡ ಜನಸಮೂಹವನ್ನು ಗಡಿರಹಿತ ವಿಶಾಲ ಪ್ರಪಂಚಕ್ಕೆ ಕರೆದೊಯ್ಯುತ್ತದೆ. ನಾಸ್ತಿಕನಿ/ಳಿಗೂ, ವಿವಾಹಿತನಿ/ಳಿಗೂ, ಅವಿವಾಹಿತನಿ/ಳಿಗೂ, ಹೆಣ್ಣಿಗೂ–ಗಂಡಿಗೂ, ತಮ್ಮ ಇಚ್ಛೆಯಂತೆ (ಷರತ್ತು ಬದ್ಧ) ಬದುಕುವ ಸ್ವಾತಂತ್ರ್ಯವನ್ನು ನೀಡಬಯಸುತ್ತದೆ. ಲೆಕ್ಕಾಚಾರದ ಜೀವನ ನಡೆಸುವುದರ ಪರ ಅದು ಮಾತಾಡುತ್ತದೆ. ಯರ್‍ರಾಬಿರ್‍ರಿ ಬದುಕಿಗೆ ನಿಶ್ಚಿತ ಮತ್ತು ನಿರ್ದಿಷ್ಟ ಶಿಸ್ತನ್ನು ತರುವುದಕ್ಕೆ ಅದು ಅತೀವ ಪ್ರಾಮುಖ್ಯತೆ ನೀಡುತ್ತದೆ. ಅತೀ ಕಡಿಮೆ ಸಂಖ್ಯೆಯಲ್ಲಿ ಶಿಕ್ಷೆಯ ಪ್ರಸ್ತಾಪವುಳ್ಳ, ಅತಿ ಕಡಿಮೆ ಸಂಖ್ಯೆಯಲ್ಲಿ ನಿಷೇಧಗಳುಳ್ಳ, ಅತ್ಯಂತ ಸರಳ ಮತ್ತು ಅತ್ಯಂತ ಸುಲಭ ಆರಾಧನಾ ಕರ್ಮಗಳ ಪ್ರಸ್ತಾಪವುಳ್ಳ ಗ್ರಂಥ ಅದು. ವ್ಯಕ್ತಿ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ, ಸ್ತ್ರೀ ಸ್ವಾತಂತ್ರ್ಯ, ಆರಾಧನಾ ಸ್ವಾತಂತ್ರ್ಯ ಇರುವ ಮಾನವ ಸಮಾನತೆ, ಸಹಿಷ್ಣುತೆ, ಘನತೆಗಳನ್ನು ಪ್ರಬಲವಾಗಿ ಪ್ರತಿಪಾದಿಸುವ ಮತ್ತು ಈ ವಿಷಯದಲ್ಲಿ ಯಾವ ರಾಜಿಯನ್ನೂ ಮಾಡಿಕೊಳ್ಳಲು ಸಿದ್ಧವಾಗದ ಗ್ರಂಥವೇ ಪವಿತ್ರ ಕುರ್‌ಆನ್. ಇಂಥ ಗ್ರಂಥದ ಅವತೀರ್ಣಕ್ಕೆ ವೇದಿಕೆಯಾದ ಮಕ್ಕಾಕ್ಕೆ ತಲುಪುವುದೆಂದರೆ ಅದೊಂದು ವಿಶೇಷ ಘಳಿಗೆ. ನಾನು ಪುಳಕಿತಗೊಂಡೆ. ಜಿದ್ದಾ ವಿಮಾನ ನಿಲ್ದಾಣದಿಂದ ನಮ್ಮನ್ನು ಕರೆತಂದ ಬಸ್ಸು ಬಹುಮಹಡಿ ಹೊಟೇಲ್‌ನ ಪಕ್ಕ ತಂದು ಇಳಿಸಿತು. ಇನ್ನು ಮಕ್ಕಾದಲ್ಲಿ ಇರುವಷ್ಟು ದಿನ ಈ ಹೊಟೇಲ್‌ನ ಕೊಠಡಿಯಲ್ಲಿ ನಾವೆಲ್ಲ ಉಳಿದುಕೊಳ್ಳಬೇಕು. ಬಹು ಅಂತಸ್ತಿನ ದೊಡ್ಡ ಹೊಟೇಲು. 2000 ಮಂದಿ ತಂಗಬಹುದಾದಷ್ಟು ದೊಡ್ಡದು. 158 ಮಂದಿಯ ನಮ್ಮ ಉಮ್ರಾ ತಂಡವು ಭಾರ ಬ್ಯಾಗನ್ನೆತ್ತಿಕೊಂಡು ತಂತಮ್ಮ ಕೊಠಡಿಯನ್ನು ಪತ್ತೆ ಹಚ್ಚಲು ಪ್ರಾರಂಭಿಸಿತು. ಮಕ್ಕಳು, ಮಹಿಳೆಯರು ಮತ್ತು ಹಿರಿಯರಿರುವ ತಂಡವೊಂದರಲ್ಲಿ ಮತ್ತು ತೀರಾ ಅಪರಿಚಿತವಾಗಿರುವ ಸನ್ನಿವೇಶದಲ್ಲಿ ಥಟ್ಟನೆ ಇವೆಲ್ಲ ಮುಗಿದು ಹೋಗುವಂಥದ್ದಲ್ಲ. ನಾನು ಕೊಠಡಿ ಸೇರುವಾಗ ರಾತ್ರಿ ಎರಡೂವರೆ ಗಂಟೆ. ನನ್ನ ಜತೆ ಕೊಠಡಿಯಲ್ಲಿ ನಮ್ಮ ಉಮ್ರಾ ತಂಡದ ಅಮೀರ್ (ನಾಯಕ) ವಿ.ಟಿ. ಅಬ್ದುಲ್ಲ ಕೋಯ ತಂಙಳ್, ಯಾತ್ರೆಯ ವ್ಯವಸ್ಥಾಪಕ ಸಹಿತ ಆರು ಮಂದಿ ಇದ್ದೆವು.





# ಭಾಗ: 6

ಬೆಳಿಗ್ಗೆ ಎಂಟೂವರೆ ಗಂಟೆಗೆ ನಾನು ಹೊಟೇಲ್‌ನ ನೆಲ ಅಂತಸ್ತಿನಲ್ಲಿ ಬಂದು ನಿಂತಿದ್ದೆ. ನನ್ನ ಕಣಕಣದಲ್ಲೂ ಉಮ್ರಾ ನಿರ್ವಹಿಸುವ ಉತ್ಸಾಹ ಇತ್ತು. 9 ಗಂಟೆಗೆ ನಮ್ಮ ತಂಡ ಜೊತೆಯಾಗಿ ಉಮ್ರಾ ನಿರ್ವಹಿಸಲು ಹೊರಡುವುದೆಂದು ಅಮೀರ್ ಆ ಮೊದಲೇ ಸೂಚನೆ ನೀಡಿದ್ದರು. ಉಮ್ರಾದ ವಿಧಾನ, ತವಾಫ್‌ನ ಆರಂಭ, ಜನಜಂಗುಳಿಯಲ್ಲಿ ಕಳೆದು ಹೋಗದಂತೆ ವಹಿಸಬೇಕಾದ ಎಚ್ಚರಿಕೆಗಳು, ತವಾಫ್‌ನಲ್ಲಿ ಹೇಳಬಹುದಾದ ದ್ಸಿಕ್ರ್‌ಗಳು, ಮಕಾಮು ಇಬ್ರಾಹೀಮ್‌ನಲ್ಲಿ ಎರಡು ರಕಅತ್ ನಮಾಝ್, ಸಈಯ ವಿಧಾನ... ಎಲ್ಲವನ್ನೂ ಬೆಳಿಗ್ಗೆ ನಡೆದ ಸಭೆಯಲ್ಲಿ ಅಮೀರ್ ವಿವರಿಸಿದ್ದರು. ನನ್ನ ಗೆಳೆಯ, ಅವರ ಕುಟುಂಬ ಹಾಗೂ ನಾನು ಜೊತೆಯಾಗಿ ಉಮ್ರಾ ನಿರ್ವಹಿಸಲು ತೀರ್ಮಾನಿಸಿದ ಕಾರಣ ತಂಡದಿಂದ ಬೇರ್ಪಟ್ಟು ನಾವೇ ಪುಟ್ಟ ತಂಡವಾಗಿ ಹೊರಟೆವು. ಈ ಮೊದಲು ಓದಿದ ಮತ್ತು ಚಿತ್ರವಾಗಿ ನೋಡಿದ ಎಲ್ಲವೂ ನಿಜವಾಗುವ ಸಂದರ್ಭವೆಂಬ ನೆಲೆಯಲ್ಲಿ ನಾನು ರೋಮಾಂಚಿತನಾಗಿದ್ದೆ. ಎರಡು ತುಂಡು ಬಟ್ಟೆಯನ್ನುಟ್ಟ ಪುಟ್ಟ ತಂಡ ನಮ್ಮದಾಗಿದ್ದರೂ ನಿರೀಕ್ಷೆಯೇನೂ ಪುಟ್ಟದಾಗಿರಲಿಲ್ಲ. ನಮ್ಮ ಕೊಠಡಿಯಿಂದ ಮಸ್ಜಿದುಲ್ ಹರಾಮ್‌ಗೆ ಐದಾರು ನಿಮಿಷಗಳ ಕಾಲ್ನಡಿಗೆ ದೂರ. ನಿರೀಕ್ಷೆಗಳ ಭಾರ ಹೊತ್ತು ನಾನು ಹೊರಟೆ. ಮಸ್ಜಿದುಲ್ ಹರಾಮನ್ನು ಪ್ರವೇಶಿಸಿದೆ. ಕೆಲವು ಹೆಜ್ಜೆಗಳನ್ನಿಟ್ಟ ಬಳಿಕ ದೂರದಿಂದ ಕಅಬಾವನ್ನು ಕಂಡೆ. ಆ ಕ್ಷಣ ಅಪೂರ್ವ. ಭಾವ ತೀವ್ರತೆಗೆ ನಮ್ಮನ್ನು ದೂಡುವ ಸನ್ನಿವೇಶ. ಅದೊಂದು ವಿಶೇಷ ಮುಖಾಮುಖಿ. ಬದುಕಿನಲ್ಲಿ ನಾನು ಆ ವರೆಗೆ ಎಷ್ಟು ಬಾರಿ ಯಾರ್‍ಯಾರಿಗೋ ಮುಖಾಮುಖಿಯಾಗಿದ್ದೆ. ಯಾವ್ಯಾವುದಕ್ಕೋ ಮುಖಾಮುಖಿಯಾಗಿದ್ದೆ. ನನ್ನ ಪತ್ನಿಯೊಂದಿಗೆ ಮೊದಲ ಬಾರಿ ಆದ ಮುಖಾಮುಖಿ, ಸನ್ಮಾರ್ಗದ ಸಂಪಾದಕೀಯ ಬಳಗಕ್ಕೆ ಸೇರ್ಪಡೆಗೊಳ್ಳುವ ಉದ್ದೇಶದಿಂದ ನಡೆಸಲಾದ ಸಂದರ್ಶನದಲ್ಲಿ ಸಂಪಾದಕರಾದ ಇಬ್ರಾಹೀಮ್ ಸಈದ್‌ರೊಂದಿಗೆ ಮೊದಲ ಬಾರಿ ಆದ ಮುಖಾಮುಖಿ, ತಾಜ್‌ಮಹಲನ್ನು ಅದರ ಬುಡದಲ್ಲಿ ನಿಂತು ವೀಕ್ಷಿಸಿದ

ಆ ಕ್ಷಣ, ನಾನು ಸನ್ಮಾರ್ಗ ಸಂಪಾದಕನಾಗಿ ಆಯ್ಕೆಯಾಗಿರುವ ವಿಷಯವನ್ನು ಆಲಿಸಿದ ಆ ಸಂದರ್ಭ, ನನ್ನ ಮೊದಲ ಸಾಹಿತ್ಯ ಕೃತಿ 'ದಾಯಿರ' ಕಥಾ ಸಂಕಲನವು ಬಿಡುಗಡೆಗೊಂಡ ಆ ಕ್ಷಣದಲ್ಲಿ ನನಗೂ ಆ ಸಮಾರಂಭಕ್ಕೂ ನಡುವೆ ನಡೆದ ಮುಖಾಮುಖಿ... ಇವು ಯಾವುವೂ ಕಅಬಾ ಮುಖಾಮುಖಿಯ ವೇಳೆ ನನಗಾದ ಅನುಭವಕ್ಕೆ ಸಾಟಿಯಲ್ಲ. ಅದೊಂದು ವಿಶೇಷ ಅನುಭೂತಿ. ಪದಗಳಿಗೆ ನಿಲುಕದ ಸಂವೇದನೆ. ಭಾವ ತೀವ್ರತೆಯ ಕಟ್ಟಕಡೆಗೆ ತಲುಪಿದಂಥ ಅನುಭವ. ನಾನು ಮೊದಲ ಬಾರಿ ಆಧ್ಯಾತ್ಮಿಕ ಒಂಟಿತನವನ್ನು ಅನುಭವಿಸಿದೆ. ಈ ಒಂಟಿತನದ ತೀವ್ರತೆ ಎಷ್ಟು ಪ್ರಭಾವಶಾಲಿಯಾಗಿತ್ತೆಂದರೆ, ಜೊತೆಗಿರುವವರನ್ನೆಲ್ಲ ಮರೆಯುವಷ್ಟು. ಪರಿಸರವನ್ನೇ ಕಡೆಗಣಿಸುವಷ್ಟು. ನಮಾಝ್‌ನಲ್ಲಿ ಕೂಡಾ ಈ ಮಟ್ಟದ ಒಂಟಿತನವನ್ನು ಅನುಭವಿಸಲು ಈವರೆಗೆ ನನಗೆ ಸಾಧ್ಯವಾಗಿಲ್ಲವೆಂದೇ ಹೇಳಬಹುದು. ಕಅಬಾವನ್ನು ಮೊದಲ ಬಾರಿ ಬರಿಗಣ್ಣಲ್ಲಿ ಕಂಡ ತಕ್ಷಣ ಮಾಡಲಾಗುವ ಪ್ರಾರ್ಥನೆಯನ್ನು ಅಲ್ಲಾಹನು ಸ್ವೀಕರಿಸುತ್ತಾನೆ ಎಂಬ ನೆಲೆಯಲ್ಲಿ, ತಿಂಗಳ ಹಿಂದಷ್ಟೇ ನನ್ನನ್ನು ಅಗಲಿದ ಅಪ್ಪನಿಗಾಗಿ ಪ್ರಾರ್ಥಿಸಿದೆ. ತುಂಬು ಗರ್ಭಿಣಿ ಪತ್ನಿಗಾಗಿ ಪ್ರಾರ್ಥಿಸಿದೆ, ತಾಯಿಗಾಗಿ ಪ್ರಾರ್ಥಿಸಿದೆ ಮತ್ತು ಪ್ರಾರ್ಥನೆಗಾಗಿ ವಿನಂತಿಸಿದ ಎಲ್ಲರನ್ನೂ ಸ್ಮರಿಸಿಕೊಂಡೆ. ವಿಶೇಷವಾಗಿ ತೀವ್ರ ಅನಾರೋಗ್ಯಕ್ಕೆ ತುತ್ತಾಗಿದ್ದ ನನ್ನೆರಡು ಆತ್ಮೀಯ ಗೆಳೆಯರನ್ನೂ. ಸಾಮಾನ್ಯವಾಗಿ ಪ್ರಾರ್ಥನೆ ಎಂಬುದು ನಮ್ಮ ಬದುಕಿನ ಅವಿಭಾಜ್ಯ ಅಂಗ. ನಿತ್ಯ ನಾವು ಪ್ರಾರ್ಥಿಸುತ್ತೇವೆ. ನಿತ್ಯ ಒಂದಲ್ಲ ಒಂದು ಸಮಯದಲ್ಲಿ ಪ್ರಾರ್ಥನೆ ಎಂಬ ಪದವನ್ನು ಯಾವುದೋ ಕಾರಣಕ್ಕಾಗಿ ಉಚ್ಚರಿಸುತ್ತೇವೆ. ಒಂದು ರೀತಿಯಲ್ಲಿ, ಬಳಸಿ ಬಳಸಿ ಸವೆದು ಹೋಗಿರುವ ಮತ್ತು ಅತಿ ನೀರಸವಾಗಿ ಬಿಟ್ಟಿರುವ ಮೂರಕ್ಷರ ಇದು. ನಮ್ಮೊಳಗೆ ಪುಳಕವನ್ನೂ ರೋಮಾಂಚನವನ್ನೂ ಭಾವತೀವ್ರತೆಯನ್ನೂ ಹುಟ್ಟು ಹಾಕಬೇಕಿರುವ ಪ್ರಾರ್ಥನೆಯು (ದುಆ) ಬರೇ ತುಟಿ ಸೇವೆಯ ಮಟ್ಟಕ್ಕೆ ಬಹುತೇಕ ಬಾರಿ ಇಳಿದು ಬಿಡುತ್ತದೆ. ಹಾಗಂತ, ಇದಕ್ಕೆ ಅಪವಾದ ಇಲ್ಲ ಎಂದಲ್ಲ. ಆದರೆ, ದಿನದ ಐದು ಹೊತ್ತಿನ ನಮಾಝ್‌ನ ಬಳಿಕ ಪ್ರಾರ್ಥನೆ ಮಾಡಿ ಮಾಡಿ ಅಭ್ಯಾಸವಾಗಿರುವುದರಿಂದಲೋ ಏನೋ ಅನೇಕ ಬಾರಿ ಈ ಪ್ರಾರ್ಥನೆಗೆ ಭಾವ ತೀವ್ರತೆಯನ್ನು ತುಂಬಲು ನಮ್ಮಿಂದ ಸಾಧ್ಯವಾಗುವುದಿಲ್ಲ. ನಮಾಝ್ ಮುಗಿದ ಬಳಿಕ ಬೆರಳುಗಳು ದ್ಸಿಕ್ರ್‌ಗಳನ್ನು ಎಣಿಸುತ್ತವೆ. ನಂತರ ಕೈಗಳು ಯಾಂತ್ರಿಕವಾಗಿ ಜೊತೆ ಸೇರುತ್ತವೆ. ಎದೆಯ ಎತ್ತರಕ್ಕೆ ಬಂದು ನಿಲ್ಲುತ್ತವೆ. ತುಟಿಗಳಿಂದ ಅರಬಿ ಪದಗಳ ಉಚ್ಚಾರಣೆ ಆರಂಭವಾಗುತ್ತವೆ. ಅರಬಿ ಪದಗಳು ಏನನ್ನು ಪ್ರತಿನಿಧಿಸುತ್ತದೋ ಮತ್ತು ಯಾವ ಆಗ್ರಹವನ್ನು ವ್ಯಕ್ತಪಡಿಸುತ್ತದೋ ಅವ್ಯಾವುದನ್ನೂ ಪ್ರತಿನಿಧಿಸದ ದೇಹ ಭಾಷೆ (Body Language) ಪ್ರಾರ್ಥಿಸುವವನ/ಳ/ದ್ದಾಗಿರುತ್ತದೆ. ಒಂದು ಸಂಪ್ರದಾಯವನ್ನು ಪೂರೈಸುವ ಗಡಿಬಿಡಿಯ ಆಚೆಗೆ ಪ್ರಾರ್ಥನೆಯಲ್ಲಿ ಕಳೆದುಹೋಗುವುದಕ್ಕೆ ಬಹುತೇಕ ನಮ್ಮಿಂದ ಸಾಧ್ಯವಾಗುವುದಿಲ್ಲ. ಪ್ರಾರ್ಥಿಸುತ್ತಿರುವಾಗಲೂ





ನಮಗೆ ಹೊರಗಿನ ಸದ್ದು ಕೇಳಿಸುತ್ತದೆ. ಪಕ್ಕದವರ ಮಾತು ಅರ್ಥವಾಗುತ್ತದೆ. ಇನ್ನೋರ್ವರ ಮುಗುಳ್ನಗೆಗೆ ಪ್ರಾರ್ಥನೆಯಲ್ಲಿರುತ್ತಾ ಪ್ರತಿಕ್ರಿಯಿಸಲು ಸಾಧ್ಯವಾಗುತ್ತದೆ. ಮಧ್ಯೆ ಮಧ್ಯೆ ನಮ್ಮ ದಿನಚರಿಯ ನೆನಪುಗಳೂ ಬಂದು ಹೋಗುತ್ತಿರುತ್ತವೆ. ಮಗಳಿಗೆ ಚಾಕಲೇಟು ತರುವ ವಿಷಯ, ಮಗನಿಗೆ ಪೆನ್ನು ಖರೀದಿಸಬೇಕಾದದ್ದು, ವ್ಯಾಪಾರ–ವಹಿವಾಟು, ತನಗೆ ಬರಬೇಕಾದ ಹಣದ ಬಗ್ಗೆ, ಕೆಲಸದ ಬಗ್ಗೆ ಅಥವಾ ಅಡುಗೆ ತಯಾರಿ, ಬಟ್ಟೆ ಒಗೆಯುವುದು, ವಾಟ್ಸ್‌ಅಪ್‌ನಲ್ಲಿ ಬಂದ ಆತ್ಮೀಯರ ಸಂದೇಶಕ್ಕೆ ಮರು ಸಂದೇಶ ರವಾನಿಸಲು ಮರೆತು ಹೋಗಿರುವುದು... ಇತ್ಯಾದಿ ಇತ್ಯಾದಿ ಅವರವರ ಕೆಲಸದ ಕ್ಷೇತ್ರಕ್ಕೆ ಹೊಂದಿಕೊಂಡು ನೆನಪುಗಳು ಬಂದು ಹೋಗುತ್ತಿರುತ್ತವೆ. ಹೆಣ್ಣು–ಗಂಡು ಲಿಂಗ ಭೇದವಿಲ್ಲದೇ ಹಿರಿಯರು, ಮಧ್ಯವಯಸ್ಕರು, ಕಿರಿಯರು, ದಂಪತಿಗಳು... ಎಲ್ಲರಿಗೂ ಅನ್ವಯಿಸಿ ಹೇಳಬಹುದಾದ ಸ್ಥಿತಿ ಇದು. ಇನ್ನು ನಮಾಝ್‌ನ ನೇತೃತ್ವ ವಹಿಸಿದ ಇಮಾಮರು ಜೋರಾಗಿ ಪ್ರಾರ್ಥಿಸುವುದು ಮತ್ತು ಅನುಯಾಯಿಗಳು ಬರೇ ಆಮೀನ್ ಹೇಳುವಂತಹ ಕ್ರಮದಲ್ಲಂತೂ ಇದನ್ನೂ ಮೀರಿಸುವ ಗಮನರಹಿತ ಸ್ಥಿತಿ ಕಾಣಿಸುತ್ತದೆ. ಇಮಾಮರ ಪ್ರಾರ್ಥನೆಗೂ ಅನುಯಾಯಿಗಳ ಆಮೀನ್‌ಗೂ ಕ್ರಿಯೆ–ಪ್ರತಿಕ್ರಿಯೆಯೆಂಬ ಸಂಬಂಧಕ್ಕಿಂತ ಹೊರತಾದ ಯಾವ ಭಾವನಾತ್ಮಕ ಸಂಬಂಧವೂ ಅನೇಕಬಾರಿ ಇರುವುದಿಲ್ಲ. ಇಮಾಮರು ಪ್ರಾರ್ಥಿಸುವಾಗ ಆಮೀನ್ ಹೇಳುವವರ ಗಮನವು ತಮ್ಮ ಕೈಬೆರಳಿನ ಉಗುರಿನ ಮೇಲೆಯೋ, ಉಡುಪಿನ ಮೇಲೆಯೋ, ಇತರ ನಮಾಝಿಗರ ಮೇಲೆಯೋ ನೆಟ್ಟಿರುತ್ತದೆ. ಯುವ ಸಮೂಹವು ತನ್ನದೇ ಪ್ರಾಯದ ಇತರರ ಜೊತೆ ಕಣ್ಸನ್ನೆ ಭಾಷೆಯಲ್ಲಿ ಸಂಭಾಷಣೆಯಲ್ಲಿ ನಿರತವಾಗಿರುತ್ತದೆ. ಅವರಲ್ಲಿ ಅನೇಕರು ತಲೆಯಲ್ಲಿರುವ ಟೊಪ್ಪಿಯನ್ನು ಕೈಗೆ ತಂದು ಹೊರಳಾಡಿಸುವುದಿದೆ. ಲಘು ಹಾಸ್ಯದ ವಿನಿಮಯಗಳು ನಡೆಯುವುದಿದೆ. ಒಂದು ರೀತಿಯಲ್ಲಿ, ನಮ್ಮ ಪ್ರಾರ್ಥನೆಗಳು ಗಮನರಹಿತ ಸ್ಥಿತಿಯಲ್ಲಿ ಮತ್ತು ಆಧ್ಯಾತ್ಮಿಕ ಸ್ಪರ್ಶದ ಅಭಾವದಲ್ಲಿ ಆಗುತ್ತಿರುವುದೇ ಹೆಚ್ಚು. ಆದ್ದರಿಂದಲೇ, ಕಅಬಾವನ್ನು ಪ್ರಥಮ ಬಾರಿಗೆ ಬರಿಗಣ್ಣಿನಲ್ಲಿ ನೋಡಿದಾಗ ನನ್ನೊಳಗಾದ ತಲ್ಲಣ ಮತ್ತು ರೋಮಾಂಚನ ಇಲ್ಲಿ ವಿಶೇಷ ಉಲ್ಲೇಖಕ್ಕೆ ಅರ್ಹವೆನಿಸುವುದು. ಕಅಬಾ ಒಂದು ಭಾವುಕ ಕೇಂದ್ರವಷ್ಟೇ ಅಲ್ಲ, ಅದು ಅವರ್ಣನೀಯ ಆನಂದವನ್ನು ನಮ್ಮೊಳಗೆ ಸ್ಫುರಿಸಬಲ್ಲ ಸಾಮರ್ಥ್ಯವನ್ನು ಹೊಂದಿದೆ. ಅದನ್ನು ಕಂಡ ತಕ್ಷಣ ವಿಶ್ವಾಸಿ ಒಂಟಿಯಾಗ ಬಯಸುತ್ತಾನೆ. ಆತ್ಮಗತಕ್ಕಿಳಿಯುತ್ತಾನೆ. ಭಾವುಕನಾಗುತ್ತಾನೆ. ಕಣ್ಣೀರಾಗುತ್ತಾನೆ. ತನ್ನೊಳಗಿನ ಎಲ್ಲ ತಲ್ಲಣಗಳನ್ನೂ ಅಲ್ಲಾಹನೊಂದಿಗೆ ಹೇಳಿಕೊಳ್ಳುವುದಕ್ಕೆ ಅದನ್ನು ನಿಮಿತ್ತ ಮಾಡಿಕೊಳ್ಳುತ್ತಾನೆ. ಅದನ್ನು ಸ್ಪರ್ಶಿಸಲು ತವಕ ಪಡುತ್ತಾನೆ. ಹಾಗಂತ, ಕಅಬಾ ಅದ್ಭುತ ಕಲಾ ಕೃತಿ ಏನಲ್ಲ. ಸುಮಾರು 12 ಮೀಟರ್ ಉದ್ದ, 10 ಮೀಟರ್ ಅಗಲ ಮತ್ತು 15 ಮೀಟರ್ ಎತ್ತರವಿರುವ ಒಂದು ಸಾಮಾನ್ಯ ಕಟ್ಟಡ. ಅದನ್ನು ಕಪ್ಪು ಬಟ್ಟೆಯಿಂದ ಸಂಪೂರ್ಣವಾಗಿ ಮುಚ್ಚಲಾಗಿದೆ. ಹೊರನೋಟಕ್ಕೆ

ಕಅಬಾ ಅಂದರೆ ಇಷ್ಟೇ. ಕಪ್ಪು ಬಟ್ಟೆಯನ್ನು ಹೊದ್ದುಕೊಂಡಿರುವ ಒಂದು ಸಾಮಾನ್ಯ ಕಟ್ಟಡ. ಈ ಕಅಬಾದ ತೀರ ಸನಿಹದಲ್ಲೇ ಬಹು ಮಹಡಿಗಳ ದೊಡ್ಡ ಕಟ್ಟಡವೊಂದಿದೆ. 50ಕ್ಕಿಂತಲೂ ಹೆಚ್ಚು ಅಂತಸ್ತುಗಳುಳ್ಳ ಅತಿ ಎತ್ತರದ ಕಟ್ಟಡ. ಅದರ ತುದಿಯಲ್ಲಿ ಭಾರೀ ಗಾತ್ರದ ಗಡಿಯಾರವೂ ಇದೆ. ಅಲ್ಲಿಂದ 30 ಕಿಲೋ ಮೀಟರ್ ದೂರದವರೆಗೆ ಬರಿಗಣ್ಣಿಗೆ ಕಾಣಿಸುವಷ್ಟು ದೊಡ್ಡದಾದ ಮತ್ತು ಆಕರ್ಷಕವಾದ ಗಡಿಯಾರ ಅದು. ಅದರ ಮೇಲೊಂದು ಆಕೃತಿಯಿದೆ. ಅದನ್ನು ಹಸಿರು ಬಣ್ಣದ ಮಿನಿಚರ್‌ಗಳಿಂದ ಶೃಂಗರಿಸಲಾಗಿದೆ. ಪ್ರತಿ ಆದಾನ್(ಬಾಂಗ್)ನ ಸಮಯದಲ್ಲೂ ಅವು ಮಿನುಗುತ್ತವೆ. ಅದಾನ್ ಮುಗಿದ ಕೂಡಲೇ ನಂದಿ ಹೋಗುತ್ತದೆ. ಆ ಬಹುಮಹಡಿ ಕಟ್ಟಡವನ್ನು ಅತ್ಯಂತ ಆಕರ್ಷಕಗೊಳಿಸುವಲ್ಲಿ ಈ ಮಿನಿಚರ್‌ಗಳು ಮತ್ತು ಆ ಗಡಿಯಾರದ ಪಾತ್ರ ಬಹಳ ದೊಡ್ಡದು. ನಿಜವಾಗಿ, ಮಕ್ಕಾ-ಮಕ್ಕಾದವರ ಸ್ವತ್ತಷ್ಟೇ ಅಲ್ಲ ಅಥವಾ ಸೌದಿ ಅರೇಬಿಯಾದ ಖಾಸಗಿ ಭೂಮಿಯೂ ಅಲ್ಲ. ಅದು ಜಗತ್ತಿನ ಎಲ್ಲ ಮುಸ್ಲಿಮರಿಗೆ ಸೇರಿದ್ದು. ಜಗತ್ತಿನ ನಾಲ್ಕೂ ದಿಕ್ಕಿನಿಂದ ವಿವಿಧ ಭಾಷೆ, ಚರ್ಮ, ಆಕಾರ, ಸಂಸ್ಕೃತಿ, ವಿಚಾರ, ಅಂತಸ್ತು, ಅಭಿರುಚಿಗಳುಳ್ಳ ಮಂದಿ ಸಾವಿರಾರು ಕಿಲೋ ಮೀಟರ್‌ಗಳಷ್ಟು ದೂರ ಪ್ರಯಾಣಿಸಿ ಅಲ್ಲಿಗೆ ಬರುತ್ತಾರೆ. ಹಾಗೆ ಬಂದವರು ಅಲ್ಲಿಯ ವಾತಾವರಣಕ್ಕೆ ಹೊಂದಿಕೊಳ್ಳಬೇಕಾಗುತ್ತದೆ. ಸಮಯವನ್ನು ಹೊಂದಿಸಿಕೊಳ್ಳಬೇಕಾಗುತ್ತದೆ. ಭಾರತದ ಸಮಯಕ್ಕೂ ಮಕ್ಕಾದ ಸಮಯಕ್ಕೂ ನಡುವೆ ಸುಮಾರು ಎರಡೂವರೆ ಗಂಟೆಗಳಷ್ಟು ವ್ಯತ್ಯಾಸ ಇದೆ. ಹಾಗಂತ, ಈ ವ್ಯತ್ಯಾಸ ಕೇವಲ ಸಮಯಕ್ಕೆ ಮಾತ್ರ ಸೀಮಿತವಾದುದಲ್ಲ. ಹವಾಮಾನ, ಆಹಾರ, ಉಡುಪು, ಭಾಷೆ, ದಿನಚರಿ ಎಲ್ಲದರಲ್ಲೂ ವ್ಯತ್ಯಾಸ ಇದೆ. ಉಮ್ರಾಕ್ಕೆ ಹೋಗುವ ಮೊದಲು ನೀಡಲಾದ ತರಬೇತಿ ಶಿಬಿರದಲ್ಲಿ ಸಂಘಟಕರು ಹವಾಮಾನಕ್ಕೆ ಸಂಬಂಧಿಸಿ ತೀರಾ ಒತ್ತುಕೊಟ್ಟು ಮಾತಾಡಿದ್ದರು. ಮುಖ್ಯವಾಗಿ ಯಾವ ಕಾರಣಕ್ಕೂ ತಂಪು ನೀರನ್ನು ಕುಡಿಯಲೇ ಬಾರದು ಎಂದೂ ಎಚ್ಚರಿಸಿದ್ದರು. ಮಸ್ಜಿದುಲ್ ಹರಾಮ್‌ನಲ್ಲಿ ಉದ್ದಕ್ಕೂ ದೊಡ್ಡ ದೊಡ್ಡ ಕ್ಯಾನ್‌ಗಳಲ್ಲಿ ಝಮ್ ಝಮ್ ನೀರನ್ನು ಇರಿಸಲಾಗಿದೆ. ಅದರ ಪಕ್ಕವೇ ಬಳಸಿ ಎಸೆಯುವ ಗ್ಲಾಸ್‌ಗಳನ್ನೂ ಇಡಲಾಗಿದೆ. ಪ್ರತಿದಿನ ಬರುವ ಲಕ್ಷಾಂತರ ಯಾತ್ರಾರ್ಥಿಗಳು ದಾಹ ಇಂಗಿಸಿಕೊಳ್ಳುವುದು ಇವುಗಳಿಂದಲೇ. ಈ ಕ್ಯಾನ್‌ಗಳಲ್ಲಿ ತಂಪು ಮತ್ತು ತಂಪು ರಹಿತ ಎಂದು ಅರಬಿ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಬರೆದಿಡಲಾಗಿದೆ. ಯಾವ ಕಾರಣಕ್ಕೂ ತಂಪು ನೀರನ್ನು ಕುಡಿಯಬಾರದು ಎಂದು ಶಿಬಿರದಲ್ಲಿ ಎಚ್ಚರಿಕೆಯನ್ನು ನೀಡಲಾಗಿತ್ತು. ಅದರಿಂದ ಆರೋಗ್ಯದಲ್ಲಿ ಏರು-ಪೇರಾಗಬಹುದು ಎಂದು ಸಂಘಟಕರು ಮುನ್ನೆಚ್ಚರಿಕೆ ನೀಡಿದ್ದರು. ನಾನು ಈ ಎಚ್ಚರಿಕೆಯನ್ನು ಶಿರಸಾ ಪಾಲಿಸಿದ್ದರೂ ಎರಡು ದಿನಗಳ ಕಾಲ ನನ್ನನ್ನು ಜ್ವರ ಕಾಡಿತ್ತು. ಪಾದದ ಹಿಮ್ಮಡಿ ಒಡೆದಿತ್ತು. ಒಣ ಹವೆ. ಬಿರು ಬಿಸಿಲಿನ ತಾಪ ಎಷ್ಟು ತೀವ್ರವೆಂದರೆ, ಸಂಪೂರ್ಣ ಕಣ್ಣು ತೆರೆಯಲೂ ಆಗದಷ್ಟು ಪ್ರಖರ ಬಿಸಿಲು ನೆಲದ ಮೇಲೆ ಪ್ರತಿಫಲಿಸುತ್ತದೆ. ನಮ್ಮ ಕಣ್ಣು ಕುಕ್ಕುತ್ತದೆ.





ಒಂದು ರೀತಿಯಲ್ಲಿ, ಕನ್ನಡಿಯ ಮೇಲೆ ಬಿಸಿಲು ಬಿದ್ದರೆ ಹೇಗೋ ಹಾಗೆ. ನೆಲವನ್ನು ನೋಡಲಾಗದ ಮತ್ತು ದೂರಕ್ಕೆ ಕಣ್ಣು ಹಾಯಿಸಲಾಗದಂಥ ಸನ್ನಿವೇಶ. ಒಂದಷ್ಟು ನಡೆದ ಕೂಡಲೇ ಸುಸ್ತಿನ ಅನುಭವವಾಗುತ್ತದೆ. ವಿಶೇಷ ಏನೆಂದರೆ, ಇಷ್ಟು ಬಿರು ಬಿಸಿಲು ಇದ್ದರೂ ಬೆವರು ಬರುವುದಿಲ್ಲ. ಶುಷ್ಕ ಹವೆಯಂಥ ವಾತಾವರಣ. ಆಸ್ಟ್ರೇಲಿಯಾ ಖಂಡ, ಆಫ್ರಿಕಾ ಖಂಡ, ಯೂರೋಪಿಯನ್ ರಾಷ್ಟ್ರಗಳು, ವೆಸ್ಟ್‌ಇಂಡೀಸ್‌ನಂಥ ದ್ವೀಪಗಳು, ಏಶ್ಯಾ ಖಂಡ.. ಮುಂತಾದ ಜಗತ್ತಿನ 200ಕ್ಕಿಂತಲೂ ಅಧಿಕ ರಾಷ್ಟ್ರಗಳಲ್ಲಿರುವ ಹವಾಮಾನವನ್ನೊಮ್ಮೆ ಸ್ಮರಿಸಿಕೊಳ್ಳಿ. ನ್ಯೂಝಿಲ್ಯಾಂಡ್‌ನಲ್ಲಿರುವ ಹವಾಗುಣವು ಆಫ್ರಿಕನ್ ಖಂಡದ ರಾಷ್ಟ್ರವಾದ ಮೊಝಾಂಬಿಕ್‌ನಲ್ಲಿರುವುದಕ್ಕೆ ಸಾಧ್ಯವಿಲ್ಲ. ವೆನೆಝುವೇಲಾದ ವಾತಾವರಣವು ಬಾಂಗ್ಲಾದೇಶದಲ್ಲಿರುವುದಿಲ್ಲ. ಜಮೈಕಾದ ಬಿಸಿಲು ಮತ್ತು ಸುಡಾನ್‌ನ ಬಿಸಿಲಿನ ಮಧ್ಯೆ ತೀವ್ರತೆಯಲ್ಲಿ ವ್ಯತ್ಯಾಸ ಇರುತ್ತದೆ. ಥ್ಯಾಲೆಂಡ್‌ನ ಚಳಿಯನ್ನು ಅಮೇರಿಕನ್ ವ್ಯಕ್ತಿ ಚಳಿಯೆಂದೇ ಒಪ್ಪಿಕೊಳ್ಳಲಾರ. ಶ್ರೀಲಂಕಾದ ಮಳೆಯಿಂದ ಅರ್ಜಂಟೀನದ ಮಂದಿ ಅಚ್ಚರಿ ಪಡಬಹುದು. ಅಂದಹಾಗೆ, ಕೇವಲ ಕರ್ನಾಟಕದಲ್ಲೇ ಮಳೆ, ಬಿಸಿಲು, ಚಳಿಗೆ ಸಂಬಂಧಿಸಿ ಈ ಬಗೆಯ ವ್ಯತ್ಯಾಸಗಳಿವೆ. ಕರಾವಳಿ ಭಾಗದಲ್ಲಿ ಮಳೆ ಒಂದು ವಾರ ನಿರಂತರ ಸುರಿದರೂ ಜನ ಜೀವನದ ಮೇಲೆ ಅಂಥ ಪರಿಣಾಮವನ್ನೇನೂ ಬೀರುವುದಿಲ್ಲ. ನೆರೆ ಬರುವುದಿಲ್ಲ. ನಗರ ಜಲಮಯ ಆಗುವುದಿಲ್ಲ. ಮಳೆ ಬಂದಷ್ಟೇ ವೇಗದಲ್ಲಿ ನೀರು ಸಮುದ್ರವನ್ನು ಸೇರಿಕೊಳ್ಳುತ್ತದೆ. ಅದೇವೇಳೆ, ಬೆಂಗಳೂರಿನಲ್ಲಿ ಒಂದು ದಿನ ಧಾರಾಕಾರ ಮಳೆ ಸುರಿದರೂ ಸಾಕು, ನಗರ ಜಲಮಯವಾಗುತ್ತದೆ. ಮನೆ, ಶಾಲೆ, ಆಸ್ಪತ್ರೆ, ಕಟ್ಟಡಗಳೆಲ್ಲ ನೀರನ್ನು ತುಂಬಿಸಿಕೊಂಡು ತೇಲ ತೊಡಗುತ್ತವೆ. ಕರ್ನಾಟಕದಲ್ಲಿಯೇ ಫ್ಯಾನ್‌ಗಳ ಅಗತ್ಯವೇ ಇಲ್ಲದಂಥ ಪ್ರದೇಶಗಳಿವೆ. ಫ್ಯಾನ್ ಇಲ್ಲದೆ ಬದುಕಲು ಸಾಧ್ಯವೇ ಇಲ್ಲದಂಥ ಕರಾವಳಿ ಪ್ರದೇಶಗಳೂ ಇವೆ. ಕೇವಲ ಕರ್ನಾಟಕದ ಒಳಗಡೆಯೇ ವಾತಾವರಣದಲ್ಲಿ ಇಷ್ಟು ವೈವಿಧ್ಯ ಮತ್ತು ವೈರುಧ್ಯಗಳಿರುವಾಗ ಇನ್ನು ಜಾಗತಿಕ ಪರಿಸ್ಥಿತಿ ಹೇಗಿರಬಹುದು? ಮಕ್ಕಾಕ್ಕೂ ಮತ್ತು ಮಕ್ಕಾದ ಹೊರಗಿನ ಈ ಎಲ್ಲ ರಾಷ್ಟ್ರಗಳಿಗೂ ನಡುವೆ ಹವಾಮಾನದ ಮತ್ತು ಸಮಯದ ವ್ಯತ್ಯಾಸ ಹೇಗಿರಬಹುದು? ಭಾರತಕ್ಕೂ ಮಕ್ಕಾಕ್ಕೂ ನಡುವೆ ಸುಮಾರು ಎರಡೂವರೆ ತಾಸು ವ್ಯತ್ಯಾಸ ಇರುವಂತೆಯೇ ಬೇರೆ ಬೇರೆ ರಾಷ್ಟ್ರಗಳಿಗೆ ಸಂಬಂಧಿಸಿ ಈ ವ್ಯತ್ಯಾಸದಲ್ಲಿ ಹೆಚ್ಚಳ ಮತ್ತು ಕಡಿತ ಆಗುತ್ತಲೂ ಇರಬಹುದು. ಆದ್ದರಿಂದ ಮಕ್ಕಾ ತಲುಪುವ ಯಾತ್ರಾರ್ಥಿಗಳಿಗೆ ತಕ್ಷಣಕ್ಕೆ ಎರಡು ಸವಾಲುಗಳು ಎದುರಾಗುತ್ತವೆ. ಒಂದು ವಾತಾವರಣದ್ದಾದರೆ ಇನ್ನೊಂದು ಸಮಯದ್ದು. ವಾತಾವರಣ ವ್ಯತ್ಯಾಸದ ಬಗ್ಗೆ ನಿರ್ಲಕ್ಷ್ಯ ತಾಳಿದರೆ ಆಗುವ ತೊಂದರೆ ಏನೆಂದರೆ, ಹರಮ್‌ನಲ್ಲಿ ಕಳೆಯಬೇಕಾದ ಸಮಯವನ್ನು ರೂಮ್‌ನಲ್ಲಿ ಕಳೆಯಬೇಕಾಗಿ ಬರುತ್ತದೆ ಎಂಬುದು. ಉಮ್ರಾ ಯಾತ್ರೆ ಎಂಬುದು ಇವತ್ತು ಜಾಗತಿಕವಾಗಿದೆ. ಉಮ್ರಾ ಇವತ್ತು ಜಾಗತಿಕವಾಗಿಯೇ ಒಂದು

ಬ್ಯುಸಿನೆಸ್. ಉಮ್ರಾ ಯಾತ್ರೆಗೆ ಕರಕೊಂಡು ಹೋಗುವುದಕ್ಕೆ ಬೇರೆ ಬೇರೆ ಟೂರ್ಸ್ ಆಂಡ್ ಟ್ರಾವೆಲ್ಸ್‌ಗಳಿವೆ. ಅವುಗಳಿಗೆ ಅವುಗಳದ್ದೇ ಆದ ಪ್ಯಾಕೇಜ್‌ಗಳಿವೆ. ಈ ಪ್ಯಾಕೇಜ್‌ಗಳಿಗೆಲ್ಲ ನಿಗದಿತ ದಿನಗಳಿರುತ್ತವೆ. ಹದಿನೈದು, ಇಪ್ಪತ್ತು ಅಥವಾ ಇನ್ನಷ್ಟು. ಈ ನಿರ್ದಿಷ್ಟ ದಿನಗಳಿಗಿಂತ ಹೆಚ್ಚು ತಂಗುವುದಕ್ಕೆ ಇಂಥ ಪ್ಯಾಕೇಜ್‌ಗಳ ಮೂಲಕ ಬರುವವರಿಗೆ ಅವಕಾಶ ಇರುವುದಿಲ್ಲ. ಹೀಗಿರುವಾಗ ಆರೋಗ್ಯ ಕೆಡಿಸಿಕೊಂಡು ರೂಮ್‌ನಲ್ಲಿ ಇರಬೇಕಾದಂಥ ಅನಿವಾರ್ಯ ಪರಿಸ್ಥಿತಿ ಎದುರಾಗುವುದೆಂದರೆ, ಅಷ್ಟು ದಿನಗಳ ಕಾಲ ಮಸ್ಜಿದುಲ್ ಹರಾಮ್ ಮತ್ತು ಮಸ್ಜಿದುನ್ನಬವಿಯ ಸಂಬಂಧವನ್ನು ಕಳಕೊಳ್ಳುವುದೆಂದರ್ಥ. ಸಾವಿರಾರು ಕಿಲೋ ಮೀಟರ್ ದೂರದಿಂದ ಮತ್ತು ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿಕೊಂಡು ಮಕ್ಕಾಕ್ಕೆ ಬರುವವರು ಇರುವ ಸಮಯವನ್ನೆಲ್ಲ ಮಸ್ಜಿದುಲ್ ಹರಾಮ್‌ನಲ್ಲಿ ಕಳೆಯಬೇಕೆಂದು ಬಯಸಿಯೇ ಬರುತ್ತಾರೆ. ಇಸ್ಲಾಮಿ ಇತಿಹಾಸಕ್ಕೆ ಸಂಬಂಧಿಸಿದ ಕುರುಹುಗಳನ್ನು ಕಣ್ಣಾರೆ ನೋಡುವುದಕ್ಕೆ ಮತ್ತು ಆಲಿಸುವುದಕ್ಕೆ ಕಾತರ ವ್ಯಕ್ತಪಡಿಸುತ್ತಾರೆ. ಇದಕ್ಕೆಲ್ಲ ಅತ್ಯಂತ ಅಗತ್ಯವಾಗಿರುವುದು ಸುಸ್ಥಿರ ಆರೋಗ್ಯ. ಆರೋಗ್ಯ ಕೈಕೊಟ್ಟಿತೆಂದು ಹೆಚ್ಚುವರಿ ದಿನಗಳನ್ನೇನನ್ನೂ ಟ್ರಾವೆಲ್ಸ್‌ನವರು ಕೊಡುವುದಿಲ್ಲವಲ್ಲ. ಆದ್ದರಿಂದ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಅತ್ಯಂತ ಮುಖ್ಯವಾದುದು ಮತ್ತು ಸವಾಲಿನದ್ದು. ಇದರ ಜೊತೆಗೆ ಇಷ್ಟು ಪ್ರಾಮುಖ್ಯವಿಲ್ಲದಿದ್ದರೂ ಸಮಯದ ವ್ಯತ್ಯಾಸವೂ ಗಮನಾರ್ಹವೇ. ಈ ಕಾರಣದಿಂದಲೇ, ಆ ಬೃಹತ್ ಗಡಿಯಾರ ಇಷ್ಟವಾಗುವುದು. ಒಂದು ರೀತಿಯಲ್ಲಿ, ಜಗತ್ತಿನ ಎಲ್ಲರನ್ನೂ 'ಒಂದೇ' ಆಗಿಸುವ ಗಡಿಯಾರ ಅದು. ಆ ಗಡಿಯಾರದ ಎದುರು ಎಲ್ಲ ರಾಷ್ಟ್ರದವರೂ ಸಮಾನರಾಗುತ್ತಾರೆ. ಅವರೆಲ್ಲರೂ ಆ ಸಮಯವನ್ನು ತಮ್ಮ ಸಮಯವೆಂದು ಸ್ವೀಕರಿಸುತ್ತಾರೆ. ಅದನ್ನು ನೋಡಿಕೊಂಡು ತಮ್ಮ ದಿನಚರಿಯನ್ನು ಪ್ರಾರಂಭಿಸುತ್ತಾರೆ. ಅವರ ನಿದ್ದೆಗೆ, ಎಚ್ಚರಕ್ಕೆ, ಊಟಕ್ಕೆ, ತಿಂಡಿಗೆ, ನಮಾಝ್‌ಗೆ, ಮಾತುಕತೆಗೆ, ಅಧ್ಯಯನಕ್ಕೆ, ಪ್ರಾರ್ಥನೆಗೆ... ಎಲ್ಲದಕ್ಕೂ ಆ ಗಡಿಯಾರವೇ ಕೇಂದ್ರ ಬಿಂದುವಾಗಿರುತ್ತದೆ. ಮಕ್ಕಾದಲ್ಲಿರುವಷ್ಟು ಸಮಯ ಹೆಚ್ಚಿನವರು ಅವಲಂಬಿಸುವುದು ಆ ಗಡಿಯಾರವನ್ನು. ಆದ್ದರಿಂದಲೇ ಅದನ್ನು ಕೇವಲ ನಾವು ಗಡಿಯಾರವಾಗಿಯಷ್ಟೇ ನೋಡಬೇಕಿಲ್ಲ. ವಿವಿಧ ಭಾಷೆ, ಬಣ್ಣ, ಆಕಾರ, ಆಹಾರ, ವಿಚಾರ, ಅಭಿರುಚಿ, ಅಭಿಪ್ರಾಯಗಳುಳ್ಳ ಜನರನ್ನು 'ಸಮಾನ' ಆಗಿಸುವ ವಸ್ತು ಅದು. ಮನುಷ್ಯ ನಿರ್ಮಿತ ಸಕಲ ಪ್ರತ್ಯೇಕತೆಗಳನ್ನೂ ಎರಡು ಮುಳ್ಳುಗಳ ಮೂಲಕ ಸುಳ್ಳು ಮಾಡುವ ಅತಿ ಜಾಣತನದ ಪ್ರಯತ್ನ ಅದು. ಒಂದು ಗಡಿಯಾರವನ್ನು ಲಕ್ಷಾಂತರ ಯಾತ್ರಾರ್ಥಿಗಳು ಅವಲಂಬಿಸುವ ಆ ಸಮಯದಲ್ಲೂ, ಅವರ ಜೇಬಿನಲ್ಲೋ, ರೂಮ್‌ನಲ್ಲೋ ಅವರದ್ದೇ ಸಮಯವನ್ನು ತೋರಿಸುವ ಕೈಗಡಿಯಾರ (ವಾಚ್) ಇರಬಹುದು. ಆ ಸಮಯವು ಒಬ್ಬರಿಗಿಂತ ಒಬ್ಬರಲ್ಲಿ ಭಿನ್ನ ಭಿನ್ನವಾಗಿರಬಹುದು. ತನಗೆ ತನ್ನ ರಾಷ್ಟ್ರವೇ ಶ್ರೇಷ್ಠ ಮತ್ತು ಅಲ್ಲಿನ





ಸಮಯವೇ ಅಂತಿಮ ಎಂದು ಯಾರಾದರೂ ಹಠ ಹಿಡಿಯುವ ಸಂದರ್ಭವನ್ನೊಮ್ಮೆ ಊಹಿಸಿಕೊಳ್ಳಿ. ತನ್ನ ದೇಶದ ಸಂಸ್ಕೃತಿ, ಬಣ್ಣ, ಜನಾಂಗೀಯತೆ, ಆಚರಣೆಗಳೇ ಉನ್ನತವೆಂದು ಬಗೆದ ಮತ್ತು ಅರಬ್ ಸಂಸ್ಕೃತಿ ಹಾಗೂ ಅದರ ಸಮಯ ನಿಗದಿಯು ಅನುಸರಣೆಗೆ ಅನರ್ಹ ಎಂದು ವಾದಿಸುವವರನ್ನೊಮ್ಮೆ ಕಲ್ಪಿಸಿಕೊಳ್ಳಿ. ಹಾಗಂತ, ಇಂಥದ್ದೊಂದು ವಾದವು ಅವಾಸ್ತವಿಕ ಎಂದು ಇವತ್ತಿನ ದಿನಗಳಲ್ಲಿ ಖಚಿತವಾಗಿ ಹೇಳುವಂತಿಲ್ಲ. ಅರಬ್ ಜಗತ್ತಿನ ಬಗ್ಗೆ ಮತ್ತು ಅಲ್ಲಿನ ಇಸ್ಲಾಮಿ ಜೀವನ ಕ್ರಮದ ಬಗ್ಗೆ ಅರಬೇತರ ರಾಷ್ಟ್ರಗಳಲ್ಲಿ ಭಾರೀ ಗೌರವಾರ್ಹ ಭಾವನೆಯೇನೂ ಇಲ್ಲ. ಅಲ್ಲಿಯ ಮಾನವ ಹಕ್ಕುಗಳ ಬಗ್ಗೆ, ಮಹಿಳಾ ಹಕ್ಕುಗಳು, ರಾಜಪ್ರಭುತ್ವ, ವೈಜ್ಞಾನಿಕ ರಂಗದಲ್ಲಿನ ಹಿನ್ನಡೆ, ಶಿಕ್ಷಾ ನಿಯಮಗಳು... ಇತ್ಯಾದಿ ಇತ್ಯಾದಿಗಳು ಆಗಾಗ ಸುದ್ದಿ ಮಾಧ್ಯಮಗಳಲ್ಲಿ ತಮಾಷೆಗೆ ಒಳಗಾಗುವುದಿದೆ. ಇಸ್ಲಾಮನ್ನು ಅನಾಗರಿಕ ಎಂದು ಕರೆಯುವುದಕ್ಕೆ ಅಲ್ಲಿಯ ಯಾವುದಾದರೊಂದು ಘಟನೆಯನ್ನು ಎತ್ತಿಕೊಂಡು ಪುರಾವೆಯಾಗಿ ನೀಡುವುದಿದೆ. ತೈಲದ ಹಣದಿಂದ ಕೊಬ್ಬಿದ, ಪುರಾತನ ವಿಚಾರಧಾರೆಗಳುಳ್ಳ ಕಟುಕ ರಾಷ್ಟ್ರಗಳಾಗಿ ಬಿಂಬಿಸುವುದೂ ಇದೆ. ಜಗತ್ತಿನ ವಿವಿಧ ಕಡೆಗಳಿಂದ ಮಕ್ಕಾಕ್ಕೆ ಬರುವವರಲ್ಲಿ ಹೃದಯದ ಆಳದಲ್ಲೆಲ್ಲೋ ಇಂಥವುಗಳು ಪ್ರಭಾವ ಬೀರಿರುವುದಕ್ಕೆ ಅವಕಾಶ ಇರುತ್ತದೆ. ಉತ್ತಮತೆಯ ವ್ಯಸನಕ್ಕೆ ತುತ್ತಾಗಿರುವುದಕ್ಕೂ ಅವಕಾಶ ಇರುತ್ತದೆ. ತಾವೇ ಉತ್ತಮ, ತಾವೇ ಮುಂದುವರಿದವರು, ತಾವೇ ಸರಿಯಾದ ನಿಲುವಿನವರು, ತಮ್ಮ ವಿಚಾರವೇ ಹೆಚ್ಚು ಸಕಾಲಿಕ, ತಾವೇ ಹೆಚ್ಚು ಸಮಷ್ಟಿ ಭಾವವನ್ನು ಕರಗತ ಮಾಡಿಕೊಂಡವರು, ತಾವೇ ಸರಿಯಾದ ಜ್ಞಾನಿಗಳು.. ಹೀಗೆ ಬೀಗುವವರೂ ಇವರಲ್ಲಿ ಇರಬಹುದು.. ಹೀಗಿರುವ ಎಲ್ಲರನ್ನೂ ಆ ಗಡಿಯಾರ ಸಮಾನಗೊಳಿಸುತ್ತದೆ. ಅನೇಕತೆಯಲ್ಲಿ ಏಕತೆ ಎಂಬ ವಿಶಾಲತೆಯೆಡೆಗೆ ಎಲ್ಲರನ್ನೂ ಅದು ಕೊಂಡೊಯ್ಯುತ್ತದೆ. ಎಲ್ಲವನ್ನೂ ಎಲ್ಲರನ್ನೂ ಏಕಗೊಳಿಸುವ, ಏಕಕ್ಕೆ ಅವಲಂಬಿತಗೊಳಿಸುವ ಸೂಚನಾ ಫಲಕ ಅದು. ಏಕ ಅಲ್ಲಾಹ್, ಏಕ ಕಅಬಾ, ಏಕ ಹರಮ್, ಏಕ ಕುರ್‌ಆನ್, ಏಕ ಝಂ ಝಂ, ಏಕ ಸತ್ಯ.. ಇತ್ಯಾದಿಗಳೆಡೆಗೆ ಜನರ ಗಮನವನ್ನು ತಿರುಗಿಸುವ ಸಾಂಕೇತಿಕ ವಸ್ತು. ಬಣ್ಣ, ಭಾಷೆ, ವೇಷ, ಆಹಾರ, ಆಚಾರ, ಆಕಾರ, ದೇಶ, ಅಭಿರುಚಿ, ಅಭಿಪ್ರಾಯ... ಇತ್ಯಾದಿಗಳಲ್ಲಿ ವ್ಯತ್ಯಾಸ ಇರುತ್ತಾ ಏಕ ಗಡಿಯಾರವನ್ನು ಅನುಸರಿಸಲು ಸಾಧ್ಯ ಇರುವಂತೆಯೇ ಈ ವ್ಯತ್ಯಾಸಗಳ ಹೊರತೂ ಏಕ ಅಲ್ಲಾಹ್ ಮತ್ತು ಏಕ ಸತ್ಯವನ್ನು ಸ್ವೀಕರಿಸಲು ಯಾವ ಕಾರಣಕ್ಕೂ ಅಸಾಧ್ಯವಿಲ್ಲ ಎಂಬುದನ್ನು ಖಡಾಖಂಡಿತವಾಗಿ ಸಾರುವ ಗಡಿಯಾರ ಅದು.

## ಭಾಗ: 7

ನಿಜವಾಗಿ, ಈ ವಿಶಾಲ ಜಗತ್ತಿನಲ್ಲಿ ಒಂದನ್ನೊಂದು ಮೀರಿಸುವ ಕಟ್ಟಡಗಳ ರಚನೆ ಆಗುತ್ತಲೇ ಇದೆ. ಜಾಗತಿಕವಾಗಿ ಏಳು ಅದ್ಭುತ ರಚನೆಗಳಿವೆ. ತಾಜ್‌ಮಹಲ್, ಪೀಸಾ ಗೋಪುರ, ಚೀನಾದ ಮಹಾಗೋಡೆಯಂಥ ಅಚ್ಚರಿಗಳಿವೆ. ನಮ್ಮಲ್ಲೇ ಗೋಲ್‌ಗುಂಬಝ್ ಇವೆ. ಜಗತ್ತಿನ ಬೇರೆ ಬೇರೆ ಕಡೆ ಇಂಥ ರಚನೆಗಳು ಅಸಂಖ್ಯ ಇರಬಹುದು. ಇದಕ್ಕೆ ಹೋಲಿಸಿದರೆ, ಕಅಬಾ ಏನೇನೂ ಅಲ್ಲ. ಅದ್ಭುತಗಳ ಪಟ್ಟಿಯಲ್ಲಿಯೇ ತೀರಾ ಕೊನೆಯಲ್ಲಿ ಬರಬಹುದಾದ ಅಥವಾ ಅಂಥ ಪಟ್ಟಿಯಲ್ಲಿ ಸ್ಥಾನವನ್ನೇ ಪಡೆಯಲು ಅನರ್ಹವಾದ ಸಾಮಾನ್ಯ ಕಟ್ಟಡ ಅದು. ಆದರೆ ಕಅಬಾಕ್ಕೆ ಭೇಟಿ ಕೊಡುವಷ್ಟು ಸಂಖ್ಯೆಯಲ್ಲಿ ಜಗತ್ತಿನ ಇನ್ನಾವ ಕಟ್ಟಡಕ್ಕೂ ಜನರು ಭೇಟಿ ಕೊಡುವುದಿಲ್ಲ. ಅದನ್ನು ಕಂಡು ಭಾವುಕವಾಗುವಂತೆ ಇನ್ನಾವ ಕಟ್ಟಡವನ್ನು ಕಂಡರೂ ಭಾವುಕವಾಗುವುದಿಲ್ಲ. ಅದನ್ನು ಸ್ಪರ್ಶಿಸುವುದಕ್ಕೆ ನೂಕು ನುಗ್ಗಲು ಉಂಟಾಗುತ್ತದೆ. ಅದನ್ನು ಕಂಡು ಮೈ ಮರೆಯುವವರೂ, ಕಣ್ಣೀರು ಹಾಕುವವರೂ, ಭಾವಪರವಶವಾಗುವವರೂ ಇದ್ದಾರೆ. ಇದಕ್ಕಿರುವ ಪ್ರಮುಖ ಕಾರಣ, ಕಟ್ಟಡದಾಚೆಗೆ ಅದಕ್ಕಿರುವ ಮಹತ್ವ. ಆದಿಪಿತ ಆದಮರಿಂದ(ಅ) ಹಿಡಿದು ಪ್ರವಾದಿ ಇಬ್ರಾಹೀಮ್ ಮತ್ತು ಇಸ್ಮಾಈಲ್‌ರ ವರೆಗೆ ಮತ್ತು ಅಂತಿಮ ಪ್ರವಾದಿ ಮುಹಮ್ಮದ್(ಸ)ರವರೆಗೆ ಅದು ಬೆಳೆಸಿಕೊಂಡು ಬಂದ ಸಂಬಂಧ. ಕಅಬಾಕ್ಕೆ ಐತಿಹಾಸಿಕ ಹಿನ್ನೆಲೆ ಇದೆ. ಏಕದೇವಾರಾಧನೆ ನಡೆದಂತೆಯೇ ಅಲ್ಲಿ ಬಹುದೇವಾರಾಧನೆಯೂ ನಡೆದಿದೆ. ಮಕ್ಕಾದ ವಿವಿಧ ಗೋತ್ರಗಳನ್ನು ಒಂದಾಗಿಸಿದ ಕೀರ್ತಿಯೂ ಅದಕ್ಕಿದೆ. ಪ್ರವಾದಿ ಇಬ್ರಾಹೀಮ್ ಮತ್ತು ಇಸ್ಮಾಈಲ್‌ರು ನಡೆಸಿದ ಜೀರ್ಣೋದ್ಧಾರದ ಕೌತುಕಪೂರ್ಣ ಹಿನ್ನೆಲೆ ಇದೆ. ಹಜರುಲ್ ಅಸ್ವದ್ ಎಂಬ ಕಪ್ಪು ಶಿಲೆಯನ್ನು ಆವರಿಸಿಕೊಂಡು ಅದು ಮಾನವ ಹುಟ್ಟಿನಿಂದಲೂ ವಿಚಲಿತಗೊಳ್ಳದೇ ಗಟ್ಟಿಯಾಗಿ ನಿಂತಿದೆ. ಅದು ಬರೇ ಐತಿಹಾಸಿಕ ಕಟ್ಟಡ ಮಾತ್ರ ಅಲ್ಲ. ಅದಕ್ಕೊಂದು ಆಧ್ಯಾತ್ಮಿಕ ಹಿನ್ನೆಲೆಯೂ





ಇದೆ. ಆ ಹಿನ್ನೆಲೆಯೇ ಕಅಬಾವನ್ನು ಇತರೆಲ್ಲ ಕಟ್ಟಡಗಳಿಗಿಂತ ಭಿನ್ನ ಮತ್ತು ಭಾವನಾತ್ಮಕಗೊಳಿಸಿದ್ದು. ಆಧ್ಯಾತ್ಮಿಕ ಅನುಭೂತಿಯನ್ನು ಪಡೆಯಬಹುದಾದ ಎತ್ತರಕ್ಕೆ ಏರಿಸಿದ್ದು. ನಾನು ಬರಿಗಣ್ಣಿನಲ್ಲಿ ಮೊಟ್ಟ ಮೊದಲ ಬಾರಿ ಅದನ್ನು ಕಂಡಾಗ ನನ್ನವರಿಂದೆಲ್ಲ ಕಳಚಿಕೊಂಡು ಆಧ್ಯಾತ್ಮಿಕ ಒಂಟಿತನ ಅನುಭವಿಸಿರುವುದಕ್ಕೆ ಕಾರಣ ಇದುವೇ. ಹಾಗಂತ, ನಾನು ಮೊದಲೇ ಹೀಗೆಲ್ಲ ತೀರ್ಮಾನಿಸಿ ಹೋದದ್ದಲ್ಲ. ಲಕ್ಷಾಂತರ ಜನರ ಮಧ್ಯೆ ಜೊತೆಗಾರರ ಪರಿವೆಯೇ ಇಲ್ಲದೇ ಆಧ್ಯಾತ್ಮಿಕ ಒಂಟಿತನ ಅನುಭವಿಸುವುದು ಸುಲಭವೂ ಅಲ್ಲ ಮತ್ತು ಕಡಿಮೆ ಅಪಾಯಕಾರಿಯೂ ಅಲ್ಲ. ಎಲ್ಲಾದರೂ ಜೊತೆಗಾರರಿಂದ ಪ್ರತ್ಯೇಕವಾಗಿ ಬಿಟ್ಟರೆ ಬಳಿಕ ಜೊತೆಗೂಡುವುದು ಬಹಳ ಕಷ್ಟ. ಬಳಿಕ ಹುಡುಕಾಟವೇ ನಮ್ಮೆಲ್ಲ ಸಮಯವನ್ನು ಪೋಲು ಮಾಡಿ ಬಿಡುವ ಸಾಧ್ಯತೆಯೂ ಇರುತ್ತದೆ. ಇಷ್ಟಿದ್ದೂ, ನಾವು ಕಅಬಾವನ್ನು ಕಾಣುವಾಗ ಯಾರ ಮತ್ತು ಯಾವುದರ ಪರಿವೆಯೇ ಇಲ್ಲದಷ್ಟು ಒಂಟಿಯಾಗಿ ಬಿಡುತ್ತೇವೆಂದರೆ ಅದೊಂದು ಕೌತುಕ. ಉಮ್ರಾ ಯಾತ್ರೆಯನ್ನು ಮುಗಿಸಿ ಊರಿಗೆ ಮರಳಿದ ಬಳಿಕ ಆ ಕ್ಷಣವನ್ನು ಯೋಚಿಸಿದಾಗಲೆಲ್ಲಾ ರೋಮಾಂಚನವಾಗುತ್ತದೆ. ಮತ್ತೆ ಮತ್ತೆ ಕಅಬಾ ಕಣ್ಣೆದುರು ಬಂದು ನಿಲ್ಲುತ್ತದೆ. ಬಹುಶಃ ಯಾತ್ರಾರ್ಥಿಗಳನ್ನು ಅತೀವವಾಗಿ ಸೆಳೆಯುವ ಸಾಮರ್ಥ್ಯ ಕಅಬಾಕ್ಕಿದೆ.

ನಾನು ಕಅಬಾವನ್ನು ಮೊದಲ ಬಾರಿ ಕಂಡಾಗ ಅನುಭವಿಸಿದ ಅನುಭೂತಿಯಿಂದ ಮತ್ತು ಪ್ರಾರ್ಥನೆಯಿಂದ ಹೊರಬಂದು ಕಅಬಾದ ತವಾಫ್‌ಗಾಗಿ ಗೆಳೆಯನ ಜೊತೆ ಹೊರಟೆ. ಮಸ್ಜಿದುಲ್ ಹರಾಮ್‌ಗೆ ಪ್ರವೇಶಿಸಲು ಇರುವ ಹಲವಾರು ಗೇಟ್‌ಗಳಲ್ಲಿ 25ನೇ ಸಂಖ್ಯೆಯ ಗೇಟ್‌ನ ಮೂಲಕ ನಾವು ಹರಮ್ ಪ್ರವೇಶಿಸಿದ್ದೆವು. ತುಸು ನಡೆದಾಗಲೇ ಕಅಬಾದ ಮೊಟ್ಟ ಮೊದಲ ದರ್ಶನವಾಗುತ್ತದೆ. ಆದರೆ ಕಅಬಾದ ಬಳಿಗೆ ತಲುಪಬೇಕಾದರೆ ಮಸ್ಜಿದುಲ್ ಹರಾಮ್‌ನ ಒಳಗಡೆಯೇ ಕೆಲವು ನಿಮಿಷಗಳ ಕಾಲ ನಡೆಯಬೇಕಾಗುತ್ತದೆ. ಜನ ಪ್ರವಾಹದ ನಡುವೆ ಸಾವಧಾನದೊಂದಿಗೆ ಸಾಗಬೇಕಾಗುತ್ತದೆ. ಹೀಗೆ ನಡೆಯುವಾಗ ವೀಲ್ ಚೇರ್‌ನಲ್ಲಿ ಬರುವವರಿಗಾಗಿ ಸರಿದು ನಿಲ್ಲಬೇಕಾಗುತ್ತದೆ. ಅನೇಕ ಬಾರಿ ವೀಲ್ ಚೇರ್‌ನಲ್ಲಿ ಕುಳಿತವರ ಪಾದ ಊರುವುದಕ್ಕಿರುವ ಉಪಕರಣವು ನಮ್ಮ ಕಾಲಿನ ಹಿಂಭಾಗಕ್ಕೆ ತಾಗುವುದಿದೆ. ಅದು ಅಪಾರ ನೋವನ್ನೂ ಕೊಡುತ್ತದೆ. ನನಗೂ ಆ ಅನುಭವವಾಗಿದೆ. ಮಸ್ಜಿದುಲ್ ಹರಾಮ್‌ನೊಳಗೆ ಅನೇಕ ವೀಲ್ ಚೇರ್‌ಗಳಿವೆ. ನಡೆಯಲು ಸಾಧ್ಯವಿಲ್ಲದವರು ತವಾಫ್, ಸಈಗೆ ಈ ವೀಲ್ ಚೇರ್‌ನ ಮೊರೆ ಹೋಗುತ್ತಾರೆ. ಅವರನ್ನು ಕೊಂಡೊಯ್ಯುವುದಕ್ಕೆ ಜನರ ವ್ಯವಸ್ಥೆಯೂ ಹರಮ್‌ನ ಒಳಗಡೆ ಇದೆ. ಅವರು ವಿಶೇಷ ಯೂನಿಫಾರ್ಮ್ ಧರಿಸಿರುತ್ತಾರೆ. ನಾನು ಜನಪ್ರವಾಹದ ಜೊತೆ ಕಅಬಾದ ಬಳಿ ತಲುಪಿದೆ. ಇನ್ನು ತವಾಫ್ ಮಾಡಬೇಕು. ಏಳು ಬಾರಿ ಕಅಬಾ ಭವನಕ್ಕೆ

ಸುತ್ತು ಹಾಕಬೇಕು. ತವಾಫನ್ನು ಎಲ್ಲಿಂದ ಆರಂಭಿಸಬೇಕು ಎಂಬುದನ್ನು ತಿಳಿಸುವುದಕ್ಕೆ ಹಸಿರು ಬಣ್ಣದ ಸೂಚನಾ ಫಲಕವಿದೆ. ಅಲ್ಲಿಂದ ಆರಂಭಿಸಿ ಪುನಃ ಅಲ್ಲಿಗೇ ಬಂದು ತಲುಪಿದಾಗ ಒಂದು ಸುತ್ತು ಆಗುತ್ತದೆ. ಈ ವರೆಗೂ ಉಮ್ರಾ ನಿರ್ವಹಿಸದವರಿಗೆ ತವಾಫ್‌ನ ಆ ಸನ್ನಿವೇಶವನ್ನು ಗ್ರಹಿಸಿಕೊಳ್ಳುವುದು ಸುಲಭ ಅಲ್ಲ. ಅದೊಂದು ಜನಪ್ರವಾಹ. ಸಾವಿರಾರು ಮಂದಿ ಒಮ್ಮೆಗೇ ಒಂದು ಕಟ್ಟಡಕ್ಕೆ ಅತ್ಯಂತ ಶಿಸ್ತುಬದ್ಧವಾಗಿ ಸುತ್ತು ಹಾಕುವ ಭಾವನಾತ್ಮಕ ಸನ್ನಿವೇಶ. ಎರಡು ತುಂಡು ಬಿಳಿ ಬಟ್ಟೆಯನ್ನುಟ್ಟ ಪುರುಷರ ದಂಡು. ಜೊತೆಗೇ ಮಹಿಳೆಯರೂ ಇದ್ದಾರೆ. ವೀಲ್ ಚೇರ್‌ನಲ್ಲಿ ಸುತ್ತು ಹಾಕುವವರೂ ಇದ್ದಾರೆ. ಎಲ್ಲ ಪುರುಷರಿಗೂ ಎರಡು ತುಂಡು ಬಿಳಿ ಬಟ್ಟೆ ಕಡ್ಡಾಯ. ಯಾವ ದೇಶ, ಯಾವ ಸಂಸ್ಕೃತಿ, ಯಾವ ಭಾಷೆ, ಯಾವ ಬಣ್ಣ, ಯಾವ ಆಕೃತಿಯವನೇ ಆಗಿದ್ದರೂ ಈ ಉಡುಪಿನ ಹೊರತಾದ ಬೇರೆ ಉಡುಪನ್ನು ಉಮ್ರಾ ಯಾತ್ರಾರ್ಥಿಯಾಗಿ ಧರಿಸುವಂತಿಲ್ಲ. ಉಮ್ರಾ ಮತ್ತು ಹಜ್ಜ್‌ನ ಉದ್ದೇಶ ಪೂರ್ತಿಯಾಗಬೇಕಾದರೆ, ಎರಡು ತುಂಡು ಬಿಳಿ ಬಟ್ಟೆಯೇ ಆಗಬೇಕು. ಎಲ್ಲ ಮನುಷ್ಯರೂ ಕಅಬಾದ ಎದುರು ಸಮಾನರು. ಎಷ್ಟು ಸಮಾನರು ಎಂದರೆ ಧರಿಸುವ ಬಟ್ಟೆಯಲ್ಲೂ ಸಮಾನರು. ಮಾತ್ರವಲ್ಲ, ನಿರ್ದಿಷ್ಟ ರೀತಿಯಲ್ಲೇ ಉಡಬೇಕಾದಷ್ಟು ಸಮಾನರು. ಎರಡು ತುಂಡು ಬಿಳಿ ಬಟ್ಟೆಯಲ್ಲಿ ಒಂದು ತುಂಡನ್ನು ಲುಂಗಿಯಂತೆ ಉಟ್ಟರೆ ಇನ್ನೊಂದನ್ನು ಶರೀರದ ಮೇಲೆ ಹಾಸಿಕೊಳ್ಳಬೇಕು. ಅದಕ್ಕೂ ನಿಯಮವಿದೆ. ಹೇಗೆ ಬೇಕೋ ಹಾಗೆ ಹಾಸಿಕೊಳ್ಳುವಂತಿಲ್ಲ. ಎಡಗಡೆಯ ತೋಳು ಮುಚ್ಚುವ ರೀತಿಯಲ್ಲಿ ಮತ್ತು ಬಲಗಡೆಯ ತೋಳು ಕಾಣುವ ರೀತಿಯಲ್ಲಿ ಬಟ್ಟೆಯನ್ನು ದೇಹಕ್ಕೆ ಹಾಸಿಕೊಳ್ಳಬೇಕು. ಅಂದರೆ ಬಲ ತೋಳಿನ ಅಡಿ ಭಾಗದ ಮೂಲಕ ಬಟ್ಟೆಯನ್ನು ತಂದು ಎಡಭುಜದ ಮೇಲೆ ಹಾಸಿಕೊಳ್ಳುವುದು. ಸರಳವಾಗಿ ಹೇಳಬೇಕೆಂದರೆ, ಮೊಟ್ಟೆಯಾಕೃತಿಯನ್ನು ಹೋಲುವ ಉಡುಪು ಧಾರಣೆ. ಇಲ್ಲಿ ವ್ಯಕ್ತಿಯ ಇಷ್ಟ ನಗಣ್ಯವಾಗುತ್ತದೆ. ಆತ 'ತಾನು' ಎಂಬುದರಿಂದ ಕಳಚಿಕೊಳ್ಳುತ್ತಾನೆ. ತಾವು ಆಗುತ್ತಾನೆ. ಗುಂಪಿನ ಬಣ್ಣವೇ ಆತನ ಬಣ್ಣವೂ. ಗುಂಪಿನ ನಿಯಮವೇ ಆತನ ನಿಯಮವೂ. ಗುಂಪಿನ ಪಥವೇ ಆತನ ಪಥವೂ. ಈ ಮೂಲಕ ಆತ ನಿಯಮದ ಮಹತ್ವ ಮತ್ತು ಅದರ ಪಾಲನೆಯ ಪ್ರಾಮುಖ್ಯತೆಯನ್ನು ಸಾರುತ್ತಾನೆ. 'ನಾನು' ಎಷ್ಟು ಸಣ್ಣದು ಮತ್ತು 'ನಾವು' ಎಷ್ಟು ದೊಡ್ಡದು ಎಂಬುದನ್ನು ಮನವರಿಕೆ ಮಾಡಿಕೊಳ್ಳುವ ಸಂದರ್ಭ ಅದು. ಈ 'ನಾವು'ನಲ್ಲಿ 'ನಾನು' ಸೇರಬೇಕಾದರೆ, ಕೆಲವು ನಿಯಮಗಳಿಗೆ ಅಧೀನವಾಗಬೇಕು. 'ನಾನುತನ'ದಲ್ಲಿ ರಾಜಿ ಮಾಡಿಕೊಳ್ಳಬೇಕು. ವ್ಯಕ್ತಿಯಾಗಿ ಯಶಸ್ವಿಯಾದವ ಸಮಾಜ ಜೀವಿಯಾಗಿ ಕೆಲವೊಮ್ಮೆ ಯಶಸ್ವಿಯಾಗದೇ ಇರುವುದಕ್ಕೆ ಕಾರಣಗಳೇನು ಎಂಬುದಕ್ಕೆ ಸರಿಯಾದ ಉತ್ತರವೇ ಆ ಎರಡು ತುಂಡು ಬಿಳಿಬಟ್ಟೆ. ಬಟ್ಟೆಯಂಗಡಿಯಲ್ಲಿರುವಷ್ಟು ದಿನ ಆ ಬಿಳಿ ಬಟ್ಟೆ ಅತ್ಯಂತ ಸ್ವತಂತ್ರ.





ತಾನು ಎಲ್ಲಿ ಇರುವೆನೋ ಅಲ್ಲಿಯೇ ಇರಬಹುದು. ತಾನು ಹೇಗೆ ಇರುವೆನೋ ಹಾಗೆಯೇ ಇರಬಹುದು. ಆದರೆ ಈ ಸ್ವಾತಂತ್ರ್ಯ ಗ್ರಾಹಕರು ಅದನ್ನು ಖರೀದಿಸುವವರೆಗೆ ಮಾತ್ರ. ಆ ಬಳಿಕ ಅದರ ಆ ಸ್ವಾತಂತ್ರ್ಯ ಹೊರಟು ಹೋಗುತ್ತದೆ. ಗ್ರಾಹಕ ಅದನ್ನು ಎಲ್ಲಿ ಇಡುತ್ತಾನೋ ಅಲ್ಲಿಯೇ ಇರಬೇಕಾಗುತ್ತದೆ. ಅವರು ಯಾವುದಕ್ಕಾಗಿ ಉಪಯೋಗಿಸುತ್ತಾರೋ ಅದಕ್ಕೆ ಅಧೀನವಾಗಿ ಇರಬೇಕಾಗುತ್ತದೆ. ಅಂಗಡಿಯಲ್ಲಿ ಇರುವಷ್ಟು ದಿನ ಅದು ಒಂಟಿ. ಆದರೆ ಗ್ರಾಹಕರ ಪಾಲಾದ ಕೂಡಲೇ ಅದು ಸಮಾಜಜೀವಿ. ಅದು ಆ ಜೀವನಕ್ಕೆ ಹೊಂದಿಕೊಳ್ಳಬೇಕು. ಹಾಗೆಯೇ ವ್ಯಕ್ತಿ ಸಮಾಜಜೀವಿಯಾಗಿ ಬದಲಾಗುವಾಗ ಅಲ್ಲಿ ಪಾಲಿಸಬೇಕಾದ ನಿಯಮಗಳಿಗೆ ಅಧೀನವಾಗಬೇಕು. ಎರಡು ತುಂಡು ಬಿಳಿ ಬಟ್ಟೆ ಈ ಸಾಮಾಜಿಕ ಸತ್ಯವನ್ನೇ ಸಾರುತ್ತದೆ. ತನಗೆ ಎರಡು ತುಂಡು ಬಟ್ಟೆ ಸಾಲದೆಂದೋ ಮೊಟ್ಟೆಯಾಕೃತಿಯಲ್ಲಿ ತಾನು ಉಡಲಾರೆನೆಂದೋ ಹಠ ಹಿಡಿಯುವುದು 'ನಾವು' ಎಂಬ ಬಹುತ್ವಕ್ಕೆ ವಿರುದ್ಧ. ಕಅಬಾದ ಎದುರು ಯಾರೂ 'ನಾನು' ಅಲ್ಲ. ಪ್ರತಿಯೊಬ್ಬರೂ 'ನಾವು'. ಮಾತ್ರವಲ್ಲ, ಅಲ್ಲಿಂದ ತಮ್ಮೂರಿಗೆ ತೆರಳಿದ ಬಳಿಕ 'ನಾವಾಗಿ' ಬದುಕುವುದಕ್ಕೆ ತರಬೇತಿ ನೀಡುವ ಜಾಗವೂ ಹೌದು. ನಿಜವಾಗಿ, ಬಿಳಿ ಬಟ್ಟೆಯ ಜನಪ್ರವಾಹ ಸುತ್ತುವಾಗ ಈತ ಇಂತಿಂಥ ನಾಡಿನವ, ಈತ ಇಂತಿಂಥ ಭಾಷೆಯವ, ಈತ ಶ್ರೀಮಂತ, ಆತ ಬಡವ, ಈತ ಇಷ್ಟು ಜ್ಞಾನಿ, ಆತ ಅಷ್ಟು ಜ್ಞಾನಿ, ಈತ ಅರಸ, ಆತ ಕಾರ್ಮಿಕ, ಈತ ವಿವಾಹಿತ, ಆತ ಅವಿವಾಹಿತ... ಮುಂತಾದ ಯಾವುದೂ ಗೊತ್ತಾಗುವುದಿಲ್ಲ. ಕೇವಲ ಮನುಷ್ಯರು ಮಾತ್ರ ಕಅಬಾದ ಎದುರಿರುತ್ತಾರೆ. ಮನುಷ್ಯರು ಎಂಬ ಪಟದಲ್ಲಿ ಹೆಣ್ಣು ಮತ್ತು ಗಂಡು ಎರಡೂ ಸೇರಿರುತ್ತದೆ. ಪುರುಷರಂತೆಯೇ ಮಹಿಳೆಯರೂ ತವಾಫ್ ಮಾಡುತ್ತಾರೆ. ಹಾಗಂತ, ಅವರಿಗೆ ಪ್ರತ್ಯೇಕ ವ್ಯವಸ್ಥೆಯನ್ನೇನೂ ಮಾಡಲಾಗಿಲ್ಲ. ಪುರುಷರ ಜೊತೆಗೆ ಅವರೂ ಕಅಬಾಕ್ಕೆ ಸುತ್ತು ಬರುತ್ತಾರೆ. ಜನಪ್ರವಾಹದ ಭಾಗವಾಗಿ ತವಾಫ್ ನಿರ್ವಹಿಸುತ್ತಾರೆ. ಬಹುಶಃ ಲಿಂಗ ತಾರತಮ್ಯವಿಲ್ಲದ ಮತ್ತು ಮಹಿಳೆಯರಿಗೆ ಅಸುರಕ್ಷಿತತೆಯ ಅಣುವಿನಷ್ಟೂ ಅನುಭವವನ್ನು ಬೀರದ ಜಗತ್ತಿನ ಅತಿದೊಡ್ಡ ಆರಾಧನೆಯಿದು. ಇಸ್ಲಾಮ್ ಮಹಿಳೆಯನ್ನು ಪುರುಷನಿಂದ ಬೇರ್ಪಡಿಸುತ್ತದೆ ಮತ್ತು ದ್ವಿತೀಯ ದರ್ಜೆಗಿಳಿಸುತ್ತದೆ ಎಂಬುದನ್ನು ಸಾಬೀತು ಪಡಿಸಲು ಶ್ರಮಿಸುವವರಿಗೆ ದೊಡ್ಡ ಸವಾಲು ಕಅಬಾ. ಅದು ಮನುಷ್ಯರನ್ನು ಲಿಂಗ ಭೇದವಿಲ್ಲದೇ ಸ್ವಾಗತಿಸುತ್ತದೆ. ಒಂದು ವೇಳೆ ಇಸ್ಲಾಮಿನ ನೈತಿಕ ದೃಷ್ಟಿಕೋನಗಳು ಹೆಣ್ಣು-ಗಂಡನ್ನು ಬೇರ್ಪಡಿಸುವುದನ್ನೇ ಮುಖ್ಯ ಉದ್ದೇಶವಾಗಿರಿಸಿಕೊಂಡಿದ್ದರೆ, ಕಅಬಾ ಪ್ರದಕ್ಷಿಣೆ ಅದಕ್ಕೆ ಅತ್ಯಂತ ಸೂಕ್ತ ಸಂದರ್ಭವಾಗಬೇಕಿತ್ತಲ್ಲವೇ? ಹೆಣ್ಣಿಗೂ-ಗಂಡಿಗೂ ಪ್ರತ್ಯ-ಪ್ರತ್ಯೇಕವಾದ ಪ್ರದಕ್ಷಿಣಾ ಪಥವನ್ನು ಗೊತ್ತುಪಡಿಸಬೇಕಿತ್ತಲ್ಲವೇ? ಗಂಡಿನ ಮುಂದಿನಿಂದಲೂ-ಹಿಂದಿನಿಂದಲೂ, ಬಲದಿಂದಲೂ-ಎಡದಿಂದಲೂ ಹೆಣ್ಣು

ಜೊತೆ ಜೊತೆಯಾಗಿ ಸಾಗುವುದನ್ನು ಕಅಬಾ ಯಾಕೆ ಸಹಿಸಿಕೊಂಡಿದೆ? ಇದನ್ನು ನಿರ್ಬಂಧಿಸುವುದಕ್ಕೆ ಯಾಕೆ ನಿಯಮವನ್ನು ಮಾಡಿಲ್ಲ? ಕೇವಲ ಕಅಬಾ ಎಂದಲ್ಲ, ಮಸ್ಜಿದುಲ್ ಹರಾಮ್‌ನಲ್ಲೂ ಇದೇ ವಾತಾವರಣವಿದೆ. ಇಲ್ಲಿ ಹೆಣ್ಣು-ಗಂಡು ಬೇರೆ ಬೇರೆ ಅಲ್ಲ. ಎಷ್ಟರವರೆಗೆ ಜೊತೆಗಾರರೆಂದರೆ, ಇಸ್ಲಾಮಿನ ಅತೀ ಪ್ರಮುಖ ಆರಾಧನೆಯಾದ ನಮಾಝ್‌ನಲ್ಲೂ ಜೊತೆ ಜೊತೆಯಾಗಿ ನಿಲ್ಲುವಷ್ಟು ಜೊತೆಗಾರರು. ಹಾಗಂತ, ಈ ಬೆರೆಯುವಿಕೆ ಇಲ್ಲಿಗೇ ನಿಲ್ಲುವುದಿಲ್ಲ. ಉಮ್ರಾ ಸಂಪೂರ್ಣವಾಗಬೇಕಾದರೆ ಸಫಾ ಮತ್ತು ಮರ್ವಾಗಳ ನಡುವೆ ನಡೆಯಬೇಕು. ಸಫಾ-ಮರ್ವಾ ಎಂಬುದು ಎರಡು ಬೆಟ್ಟಗಳ ಹೆಸರು. ಇದು ಮಸ್ಜಿದುಲ್ ಹರಾಮ್‌ನ ಒಳಗಡೆಯೇ ಇದೆ. ಪ್ರವಾದಿ ಇಬ್ರಾಹೀಮ್‌ರು(ಅ) ತಮ್ಮ ಪತ್ನಿ ಹಾಜರಾ ಮತ್ತು ಮಗ ಇಸ್ಮಾಈಲ್‌ರನ್ನು(ಅ) ದೇವಾದೇಶದಂತೆ ಬಿಟ್ಟು ಹೋಗಿದ್ದು ಇಲ್ಲೇ. ಆಗ ಮಕ್ಕಾ ಬಂಜರು ಭೂಮಿ. ಮರಳುಗಾಡು. ನಿರ್ಜನ ಪ್ರದೇಶ. ಪುಟ್ಟ ಮಗು ಇಸ್ಮಾಈಲ್ ದಾಹದಿಂದ ಚಡಪಡಿಸಿದಾಗ ಹಾಜರಾ ಗುಟುಕು ನೀರಿಗಾಗಿ ಹುಡುಕಾಟ ನಡೆಸುತ್ತಾರೆ. ಆ ಹುಡುಕಾಟಕ್ಕೆ ಸಾಕ್ಷಿಯಾಗಿರುವುದೇ ಸಫಾ ಮತ್ತು ಮರ್ವಾ ಬೆಟ್ಟಗಳು. ಹಾಜರಾರು ಒಮ್ಮೆ ಸಫಾ ಬೆಟ್ಟದ ತುದಿಗೆ ಮತ್ತು ಇನ್ನೊಮ್ಮೆ ಮರ್ವಾ ಬೆಟ್ಟದ ತುದಿಗೆ ಓಡುತ್ತಾರೆ. ಹಾಗೆ ಹುಡುಕಾಡಿ ಸುಸ್ತಾದ ಹಾಜರಾರು ಮಗುವಿನ ಕಡೆಗೆ ದೃಷ್ಟಿ ಹಾಯಿಸಿದಾಗ ಮಗುವಿನ ಕಾಲಬುಡದಿಂದ ನೀರು ಚಿಮ್ಮುವುದು ಕಾಣಿಸುತ್ತದೆ. ಅವರು ಬೆಟ್ಟದಿಂದ ಮಗುವಿನ ಬಳಿಗೆ ಓಡೋಡಿ ಬಂದು ನೀರಿನೊಂದಿಗೆ ಝುಮ್ ಝುಮ್ (ನಿಲ್ಲು-ನಿಲ್ಲು) ಎನ್ನುತ್ತಾರೆ. ಹೀಗೆ ಮಗುವಿನ ದಾಹವನ್ನು ತಣಿಸುವುದಕ್ಕಾಗಿ ಓರ್ವ ಮಹಿಳೆ ಓಡಿದ ಘಟನೆಯನ್ನು ಸ್ಮರಿಸುವುದು ಹಜ್ಜ್ ಮತ್ತು ಉಮ್ರಾ ನಿರ್ವಹಿಸುವವರಿಗೆ ಕಡ್ಡಾಯವಾಗಿ ಮಾಡಲಾಗಿದೆ. ಸ್ಮರಿಸುವುದು ಹೇಗೆಂದರೆ ಹಾಜರಾ ಓಡಿದಂತೆಯೇ ಉಮ್ರಾ ನಿರ್ವಹಿಸುವವರೂ ಸಫಾ ಮತ್ತು ಮರ್ವಾ ಬೆಟ್ಟಗಳ ನಡುವೆ ಓಡಬೇಕು. ಆದರೆ, ಮಸ್ಜಿದುಲ್ ಹರಾಮ್‌ನ ಒಳಗಡೆಯೇ ಆ ಎರಡು ಬೆಟ್ಟಗಳು ಬರುವಂತೆ ವಿಸ್ತರಿಸಿ ಕಟ್ಟಲಾಗಿರುವುದರಿಂದ ಅವುಗಳ ನಡುವಿನ ನಡೆಯು ಬೆಟ್ಟಗಳ ನಡುವಿನ ನಡೆಯಂತೆ ಭಾಸವಾಗುವುದಿಲ್ಲ. ಇಲ್ಲಿ ನಡೆಯುವಾಗಲೂ ಹೆಣ್ಣು-ಗಂಡಿನ ನಡುವೆ ಪ್ರತ್ಯೇಕತೆಯಿಲ್ಲ. ಅಪರಿಚಿತ ಗಂಡು ಮತ್ತು ಹೆಣ್ಣು ಜೊತೆಯಾಗಿಯೇ ಸಾಗುತ್ತಾರೆ. ದುಆ ಮಾಡುತ್ತಾರೆ. ಓಡುತ್ತಾರೆ. ಹಾಗಂತ, ಹಾಜರಾ ಎಂಬ ಮಹಿಳೆ ತೀರಾ ವೈಯಕ್ತಿಕ ಕಾರಣಕ್ಕಾಗಿ ಓಡಿದ ಘಟನೆಯನ್ನು ಪ್ರತಿದಿನ ಲಕ್ಷಾಂತರ ಮಂದಿ ಅನುಸರಿಸುವುದು ಏನನ್ನು ಸೂಚಿಸುತ್ತದೆ? ಓರ್ವ ಹೆಣ್ಣು ತೀರಾ ಖಾಸಗಿ ಕಾರಣಕ್ಕಾಗಿ ಓಡಿದ ಘಟನೆಯನ್ನು ಸ್ತ್ರೀ ಮತ್ತು ಪುರುಷರ ಕಡ್ಡಾಯ ಆರಾಧನಾ ಕರ್ಮವಾಗಿ ಅಳವಡಿಸಿರುವುದನ್ನು ಯಾವ ದೃಷ್ಟಿಕೋನದಿಂದ ನೋಡಬಹುದು? ಹೆಣ್ಣು ಇಸ್ಲಾಮ್‌ನಲ್ಲಿ ಅಮಾನ್ಯಳು ಎಂದಾಗಿರುತ್ತಿದ್ದರೆ ಈ ಮಟ್ಟದ





ಮಹತ್ವ ಆ ಓಟಕ್ಕೆ ಲಭ್ಯವಾಗುತ್ತಿತ್ತೇ? ನಿಜವಾಗಿ, ಹಾಜರಾರ ಓಟವನ್ನು ಅದೇ ರೀತಿ ಅನುಸರಿಸುವುದು ಹಜ್ಜ್ ಮತ್ತು ಉಮ್ರಾದ ಕಡ್ಡಾಯ ಕರ್ಮವಾಗಿ ಮತ್ತು ಆರಾಧನೆಯಾಗಿ ಇಸ್ಲಾಮ್ ಪರಿಗಣಿಸಿರುವುದರಲ್ಲಿ ಒಂದು ಸಾರ್ವಕಾಲಿಕ ಸಂದೇಶವಿದೆ. ಅದುವೇ ಮಾನವ ಪ್ರಾಣ ಅಮೂಲ್ಯ ಅನ್ನುವುದು. ಹಾಜರಾ ಓಡಿದ್ದು ಮಗುವಿನ ಪ್ರಾಣ ಉಳಿಸಲು. ಆ ಮಗುವಿನ ಅಳಿವು-ಉಳಿವು ನೀರನ್ನು ಆವಲಂಬಿಸಿಕೊಂಡಿದೆ. ನೀರು ಸಿಕ್ಕರೆ ಮಗು ಉಳಿಯುತ್ತದೆ. ಇಲ್ಲದಿದ್ದರೆ ಪ್ರಾಣ ಬಿಡುತ್ತದೆ. ಇಂಥ ಸಂದರ್ಭದಲ್ಲಿ ಓರ್ವ ತಾಯಿ ಅನುಭವಿಸಬಹುದಾದ ಸಂಕಟ ಯಾವ ಬಗೆಯದು? ಆ ಮಗುವನ್ನು ಪ್ರಾಣ ಸಹಿತ ಉಳಿಸುವುದಕ್ಕೆ ಅವಳು ಪಡಬಹುದಾದ ಪ್ರಯತ್ನ ಎಂತಹದು? ಬಹುಶಃ, ಹಾಜರಾರ ಓಟವನ್ನು ಕಡ್ಡಾಯ ಆರಾಧನಾ ಕರ್ಮವಾಗಿ ಮಾಡಿರುವುದರ ಹಿಂದೆ ಪ್ರಾಣ ಮತ್ತು ನೀರಿನ ಮಹತ್ವವನ್ನು ಮನದಟ್ಟು ಮಾಡಿಸುವ ಉದ್ದೇಶವೂ ಇದೆ ಎಂದೆನಿಸುತ್ತದೆ. ಪ್ರತಿಯೋರ್ವ ಉಮ್ರಾ ಯಾತ್ರಾರ್ಥಿಯೂ ಸಫಾ-ಮರ್ವಾಗಳ ಮಧ್ಯೆ ಏಳು ಬಾರಿ ನಡೆಯಬೇಕು. ನಿಜವಾಗಿ, ಇದು ಬರೇ ನಡೆ ಅಲ್ಲ. ಪ್ರಾಣ ಉಳಿಸುವ ಅಭಿಯಾನ. ಪ್ರತಿದಿನ ಲಕ್ಷಾಂತರ ಮಂದಿ ಇಲ್ಲಿ ಇಂಥದ್ದೊಂದು ಅಭಿಯಾನದಲ್ಲಿ ಭಾಗಿಯಾಗುತ್ತಾರೆ. ಪ್ರಾಣವನ್ನು ಉಳಿಸುವುದಕ್ಕಾಗಿ ಎಷ್ಟು ದೂರ ಬೇಕಾದರೂ ನಡೆಯಲು ಸಿದ್ಧ ಎಂಬ ಸೂಚನೆ ಇದು. ಉಮ್ರಾದಿಂದ ಮರಳಿ ಊರಿಗೆ ಬಂದವರಲ್ಲಿ ಈ ಪ್ರಜ್ಞೆಯೂ ಜಾಗೃತವಾಗಿರಬೇಕು. ತಾವು ಪ್ರಾಣ ರಕ್ಷಣೆಯ ಹೊಣೆಗಾರಿಕೆಯನ್ನು ವಹಿಸಿಕೊಂಡವರು ಎಂಬ ಭಾವ ಅವರಲ್ಲಿರಬೇಕು. ಆದ್ದರಿಂದಲೇ, ಓರ್ವ ಉಮ್ರಾ ಮತ್ತು ಹಜ್ಜ್ ನಿರ್ವಹಿಸಿದ ವ್ಯಕ್ತಿ ಪ್ರಾಣಹರ ಆಗಲಾರ. ಯಾವ ಜೀವವನ್ನೂ ಅನ್ಯಾಯದಿಂದ ಕೊಲ್ಲಲಾರ. ಮಾತ್ರವಲ್ಲ, ಅಪಾಯದಲ್ಲಿರುವ ಮಾನವ ಜೀವವನ್ನು ಯಾವ ಬೆಲೆ ತೆತ್ತಾದರೂ ರಕ್ಷಿಸುವುದಕ್ಕೆ ಮುಂದಾಗಬಲ್ಲ. ಪ್ರಾಣವೊಂದನ್ನು ರಕ್ಷಿಸುವುದಕ್ಕಾಗಿ ಮಹಿಳೆ ಶ್ರಮಿಸಿದುದನ್ನು ಆರಾಧನೆಯಾಗಿ ಅನುಸರಿಸಿ ಬಂದವ/ಳು ಜೀವನ ಪೂರ್ತಿ ಅದೇ ಸ್ಫೂರ್ತಿಯಲ್ಲಿ ಬದುಕಬೇಕೆಂಬುದೇ ಸಫಾ-ಮರ್ವಾದ ನಡುವಿನ ನಡೆ ಕೊಡುವ ಸೂಚನೆ. ಹೀಗೆ, ಮಾನವ ಪ್ರಾಣದ ರಕ್ಷಣೆ ಎಂಬುದು ಮತ್ತು ಅದಕ್ಕಾಗಿ ಶ್ರಮಿಸುವುದೆಂಬುದನ್ನು ಆರಾಧನೆಯೆಂದು ಕಲಿತು ಬಂದ ವ್ಯಕ್ತಿಯ ಮುಂದಿನ ಬದುಕು ಹೇಗಿರಬಹುದು, ಹೇಗಿರಬೇಕು? ಸಮಾಜದ ಪಾಲಿಗೆ ಆ ವ್ಯಕ್ತಿ ಎಷ್ಟು ಮಾದರಿಯಾಗಿರಬೇಕು? ಬಹುಶಃ, ಸಫಾ ಮತ್ತು ಮರ್ವಾದಲ್ಲಿ ಈ ಪಾಠವನ್ನು ಹೆಣ್ಣು ಮತ್ತು ಗಂಡು ಜೊತೆಯಾಗಿಯೇ ಕಲಿಯುತ್ತಾರೆ. ಆ ಕಲಿಕೆಯ ಈ ಓಟಕ್ಕಾಗಿ ಹೆಣ್ಣಿಗೆ ಪ್ರತ್ಯೇಕ ವ್ಯವಸ್ಥೆಯನ್ನು ಮಾಡಲಾಗಿಲ್ಲ. ಪಾಠ ಕಲಿಯುವಲ್ಲಿ ಗಂಡು-ಹೆಣ್ಣು ಇಬ್ಬರೂ ಸಮಾನರು. ಪ್ರಾಣ ರಕ್ಷಣೆಯ ಹೊಣೆಗಾರಿಕೆ ಯಲ್ಲೂ ಅವರಿಬ್ಬರೂ ಸಮಾನರು. ಇಸ್ಲಾಮಿನ ಅತಿ ಶ್ರೇಷ್ಠ ಮತ್ತು ಅತಿ ಪವಿತ್ರ ಸ್ಥಳಗಳಾದ ಮಸ್ಜಿದುಲ್

ಹರಾಮ್, ಕಅಬಾ ಮತ್ತು ಸಫಾ–ಮರ್ವಾಗಳಲ್ಲಿ ಹೆಣ್ಣು ಅಸಮಾನಳಲ್ಲ, ಅಸ್ಪೃಶ್ಯಳಲ್ಲ, ಪ್ರತ್ಯೇಕಳಲ್ಲ. ಗಂಡಿಗೆ ಎಲ್ಲೆಲ್ಲಾ ಪ್ರವೇಶ ಇದೆಯೋ ಅಲ್ಲೆಲ್ಲಾ ಹೆಣ್ಣಿಗೂ ಇದೆ. ಗಂಡು ಹೇಗೆ ನಡೆಯಬಲ್ಲನೋ ಹಾಗೆ ಹೆಣ್ಣೂ ನಡೆಯಬಲ್ಲಳು. ಆಕೆ ಗಂಡಿನ ಜೊತೆಗೇ ನಮಾಝ್ ಮಾಡುತ್ತಾಳೆ. ತವಾಫ್ ಮಾಡುತ್ತಾಳೆ ಮತ್ತು ಸಈ (ಸಫಾ–ಮರ್ವಾಗಳ ನಡುವೆ ನಡಿಗೆ) ನಿರ್ವಹಿಸುತ್ತಾಳೆ. ಇಲ್ಲೆಲ್ಲಾ ಆಕೆಗಾಗಿ ಪ್ರತ್ಯೇಕ ಪಥವನ್ನೋ, ವ್ಯವಸ್ಥೆಯನ್ನೋ ಏನನ್ನೂ ಮಾಡಲಾಗಿಲ್ಲ.





## ಭಾಗ: 8

ಕಅಬಾದ ಬಳಿ ತಲುಪಿದ ನಾನು ತವಾಫ್‌ಗಾಗಿ ಜನಪ್ರವಾಹದ ಜೊತೆ ಸೇರಿಕೊಂಡೆ. ನಿಜವಾಗಿ, ಕಅಬಾದ ಬಳಿ ತಲುಪುವುದೇ ಒಂದು ಸಾಹಸ. ಕಅಬಾದ ಬಳಿಯೇ ಮಕಾಮು ಇಬ್ರಾಹೀಮ್ ಎಂಬ ಕಿರಿದಾದ ಸ್ಥಳ ಇದೆ. ಪ್ರವಾದಿ ಇಬ್ರಾಹೀಮರು(ಅ) ಕಅಬಾದ ಜೀರ್ಣೋದ್ಧಾರದ ವೇಳೆ ನಮಾಝ್‌ಗಾಗಿ ನಿಂತ ಸ್ಥಳವದು. ಮಕಾಮು ಇಬ್ರಾಹೀಮ್‌ನಲ್ಲಿ ವಿಪರೀತ ರಶ್ಶ್ ಇರುತ್ತದೆ. ಜೊತೆಗೇ ತವಾಫ್ ಮುಗಿಸಿದವರು ಮಕಾಮು ಇಬ್ರಾಹೀಮ್‌ನಲ್ಲಿ ಎರಡು ರಕಅತ್ ಸುನ್ನತ್ ನಮಾಝ್ ಮಾಡುವುದಕ್ಕೆ ಬಹಳ ಪ್ರಾಮುಖ್ಯತೆಯಿದೆ. ಯಾರೂ ಆ ನಮಾಝ್‌ನಿಂದ ತಪ್ಪಿಸಿಕೊಳ್ಳುವುದಿಲ್ಲ. ಒಂದು ಕಡೆ, ಮಕಾಮು ಇಬ್ರಾಹೀಮ್ ಅನ್ನು ದಾಟಿಕೊಂಡು ಕಅಬಾದ ತವಾಫ್‌ಗೆ ಹೋಗುವವರಾದರೆ ಇನ್ನೊಂದು ಕಡೆ ತವಾಫ್ ಮುಗಿಸಿ ಮಕಾಮು ಇಬ್ರಾಹೀಮ್‌ನಲ್ಲಿ ನಮಾಝ್‌ಗಾಗಿ ಬರುವವರು. ಹೀಗೆ ಅಲ್ಲೊಂದು ರೀತಿಯಲ್ಲಿ ತೀವ್ರ ಜನದಟ್ಟಣೆ ಉಂಟಾಗಿರುತ್ತದೆ. ಅದರ ನಡುವೆಯೇ ದಾರಿ ಮಾಡಿಕೊಂಡು ಕಅಬಾ ತಲುಪಬೇಕು. 10–15 ಹೆಜ್ಜೆಗಳ ದಾರಿ ಅಷ್ಟೇ. ನಾನು ತವಾಫನ್ನು ಆರಂಭಿಸಿದೆ. ಬೃಹತ್ ಜನಪ್ರವಾಹದಲ್ಲಿ ನಾನೂ ಸೇರಿಕೊಂಡೆ. ಮೊದಲನೆಯದಾಗಿ, ನನ್ನ ಉಮ್ರಾ ಯಾತ್ರೆಯೇ ಅನಿರೀಕ್ಷಿತವಾದುದು. ಮಕ್ಕಾ–ಮದೀನದ ಬಗ್ಗೆ, ಕಅಬಾ, ಮಸ್ಜಿದುಲ್ ಹರಾಮ್‌ನ ಬಗ್ಗೆ ನನ್ನ ಓದಿನ ಆಧಾರದಲ್ಲಿ ಒಂದಷ್ಟು ಕಪ್ಪು–ಬಿಳುಪು ದೃಶ್ಯಗಳನ್ನು ನನ್ನೊಳಗೆ ತುಂಬಿಸಿರುವುದರ ಹೊರತಾಗಿ, ಅವುಗಳನ್ನು ಮುಖಾಮುಖಿ ಭೇಟಿಯಾಗುವ ಯಾವ ನಿರೀಕ್ಷೆಯನ್ನೂ ನಾನು ಇಟ್ಟುಕೊಂಡಿರಲಿಲ್ಲ. ಆದರೆ ನಂಬಲೂ ಸಾಧ್ಯವಾಗದಂಥ ರೀತಿಯಲ್ಲಿ ಎಲ್ಲವೂ ನಡೆದು ಹೋಗಿದೆ. ನಾನೀಗ ತವಾಫ್‌ನಲ್ಲಿದ್ದೇನೆ. ಬದುಕಿನ ಅತೀ ಅವರ್ಣನೀಯ ಕ್ಷಣ. ತವಾಫ್‌ನ ಸಂಪೂರ್ಣ ಅನುಭೂತಿಯನ್ನು ಪಡೆಯುವುದಕ್ಕಾಗಿ ನಾನು ಜನ

ಪ್ರವಾಹದ ನಡುವೆಯೂ ಒಂಟಿಭಾವವನ್ನು ಹೊಂದಲೇಬೇಕಿತ್ತು. ತವಾಫ್‌ನಲ್ಲಿ ನಾವು ಹೆಜ್ಜೆ ಎತ್ತಿಡಬೇಕಿಲ್ಲ. ಜನ ಪ್ರವಾಹವೇ ನಮ್ಮನ್ನು ಮುಂದಕ್ಕೆ ಕೊಂಡೊಯ್ಯುತ್ತಿರುತ್ತದೆ. ನಾನು ಅಲ್ಲಾಹನಿಗೆ ಸ್ತುತಿಸಿದೆ. ಅತೀವವಾಗಿ ಭಾವುಕನಾದೆ. ಸುತ್ತ ಮುತ್ತಲಿರುವ ಎಲ್ಲರನ್ನೂ ಮರೆತು ಒಂಟಿತನದೊಂದಿಗೆ ಅಲ್ಲಾಹನನ್ನು ಧ್ಯಾನಿಸಿದೆ. ನಿಜವಾಗಿ, ಅಷ್ಟೊಂದು ಜನರ ಮಧ್ಯೆ ಒಂಟಿತನವನ್ನು ಅನುಭವಿಸಲು ಸಾಧ್ಯವಾಗುತ್ತದೆಂಬುದೇ ಒಂದು ಕೌತುಕ. ನಮ್ಮ ಹಿಂದೆ-ಮುಂದೆ, ಎಡ-ಬಲ... ಎಲ್ಲೆಡೆಯೂ ಜನರಿದ್ದಾರೆ. ಸಣ್ಣ ಮಟ್ಟಿನ ನೂಕು ನುಗ್ಗಲೂ ಇದೆ. ಆದರೂ ನಮ್ಮೊಳಗೇ ನಮ್ಮದೇ ಆದ ಒಂಟಿತನದ ವಾತಾವರಣವನ್ನು ಸೃಷ್ಟಿಸಿಕೊಳ್ಳಲು ನಮಗೆ ಸಾಧ್ಯವಾಗುತ್ತದೆ. ನಾನು ಅತೀವ ರೋಮಾಂಚಿತಗೊಂಡ, ಆರ್ದ್ರಗೊಂಡ, ಭಾವುಕನಾದ, ಎಲ್ಲರಿಂದಲೂ, ಎಲ್ಲದರಿಂದಲೂ ಕಳಚಿಕೊಂಡ ಸಂದರ್ಭ ಅದು.

ವಿಶೇಷ ಏನೆಂದರೆ, ಜಗತ್ತಿನ ಬೇರೆ ಬೇರೆ ರಾಷ್ಟ್ರಗಳ ಮಂದಿಯ ಸಂಗಮ ಕೇಂದ್ರದಂತಿರುವ ಕಅಬಾದ ತವಾಫ್‌ನಲ್ಲಿ ಆಫ್ರಿಕನ್ ಖಂಡದ ಆಜಾನುಬಾಹು ವ್ಯಕ್ತಿಗಳೂ ಇದ್ದಾರೆ. ಜಪಾನ್, ಇಂಡೋನೇಶ್ಯಾದಂಥ ರಾಷ್ಟ್ರಗಳ ಕುಳ್ಳಗಿನ ವ್ಯಕ್ತಿಗಳೂ ಇದ್ದಾರೆ. ನಾವು ತವಾಫ್ ನಿರ್ವಹಿಸುವಾಗ ಆಫ್ರಿಕನ್ ಮಂದಿಯ ಅಥವಾ ಆಜಾನುಬಾಹು ವ್ಯಕ್ತಿಗಳ ಹಿಂದಿನಿಂದ ಸಾಗುವುದು ಉತ್ತಮ. ಯಾಕೆಂದರೆ, ಅವರು ತಮ್ಮ ಎತ್ತರದ ದೇಹ ಪ್ರಕೃತಿಯಿಂದಾಗಿ ತೀರಾ ಸಲೀಸಾಗಿ ಸಾಗುತ್ತಾರೆ. ನಮಗೆ ಸುಲಭದಲ್ಲಿ ಸಾಗುವುದಕ್ಕೆ ಜಾಗಗಳು ಸಿಗುತ್ತವೆ. ಅದೇ ವೇಳೆ, ಅವರ ಮುಂದಿನಿಂದ ತವಾಫ್ ಮಾಡುವುದು ಕೆಲವೊಮ್ಮೆ ಅಪಾಯಕಾರಿಯೂ ಆಗಬಹುದು. ನಾನು ಅಂಥದ್ದೊಂದು ಸನ್ನಿವೇಶದಲ್ಲಿ ಸಿಲುಕಿಕೊಂಡಿದ್ದೆ. ನನ್ನ ಎರಡನೇ ಉಮ್ರಾ ನಿರ್ವಹಣೆಯ ವೇಳೆ (ನಮ್ಮ ಯಾತ್ರೆಯಲ್ಲಿ ಎರಡು ಉಮ್ರಾಗಳನ್ನು ನಿರ್ವಹಿಸಲು ಸಂಘಟಕರು ಸೌಕರ್ಯವನ್ನು ಒದಗಿಸಿದ್ದರು) ಆ ಘಟನೆ ನಡೆಯಿತು. ತವಾಫ್‌ನಲ್ಲಿ ನಿರತನಾಗಿದ್ದಾಗ ಹಿಂದಿನಿಂದ ಬಲವಾಗಿ ದೂಡಿದಂಥ ಅನುಭವವಾಯಿತು. ಭಾರೀ ಜನದಟ್ಟಣೆ ಇದ್ದುದರಿಂದ ಅದು ಅಸಹಜವೇನಲ್ಲ. ನನ್ನ ಮುಂದಿನಿಂದಲಾದರೋ ವೀಲ್ ಚೇರ್‌ನಲ್ಲಿ ಸಾಗುವ ವೃದ್ಧರೋರ್ವರಿದ್ದಾರೆ. ಹಿಂದಿನ ಒತ್ತಡದಿಂದ ಪಾರಾಗುವುದಕ್ಕಾಗಿ ಮುಂದಕ್ಕೆ ಹೆಜ್ಜೆ ಇಡೋಣವೆಂದರೆ ವೀಲ್ ಚೇರ್ ಅಡ್ಡಬರುತ್ತದೆ. ನಾನು ಬಹುತೇಕ ಆಯ ತಪ್ಪಿ ವೀಲ್ ಚೇರ್‌ನ ಮೇಲೆ ಬಿದ್ದೆನೆಂದೇ ಭಾವಿಸಿದ್ದೆ. ಹೇಗೋ ಅಕ್ಕ-ಪಕ್ಕದವರಿಂದಾಗಿ ಸಂಭಾಳಿಸಿಕೊಂಡು ಮುನ್ನಡೆದೆ.

ತವಾಫ್‌ನ ಸಮಯದಲ್ಲಿ ವಿವಿಧ ರಾಷ್ಟ್ರಗಳ ಮಂದಿ ವೈವಿಧ್ಯಮಯ ಹಾವಭಾವಗಳನ್ನು ಪ್ರದರ್ಶಿಸುತ್ತಾರೆ. ಆ ಜನದಟ್ಟಣೆಯ ನಡುವೆಯೂ ಕೆಲವರು ಗುಂಪಾಗಿ ಪವಿತ್ರ ಕುರ್‌ಆನನ್ನು ಜೋರಾಗಿ ಓದುತ್ತಾ ಸಾಗುತ್ತಾರೆ. ಕೆಲವು ಗುಂಪುಗಳ ನಾಯಕರು ಜೋರಾಗಿ 'ದುಆ' ಮಾಡುವುದೂ ಉಳಿದವರು 'ಆಮೀನ್' ಹೇಳುವುದೂ ನಡೆಯುತ್ತದೆ. ಹಾಗಂತ, ಈ ವೈವಿಧ್ಯತೆ ತವಾಫ್‌ಗೆ ಮಾತ್ರ ಸೀಮಿತವಲ್ಲ. ಸಫಾ-ಮರ್ವಾಗಳ ನಡುವಿನ ಬೀಸು ನಡಿಗೆಯ (ಸಈ) ವೇಳೆಯಲ್ಲೂ ಈ ವೈವಿಧ್ಯತೆ ಮುಂದುವರಿಯುತ್ತದೆ. ತವಾಫ್‌ನ ಸಮಯದಲ್ಲಾದರೆ ಗುಂಪಾಗಿ ಸಾಗುವುದಕ್ಕೆ ಅಸಾಧ್ಯ ಅನ್ನುವಷ್ಟು ಕಷ್ಟವಿದೆ. ಆದರೆ ಸಈಯ ವೇಳೆ ಇದು ಸುಲಭ. ದಾರಿ ತುಂಬಾ ವಿಶಾಲವಾಗಿದೆ. ಬೇರೆ ಬೇರೆ ರಾಷ್ಟ್ರಗಳ ಮಂದಿ ಬೇರೆ ಬೇರೆ ರೀತಿಯಲ್ಲಿ ದನಿ ಎತ್ತರಿಸಿಯೋ, ಕುಗ್ಗಿಸಿಯೋ, ಭಾವಪರವಶರಾಗಿಯೋ ಪ್ರಾರ್ಥನೆ ಮಾಡುತ್ತಾ ಸಾಗುತ್ತಾರೆ. ಕರ್ನಾಟಕ ಮತ್ತು ಕೇರಳದಿಂದ ಬರುವ ಗುಂಪುಗಳಲ್ಲೂ ಅವರವರ ನಿಲುವಿಗೆ ತಕ್ಕಂತೆ ಕ್ರಮದಲ್ಲಿ ವ್ಯತ್ಯಾಸ ಕಂಡು ಬರುತ್ತದೆ. ಸಫಾ ಬೆಟ್ಟದ ಅಂಚಿನಲ್ಲಿ ನಿಂತು ಗುಂಪಿನ ನಾಯಕ ಜೋರಾಗಿ ಪ್ರಾರ್ಥಿಸುತ್ತಾರೆ. ಉಳಿದವರು ಆಮೀನ್ ಹೇಳುತ್ತಾರೆ. ಒಂದು ಗುಂಪಿನ ಪ್ರಾರ್ಥನೆಯನ್ನು ನಾನು ಆಲಿಸಿದೆ. ಮರ್ವಾದ ತುದಿಯಲ್ಲಿ ನಡೆದ ಪ್ರಾರ್ಥನೆ ಅದು. ಗುಂಪಿನ ನಾಯಕ ಔಲಿಯಾಗಳನ್ನು ಕರೆದು ತನ್ಮಯರಾಗಿ ಪ್ರಾರ್ಥಿಸುತ್ತಿದ್ದರು. ಅವರೆಲ್ಲ ಕಅಬಾದ ಕಡೆಗೆ ಕೈಗಳನ್ನು ಎತ್ತಿ ಹಿಡಿದಿದ್ದರು. ಉಳಿದವರು ಆಮೀನ್ ಹೇಳುತ್ತಿದ್ದರು. ನಿಜವಾಗಿ, ಓರ್ವ ವ್ಯಕ್ತಿಯಾಗಿ, ಒಂಟಿಯಾಗಿ ತನ್ನೊಳಗನ್ನು ಅಲ್ಲಾಹನ ಮುಂದೆ ತೆರೆದಿಡಬೇಕಾದ ಸಂದರ್ಭ ಅದು. ಗುಂಪಿನ ನಾಯಕನಿಗೆ ಆತನ ಹೊರತು ಗುಂಪಿನ ಇತರರ ಭಾವನೆಗಳು ಗೊತ್ತಿರುವುದಕ್ಕೆ ಸಾಧ್ಯವಿಲ್ಲ. ಅವರನ್ನು ಆತನಿಂದ ಪ್ರತಿನಿಧಿಸುವುದೂ ಅಸಾಧ್ಯ. ಗುಂಪಿನ ಪ್ರತಿ ವ್ಯಕ್ತಿಯ ಭಾವ-ಬಿಂಬಗಳು ಇನ್ನೊಬ್ಬ/ಳಿಗಿಂತ ಭಿನ್ನವಾಗಿರಬಹುದು. ಪ್ರತಿಯೊಬ್ಬರಲ್ಲೂ ಅವರವರದೇ ಆದ ಕೋರಿಕೆ, ದುಃಖ, ದುಮ್ಮಾನ, ಅರಿಕೆಗಳಿರಬಹುದು. ಅವನ್ನೆಲ್ಲ ನಾಯಕ ಪ್ರತಿನಿಧಿಸಲಾರ. ಇನ್ನೊಬ್ಬರ ಭಾವನೆಯನ್ನು ಅಷ್ಟೇ ತೀವ್ರತೆಯಿಂದ ಅಲ್ಲಾಹನ ಮುಂದೆ ಸಮರ್ಪಿಸಲು ಇತರರಿಗೆ ಸಾಧ್ಯವಿಲ್ಲ. ಆದರೆ, ಸಾವಿರಾರು ಕಿಲೋಮೀಟರ್ ದೂರದಿಂದ, ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿಕೊಂಡು ಬರುವ ಯಾತ್ರಾರ್ಥಿಗಳನ್ನು ಬರೇ ಆಮೀನ್‌ಗೆ ಸೀಮಿತಗೊಳಿಸಿ ಪ್ರಾರ್ಥನೆ ಸ್ವೀಕೃತವಾಗುವ ಬಹುಮುಖ್ಯ ಸಂದರ್ಭಗಳನ್ನು ಹೀಗೆ ನಿಷ್ಫಲಗೊಳಿಸುವ ವಿಧಾನ ನನ್ನನ್ನು ಬಹುವಾಗಿಯೇ ಕಾಡಿತು.

ತವಾಫ್ ಮುಗಿಸಿದ ನಾನು ಸಫಾ-ಮರ್ವಾಗಳ ನಡುವೆ ಬೀಸು ನಡಿಗೆಯಲ್ಲಿ (ಸಈ) ತಲ್ಲೀನನಾದೆ. ಹಾಜರಾ(ರ) ಈ ಎರಡು ಬೆಟ್ಟಗಳ ನಡುವೆ ನೀರಿಗಾಗಿ ಹುಡುಕಾಟ ನಡೆಸುವಾಗ, ಭೂಮಿ ಬಂಜರಾಗಿತ್ತು. ಸಫಾ ಮತ್ತು ಮರ್ವಾಗಳು ಬಂಡೆ ಕಲ್ಲಿನಿಂದ ಆವೃತ್ತವಾಗಿತ್ತು. ಇವತ್ತು ನಾವು ನಡೆಯುವುದು (ಸಈ) ಮಾರ್ಬಲ್ ಹಾಸಿದ ನುಣುಪಾದ ನೆಲದ ಮೇಲೆ. ಹಾಜರಾ ಅಂದು ನೀರಿಗಾಗಿ ಓಡುವಾಗ ಅಲ್ಲಿನ ಪರಿಸ್ಥಿತಿ ಹೇಗಿತ್ತು ಎಂಬುದನ್ನು ಸೂಚಿಸುವುದಕ್ಕಾಗಿ ಸಫಾದ ಕೊನೆಯಲ್ಲಿ ಮತ್ತು ಮರ್ವಾದ ಕೊನೆಯಲ್ಲಿ ಬಂಡೆ ಕಲ್ಲಿನ ಕುರುಹನ್ನು



ಎಣ್ಣೆ ಬತ್ತಿದ ಲಾಟೀನು

ಉಳಿಸಲಾಗಿದೆ. ಉಳಿದಂತೆ ನುಣುಪಾದ ನೆಲ. ಈ ನೆಲದಲ್ಲಿ ನಡೆಯುವಾಗ ಹಾಜರಾರ ಓಟದ ಸಂಕಟವನ್ನು ಅನುಭವಿಸಲು ಸಾಧ್ಯವೇ ಎಂಬ ಪ್ರಶ್ನೆ ಸಹಜವಾದುದು. ನಿಜವಾಗಿ, ಸಾವಿರಾರು ವರ್ಷಗಳ ಹಿಂದಿನ ಘಟನೆಯನ್ನು ಈ ಆಧುನಿಕ ಕಾಲದಲ್ಲಿ ಅಷ್ಟೇ ತೀವ್ರತೆಯೊಂದಿಗೆ ಅನುಭವಾರ್ಹಗೊಳಿಸುವುದು ಸುಲಭ ಅಲ್ಲ. ಹಾಜರಾರ ಬಗ್ಗೆ 100 ಪುಟಗಳಷ್ಟು ದೀರ್ಘ ಚರಿತ್ರೆಯನ್ನು ಓದುವುದಕ್ಕಿಂತ ಹೆಚ್ಚು ಪ್ರಭಾವಶಾಲಿ ಯಾವುದೆಂದರೆ, ಹಾಜರಾ ನಡೆದ ಆ ಎರಡು ಬೆಟ್ಟಗಳನ್ನು ಮತ್ತು ಅವೆರಡರ ನಡುವಿನ ಸ್ಥಳವನ್ನು ಹಾಗೆಯೇ ಕಾಪಿಟ್ಟು ಜನರು ನಡೆದು ಅನುಭವಿಸಿಕೊಳ್ಳುವಂತೆ ಮಾಡುವುದು. ಆಗ ಕಾಲಿಗೆ ತಾಗುವ ಪ್ರತಿ ಕಲ್ಲೂ, ಮುಳ್ಳೂ, ಮರಳೂ, ಮಣ್ಣೂ ವಿಶೇಷ ಅನುಭೂತಿಯನ್ನು ಕೊಡುತ್ತದೆ. ನಡೆಯುವ ಪ್ರತಿಯೊಬ್ಬರೂ ಸ್ವಯಂ ಹಾಜರಾ ಆಗುತ್ತಾರೆ. ತಮ್ಮದೇ ಮಗುವಿನ ದಾಹ ಇಂಗಿಸಲು ಓಡುವ ತಾಯಂದಿರಾಗುತ್ತಾರೆ. ಕಾಲು ನೋಯುವಾಗ ಹಾಜರಾ ನೆನಪಾಗುತ್ತಾರೆ. ಮುಳ್ಳು ಚುಚ್ಚುವಾಗ ಸಾವಿರಾರು ವರ್ಷಗಳ ಹಿಂದಿನ ಹಾಜರಾ ಕಣ್ಣೆದುರು ಬರುತ್ತಾರೆ. ನಿರ್ಜನ ಪ್ರದೇಶದಲ್ಲಿ ಅವರು ಅನುಭವಿಸಿರಬಹುದಾದ ಮಾನಸಿಕ ತುಮುಲಗಳು ಅರಿವಿಗೆ ಬರುತ್ತವೆ. ಹಾಗಂತ, ಸಫಾ–ಮರ್ವಾಗಳ ನಡುವಿನ ಆ ಇಡೀ ಪರಿಸರವನ್ನು ಹಾಗೆಯೇ ಈ ಆಧುನಿಕ ಕಾಲದಲ್ಲೂ ಉಳಿಸಿಕೊಳ್ಳುವುದು ಎಷ್ಟು ಪ್ರಾಯೋಗಿಕ ಎಂಬ ಪ್ರಶ್ನೆಯೂ ಉದ್ಭವವಾಗಬಹುದು. ಮಸ್ಜಿದುಲ್ ಹರಾಮ್‌ಗೆ ಭೇಟಿ ಕೊಡುವವರ ಸಂಖ್ಯೆಯಲ್ಲಿ ಪ್ರತಿದಿನ ಏರಿಕೆಯಾಗುತ್ತಲೇ ಇದೆ. ಹರಮ್‌ನ ವಿಸ್ತರಣೆಯ ಕಾಮಗಾರಿಗಳು ನಿರಂತರ ನಡೆಯುತ್ತಲೂ ಇವೆ. ಈ ವಿಸ್ತರಣೆಯ ಕಾರ್ಯದಿಂದಾಗಿ ಸಫಾ–ಮರ್ವಾಗಳ ಆ ಇಡೀ ಪರಿಸರವೇ ಮಸ್ಜಿದುಲ್ ಹರಾಮ್‌ನ ಒಳಗೆ ಸೇರಿಕೊಂಡಿದೆ. ಇವತ್ತು ಸಫಾ ಮತ್ತು ಮರ್ವಾಗಳೆಂದರೆ ಸಾವಿರಾರು ವರ್ಷಗಳ ಹಿಂದಿನ ಜನವಸತಿರಹಿತ ಪಾಳು ಭೂಮಿಯಲ್ಲ. ಮಸ್ಜಿದುಲ್ ಹರಾಮ್‌ನ ಒಂದು ಭಾಗ. ಜನರು ಇವೆರಡರ ನಡುವೆ ಏಳು ಬಾರಿ ಕಡ್ಡಾಯ ನಡಿಗೆ ನಡೆಯುವುದಷ್ಟೇ ಅಲ್ಲ, ಇಕಾಮತ್‌ನ ಕರೆ ಕೇಳಿಸಿದಾಗ ತಕ್ಷಣ ನಡೆಯನ್ನು ನಿಲ್ಲಿಸಿ ಅಲ್ಲಿಯೇ ಸಾಲಾಗಿ ನಿಲ್ಲುತ್ತಾರೆ. ನಮಾಝ್ ನಿರ್ವಹಿಸುತ್ತಾರೆ. ಬಳಿಕ ಪುನಃ ಸಈ ಮುಂದುವರಿಯುತ್ತದೆ. ಒಂದು ವೇಳೆ ಪ್ರಾಚೀನ ಕಾಲದ ಅದೇ ಸ್ಥಿತಿಯನ್ನು ಈಗಲೂ ಉಳಿಸಿಕೊಳ್ಳುತ್ತಿದ್ದರೆ ಮತ್ತು ಪ್ರತಿದಿನ ಲಕ್ಷಾಂತರ ಮಂದಿ ಅದರ ಮೇಲೆಯೇ ಸಈ ಮಾಡಬೇಕಾಗಿ ಬರುತ್ತಿದ್ದರೆ, ಏನಾಗುತ್ತಿತ್ತು? ಪ್ರಾಯೋಗಿಕವಾಗುತ್ತಿತ್ತೇ? ಮರಳಿನ ಮೇಲೆ ಮತ್ತು ಕಲ್ಲುಗಳ ಮೇಲೆ ಲಕ್ಷಾಂತರ ಮಂದಿ ನಡೆಯುವುದರಿಂದ ಅವಘಡಗಳು ಸಂಭವಿಸಲಾರದೇ? ಮರಳು ಅರಬ್ ವಲಯದ ವಿಶೇಷತೆ. ಸಾಮಾನ್ಯವಾಗಿ ಸಮುದ್ರ, 'ನದಿ ಕಿನಾರೆ'ಗಳಲ್ಲಿ ಮರಳಿರುತ್ತದೆ. ಅದರ ಹೊರ ಪ್ರದೇಶಗಳ ಮಂದಿಗೆ ಮರಳಿನೊಂದಿಗೆ ಸಂಬಂಧ





ಬಹುತೇಕ ಇರುವುದೇ ಇಲ್ಲ. ಅದರಲ್ಲಿ ನಡೆದು ಅಭ್ಯಾಸ ಇರುವುದಿಲ್ಲ. ನಗರ ಪ್ರದೇಶಗಳಲ್ಲಂತೂ ಕಾಂಕ್ರೀಟಿನ ಮೇಲೆ ನಡೆದೇ ಜನರಿಗೆ ಅಭ್ಯಾಸ. ಕಲ್ಲುಗಳ ಮೇಲೆ ಹತ್ತು ಹೆಜ್ಜೆ ಇಡಲೂ ಸಮರ್ಥರಲ್ಲದ ಜನರೇ ಈ ಜಗತ್ತಿನಲ್ಲಿ ಹೆಚ್ಚು. ತೀರಾ ಹಳ್ಳಿ ಪ್ರದೇಶದಲ್ಲಿ ಮತ್ತು ಕಟ್ಟಡ ನಿರ್ಮಾಣ ಕಾಮಗಾರಿಯಂಥ ಒರಟು ಕೆಲಸಗಳಲ್ಲಿ ತೊಡಗಿಸಿಕೊಂಡವರಿಗೆ ಮಾತ್ರ ಕಲ್ಲು–ಮರಳುಗಳ ನಡುವೆ ನಡೆದು ಗೊತ್ತಿರುತ್ತದೆ. ಜಗತ್ತಿನ ನಾನಾ ಮೂಲೆಗಳಿಂದ ಹರಮ್‌ಗೆ ಬರುವವರಲ್ಲಿ ಹೀಗೆ ಮರಳು–ಕಲ್ಲುಗಳ ಮೇಲೆ ನಡೆದು ಅಭ್ಯಾಸ ಇರುವವರು ಎಷ್ಟಿರಬಹುದು? ಬಂಡೆಗಳ ಮೇಲೆ ಹತ್ತುವ ಮತ್ತು ಇಳಿಯುವ ದೈಹಿಕ ಸಾಮರ್ಥ್ಯ ಎಷ್ಟು ಮಂದಿಗಿರಬಹುದು? ಆದ್ದರಿಂದಲೇ ಪ್ರಾಚೀನ ಕಾಲದ ಅದೇ ಸ್ಥಿತಿಯನ್ನು ಸಂಪೂರ್ಣವಾಗಿ ಈಗಲೂ ಹಾಗೆಯೇ ಉಳಿಸಿಕೊಳ್ಳಬೇಕಿತ್ತು ಎಂದು ವಾದಿಸುವುದು ತಪ್ಪಾಗುತ್ತದೆ. ಮಾತ್ರವಲ್ಲ, ಕುರುಹುಗಳಾಗಿ ಸಫಾ ಮತ್ತು ಮರ್ವಾಗಳ ಕೊನೆಯಲ್ಲಿ ಬಂಡೆಗಳನ್ನು ಉಳಿಸಿಕೊಂಡಿರುವ ಕ್ರಮವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಇಲ್ಲೊಂದು ಕುತೂಹಲಕಾರಿ ಚರಿತ್ರೆಯನ್ನು ನಿಮ್ಮೊಂದಿಗೆ ಹಂಚಿಕೊಳ್ಳಬೇಕು. ಸಫಾದ ಕೊನೆಯಿಂದ ನಡಿಗೆಯನ್ನು ಆರಂಭಿಸಿ ಮರ್ವಾದ ಕೊನೆಗೆ ತಲುಪುವುದರ ನಡುವೆ ಓಡಬೇಕಾದ (ಪುರುಷರಿಗೆ ಮಾತ್ರ ಐಚ್ಛಿಕ) ಒಂದು ಸ್ಥಳ ಇದೆ. ಅದು ಸಫಾ ಮತ್ತು ಮರ್ವಾಗಳ ಮಧ್ಯ ಭಾಗದಲ್ಲಿದೆ. ಸಫಾ ಒಂದು ತುದಿಯಲ್ಲಿದ್ದರೆ ಮರ್ವಾ ಇನ್ನೊಂದು ತುದಿಯಲ್ಲಿದೆ. ಇವೆರಡೂ ಎತ್ತರದಲ್ಲಿವೆ. ಇವೆರಡರ ಮಧ್ಯ ಭಾಗ ತಗ್ಗಿಕೊಂಡಿದೆ. ಈ ಮಧ್ಯ ಭಾಗವು ಸುಮಾರು ಇಪ್ಪತ್ತೈದು ಹೆಜ್ಜೆಗಳಷ್ಟು ಉದ್ದಕ್ಕೆ ಚಾಚಿಕೊಂಡಿದೆ. ಸಫಾದಿಂದ ನಡೆಯುತ್ತಾ ಬರುವ ಯಾತ್ರಿಕ ಈ ನಿರ್ದಿಷ್ಟ ಜಾಗಕ್ಕೆ ತಲುಪಿದಾಗ ಓಡಬೇಕು. ಸುಮಾರು ಇಪ್ಪತ್ತೈದು ಹೆಜ್ಜೆಗಳಷ್ಟು ದೂರಕ್ಕೆ ಓಡಿದ ಬಳಿಕ ಮತ್ತೆ ನಡೆಯಬೇಕು. ಹಾಗಂತ, ಎಲ್ಲಿಂದ ಓಟ ಆರಂಭಿಸಬೇಕು ಮತ್ತು ಎಲ್ಲಿ ಕೊನೆಗೊಳಿಸಬೇಕು ಎಂಬುದನ್ನು ಸೂಚಿಸುವುದಕ್ಕಾಗಿ ಹರಮ್‌ನ ಮೇಲ್ಛಾವಣಿಯ ಅಡಿಭಾಗದಲ್ಲಿ (Roof) ಹಸುರು ಬಣ್ಣದಿಂದ ಮಾಡಲಾದ ಸೂಚನಾ ವ್ಯವಸ್ಥೆಯಿದೆ. ಓಟ ಆರಂಭಿಸುವಲ್ಲಿಂದ ಓಟ ಕೊನೆಗೊಳಿಸುವಲ್ಲಿ ವರೆಗಿನ ದೂರದ ವರೆಗೆ ಹಸುರು ಬಣ್ಣ. ಜೊತೆಗೆ ಹಸುರು ಬಣ್ಣದ ಮಿನಿಚರ್‌ಗಳನ್ನು ಅಳವಡಿಸಲಾಗಿದ್ದು ಅದು ಸದಾ ಬೆಳಗುತ್ತಿರುತ್ತದೆ. ನಿಜವಾಗಿ, ಹಸುರು ಬಣ್ಣವು ಸಫಾ–ಮರ್ವಾಗಳ ನಡುವಿನ ಈ ಮಧ್ಯ ಭಾಗದಲ್ಲಿ ಮಾತ್ರ ಇರುವುದಲ್ಲ. ಕಅಬಾದ ತವಾಫನ್ನು ಎಲ್ಲಿಂದ ಆರಂಭಿಸಬೇಕು ಎಂಬುದನ್ನು ತಿಳಿಸುವ ಸೂಚನಾ ಫಲಕದ ಬಣ್ಣವೂ ಹಸುರೇ, ಹರಾಮ್‌ನ ಮಿನಾರಗಳಿಗೆ ಅಳವಡಿಸಿದ ಲೈಟಿಂಗ್‌ನ ಬಣ್ಣವೂ ಹಸುರೆ. ಈಗಾಗಲೇ ಉಲ್ಲೇಖಿಸಿರುವಂತೆ ಕ್ಲಾಕ್ ಟವರ್‌ನ ತುದಿಯಲ್ಲಿ ಒಂದು ಚಂದ್ರನ ಆಕೃತಿಯಿದೆ. ಅದರ ಲೈಟಿಂಗ್‌ನ ಬಣ್ಣವೂ ಹಸುರೇ. ಹಾಗಂತ, ಇದು ಕೇವಲ ಮಸ್ಜಿದುಲ್

ಹರಾಮ್‌ನಲ್ಲಿ ಮಾತ್ರ ಕಾಣಸಿಗುವ ಬಣ್ಣ ಅಲ್ಲ. ಮದೀನಾದ ಮಸ್ಜಿದುನ್ನಬವಿಯಲ್ಲೂ ಹಸುರು ಬಣ್ಣ ಸ್ಥಾನವನ್ನು ಗಿಟ್ಟಿಸಿಕೊಂಡಿದೆ. ಮಸ್ಜಿದುನ್ನಬವಿಯಲ್ಲಿರುವ ಕೆಲವು ಮಿನಾರಗಳಲ್ಲಿ ಒಂದು ಮಿನಾರದ ಬಣ್ಣ ಹಸುರು. ಆ ಮಿನಾರದ ವಿಶೇಷತೆ ಏನೆಂದರೆ, ಅದರ ಬಳಿಗೆ ಹೋದರೆ ಹಸುರು ಬಣ್ಣದ ಕುಬ್ಬದೆಡೆಗೆ ಸಾಗಲು ಸುಲಭವಾಗುತ್ತದೆ. ಈ ಕುಬ್ಬದ ಕೆಳಗಡೆ ಪ್ರವಾದಿ(ಅ), ಅಬೂಬಕರ್ ಸಿದ್ದೀಕ್ ಮತ್ತು ಉಮರ್(ರ) ಅವರ ಸಮಾಧಿ ಇದೆ. ಹಾಗಂತ, ಪ್ರವಾದಿಯವರ ಸಮಾಧಿಯನ್ನು ಆವರಿಸಿಕೊಂಡಿರುವ ಈ ಕುಬ್ಬದ ಬಣ್ಣವು ಆರಂಭದಲ್ಲಿ ಹಸಿರಾಗಿರಲಿಲ್ಲ. ಹಿಜರಿ 678ರಲ್ಲಿ ಸುಲ್ತಾನ್ ಖಲಾವೂನ್ ಸ್ವಾಲಿಹಿ ಎಂಬವರ ಆಡಳಿತ ಕಾಲದಲ್ಲಿ ಈ ಕುಬ್ಬವನ್ನು ಕಟ್ಟಲಾಗಿತ್ತು. ಆಗ ಅದಕ್ಕೆ ಬಳಿಯಲಾದ ಬಣ್ಣ ನೀಲಿ ಮತ್ತು ಬಿಳಿ. ಹಿಜರಿ 12ನೇ ಶತಮಾನದಲ್ಲಿ ಇದಕ್ಕೆ ಹಸುರು ಬಣ್ಣವನ್ನು ಬಳಿಯಲಾಯಿತು. ಅಂದಹಾಗೆ, ಇಸ್ಲಾಮಿನ ಬಣ್ಣ ಹಸುರು ಎಂಬುದನ್ನು ಸಮರ್ಥಿಸುವುದಕ್ಕಾಗಿ ಈ ವಿವರಗಳನ್ನು ಆಧಾರವಾಗಿ ಎತ್ತಿಕೊಳ್ಳುವುದು ಸರಿಯೆನಿಸುವುದಿಲ್ಲ. ಮಸ್ಜಿದುಲ್ ಹರಾಮ್‌ನಲ್ಲಾಗಲಿ, ಮಸ್ಜಿದುನ್ನಬವಿಯಲ್ಲಾಗಲಿ ಸಾಮಾನ್ಯವಾಗಿ ಬಿಳಿ ಅಥವಾ ನಸು ಬಿಳಿ ಬಣ್ಣವೇ ಪ್ರಾಬಲ್ಯವನ್ನು ಸ್ಥಾಪಿಸಿಕೊಂಡಿದೆ. ಒಂದು ವೇಳೆ, ಮಸ್ಜಿದುಲ್ ಹರಾಮ್ ಮತ್ತು ನಬವಿಯಲ್ಲಿರುವ ಒಟ್ಟು ಬಣ್ಣಗಳ ಶೇಕಡಾವಾರು ಆಧಾರದಲ್ಲಿ ಇಸ್ಲಾಮಿನ ಬಣ್ಣವನ್ನು ನಿರ್ಣಯಿಸುವುದಾದರೆ, ಬಿಳಿಯ ಹೊರತು ಇನ್ನಾವ ಬಣ್ಣಕ್ಕೂ ಸ್ಥಾನ ಸಿಗಲಾರದು. ನಿಜವಾಗಿ, ಹಸುರು ಬಣ್ಣದಲ್ಲಿ ಒಂದು ಆಕರ್ಷಣೆಯಿದೆ. ಅದು ಕಣ್ಣಿಗೆ ತಂಪು. ಹೆಚ್ಚಿನ ಎಲ್ಲ ಬಣ್ಣಗಳ ಜೊತೆಯೂ ಬೆರೆಯಬಹುದಾದ ಮತ್ತು ಇತರ ಬಣ್ಣಗಳ ಅಂದವನ್ನು ಹೆಚ್ಚಿಸಬಹುದಾದ ಸಾಮರ್ಥ್ಯವೂ ಅದಕ್ಕಿದೆ. ಪ್ರಕೃತಿಯ ಬಣ್ಣವೂ ಹಸುರೇ. ಕಪ್ಪು-ಕೆಂಪು-ನೀಲಿ ಬಣ್ಣಗಳಿಗೆ ಹೋಲಿಸಿದರೆ ಹಸುರೇ ಒಂದಷ್ಟು ಮೃದು ಮತ್ತು ಹಿತಾನುಭವ ನೀಡುವಂಥದ್ದು. ಕೃಷಿ-ತೋಟಗಳು, ಉದ್ಯಾನಗಳು, ಬೆಟ್ಟ-ಗುಡ್ಡಗಳು ನಮಗೆ ಆಕರ್ಷಣೀಯವಾಗಿ ಕಾಣುವುದರಲ್ಲಿ ಅಲ್ಲಿರುವ ಹಸುರು ಮಹತ್ವಪೂರ್ಣ ಪಾತ್ರ ವಹಿಸುತ್ತದೆ. ಬೋಳು ಬೋಳಾದ ಬೆಟ್ಟ ಮತ್ತು ಗಿಡ-ಮರಗಳು ತುಂಬಿಕೊಂಡಿರುವ ಬೆಟ್ಟಗಳಲ್ಲಿ ನಮ್ಮನ್ನು ಆಕರ್ಷಿಸುವುದು ಯಾವುದು ಎಂಬುದನ್ನು ನೋಡಿದರೂ ಇದು ಮನದಟ್ಟಾಗುತ್ತದೆ. ಎರಡೂ ಬೆಟ್ಟವೇ ಆಗಿದ್ದರೂ ಒಂದರಲ್ಲಿ ಕಣ್ಣಿಗೆ ತಂಪು ಇದೆ. ನೋಡಿದಷ್ಟು ಸುಸ್ತಾಗದ ಆಕರ್ಷಣೆಯಿದೆ. ಬಹುಶಃ, ಮಸ್ಜಿದುಲ್ ಹರಾಮ್ ಮತ್ತು ಮಸ್ಜಿದುನ್ನಬವಿಯ ಒಳ-ಹೊರಗೆ ಹಸಿರು ಬಣ್ಣ ಸ್ಥಾನವನ್ನು ಪಡೆದುಕೊಂಡಿದ್ದರೆ ಅದರ ಹಿಂದೆ ಈ ಸಹಜ ಪ್ರಾಕೃತಿಕ ಕಾರಣಗಳಿರಬಹುದೆಂದು ಅನಿಸುತ್ತದೆ. ಅಂದಹಾಗೆ, ಸಫಾ ಮತ್ತು ಮರ್ವಾದ ಮಧ್ಯೆ ಹಸುರು ಬಣ್ಣದಲ್ಲಿ ಸೂಚನೆಯನ್ನು ನೀಡಲಾದಷ್ಟು ದೂರ ಓಡಬೇಕೆಂದು ಈ ಹಿಂದೆ ನಾನು ಹೇಳಿರುವೆನಲ್ಲವೇ? ಸಫಾ





ಮತ್ತು ಮರ್ವಾ ಎತ್ತರದಲ್ಲಿದ್ದರೆ ಈ ಮಧ್ಯಭಾಗ ತಗ್ಗಿನಲ್ಲಿದೆ. ಇವತ್ತು ಮಾತ್ರವಲ್ಲ, ಹಾಜರಾ ತನ್ನ ಮಗು ಇಸ್ಮಾಈಲ್‌ರನ್ನು ಮಲಗಿಸಿ ನೀರಿಗಾಗಿ ಹುಡುಕಾಡಿದ ಸಂದರ್ಭದಲ್ಲೂ ಇದು ಹೀಗೆಯೇ ಇತ್ತು. ಎರಡೂ ಬೆಟ್ಟಗಳು ಎತ್ತರದಲ್ಲಿದ್ದುವು. ಮಧ್ಯ ಭಾಗ ತಗ್ಗಿಕೊಂಡಿತ್ತು. ಹಾಜರಾ ಬೆಟ್ಟದ ಒಂದು ತುದಿಯಲ್ಲಿದ್ದಾಗ ಕೆಳಗಡೆ ಮಲಗಿಸಿದ ಮಗುವನ್ನು ಕಾಣಬಹುದಾಗಿತ್ತು. ಆದರೆ ಬೆಟ್ಟದಿಂದ ಇಳಿದು ಇನ್ನೊಂದು ಬೆಟ್ಟದ ಕಡೆಗೆ ಸಾಗುವ ಹಾದಿಯಲ್ಲಿ ಈ ತಗ್ಗಿನ ಪ್ರದೇಶಕ್ಕೆ ತಲುಪುವಾಗ ಮಗುವನ್ನು ನೋಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಮಗು ಎತ್ತರದಲ್ಲೂ ಹಾಜರಾ ತಗ್ಗಿನಲ್ಲೂ ಇರುತ್ತಿದ್ದರು. ಆದ್ದರಿಂದ ಈ ತಗ್ಗಿನ ಪ್ರದೇಶಕ್ಕೆ ತಲುಪುತ್ತಲೇ ಹಾಜರಾ ಓಡುತ್ತಿದ್ದರು. ಬಾಯಾರಿದ ಮಗುವಿನ ಮೇಲಿನ ಕಾಳಜಿ, ಕಾತರ, ತಳಮಳದ ಓಟ. ಬಿರಬಿರನೇ ಓಡಿ ಎತ್ತರ ಪ್ರದೇಶಕ್ಕೆ ತಲುಪಿ ಮಗುವನ್ನು ನೋಡುವ, ಜೀವಂತ ಉಳಿಸಿಕೊಳ್ಳುವ ಹಂಬಲ. ನಿಜವಾಗಿ, ಹಾಜರಾರ ನೀರಿನ ಹುಡುಕಾಟದಲ್ಲಿ ಮತ್ತು ಓಟದಲ್ಲಿ ಅಭೂತಪೂರ್ವ ಎನ್ನಬಹುದಾದ ಏನೂ ಇಲ್ಲ. ಹಾಜರಾರಂಥ ಪರಿಸ್ಥಿತಿಯನ್ನು ಎದುರಿಸುವ ಯಾವ ತಾಯಿಯೇ ಆದರೂ ಮಾಡುವ ಸಹಜ ಚಟುವಟಿಕೆಗಳಿವು. ಮಗು ಬಾಯಾರಿದರೆ ಯಾವ ತಾಯಿಯೂ ಸುಮ್ಮನಾಗಲ್ಲ. ಮಗುವಿನ ಪ್ರಾಣವನ್ನು ಉಳಿಸುವುದಕ್ಕಾಗಿ ಯಾವ ಬೆಟ್ಟ ಹತ್ತಲೂ, ಯಾವ ಅಪಾಯವನ್ನು ಮೈ ಮೇಲೆ ಎಳೆದುಕೊಳ್ಳಲೂ ಆಕೆ ಸಿದ್ಧವಾಗಬಲ್ಲಳು. ಹೀಗಿರುವಾಗ, ಹಾಜರಾ ಓಡಿದಲ್ಲಿ ಓಡುವುದು, ನಡೆದಲ್ಲಿ ನಡೆಯುವುದು ಮತ್ತು ಹತ್ತಿದಲ್ಲಿ ಹತ್ತುವುದನ್ನೆಲ್ಲ ಆರಾಧನೆಯಾಗಿ ಪರಿಗಣಿಸಿರುವುದರ ಔಚಿತ್ಯವು ವಿಶ್ಲೇಷಣೆಗೆ ಅರ್ಹವಾದುದು. ಓರ್ವ ತಾಯಿ ಎಂಬ ನೆಲೆಯಲ್ಲಿ ಈ ಜಗತ್ತಿನಲ್ಲಿ ಕೋಟ್ಯಂತರ ಹಾಜರಾಗಳು ಇದ್ದಾರೆ. ಒಂದು ಮಗು ಎಂಬ ದೃಷ್ಟಿಯಲ್ಲಿ ಈ ಜಗತ್ತಿನಲ್ಲಿ ಕೋಟ್ಯಂತರ ಇಸ್ಮಾಈಲ್ ಇದ್ದಾರೆ. ಇವತ್ತು ಈ ಮಕ್ಕಳಲ್ಲಿ ಹಿಂದಿನ ಇಸ್ಮಾಈಲ್‌ರಂತೆ ಪ್ರಾಣ ಸಂಕಟದಿಂದ ಚಡಪಡಿಸುವ ಮಕ್ಕಳು ಎಷ್ಟಿರಬಹುದು? ಹಾಜರಾರಂತೆ ಸಂಕಟಪಡುವ ತಾಯಂದಿರು ಎಷ್ಟಿರಬಹುದು? ಅಪೌಷ್ಟಿಕತೆ, ಅನಾರೋಗ್ಯ, ಕೋಮುಗಲಭೆ, ವಲಸೆ, ಯುದ್ಧ, ಬಡತನ, ಪ್ರಕೃತಿ ವಿಕೋಪ, ಅಪಘಾತ... ಇತ್ಯಾದಿ ಇತ್ಯಾದಿಗಳು ಈ ಜಗತ್ತಿನಲ್ಲಿ ಎಷ್ಟು ಇಸ್ಮಾಈಲ್‌ಗಳನ್ನು ಸೃಷ್ಟಿಸಿರಬಹುದು? ಎಷ್ಟು ಹಾಜರಾರನ್ನು ತಯಾರಿಸಿರಬಹುದು? ಸಿರಿಯದ ಆಂತರಿಕ ಘರ್ಷಣೆಯ ಕುರುಹಾಗಿ ಟರ್ಕಿಯ ಸಮುದ್ರ ಕಿನಾರೆಯಲ್ಲಿ ಸಿಕ್ಕ ಅಯ್ಲನ್ ಕುರ್ದಿಯನ್ನೊಮ್ಮೆ ಸ್ಮರಿಸಿಕೊಳ್ಳಿ. ಇರಾಕ್, ಸಿರಿಯ, ಯಮನ್, ಕೊಲಂಬಿಯ, ನೈಜೀರಿಯಾ, ಅಫಘಾನ್, ಸುಡಾನ್, ಫೆಲೆಸ್ತೀನ್... ಹೀಗೆ ಪಟ್ಟಿ ಮಾಡುತ್ತಾ ಹೋದರೆ ಇಸ್ಮಾಈಲ್‌ಗಳ ದಂಡೇ ಸಿಗಬಹುದು. ನಮ್ಮ ದೇಶದಲ್ಲಿ ನಡೆದ ಕೋಮುಗಲಭೆಗಳಲ್ಲಿ ಅನಾಥ ಮಕ್ಕಳ ದಂಡೇ ನಿರ್ಮಾಣವಾಗಿದೆ. ಆಶ್ರಮಗಳಲ್ಲಿ, ಅನಾಥಾಲಯಗಳಲ್ಲಿ ಅವರು

ಬದುಕುತ್ತಿರಬಹುದು. ಎಷ್ಟೋ ಮಕ್ಕಳು ಅದ್ದೂರಿ ಮನೆಗಳ ಒಳಗೆ ಮುಸುರೆ ತೊಳೆಯುತ್ತಿರಬಹುದು. ನಗರಗಳಲ್ಲಿ ಭಿಕ್ಷೆ ಬೇಡುತ್ತಿರಬಹುದು. ನೀವೊಮ್ಮೆ ಆ ಮಕ್ಕಳ ಸ್ಥಾನದಲ್ಲಿ ನಿಂತು ಆಲೋಚಿಸಿ. ಅವರ ಬೆಳಗು ಹೇಗಿರಬಹುದು? ಅವರ ರಾತ್ರಿ ಹೇಗಿರಬಹುದು? ತಾಯಿಯನ್ನೋ ತಂದೆಯನ್ನೋ ಸ್ಮರಿಸುತ್ತಾ ಅವರೆಷ್ಟು ಕಣ್ಣೀರಾಗುತ್ತಿರಬಹುದು? ಸಾಮಾನ್ಯವಾಗಿ, ಇತರ ಮಕ್ಕಳೊಂದಿಗೆ ನಮ್ಮ ಮಕ್ಕಳು ಬೆರೆಯುವಾಗ ಮಕ್ಕಳಲ್ಲಿ ಒಂದು ಭಂಡ ಧೈರ್ಯ ಇರುತ್ತದೆ. ತಮ್ಮ ಜೊತೆ ಹೆತ್ತವರಿರುತ್ತಾರೆ ಎಂಬ ಧೈರ್ಯ. ಇತರ ಮಕ್ಕಳಿಂದ ಸಣ್ಣ ತೊಂದರೆ ಎದುರಾದರೂ ಅವು ಓಡಿ ಬಂದು ನಮ್ಮಲ್ಲಿ ದೂರು ಹೇಳುತ್ತವೆ. ಹೆತ್ತವರು ಮಕ್ಕಳ ಪಾಲಿನ ಅತಿ ದೊಡ್ಡ ಭರವಸೆ. ಆದರೆ ಈ ಜಗತ್ತಿನಲ್ಲಿ ಇಂಥ ಭರವಸೆಯನ್ನೇ ಶಾಶ್ವತವಾಗಿ ಕಳಕೊಂಡ ಕೋಟ್ಯಂತರ ಮಕ್ಕಳಿದ್ದಾರೆ. ಪ್ರತಿ ಬೈಗುಳ, ಜೋರು, ಗದರಿಕೆಯನ್ನು ಅವು ಈ ಭರವಸೆಯ ಅನುಪಸ್ಥಿತಿಯಲ್ಲಿ ಕಣ್ಣೀರಿನೊಂದಿಗೆ ಕಳೆಯುತ್ತಿವೆ. ಇದರ ಇನ್ನೊಂದು ಭಾಗ ತಾಯಂದಿರದ್ದು. ಮಗುವನ್ನು ಕಳಕೊಂಡ ಅಥವಾ ಮಗುವನ್ನು ಪ್ರಾಣಸಹಿತ ಉಳಿಸಿಕೊಳ್ಳಲು ಹೋರಾಟ ನಡೆಸುತ್ತಿರುವ ತಾಯಂದಿರ ಸಂಕಟಕ್ಕೆ ಇನ್ನಾವುದೂ ಸಾಟಿಯಿಲ್ಲ. ನಿಜವಾಗಿ, ಹಾಜರಾರ ಓಟ ಮುಸ್ಲಿಮರ ಪಾಲಿಗೆ ಆರಾಧನೆಯಾಗಿರುವುದರ ಔಚಿತ್ಯ ಸ್ಪಷ್ಟವಾಗುವುದು ಇಲ್ಲಿ. ಸಫಾ ಮತ್ತು ಮರ್ವಾದ ನಡುವೆ ಮುಸ್ಲಿಮರು ಓಡಬೇಕಾದುದು ಹಾಜರಾರಂಥ ತಾಯಿ ಹೃದಯವನ್ನು ಹೊಂದುವುದಕ್ಕಾಗಿ. ಇಸ್ಮಾಈಲ್‌ರಂಥ ಮಕ್ಕಳ ಸಂಕಟಕ್ಕೆ ಸ್ಪಂದಿಸುವುದಕ್ಕಾಗಿ. ಓರ್ವ ಉಮ್ರಾ ನಿರ್ವಹಿಸಿದ ವ್ಯಕ್ತಿ ತನ್ನೂರಿಗೆ ಮರಳಿದ ಬಳಿಕ ಹಾಜರಾ ಆಗಬೇಕು. ಅಂದರೆ ತಾಯಿ ಹೃದಯವನ್ನು ಹೊಂದಬೇಕು. ತನ್ನ ಪರಿಸರದಲ್ಲಿ, ಆಸು-ಪಾಸಿನಲ್ಲಿ, ತನ್ನ ಗೊತ್ತಿನಲ್ಲಿ ವಿವಿಧ ಕಾರಣಗಳಿಂದಾಗಿ ಸಂಕಷ್ಟಕ್ಕೊಳಗಾದ ಮಕ್ಕಳಿದ್ದರೆ ಅಲ್ಲಿಗೆ ಹಾಜರಾರಂತೆ ಧಾವಿಸಬೇಕು. ಆ ಮಕ್ಕಳಲ್ಲಿ ಇಸ್ಮಾಈಲರನ್ನು ಕಾಣಬೇಕು. ಆ ಮಕ್ಕಳ ತಾಯಂದಿರಲ್ಲಿ ಹಾಜರಾರನ್ನು ಗುರುತಿಸಬೇಕು. ತಾಯಿ ಹೃದಯ ಎಂಬುದು ಬಣ್ಣ, ಭಾಷೆ, ಜಾತಿ, ಧರ್ಮಗಳಾಚೆಗೆ ಮಿಡಿಯುವಂಥದ್ದು. ಆ ಹೃದಯವನ್ನು 'ಉಮ್ರಾ' ನಿರ್ವಹಿಸಿದ ಪ್ರತಿ ಗಂಡು ಮತ್ತು ಹೆಣ್ಣು ತನ್ನದಾಗಿಸಿಕೊಳ್ಳಬೇಕು. ತಾನು ಈ ವರೆಗೆ ಏನಾಗಿದ್ದೆನೋ ಇನ್ನು ಮುಂದಕ್ಕೆ ಅದು ನಾನಲ್ಲ, ನಾನಿನ್ನು ಹಾಜರಾ, ಸಕಲ ಮನುಷ್ಯರ ಪಾಲಿಗೆ ತಾನಿನ್ನು ಹಾಜರಾ. ಹಾಜರಾರಂತೆ ಇನ್ನೋರ್ವರ ಪ್ರಾಣ ರಕ್ಷಣೆಗಾಗಿ ಯಾವ ತ್ಯಾಗಕ್ಕೂ ಸಿದ್ಧಳಾ/ನಾ/ದ ಹಾಜರಾ... ಎಂಬ ನಿರ್ಧಾರವನ್ನು ಸಫಾ ಮತ್ತು ಮರ್ವಾದ ನಡುವೆ ಓಡುವ ಪ್ರತಿಯೋರ್ವನೂ/ಳೂ/ ತಿಳಿಯಬೇಕು. ತಾಯಿ ಹೃದಯಕ್ಕೆ ಇನ್ನಾವುದೂ ಸಾಟಿಯಿಲ್ಲದಿರುವುದರಿಂದಲೇ ಹಾಜರಾರ ಓಟವನ್ನು ಆರಾಧನೆಯಾಗಿ ಸ್ವೀಕರಿಸಲಾಗಿದೆ ಎಂದೇ ಅನಿಸುತ್ತದೆ. ಇನ್ನೋರ್ವರ ಪ್ರಾಣ ರಕ್ಷಕರಾಗಿ ಬದಲಾಗುವುದಕ್ಕೆ ನೀಡಲಾಗುವ ತರಬೇತಿಯೇ





ಸಫಾ ಮತ್ತು ಮರ್ವಾದ ನಡುವಿನ ಓಟ. ನಿಜವಾಗಿ ಸಫಾ ಮತ್ತು ಮರ್ವಾದಲ್ಲಿ 7 ಬಾರಿ ಓಡಿದರೆ ಆರಾಧನೆಯೇನೋ ಪೂರ್ತಿಯಾಗುತ್ತದೆ. ಆದರೆ, ಓರ್ವ ಉಮ್ರಾ ಯಾತ್ರಾರ್ಥಿಯ ಓಟ ಆರಂಭವಾಗುವುದೇ 7ನೇ ಬಾರಿ ಓಟ ಕೊನೆಗೊಳಿಸಿದಲ್ಲಿಂದ. ಸಫಾದಿಂದ ಆರಂಭವಾಗುವ ಓಟ 7ನೇ ಸುತ್ತು ಕೊನೆಗೊಳ್ಳುವುದು ಮರ್ವಾದಲ್ಲಿ. ಓರ್ವ ಯಾತ್ರಾರ್ಥಿ ತನ್ನ ಜೀವನದ ಓಟವನ್ನು ಅಲ್ಲಿಂದ ಆರಂಭಿಸಬೇಕು. ಆ ಓಟ ಮುಂದಿನ ಜೀವನಪೂರ್ತಿ ನಿರಂತರವಾಗಿರಬೇಕು. ಅಶಕ್ತರಿಗಾಗಿ, ಅನಾಥರಿಗಾಗಿ, ಅಸ್ವಸ್ಥರಿಗಾಗಿ, ಅಪಾಯದಲ್ಲಿ ಸಿಲುಕಿದವರಿಗಾಗಿ... ಇರುವ ಓಟ. ಉಮ್ರಾ ಯಾತ್ರಾರ್ಥಿ ಹೀಗೆ ಪ್ರಾಣ ರಕ್ಷಕರಾಗಿ ಬದಲಾದಾಗಲೇ ಸಫಾ ಮತ್ತು ಮರ್ವಾದ ಓಟ ಜೀವಂತಿಕೆಯನ್ನು ಪಡಕೊಳ್ಳುವುದು.

## ಭಾಗ: 9

ವಿಷಾದಕರ ಸಂಗತಿ ಏನೆಂದರೆ, ಸಫಾ ಮತ್ತು ಮರ್ವಾಗಳ ಕೊನೆಯಲ್ಲಿ ಪುರಾತನ ಬಂಡೆಯ ಕುರುಹುಗಳನ್ನು ಹಾಗೆಯೇ ಉಳಿಸಿಕೊಂಡದ್ದನ್ನು ಬಿಟ್ಟರೆ ಉಳಿದಂತೆ ಹರಮ್ ಮತ್ತು ಅದರ ಸುತ್ತಮುತ್ತ ಪ್ರವಾದಿ(ಸ) ಹಾಗೂ ಅವರ ಕಾಲಕ್ಕೆ ಸಂಬಂಧಿಸಿದ ಕುರುಹುಗಳನ್ನು ಕಾಪಿಡಲಾಗಿಲ್ಲ ಎಂಬುದು. ಅದರಲ್ಲಿ ಮುಖ್ಯವಾದುದು "ಝಂ ಝಂ". ಝಂ ಝಂನ ಹುಟ್ಟು ಎಷ್ಟು ಕೌತುಕ ಪೂರ್ಣವೋ, ಆ ಬಳಿಕದಿಂದ ಈ ವರೆಗೆ ಅದು ಸಾಗಿ ಬಂದ ಹಾದಿಯೂ ಅಷ್ಟೇ ಮಹತ್ವಪೂರ್ಣ. ಹಲವಾರು ಐತಿಹಾಸಿಕ ಸವಾಲುಗಳನ್ನು ಎದುರಿಸುತ್ತಲೇ ಮತ್ತು ಎಲ್ಲವನ್ನೂ ಮೆಟ್ಟಿ ನಿಲ್ಲುತ್ತಲೇ ಇವತ್ತಿಗೂ ಪವಾಡ ಸದೃಶವಾಗಿ ಉಳಿದಿರುವ ನೀರು ಝಂ ಝಂ. ಇಸ್ಮಾಈಲ್‌ರ ಕಾಲಬುಡದಲ್ಲಿ ಹುಟ್ಟಿ, ಆ ಬಳಿಕ ಬಾವಿಯಾಗಿ ಪರಿವರ್ತನೆಗೊಂಡು, ಐತಿಹಾಸಿಕ ಬೆಳವಣಿಗೆಗಳಿಗೆ ಸಾಕ್ಷಿಯಾಗುತ್ತಾ, ಮಕ್ಕಾದ ಜನರ ಪಾಲಿಗೆ ಓಯಸಿಸ್‌ನಂತೆ ಸದಾ ಜೀವ ದ್ರವವಾಗುತ್ತಾ ಮತ್ತು ಒಂದು ಕಾಲದಲ್ಲಿ ಬಾವಿಯೇ ಮುಚ್ಚಲ್ಪಟ್ಟು ಅಸ್ತಿತ್ವ ನಾಶಗೊಂಡಲ್ಲಿಂದ ಮತ್ತೆ ಎದ್ದು ನಿಂತ ಐತಿಹಾಸಿಕ ಹಿನ್ನೆಲೆ ಅದಕ್ಕಿದೆ. ಆದರೂ ಆ ಬಾವಿ ಇವತ್ತು ಭೂಗತವಾಗಿದೆ. ಮಸ್ಜಿದುಲ್ ಹರಾಮ್‌ನ ವಿಸ್ತರಣೆಯ ಹಿನ್ನೆಲೆಯಲ್ಲಿ ಅದು ಭೂಮಿಯ ಅಡಿಯಲ್ಲಿ ಸೇರಿಕೊಂಡಿದೆ. ಅದರ ಮೇಲೆ ಕಾಂಕ್ರೀಟು ನೆಲ ಎದ್ದಿದೆ. ಈ ಬಾವಿಗೆ ಎರಡನೇ ಪ್ರಧಾನ ಒರತೆಯನ್ನು ಕೊಡುವ ಜಬಲುಲ್ ಕುಬೈಸ್ ಅಥವಾ ಜಬಲುಲ್ ಅಮೀನ್ ಬೆಟ್ಟವನ್ನು ಬಿಟ್ಟರೆ ಝಂ ಝಂಗೆ ಸಂಬಂಧಿಸಿ ಯಾವ ಕುರುಹೂ ಇಲ್ಲ. ಹಾಗಂತ, ಪ್ರತಿದಿನ ಲಕ್ಷಾಂತರ ಮಂದಿ ಕುಡಿಯುವ ನೀರಿನ ಮೂಲವು ವೀಕ್ಷಣೆಗೆ ಖಂಡಿತಕ್ಕೂ ಅರ್ಹ. ಅದು ಕೇವಲ ಬಾವಿಯಲ್ಲ. ಪವಾಡ ಸದೃಶ ಬಾವಿ. ಐತಿಹಾಸಿಕವಾಗಿ ಮಹತ್ವಪೂರ್ಣವಾದುದು. ಕನಿಷ್ಠ ಸಫಾ ಮತ್ತು ಮರ್ವಾದಲ್ಲಿ ಕುರುಹುಗಳನ್ನು ಉಳಿಸಿದಂತೆ ಝಂ ಝಂ ಅನ್ನು ಉಳಿಸಿಕೊಳ್ಳದೆ ಇರುವುದು ತೀವ್ರ ನಿರಾಶೆಯನ್ನು ಉಂಟುಮಾಡುತ್ತದೆ. ಹಾಗಂತ, ಝಂ ಝಂ ಬಾವಿಯನ್ನು ಎಲ್ಲರಿಗೂ ಕಾಣುವಂತೆ





ತೆರೆದಿಡುವುದು ಪ್ರಾಯೋಗಿಕವೇ ಎಂಬ ಪ್ರಶ್ನೆ ಉದ್ಭವಿಸಬಹುದು. ಲಕ್ಷಗಟ್ಟಲೆ ಜನಸಂದಣಿಯನ್ನು ನಿಭಾಯಿಸುವುದು ಸುಲಭವೇ ಎಂದೂ ಪ್ರಶ್ನಿಸಬಹುದು. ನಿಜ, ಝಂ ಝಂನ ಬಗ್ಗೆ ಸರ್ವ ಮುಸ್ಲಿಮರಲ್ಲೂ ಕುತೂಹಲ ಇದೆ. ಅದರ ಹುಟ್ಟು ಮತ್ತು ಬತ್ತದ ನೀರಿನ ಒರತೆಯ ಕುರಿತಂತೆ ಭಾವುಕವಾದ ವಿವರಣೆಯಿದೆ. ಆಧ್ಯಾತ್ಮಿಕ ಅನುಭೂತಿಯಿದೆ. ಆದ್ದರಿಂದ ಝಂ ಝಂ ಅನ್ನು ವೀಕ್ಷಿಸಲು ಜನರು ನಾಮುಂದು, ತಾಮುಂದು ಎಂದು ಮುಗಿ ಬೀಳಬಹುದೆಂಬುದು ಸರಿ. ಆದರೆ, ಈ ಕಾರಣವು ಝಂ ಝಂ ಅನ್ನು ಭೂಗತಗೊಳಿಸಲು ಸಮರ್ಥ ಕಾರಣವಾಗುತ್ತದೆಂದು ಹೇಳಲಾಗದು. ಜನದಟ್ಟಣೆಯನ್ನು ನಿಭಾಯಿಸಲು ಸೂಕ್ತ ಏರ್ಪಾಟುಗಳನ್ನು ಮಾಡಬೇಕೇ ಹೊರತು ನೀರನ್ನೇ ಭೂಗತಗೊಳಿಸುವುದಲ್ಲ. ಹಾಗಂತ, ಈ ಜನದಟ್ಟಣೆಯ ಸಮಸ್ಯೆ ಝಂ ಝಂಗೆ ಮಾತ್ರ ಸೀಮಿತ ಅಲ್ಲವಲ್ಲ. ಕಅಬಾ ತವಾಫ್‌ನಲ್ಲೂ ಇದೆ. ಮದೀನಾದಲ್ಲಿ ಪ್ರವಾದಿಯವರ ಕಬರ್ ಝಿಯಾರತ್ ಮಾಡುವ ಸಂದರ್ಭದಲ್ಲೂ ಇದೆ. ಒಂದು ರೀತಿಯಲ್ಲಿ, ಮಸ್ಜಿದುಲ್ ಹರಾಮ್ ಮತ್ತು ಮಸ್ಜಿದುನ್ನಬವಿಯಲ್ಲಿ ಜನದಟ್ಟಣೆಯಿಲ್ಲದ ಯಾವ ಸ್ಥಳವೂ ಇಲ್ಲ. ಅದನ್ನು ನಿಭಾಯಿಸುವುದಕ್ಕೆ ಸೂಕ್ತ ಏರ್ಪಾಟನ್ನೂ ಮಾಡಲಾಗಿದೆ. ಹೀಗಿರುವಾಗ, ಝಂ ಝಂ ಅನ್ನು ಭೂಗತಗೊಳಿಸಿರುವುದಕ್ಕೆ ಜನದಟ್ಟಣೆ ಇಲ್ಲವೇ ಹರಮ್‌ನ ವಿಸ್ತರಣೆಯ ಕಾರಣಗಳು ಸಮರ್ಥನೀಯ ಅನ್ನಿಸುತ್ತಿಲ್ಲ. ಮಸ್ಜಿದುಲ್ ಹರಾಮ್‌ನ ಒಳಗೆ ದೊಡ್ಡ ಬಾಟಲಿಗಳಲ್ಲಿ ತುಂಬಿಸಿಡಲಾದ ಝಂ ಝಂ ನೀರನ್ನು ಕುಡಿಯುವುದಕ್ಕೂ, ಒಂದು ಕುರುಹಾಗಿ ವೀಕ್ಷಿಸಿ ಅನುಭವಿಸಿ ಆಧ್ಯಾತ್ಮಿಕ ಅನುಭೂತಿಯನ್ನು ಆವಾಹಿಸಿಕೊಂಡು ಬಳಿಕ ಕುಡಿಯುವುದಕ್ಕೂ ಪದಗಳಲ್ಲಿ ವಿವರಿಸಲಾಗದಷ್ಟು ವ್ಯತ್ಯಾಸ ಇದೆ. ಆಗ ಅದು ಬರೇ ಝಂ ಝಂ ನೀರು ಆಗಿರಲ್ಲ. ಅದು ಜೀವಜಲವಾಗಿ ಅನುಭವಕ್ಕೆ ಬರಬಹುದು. ಒಂದು ಮಗುವಿನ ಪ್ರಾಣವನ್ನು ಉಳಿಸುವುದಕ್ಕಾಗಿ ಅಲ್ಲಾಹನು ನೀರೇ ಇಲ್ಲದ ಮರುಭೂಮಿಯಲ್ಲಿ ಜಲಧಾರೆಯನ್ನೇ ಚಿಮ್ಮಿಸುತ್ತಾನೆಂದರೆ ಮತ್ತು ಅದನ್ನು ಶಾಶ್ವತವಾಗಿ ಉಳಿಸುತ್ತಾನೆಂದರೆ, ಅದು ಸಾರ್ವಕಾಲಿಕ ಸಂದೇಶವೊಂದರ ಸಂಕೇತವಾಗುತ್ತದೆ. ನಿಜವಾಗಿ, ಮಗುವಿನ ದಾಹವನ್ನು ತಣಿಸುವುದಕ್ಕೆ ನೀರೇ ಬೇಕಾಗಿರಲಿಲ್ಲ. ಹಾಜರಾರಲ್ಲಿ ಎದೆಹಾಲನ್ನು ತುಂಬಿಸುತ್ತಿದ್ದರೂ ಮಗು ಬದುಕುಳಿಯುತ್ತಿತ್ತು. ಮಗುವಿನ ಕಾಲಬುಡದಲ್ಲಿ ನೀರು ಚಿಮ್ಮಿಸಿದ ದೇವನಿಗೆ ಇದೇನೂ ಕಷ್ಟವಲ್ಲವಲ್ಲ ಅಥವಾ ಹಾಜರಾ ಮತ್ತು ಇಸ್ಮಾಈಲ್‌ರಿಗೆ ಶಾಶ್ವತವಾಗಿ ದಾಹ ಮತ್ತು ಹಸಿವು ಆಗದಂತೆಯೇ ನೋಡಿಕೊಳ್ಳುವ ಸಾಮರ್ಥ್ಯವೂ ದೇವನಿಗಿತ್ತು. ಅದರ ಬದಲು ಅಲ್ಲಾಹನು ನೀರನ್ನು ಚಿಮ್ಮಿಸಿದುದೇಕೆ? ಬಹುಶಃ, ನೀರನ್ನು ಜೀವಜಲ ಎಂದು ಸಾರುವುದೇ ಇದರ ಹಿಂದಿನ ಉದ್ದೇಶದಂತೆ ಕಾಣುತ್ತದೆ. ನೀರನ್ನು ಪೋಲು ಮಾಡುವ ಅಥವಾ ಇತರರಿಗೆ ಸಿಗದಂತೆ ತಡೆದಿರಿಸುವ ಮಾನವನನ್ನು ಪ್ರಶ್ನಿಸುವ ಸಂಕೇತವಾಗಿ ಝಂ ಝಂ ಕಾಣಿಸುತ್ತದೆ. ನೀರನ್ನು ಪೋಲು ಮಾಡುವುದೆಂದರೆ

ಮಾನವ ಪ್ರಾಣದ ಜೊತೆ ಚೆಲ್ಲಾಟವಾಡುವುದು. ನೀರನ್ನು ಜಾಗರೂಕತೆಯಿಂದ ಬಳಸುವುದಲ್ಲದೇ ಇತರರ ಅವಶ್ಯಕತೆಗೆ ನೀಡುವುದೆಂದರೆ ಪ್ರಾಣವನ್ನು ಉಳಿಸುವುದು. ಆದ್ದರಿಂದ ಹಾಜರಾ ಮತ್ತು ಇಸ್ಮಾಈಲ್‌ರಿಗೆ ಅಲ್ಲಾಹನು ಅನುಗ್ರಹಿಸಿದ ನೀರನ್ನು ನಾವು ಬರೇ ಆಧ್ಯಾತ್ಮಿಕ ದೃಷ್ಟಿಯಿಂದ ಮಾತ್ರ ನೋಡಬೇಕಾಗಿಲ್ಲ. ಅದರಲ್ಲೊಂದು ಮಾನವೀಯ ಸಂದೇಶವಿದೆ. ಬಹುಶಃ, ಝಂ ಝಂ ಬಾವಿ ಒಂದು ಕುರುಹು ಆಗಿ ವೀಕ್ಷಣೆಗೆ ಲಭ್ಯವಾಗುವಾಗ ಸಿಗುವ ಅನುಭವಕ್ಕೂ ಬರೇ ಕುಡಿಯುವ ನೀರು ಆಗಿ ಸಿಗುವಾಗ ಆಗುವ ಅನುಭವಕ್ಕೂ ನಡುವೆ ಇರುವ ವ್ಯತ್ಯಾಸ ಇನ್ನಷ್ಟು ಸ್ಪಷ್ಟವಾಗುವುದು ಇಲ್ಲೇ.

ಹಾಗಂತ, ಈ ಕುರುಹುನಾಶ ಬರೇ ಝಂ ಝಂಗೆ ಮಾತ್ರ ಸೀಮಿತವಲ್ಲ. ಹರಮ್‌ನಿಂದ ಅನತಿ ದೂರದಲ್ಲಿ ಲೈಬ್ರರಿ ಮತ್ತು ಶೌಚಾಲಯವು ಎದುರು ಬದುರಾಗಿ ಇವೆ. ಇವುಗಳ ನಡುವೆ ಸುಮಾರು ಇಪ್ಪತ್ತು ಹೆಜ್ಜೆಗಳ ಅಂತರವಷ್ಟೇ ಇವೆ. ಈ ಲೈಬ್ರರಿ ಇರುವ ಸ್ಥಳದಲ್ಲಿ ಈ ಹಿಂದೆ ಪ್ರವಾದಿಯವರ ಮನೆಯಿತ್ತು. ಹಾಗೆಯೇ ಶೌಚಾಲಯ ಇದ್ದ ಸ್ಥಳವು ಈ ಹಿಂದೆ ಅಬೂಜಹಲ್‌ನ ಮನೆಯಾಗಿತ್ತು. ನಿಜವಾಗಿ, ಇವೆರಡೂ ಐತಿಹಾಸಿಕ ಸ್ಥಳಗಳು. ಪ್ರವಾದಿಯವರನ್ನು(ಸ) ಲಕ್ಷಾಂತರ ಅಕ್ಷರಗಳಲ್ಲಿ ಕಟ್ಟಿಕೊಡುವುದಕ್ಕಿಂತ  ಹೆಚ್ಚಿನದನ್ನು ಅವರ ಮನೆ ಕಟ್ಟಿಕೊಡಬಹುದು. 1500 ವರ್ಷಗಳ ಹಿಂದೆ ಪ್ರವಾದಿ ಹೇಗೆ ಜೀವಿಸಿದ್ದರು ಎಂಬುದು ಅಕ್ಷರಗಳಲ್ಲಿ ಓದದೆಯೇ ಅಥವಾ ಓದಿದುದಕ್ಕಿಂತಲೂ ಹೆಚ್ಚು ಸ್ಪಷ್ಟಪಡಿಸಿಕೊಳ್ಳಬಹುದಾದ ಕುರುಹು ಅದು. ಆ ಮನೆಯ ಸ್ವರೂಪ, ಗೋಡೆ, ಮಾಡು, ನೆಲ, ಒಲೆ, ಪಾತ್ರೆ–ಪಿಂಗಾಣಿಗಳು, ನಿದ್ರಿಸಲು ಹಾಸುವ ಚಾಪೆ, ಮೆಟ್ಟು, ಕನ್ನಡಿ, ಬಾಚಣಿಗೆ, ಹಿಡಿಸೂಡಿ... ಇತ್ಯಾದಿ ಇತ್ಯಾದಿಗಳನ್ನು ಇಂದಿಗೆ ಹೋಲಿಸಿ ನೋಡುವ ಮತ್ತು ಆ ಮೂಲಕ ಪ್ರತಿಯೊಬ್ಬರನ್ನೂ ಆತ್ಮಾವಲೋಕನಕ್ಕೆ ತಳ್ಳುವ ಸಂದರ್ಭವನ್ನು ಅದು ಸೃಷ್ಟಿಸುತ್ತಿತ್ತು. ಅಬೂ ಜಹಲ್‌ನ ಮನೆಯೂ ಐತಿಹಾಸಿಕ ಪಳಿಯುಳಿಕೆ ಎಂಬ ನೆಲೆಯಲ್ಲಿ ಸಂರಕ್ಷಿಸಿಡಲೇ ಬೇಕಾದ ವಸ್ತು. ಇವೆರಡನ್ನೂ ಕೆಡವಿ ಅಲ್ಲಿ ಲೈಬ್ರರಿ ಮತ್ತು ಶೌಚಾಲಯದಲ್ಲಿ ನಿರ್ಮಿಸಿರುವುದು ತುಂಬಲಾರದ ನಷ್ಟವಾಗಿ ಕಾಣಿಸುತ್ತದೆ. ಈ ಲೈಬ್ರರಿಯ ಪಕ್ಕವೇ ಅಬೂತಾಲಿಬ್ ಕಣಿವೆಯಿದ್ದ ಸ್ಥಳವಿದೆ. ಪ್ರವಾದಿ ಮತ್ತು ಅವರ ಬಳಗವನ್ನು ಮೂರು ವರ್ಷಗಳ ಕಾಲ ಸಾಮಾಜಿಕ ಬಹಿಷ್ಕಾರಕ್ಕೆ ಒಳಪಡಿಸಲಾದ ಕಣಿವೆ ಇದು. ಆದರೆ ಇದನ್ನೂ ಕುರುಹು ಆಗಿ ಉಳಿಸಿಕೊಳ್ಳಲಾಗಿಲ್ಲ.

ಕಅಬಾದ ತವಾಫ್‌ನಿಂದ ಆರಂಭವಾಗಿ ಮಕಾಮು ಇಬ್ರಾಹೀಮ್‌ನಲ್ಲಿ ಎರಡು ರಕಅತ್ ನಮಾಝ್ ನಿರ್ವಹಿಸಿದ ಬಳಿಕ ಸಫಾ ಮತ್ತು ಮರ್ವಾಗಳಲ್ಲಿ ಸಈ ಮಾಡಿ ತಲೆಗೂದಲು ಬೋಳಿಸಿಕೊಂಡರೆ ಅಥವಾ ಕೂದಲು ಕತ್ತರಿಸಿಕೊಂಡರೆ ಉಮ್ರಾ ಪೂರ್ತಿಯಾಗುತ್ತದೆ. ಆ ಬಳಿಕ ಉಮ್ರಾ ಬಟ್ಟೆಯಿಂದ ಕಳಚಿಕೊಂಡು ಸಹಜ ಉಡುಪುಗಳನ್ನು ಧರಿಸಿಕೊಳ್ಳಬಹುದು. ಸಾಮಾನ್ಯವಾಗಿ, ಕೂದಲು ಕಳಚುವುದರಲ್ಲಿ



ಎಣ್ಣೆ ಬತ್ತಿದ ಲಾಟೀನು

ಎರಡು ವಿಧಗಳಿವೆ. ಕೆಲವರು ತಲೆಬೋಳಿಸಿಕೊಂಡರೆ ಕೆಲವರು ಕೂದಲನ್ನು ಚಿಕ್ಕದಾಗಿ ಕತ್ತರಿಸಿಕೊಳ್ಳುತ್ತಾರೆ. ವಿಶೇಷ ಏನೆಂದರೆ, ಇದಕ್ಕೆ ಹೊರತಾದ ವಿಧಾನವನ್ನು ಅಳವಡಿಸಿಕೊಳ್ಳುವವರೂ ಇದ್ದಾರೆ. ಮಸ್ಜಿದುಲ್ ಹರಾಮ್‌ನ ಒಳಗೆ ಅಲ್ಲಲ್ಲಿ ದೊಡ್ಡ ದೊಡ್ಡ ಡಸ್ಟ್‌ಬಿನ್‌ಗಳಿವೆ. ಅನೇಕ ಮಂದಿ ತಮ್ಮ ಕೂದಲನ್ನು ಕತ್ತರಿಸಿ ಇದಕ್ಕೆ ಹಾಕುವುದಿದೆ. ಮಹಿಳೆಯರೂ ತಮ್ಮ ಕೂದಲನ್ನು ಕತ್ತರಿಸಿ ಇದಕ್ಕೆ ಹಾಕುವುದನ್ನು ನಾನು ನೋಡಿದ್ದೇನೆ. ಒಂದೇ ಯಾತ್ರೆಯಲ್ಲಿ ಒಂದಕ್ಕಿಂತ ಹೆಚ್ಚು ಉಮ್ರಾ ಮಾಡ ಬಯಸುವವರು ಮೊದಲ ಉಮ್ರಾದಲ್ಲಿ ಸಂಪೂರ್ಣ ಕೂದಲು ಕತ್ತರಿಸುವ ಬದಲು ಸಾಂಕೇತಿಕವಾಗಿ ಹೀಗೆ ಕತ್ತರಿಸಿಕೊಳ್ಳುವುದೂ ಇದೆ. ಏನಿದ್ದರೂ ಮಸ್ಜಿದುಲ್ ಹರಾಮ್‌ನ ಒಳಗಡೆಯೇ ಕೂದಲು ಕತ್ತರಿಸುವುದರಿಂದ ಕೂದಲುಗಳು ಕೆಲವೊಮ್ಮೆ ಡಸ್ಟ್‌ಬಿನ್‌ನ ಹೊರಗಡೆಯೂ ಬೀಳುವುದಿದೆ. ಸುಜೂದ್ ಮಾಡುವಾಗ ಮತ್ತು ಕುಳಿತುಕೊಂಡಿರುವಾಗ ಅವು ಕಾಣಿಸುವುದೂ ಇದೆ. ಇದು ಕಿರಿಕಿರಿಯ ಅನುಭವವನ್ನು ನೀಡುತ್ತದೆ. ಆದರೆ, ಮಸ್ಜಿದುಲ್ ಹರಾಮ್‌ನ ಒಳಗಡೆ ಇರುವ ಅಭೂತಪೂರ್ವ ಸ್ವಚ್ಛತಾ ಕಾರ್ಯವು ಈ ಅಶಿಸ್ತಿನಿಂದಾಗುವ ತೊಂದರೆಯನ್ನು ಮರೆಸುವಷ್ಟು ಅಮೋಘವಾಗಿದೆ. ಪ್ರತಿದಿನ ಲಕ್ಷಾಂತರ ಮಂದಿ ಸೇರುವ ಸ್ಥಳದಲ್ಲಿ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವುದು ಸುಲಭ ಅಲ್ಲ. ಅಲ್ಲದೆ ಜಗತ್ತಿನ ನೂರಾರು ದೇಶಗಳ, ನೂರಾರು ಸಂಸ್ಕೃತಿಗಳ, ನೂರಾರು ಅಹಾರಾಭ್ಯಾಸವುಳ್ಳ ಜನರು ಸೇರುವ ಸ್ಥಳದಲ್ಲಿ ಸದಾ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವುದು ದೊಡ್ಡ ಸವಾಲು. ಮಸ್ಜಿದುಲ್ ಹರಾಮ್‌ಗೆ ಬರುವವರಲ್ಲಿ ಸ್ವಚ್ಛತೆಗೆ ಸಂಬಂಧಿಸಿ ವಿವಿಧ ಅಭ್ಯಾಸ ಉಳ್ಳವರು ಇರಬಹುದು. ಸ್ವಚ್ಛತೆಯನ್ನು ಈಮಾನಿನ ಅರ್ಧಾಂಶವಾಗಿ ಕಾಣುವ ಕರ್ಮಠರೂ, ಸ್ವಚ್ಛತೆಯ ಬಗ್ಗೆ ಉದಾಸೀನ ಭಾವ ಉಳ್ಳವರೂ ಇರಬಹುದು. ಸ್ವಚ್ಛತೆಯ ಪಾಲನೆ ಎಂಬುದು ಅಭ್ಯಾಸ ಬಲದಿಂದ ಬರುವಂಥದ್ದು. ಸ್ವಚ್ಛತೆಯನ್ನು ಆ ವರೆಗೆ ಗಂಭೀರವಾಗಿ ಪರಿಗಣಿಸದ ವ್ಯಕ್ತಿ ಮಸ್ಜಿದುಲ್ ಹರಾಮ್‌ಗೆ ಪ್ರವೇಶಿಸಿದ ತಕ್ಷಣ ಮಹಾನ್ ಸ್ವಚ್ಛತಾ ಪ್ರಜ್ಞೆಯುಳ್ಳವನಾಗಿ ಬದಲಾಗಲಾರ/ಳು. ನೂರಾರು ರಾಷ್ಟ್ರಗಳಿಂದ ಬರುವ ಯಾತ್ರಾರ್ಥಿಗಳಲ್ಲಿ ಈ ವರ್ಗದ ಮಂದಿ ಖಂಡಿತ ಇರಬಹುದು. ಅವರು ಸ್ವಚ್ಛತೆಗೆ ಅಲ್ಪ ಮಹತ್ವವನ್ನಷ್ಟೇ ಕೊಡಬಹುದು. ಕೂದಲುಗಳ ಕತ್ತರಿಸುವಿಕೆ ಇದಕ್ಕೊಂದು ಪುಟ್ಟ ಉದಾಹರಣೆ. ಪ್ರತಿನಿತ್ಯ ಇವನ್ನೆಲ್ಲ ನಿಭಾಯಿಸುವುದು ದೊಡ್ಡ ಸಾಹಸ. ಆದ್ದರಿಂದಲೇ ಮಸ್ಜಿದುಲ್ ಹರಾಮ್‌ನ ಸ್ವಚ್ಛತಾ ವ್ಯವಸ್ಥೆಯನ್ನಂತೂ ಶ್ಲಾಘಿಸಲೇಬೇಕಾಗಿದೆ. ಸ್ವಚ್ಛತೆಯ ವಿವಿಧ ಪರಿಕರಗಳನ್ನು ಹಿಡಿದುಕೊಂಡು ಬರುವ ನಿರ್ದಿಷ್ಟ ಯೂನಿಫಾರ್ಮ್ ಧರಿಸಿರುವ ಕಾರ್ಮಿಕರು ಕ್ಷಣ ಮಾತ್ರದಲ್ಲಿ ಪಟಪಟನೇ ಸ್ವಚ್ಛಗೊಳಿಸುವ ರೀತಿ ಖುಷಿ ಕೊಡುತ್ತದೆ. ಯಾತ್ರಾರ್ಥಿಗಳಿಗೆ ಅಡಚಣೆಯ ಅನುಭವವೇ ಆಗದಷ್ಟು ಶೀಘ್ರವಾಗಿ ಮತ್ತು ಸಲೀಸಾಗಿ ಇದು ನಡೆದು ಹೋಗುತ್ತದೆ. ಸ್ವಚ್ಛತೆಗೆ ಸಂಬಂಧಿಸಿ ಹೇಳುವುದಾದರೆ, ಇಡೀ ಮಸ್ಜಿದುಲ್ ಹರಾಮ್‌ನ ಪರಿಸರವೇ

ವಿಶೇಷ ಉಲ್ಲೇಖಕ್ಕೆ ಅರ್ಹವಾದುದು. ಹರಮ್‌ಗೆ ಬರುವ ದಾರಿಯಲ್ಲಿ ಒಂದು ಪೊರಕೆ ಮತ್ತು ಕಸ ಹೆಕ್ಕುವ ಪರಿಕರದೊಂದಿಗೆ ಅನೇಕಾರು ಕಾರ್ಮಿಕರು ಸ್ವಚ್ಛತೆಯಲ್ಲಿ ತಲ್ಲೀನರಾಗಿರುವುದು ಕಾಣಸಿಗುತ್ತದೆ. ಇವರಲ್ಲಿ ಬಹುತೇಕರೂ ಬಂಗಾಳಿಗಳು. ಉರ್ದುವಿನಲ್ಲಿ ಮಾತಾಡುತ್ತಾರೆ. ಈ ಮಂದಿಗೆ ಯಾತ್ರಾರ್ಥಿಗಳು ದುಡ್ಡು ಕೊಡುವುದಿದೆ. ಮಸ್ಜಿದುಲ್ ಹರಾಮ್‌ಗೆ ಬರುವವರು ಮತ್ತು ಹೋಗುವವರು ಅವರ ಕೈಗೆ ದುಡ್ಡು ಕೊಟ್ಟು ಹೋಗುತ್ತಾರೆ. ಯಾರು ದುಡ್ಡು ಕೊಡಬಹುದೆಂಬ ಬಗ್ಗೆ ಈ ಕಾರ್ಮಿಕರಿಗೂ ಅಂದಾಜು ಇರುತ್ತದೆ. ಅರಬರು ಹೀಗೆ ದುಡ್ಡು ಕೊಡುವುದರಲ್ಲಿ ಬಹುತೇಕ ಮುಂಚೂಣಿಯಲ್ಲಿರುತ್ತಾರೆ. ಅವರನ್ನು ಕಾಣುತ್ತಲೇ ಈ ಕಾರ್ಮಿಕರು ತುಸು ಎದುರು ನಿಲ್ಲುತ್ತಾರೆ. ಸುಮ್ಮನೆ ಕಸದ ಪರಿಕರವನ್ನು ಅತ್ತಿತ್ತ ಚಲಿಸುತ್ತಾರೆ. ಹಾಗಂತ ಕೈಯೊಡ್ಡುವುದಿಲ್ಲ. ಒಂದು ರೀತಿಯ ದಯನೀಯ ಭಂಗಿ. ನಿಜವಾಗಿ, ಮಸ್ಜಿದುಲ್ ಹರಾಮ್‌ನ ಸ್ವಚ್ಛತಾ ಕಾರ್ಯವನ್ನು ಕಂಪೆನಿಗಳು ಗುತ್ತಿಗೆಗೆ ಪಡೆದುಕೊಂಡಿರುತ್ತವೆ. ಅವುಗಳ ಅಧೀನದಲ್ಲಿ ಇವರು ಕೆಲಸ ಮಾಡುತ್ತಿರುತ್ತಾರೆ. ಈ ಕಾರ್ಮಿಕರನ್ನು ನೋಡುತ್ತಾ ನನ್ನಲ್ಲಿ ಅನೇಕ ಪ್ರಶ್ನೆಗಳು ಮೂಡಿದುವು. ಇವರ ಬಗ್ಗೆ ಅವರ ಊರಿನಲ್ಲಿ ಯಾವ ಅಭಿಪ್ರಾಯ ಇರಬಹುದು? ನನ್ನ ಮಗ ಮಸ್ಜಿದುಲ್ ಹರಾಮ್‌ನಲ್ಲಿ ಕೆಲಸ ಮಾಡುತ್ತಿದ್ದಾನೆ ಎಂದು ಅವರ ತಂದೆ–ತಾಯಿ ಹೆಮ್ಮೆಪಡುತ್ತಿರಬಹುದಲ್ಲವೇ? ಈ ಕಾರ್ಮಿಕರ ಗೆಳೆಯರು, ಕುಟುಂಬಸ್ಥರು ಅವರ ಸೌಭಾಗ್ಯದ ಬಗ್ಗೆ ಊರಲ್ಲಿ ಆಡಿಕೊಳ್ಳುತ್ತಿರಬಹುದಲ್ಲವೇ? ಇವರ ಪತ್ನಿ–ಮಕ್ಕಳನ್ನು ವಿಶೇಷ ಅಭಿಮಾನದಿಂದ ನೋಡುತ್ತಿರುವವರು ಇರಲಾರರೇ? ಮಸ್ಜಿದುಲ್ ಹರಾಮ್‌ನಲ್ಲಿ ಕೆಲಸ ನಿರ್ವಹಿಸುತ್ತಿರುವುದಿಂದ ಕೈ ತುಂಬಾ ಸಂಬಳ ಮತ್ತು ಅಪಾರ ಪುಣ್ಯ ಗಿಟ್ಟಿಸಿಕೊಳ್ಳುವ ಸೌಭಾಗ್ಯ ದೊರೆತ ಭಾಗ್ಯಶಾಲಿಗಳು ಎಂಬ ಬಿರುದೂ ಇವರಿಗೆ ದಕ್ಕಿರಬಹುದು. ಆದರೆ ಯಾತ್ರಾರ್ಥಿಗಳಿಂದ ಭಕ್ಷೀಸನ್ನು ನಿರೀಕ್ಷಿಸಿಕೊಂಡು ಕೆಲಸ ನಿರ್ವಹಿಸುವ ಇವರನ್ನು ಕಂಡರೆ ಅವರು ಏನು ಹೇಳಿಯಾರು? ಗುತ್ತಿಗೆ ಕಂಪೆನಿಗಳು ಇಂಥ ಕಾರ್ಮಿಕರನ್ನು ತೀರಾ ಸಣ್ಣ ವೇತನಕ್ಕೆ ನೇಮಿಸಿಕೊಳ್ಳುತ್ತಿರಬಹುದೇ? ಮಸ್ಜಿದುಲ್ ಹರಾಮ್‌ನಲ್ಲಿ ಕೆಲಸ ಎಂಬ ಮಾತಿನಿಂದ ಉನ್ಮಾದಗೊಂಡು ವೇತನದ ಬಗ್ಗೆ ಹಿಂದು–ಮುಂದು ಯೋಚಿಸದೆ ಕೆಲಸಕ್ಕೆ ಸಿದ್ಧವಾಗುವ ಯುವಕರು ಇವರಾಗಿರಬಹುದೇ? ಹೀಗೆ ಇಲ್ಲಿಗೆ ಕೆಲಸಕ್ಕೆ ಬರುವ ಇಂಥ ಯುವಕರ ದಂಡು ಸದಾ ಇರಬಹುದಲ್ಲವೇ? ಅಂಥವರ ದುರುಪಯೋಗವೂ ಸದಾ ನಡೆಯುತ್ತಲೂ ಇರಬಹುದಲ್ಲವೇ?

ನನ್ನ 14 ದಿನಗಳ ಉಮ್ರಾ ಯಾತ್ರೆಯಲ್ಲಿ ಮಸ್ಜಿದುಲ್ ಹರಾಮ್ ಮತ್ತು ಮಸ್ಜಿದುನ್ನಬವಿಯಲ್ಲಿ ಒಂದೊಂದು ಜುಮಾ ಸಿಕ್ಕಿದೆ. ವಿಶೇಷ ಏನೆಂದರೆ, ಈ ಎರಡೂ ಮಸೀದಿಗಳ ಗಾತ್ರ, ಆಕೃತಿ, ನಮಾಝ್‌ನಲ್ಲಿ ಕುರ್‌ಆನ್ ಪಠಣದ ರೀತಿ, ಆದಾನ್‌ನ ಶೈಲಿ, ಪುರುಷ ಮತ್ತು ಮಹಿಳೆಯರ ಮಸೀದಿ ಪ್ರವೇಶ... ಎಲ್ಲದರಲ್ಲೂ





ಸಾಕಷ್ಟು ವ್ಯತ್ಯಾಸ ಇದೆ. ಮದೀನಾದ ಮಸ್ಜಿದುನ್ನಬವಿ ವಿಶಾಲವಾಗಿ ಹರಡಿಕೊಂಡಿರುವಂಥದ್ದು. ಆದರೆ ಮಸ್ಜಿದುಲ್ ಹರಾಮ್ ಎಂಬುದು ಹಲವು ಮಹಡಿಗಳ ಕಟ್ಟಡ.. ಹರಮ್‌ನ ವಿಸ್ತರಣಾ ಕಾರ್ಯ ನಿರಂತರ ನಡೆಯುತ್ತಿರುವುದರಿಂದ ಹರಮ್‌ನ ಒಳಗಿನ ವಿವಿಧ ದ್ವಾರಗಳಲ್ಲಿ ಹಲವನ್ನು ಆಗಾಗ ಮುಚ್ಚುತ್ತಾ, ತೆರೆಯುತ್ತಾ ಇರುತ್ತಾರೆ. ಯಾತ್ರಾರ್ಥಿಗಳು ಇದರಿಂದ ತೀವ್ರ ತೊಂದರೆಗೂ ಒಳಗಾಗುತ್ತಿರುತ್ತಾರೆ. ಕಅಬಾಕ್ಕೆ ಹೋಗಬೇಕಾದರೆ ಮಸ್ಜಿದುಲ್ ಹರಾಮ್‌ನ ಒಳಗಿನಿಂದಲೇ ಹೋಗಬೇಕಾಗುತ್ತದೆ. ಮಸ್ಜಿದುಲ್ ಹರಾಮ್‌ಗೆ ಪ್ರವೇಶಿಸುವುದು ಮತ್ತು ಕಅಬಾಕ್ಕೆ ತಲುಪುವುದರ ನಡುವೆ ಒಂದಕ್ಕಿಂತ ಹೆಚ್ಚು ದ್ವಾರಗಳನ್ನು ದಾಟಿ ಹೋಗಬೇಕಾಗುತ್ತದೆ. ಯಾತ್ರಾರ್ಥಿಗಳ ಪಾಲಿಗೆ ಮಸ್ಜಿದುಲ್ ಹರಾಮ್ ತೀರಾ ಅಪರಿಚಿತವಾಗಿರುವುದರಿಂದ ದ್ವಾರಗಳನ್ನು ದಿಢೀರ್ ಆಗಿ ಮುಚ್ಚುವುದು ಸಮಸ್ಯೆಯನ್ನುಂಟು ಮಾಡುತ್ತದೆ. ಒಂದು ಬಾರಿ ಕಅಬಾಕ್ಕೆ ಹೋದವರು ಮತ್ತೊಮ್ಮೆ ಹೋಗುವಾಗ ಆ ದ್ವಾರ ತೆರೆದಿರಬೇಕೆಂದಿಲ್ಲ. ಅಲ್ಲಿಯ ದ್ವಾರವನ್ನು ಮುಚ್ಚಿ ಬೇರೆ ದ್ವಾರದ ಮೂಲಕ ಹೋಗುವಂತೆ ಸಿಬ್ಬಂದಿಗಳು ಹೇಳುತ್ತಾರೆ. ಅಲ್ಲದೇ ಭಾಷೆಯೂ ಒಂದು ಸಮಸ್ಯೆ. ಇದನ್ನು ಸಹಿಸಿಕೊಂಡರೂ ಅಡಚಣೆಗಳು ಅಲ್ಲಿಗೇ ಕೊನೆಗೊಳ್ಳುವುದಿಲ್ಲ. ಹಲವು ಮಹಡಿಗಳ ಕಟ್ಟಡವಾಗಿರುವ ಮಸ್ಜಿದುಲ್ ಹರಾಮ್‌ನಲ್ಲಿ ಪ್ರತಿದಿನ ಜನ ಗಿಜಿಗುಡುತ್ತಿರುತ್ತಾರೆ. ಅದರಲ್ಲೂ ಜುಮಾ ದಿವಸವಂತೂ ಈ ಜನ ಪ್ರವಾಹ ಅಪಾರವಾದುದು. ಸುಮಾರು 11 ಗಂಟೆಯ ಒಳಗಡೆಯೇ ಹರಮ್ ಬಹುತೇಕ ತುಂಬುತ್ತದೆ. ನನ್ನನ್ನು ಕಾಡಿದ ಪ್ರಶ್ನೆ ಏನೆಂದರೆ, ಮೇಲಿನ ಅಂತಸ್ತಿನಲ್ಲಿ ಕುಳಿತವರಿಗೆ ಅಲ್ಲಿಂದ ಏಳಲೇಬೇಕಾದ ಅನಿವಾರ್ಯತೆ ಎದುರಾದರೆ ಏನು ಮಾಡಬಹುದು? ಪತ್ನಿ, ಮಕ್ಕಳು ಸಮೇತ ಮೇಲಿನ ಅಂತಸ್ತಿನಲ್ಲಿ ಒಂದು ಕುಟುಂಬ ಕುಳಿತಿದೆಯೆಂದಿಟ್ಟುಕೊಳ್ಳಿ. ಹಾಗಂತ, ಇದು ಅಸಂಭವ ಅಲ್ಲ. ಹರಮ್‌ನಲ್ಲಿ ಸಾಮಾನ್ಯ ದೃಶ್ಯ. ಹೀಗೆ ಕುಳಿತವರಲ್ಲಿ ಓರ್ವರಿಗೆ ಅಲ್ಲಿಂದ ಏಳಲೇಬೇಕಾದ ಅನಿವಾರ್ಯತೆ ಎದುರಾದರೆ, ಅವರ ಆ ಅನಿವಾರ್ಯತೆಗೆ ಸ್ಪಂದಿಸುವ ಯಾವ ಸೌಲಭ್ಯಗಳೂ ಹರಮ್‌ಗೆ ಒಳಗಡೆ ಇಲ್ಲವೇ ಇಲ್ಲ. ಒಂದೋ ಆ ವ್ಯಕ್ತಿಗೆ ಮೂತ್ರ ಮಾಡಬೇಕಾದ ಅನಿವಾರ್ಯತೆ ಉಂಟಾಗಬಹುದು ಅಥವಾ ಅವರಿಗೆ ಅಂಗಶುದ್ಧಿ ಮಾಡಬೇಕಾಗಿ ಬರಬಹುದು. ಇಂಥ ಸಂದರ್ಭದಲ್ಲಿ ಆತ ತುಂಬಿ ತುಳುಕುವ ಮಸ್ಜಿದುಲ್ ಹರಾಮ್‌ನ ಮೇಲಿನ ಅಂತಸ್ತಿನಿಂದ ಕೆಳಗಡೆ ಬರಬೇಕು ಮತ್ತು ಮಸ್ಜಿದುಲ್ ಹರಾಮ್‌ನ ಹೊರಗಡೆ ಇರುವ ಶೌಚಾಲಯವನ್ನು ಬಳಸಿಕೊಳ್ಳಬೇಕು ಮತ್ತು ಅಲ್ಲಿಯೇ ಹತ್ತಿರ ಇರುವ ಸ್ಥಳಗಳಲ್ಲಿ ಅಂಗ ಶುದ್ಧಿ ಮಾಡಿಕೊಳ್ಳಬೇಕು ಹಾಗಂತ, ಹೇಳಿಕೊಂಡಷ್ಟು ಸುಲಭ ಅಲ್ಲ ಇದು. ಯಾತ್ರಾರ್ಥಿಗಳು ಬಹುತೇಕ ಮಸ್ಜಿದುಲ್ ಹರಾಮ್‌ಗೆ ಹೊಸಬರಾಗಿರುತ್ತಾರೆ. ಆದ್ದರಿಂದ ಓರ್ವರ ಅನಿವಾರ್ಯತೆಗಾಗಿ ಅವರ ಜೊತೆಗಿರುವ ಮಕ್ಕಳು ಮತ್ತು ಮಹಿಳೆಯರೂ ಎದ್ದು ಆತನ/ಕೆಯ ಜೊತೆಗೆ ಬರಬೇಕಾದ ಅನಿವಾರ್ಯತೆ ಇರುತ್ತದೆ. ಯಾಕೆಂದರೆ, ಒಮ್ಮೆ

ಎದ್ದರೆ ಮತ್ತೆ ಅಲ್ಲಿಗೆ ಪುನಃ ಹೋಗಲು ಸಾಧ್ಯವೇ ಇಲ್ಲದಷ್ಟು ಜನಪ್ರವಾಹ ಇರುವ ಸ್ಥಳ ಅದು. ಮೇಲಿನ ಅಂತಸ್ತಿನಲ್ಲಿರುವ ವ್ಯಕ್ತಿ ಅಲ್ಲಿಂದ ಎದ್ದು ಶೌಚಾಲಯಕ್ಕೋ ಅಂಗಶುದ್ಧಿಗೋ ಕೆಳಗಡೆ ಬರಲು ಹೊರಟರೆಂದರೆ, ಒಂದರ್ಧ ಗಂಟೆಯಾದರೂ ಬೇಕಾಗಬಹುದು. ವಿಶೇಷವಾಗಿ, ಶುಕ್ರವಾರದ ದಿವಸ ಹರಮ್‌ನ ದ್ವಾರಗಳನ್ನು ಅಲ್ಲಲ್ಲಿ ಮುಚ್ಚಿರುತ್ತಾರೆ. ಜನರನ್ನು ದಾಟಿಕೊಂಡು ಬರುವುದೂ ಸುಲಭ ಅಲ್ಲ. ಹೊರಗೆ ಬರುವ ಸುಲಭದ ದಾರಿಯೂ ಗೊತ್ತಿರುವುದಿಲ್ಲ. ಹಾಗೆ ಎಲ್ಲ ಅಡೆ–ತಡೆಗಳನ್ನೂ ದಾಟಿ ಹೊರಬಂದ ಬಳಿಕ ಮತ್ತೆ ಮೇಲಿನ ಅಂತಸ್ತಿಗೆ ಹೋಗುವುದು ಬಿಡಿ, ಮಸ್ಜಿದುಲ್ ಹರಾಮ್‌ನ ಒಳಗಡೆ ಪ್ರವೇಶಿಸುವುದಕ್ಕೂ ಸಾಧ್ಯವಿಲ್ಲ. ಬಳಿಕ ಹರಮ್‌ನ ಹೊರಗಡೆಯ ವಿಶಾಲ ಬಯಲಿನಲ್ಲಿ ಜಾಗ ಕಂಡುಕೊಳ್ಳಬೇಕಾಗುತ್ತದೆ. ಕುಟುಂಬ ಸಮೇತ ಯಾತ್ರೆ ಕೈಗೊಂಡವರನ್ನಂತೂ ಇದು ತೀವ್ರವಾಗಿಯೇ ಕಾಡುತ್ತದೆ. ಇದಕ್ಕೆ ಹರಮ್‌ನ ಒಳಗಡೆಯೇ ಪರಿಹಾರವನ್ನು ಕಂಡು ಹುಡುಕಿದರೇನು ಎಂದು ನನ್ನ ಅಂತರಾತ್ಮ ಪ್ರಶ್ನಿಸಿತು. ಮಸ್ಜಿದುಲ್ ಹರಾಮ್‌ನ ಒಳಗಡೆಯೇ ಪ್ರತಿ ಅಂತಸ್ತಿನಲ್ಲೂ ಶೌಚಾಲಯ ಮತ್ತು ಅಂಗಶುದ್ಧಿಗೆ ಬೇಕಾದ ಏರ್ಪಾಟುಗಳನ್ನು ಮಾಡಿದರೇನು? ಹಿಂದಿನ ಕಾಲದಲ್ಲಿ ಅದರ ಅಗತ್ಯ ಇಲ್ಲದೇ ಇರಬಹುದು. ಯಾತ್ರಾರ್ಥಿಗಳ ಸಂಖ್ಯೆ ಕಡಿಮೆ ಇರಬಹುದು. ಆದ್ದರಿಂದಲೇ ಹರಮ್‌ನ ಒಳಗಡೆ ಶೌಚಾಲಯಕ್ಕೆ ಮತ್ತು ಅಂಗಶುದ್ಧಿಗೆ ವ್ಯವಸ್ಥೆ ಕಲ್ಪಿಸುವ ಬಗ್ಗೆ ಗಂಭೀರ ಚರ್ಚೆ ನಡೆಯದೇ ಇದ್ದಿರಬಹುದು. ಆದರೆ, ಈ 21ನೇ ಶತಮಾನದಲ್ಲಿ ಒಟ್ಟು ಮಾನವ ಕುಲದ ಜೀವನ ಕ್ರಮವೇ ಬದಲಾಗಿದೆ. 20, 19, 18, 17 ಮತ್ತು ಇದಕ್ಕಿಂತಲೂ ಹಿಂದಿನ ಶತಮಾನಗಳಲ್ಲಿಲ್ಲದ ಸಕಾರಾತ್ಮಕ ಮತ್ತು ನಕಾರಾತ್ಮಕ ಅಂಶಗಳು ಈ ಶತಮಾನದಲ್ಲಿವೆ. ಹಿಂದಿನ ಕಾಲಕ್ಕೆ ಗೊತ್ತೇ ಇಲ್ಲದ ಕಾಯಿಲೆಗಳು ಈ ಕಾಲದಲ್ಲಿ ಸುಪರಿಚಿತವಾಗಿವೆ. ಈ ಕಾಲದ ಜೀವನ ಸೌಲಭ್ಯಗಳು ಹಿಂದಿನ ಕಾಲದ ಮಂದಿಯ ಪಾಲಿಗೆ ತೀರಾ ಅಪರಿಚಿತ. ಆದ್ದರಿಂದ ಶತಮಾನಗಳ ಹಿಂದಿನ ನಿಲುವನ್ನೇ ಈ ಆಧುನಿಕ ಕಾಲದಲ್ಲೂ ಹಾಗೆಯೇ ಮುಂದುವರಿಸಿಕೊಂಡು ಹೋಗಬೇಕೆಂದೇನೂ ಇಲ್ಲವಲ್ಲ. ಜನಸಂದಣಿಯನ್ನು ಪರಿಗಣಿಸಿಕೊಂಡು ಮತ್ತು ಆಧುನಿಕ ಜೀವನ ಕ್ರಮವು ಕೊಡ ಮಾಡಿರುವ ಕಾಯಿಲೆಗಳನ್ನು ಪರಿಗಣಿಸಿಕೊಂಡು ಹರಮ್‌ನ ಒಳಗಡೆಯೇ ಶೌಚಕ್ಕೆ ಮತ್ತು ಅಂಗಶುದ್ಧಿಗೆ ಏರ್ಪಾಡುಗಳನ್ನು ಮಾಡಿದರೇನು? ಆ ಬಗ್ಗೆ ಇಜ್ತಿಹಾದ್ ನಡೆಸಿದರೇನು? ಪತಿ–ಪತ್ನಿ–ಮಕ್ಕಳನ್ನೊಳಗೊಂಡ ಕುಟುಂಬವೊಂದು ಮಸ್ಜಿದುಲ್ ಹರಾಮನ್ನು ಪ್ರವೇಶಿಸಿದರೆ ಮತ್ತು ದೀರ್ಘ ಸಮಯ ಅಲ್ಲಿ ತಂಗಲು ಬಯಸಿದರೆ ಖಂಡಿತ ಇಂಥದ್ದೊಂದು ಪ್ರಶ್ನೆಯನ್ನು ಆ ಕುಟುಂಬ ತನ್ನೊಳಗೆ ಕೇಳಿಯೇ ಕೇಳಬಹುದು. ಹತ್ತು ಮಂದಿಯ ಕುಟುಂಬದಲ್ಲಿ ಓರ್ವನ ಅಥವಾ ಓರ್ವಳ ಅಗತ್ಯಕ್ಕಾಗಿ ಹತ್ತು ಮಂದಿಯೂ ಹರಮ್‌ನಿಂದ ಹೊರಬರಬೇಕಾಗಿ ಬರುವುದು ಸಣ್ಣ ಸಮಸ್ಯೆ ಅಲ್ಲ. ಒಂದು ವೇಳೆ ಒಬ್ಬರೋ ಇಬ್ಬರೋ ಹೊರಬಂದು ಉಳಿದವರೆಲ್ಲ





ಅಲ್ಲಿಯೇ ಇರಲು ಬಯಸಿದರೂ ಅದು ಬಳಿಕ ಹುಡುಕಾಟದ ಸಮಸ್ಯೆಗೂ ಎಡೆ ಮಾಡಿಕೊಡಬಹುದು. ಹೊರಬಂದವರು ಒಳ ಹೋಗಲೂ ಆಗದೆ ಒಂದುವೇಳೆ ಆದರೂ ಕುಟುಂಬದ ಜೊತೆ ಸೇರಲೂ ಆಗದೇ ಸಂಕಟಪಡಬೇಕಾಗಬಹುದು. ಅಪರಿಚಿತ ಸ್ಥಳ ಆಗಿರುವುದರಿಂದ ಗೊಂದಲ, ಭಯ, ಆತಂಕ ಎದುರಾಗುವುದು ಅಸಂಭವ ಅಲ್ಲ.

## ಭಾಗ: 10

ವಿಶೇಷ ಏನೆಂದರೆ, ಮಸ್ಜಿದುಲ್ ಹರಾಮ್‌ನಲ್ಲಿ ಜುಮಾ ಖುತ್ಬಾ ತೀರಾ ಸಣ್ಣದು. ನಮಾಝ್‌ನಲ್ಲಿ ಪಠಿಸಲಾದ ಸೂರಃ ಕೂಡ ತೀರಾ ಚಿಕ್ಕದು. ಸೂರ ಅಲ್ ಕೌಸರ್ ಮತ್ತು ಅಲ್ ಮಾವೂನ್. ಪ್ರತಿ ಹೊತ್ತಿನ ನಮಾಝ್‌ನ ಬಳಿಕವೂ ಮಯ್ಯತ್ ನಮಾಝ್ ಇರುತ್ತದೆ. ಮಕ್ಕಾ ಮತ್ತು ಮದೀನಾದಲ್ಲಿ ನಾನಿದ್ದಷ್ಟು ದಿನ ಮಸ್ಜಿದುಲ್ ಹರಾಮ್ ಮತ್ತು ಮಸ್ಜಿದುನ್ನಬವಿಯಲ್ಲಿ ಪ್ರತಿ ಹೊತ್ತಿನ ನಮಾಝ್‌ನ ಬಳಿಕವೂ ಮಯ್ಯತ್ ನಮಾಝ್ ನಿರ್ವಹಿಸಿದ್ದೇನೆ. ಬಹುಶಃ, ಮಯ್ಯತ್ ನಮಾಝ್ ಎಂಬುದು ಐದು ಹೊತ್ತಿನ ನಮಾಝ್‌ನಂತೆ ಫರ್ಝ್ ನಮಾಝ್ ಆಗಿದೆಯೇ ಎಂದು ಅನುಮಾನಿಸುವಷ್ಟು ಇಲ್ಲಿ ಇದು ಸಹಜ. ಬಹುತೇಕ ಮಹಿಳೆಯರು ಮತ್ತು ಪುರುಷರು ಮಯ್ಯತ್ ನಮಾಝ್‌ನಲ್ಲಿ ಪಾಲ್ಗೊಳ್ಳುತ್ತಾರೆ. ಮಕ್ಕಾದ ಮಸ್ಜಿದುಲ್ ಹರಾಮ್‌ನ ಈಶಾನ್ಯ ಭಾಗದಲ್ಲಿ ಸುಮಾರು ಎರಡು ಕಿಲೋ ಮೀಟರ್ ದೂರದಲ್ಲಿ ಅಲ್ ಮುಅಲ್ಲ ಎಂಬ ವಿಶಾಲ ಕಬರಸ್ತಾನವಿದೆ. ಕಬರ್‌ನ ಎರಡೂ ಬದಿಗಳಿಗೆ ಇಟ್ಟಿರುವ ಕಲ್ಲುಗಳನ್ನು ತೆಗೆದರೆ ಮೈದಾನದಂತೆ ಕಾಣುವಷ್ಟು ಸಮತಟ್ಟಾದ ಪ್ರದೇಶ. ಈ ಕಬರಸ್ತಾನದಲ್ಲೇ ಖದೀಜ(ರ), ಅಸ್ಮಾ ಬಿಂತಿ ಅಬೂಬಕರ್(ರ), ಅಬ್ದುಲ್ಲಾ ಬಿನ್ ಉಮರ್(ರ), ಅಬ್ದುಲ್ಲಾ ಬಿನ್ ಝುಬೈರ್(ರ) ಮುಂತಾದವರನ್ನು ಅಂತ್ಯಸಂಸ್ಕಾರಗೈದ ಕಬರಸ್ತಾನವಿದೆ. ಆದರೆ ಅಲ್ಲಿಗೆ ಮುಕ್ತ ಪ್ರವೇಶ ಇಲ್ಲ. ಆ ಕಬರಸ್ತಾನಕ್ಕೆ ಕಬ್ಬಿಣದ ಬೇಲಿಯನ್ನು ಹಾಕಲಾಗಿದೆ. ಇದಕ್ಕೆ ಹೋಲಿಸಿದರೆ ಮದೀನ ತೀರಾ ಭಿನ್ನ. ಸುಮಾರು ಹತ್ತು ಸಾವಿರಕ್ಕಿಂತಲೂ ಹೆಚ್ಚು ಸಹಾಬಿಗಳನ್ನು ದಫನ ಮಾಡಲಾಗಿರುವ ಬಕೀಉಲ್ ಗರ್‌ಖದ್(ಜನ್ನತುಲ್ ಬಕೀಅ್)ಗೆ ಪುರುಷರಿಗೆ ಮುಕ್ತ ಪ್ರವೇಶ ಇದೆ. ಆದರೆ ಮಹಿಳೆಯರಿಗೆ ಪ್ರವೇಶವಿಲ್ಲ. ಖದೀಜ(ರ) ಮತ್ತು ಮೈಮೂನಾರನ್ನು(ರ) ಹೊರತು ಪಡಿಸಿ ಉಳಿದೆಲ್ಲ ಪ್ರವಾದಿ ಪತ್ನಿಯರನ್ನು ದಫನ ಮಾಡಲಾಗಿರುವುದು ಇಲ್ಲೇ. ಪ್ರವಾದಿಯವರ(ಸ) ಪುತ್ರ ಇಬ್ರಾಹೀಮ್, ಮೂರನೇ ಖಲೀಫಾ ಉಸ್ಮಾನ್(ರ), ಇಮಾಮ್ ಮಾಲಿಕ್ ಮುಂತಾದವರನ್ನು ದಫನ





ಮಾಡಲಾಗಿರುವ, ಎಕ್ರೆ ಗಟ್ಟಲೆ ವಿಸ್ತಾರವಿರುವ ಮತ್ತು ಮಸ್ಜಿದುನ್ನಬವಿಯ ಆಗ್ನೇಯ ಭಾಗದಲ್ಲಿರುವ ಕಬರಸ್ತಾನವಿದು. ಸ್ವದೇಶ, ವಿದೇಶ ಎಂಬ ಭೇದವಿಲ್ಲದೇ ಮದೀನಾದಲ್ಲಿ ಯಾರೇ ಮೃತಪಟ್ಟರೂ ಅವರನ್ನು ಈ ಬಕೀಉಲ್ ಗರ್‌ಖದ್‌ನಲ್ಲೇ ದಫನ ಮಾಡಲಾಗುತ್ತದೆ. ಇದಕ್ಕೆ ಕಾರಣವೂ ಇದೆ. ನಾಳೆ ಪುನರುತ್ಥಾನ ದಿನ ಮೊಟ್ಟ ಮೊದಲು ಗೋರಿಯಿಂದ ಎದ್ದು ನಿಲ್ಲುವುದು ಪ್ರವಾದಿ ಮುಹಮ್ಮದ್(ಸ) ಆಗಿದ್ದಾರೆ. ಬಳಿಕ ಅಬೂಬಕರ್ ಸಿದ್ದೀಕ್(ರ) ಮತ್ತು ಬಳಿಕ ಉಮರ್(ರ). ಬಳಿಕ ಬಕೀಉಲ್ ಗರ್‌ಖದ್‌ನಲ್ಲಿ ದಫನ ಮಾಡಲ್ಪಟ್ಟವರು ಎಂದು ಪ್ರವಾದಿ(ಸ) ಹೇಳಿದ್ದಾರೆ. ಮಾತ್ರವಲ್ಲ, ಇವರ ಪರ ನಾನು ಶಿಫಾರಸು ಮಾಡುವೆ ಎಂದೂ ಪ್ರವಾದಿ(ಸ) ಹೇಳಿರುವುದಾಗಿ ವರದಿಯಿದೆ. ಆದ್ದರಿಂದ ಬಕೀಉಲ್ ಗರ್‌ಖದ್‌ನಲ್ಲಿ ದಫನವಾಗುವುದನ್ನು ಭಾಗ್ಯವಾಗಿ ಕಾಣಲಾಗುತ್ತದೆ.

ನಾನು ಮದೀನದ ಈ ಜನ್ನತುಲ್ ಬಕೀಅ್‌ಗೆ ನನ್ನ ತಂಡದೊಂದಿಗೆ ಹೋಗಲಿಲ್ಲ. ಒಂಟಿಯಾಗಿ ತೆರಳಿದೆ. ವಿಶಾಲ ಕಬರಸ್ತಾನವದು. ಯಾವ ಕಬರ್‌ನಲ್ಲೂ ಹೆಸರುಗಳನ್ನು ನಮೂದಿಸಲಾಗಿಲ್ಲ. ಕಬರ್‌ಗಳೂ ಸಹಜವಾಗಿವೆ. ಒಂದು ಗೇಣಿನಷ್ಟೇ ಎತ್ತರವಾಗಿವೆ. ಪ್ರವಾದಿಯವರ ಪತ್ನಿಯರೂ ಮಕ್ಕಳೂ, ಖಲೀಫಾ ಉಸ್ಮಾನ್‌ರೂ(ರ) ಮತ್ತು ಸಾವಿರಾರು ಸಹಾಬಿಗಳು... ಎಲ್ಲರೂ ಕಬರ್‌ಗಳ ಎತ್ತರ, ಆಕಾರ, ವಿಸ್ತಾರಕ್ಕೆ ಸಂಬಂಧಿಸಿ ಸಮಾನರು. ಹಾಗಂತ, ಕೇವಲ ಸಹಾಬಿಗಳನ್ನು ಮಾತ್ರ ಇಲ್ಲಿ ದಫನ ಮಾಡಲಾಗಿರುವುದಲ್ಲ. ಅಂದಿನಿಂದ ಇಂದಿನವರೆಗೆ ಮತ್ತು ಮುಂದೆ ಪ್ರಳಯದ ವರೆಗೆ ಇಲ್ಲಿ ಹೊಸ ಗೋರಿಗಳನ್ನು ತೋಡುವ ಮತ್ತು ಮೃತದೇಹಗಳನ್ನು ದಫನ ಮಾಡುವ ಕ್ರಿಯೆಗಳು ನಡೆಯುತ್ತಲೇ ಇರುತ್ತವೆ. ವಿಶೇಷ ಏನೆಂದರೆ, ಈ ಹೊಸ ಕಬರ್‌ಗಳನ್ನೂ ಸಹಾಬಿಗಳ ಹಳೆ ಕಬರ್‌ಗಳನ್ನೂ ಬೇರ್ಪಡಿಸಿ ತೋರಿಸುವಂತಹ ಯಾವ ಸಂಜ್ಞೆಗಳೂ ಇಲ್ಲಿಲ್ಲ. ಸಾಮಾನ್ಯರ ಗೋರಿಯೂ ಸಹಾಬಿಗಳ ಗೋರಿಯೂ ಗೋರಿ ಎಂಬ ನೆಲೆಯಲ್ಲಿ ಇಲ್ಲಿ ಒಂದೇ ರೀತಿ. ಇಲ್ಲಿರುವುದೆಲ್ಲ ಕೇವಲ ಗೋರಿಗಳು. ಯಾವುದನ್ನೂ ಎತ್ತರಿಸಿ ಕಟ್ಟಲಾಗಿಲ್ಲ. ಮಿನಿಚರ್‌ಗಳಿಂದ ಶೃಂಗರಿಸಲಾಗಿಲ್ಲ. ವಿಶೇಷ ಬಟ್ಟೆಯನ್ನೋ ಊದುಬತ್ತಿಯನ್ನೋ, ಹರಕೆ ಡಬ್ಬಿಯನ್ನೋ ಇಡಲಾಗಿಲ್ಲ. ಕಬರ್‌ಗಳ ಬಳಿ ಹೆಚ್ಚು ಹೊತ್ತು ನಿಲ್ಲುವುದಕ್ಕೆ ಭದ್ರತಾ ಸಿಬ್ಬಂದಿಗಳು ಬಿಡುವುದೂ ಇಲ್ಲ. ಮನುಷ್ಯರೆಲ್ಲ ಅಸಹಾಯಕರಾಗಿ ಬೋರಲಾಗಿ ಬಿದ್ದಿರುವಂತೆ ಕಾಣುವ ದೃಶ್ಯ ಅದು. ನನ್ನ ಮನಸ್ಸನ್ನು ತೀವ್ರವಾಗಿ ತಟ್ಟಿದ ಮತ್ತು ಕಾಡಿದ ಕಬರಸ್ತಾನವೆಂದರೆ ಬಕೀಉಲ್ ಗರ್‌ಖದ್. ಒಂದು ವೇಳೆ, ಆ ಪ್ರತಿ ಕಬರ್‌ಗಳ ಮೇಲೆ ಬಿಳಿ ಬಟ್ಟೆಯನ್ನು ಹಾಸಿಬಿಟ್ಟರೆ ಹೇಗಿರಬಹುದು ಎಂದು ನಾನು ಪದೇ ಪದೇ ಆಲೋಚಿಸಿದೆ. ಮೃತದೇಹಗಳನ್ನು ಅಂಗಾತ ಮಲಗಿಸಿದಂತೆ ಕಾಣುವ ಆ ದೃಶ್ಯ ಹೇಗಿರಬಹುದು? ಬಕೀಉಲ್ ಗರ್‌ಖದ್‌ಗೆ ನೀವು ಪ್ರವೇಶಿಸುವುದೆಂದರೆ, ನಿಮ್ಮದೇ ಕಬರ್‌ಗೆ ನೀವು ಪ್ರವೇಶಿಸುವುದು ಎಂದರ್ಥ. ಒಂದೇ ಆಕಾರದ ಆ ಕಬರ್‌ಗಳ ರಾಶಿಯನ್ನು ನೋಡುವಾಗ ಹೃದಯದ

ಬಡಿತ ಹೆಚ್ಚುತ್ತದೆ. ಬದುಕು ಮತ್ತು ಸಾವಿನ ಜಿಜ್ಞಾಸೆಯೊಂದು ನಮ್ಮೊಳಗೆ ಹುಟ್ಟಿಕೊಳ್ಳುತ್ತದೆ. ನಮ್ಮನ್ನು ಬಕೀಉಲ್ ಗರ್‌ಖದ್ ಆ ಜನಸಂದಣಿಯ ನಡುವೆಯೂ ಒಂಟಿಯಾಗಿಸುತ್ತದೆ. ಬದುಕಿನ ಅಶಾಶ್ವತೆಯನ್ನು ನೆನಪಿಸುತ್ತದೆ. 'ಈ ರೀತಿ ಮಲಗುವುದಕ್ಕೆ ಯಾವ ಸಿದ್ಧತೆಯನ್ನು ನಡೆಸಿರುವಿ' ಎಂದು ಅಂತರಾತ್ಮ ನಮ್ಮನ್ನು ಪ್ರಶ್ನಿಸುತ್ತದೆ. ನಮ್ಮನ್ನು ಗದ್ಗದಿತಗೊಳಿಸುವ, ಪತ್ನಿ–ಮಕ್ಕಳು–ಕುಟುಂಬ... ಎಲ್ಲರನ್ನೂ ಎಲ್ಲವನ್ನೂ ಮರೆತು ಭಾವುಕವಾಗುವ ಜಾಗ ಅದು. ಬಕೀಉಲ್ ಗರ್‌ಖದ್‌ಗೆ ನಾನು ಯಾವ ಭಾವದಿಂದ ಪ್ರವೇಶಿಸಿದ್ದೆನೋ ಅದೇ ಭಾವದಿಂದ ಮರಳಲು ನನ್ನಿಂದ ಸಾಧ್ಯವಾಗಲಿಲ್ಲ. ಕಬರ್‌ಗಳು ನಮ್ಮ ಮರಣವನ್ನು ನೆನಪಿಸುವ ಸಂಕೇತಗಳಾಗಬೇಕು ಎಂದು ಪ್ರವಾದಿ(ಸ) ಹೇಳಿದ್ದರೆ ಅದಕ್ಕೆ ಅನ್ವರ್ಥವಾಗಿ ಬಕೀಉಲ್ ಗರ್‌ಖದ್ ಇದೆ. ಹೋಗುವಾಗ ಇರುವ ಕುತೂಹಲ ಹಿಂತಿರುಗುವಾಗ ತಲ್ಲಣವಾಗಿ ಮಾರ್ಪಟ್ಟಿರುತ್ತದೆ. ಕಣ್ಣು ಮಂಜಾಗಿರುತ್ತದೆ. ಮಾತು ಕಡಿಮೆಯಾಗಿ ಮೌನ ಆವರಿಸಿಕೊಂಡಿರುತ್ತದೆ. ನಾನೇನಿದ್ದರೂ ಇಷ್ಟೇ ಎಂಬೊಂದು ವಿಷಾದ ಭಾವದ ಪ್ರತೀಕವಾಗಿ ನಾವು ಬದಲಾಗಿರುತ್ತೇವೆ. ಅಂದಹಾಗೆ, ಕಬರ್‌ನ ಬಗ್ಗೆ, ಅದರ ವಿಚಾರಣೆ ಬಗ್ಗೆ ಮತ್ತು ಅಲ್ಲಿಯ ಶಿಕ್ಷೆಯ ಬಗ್ಗೆ ಒಂದಕ್ಕಿಂತ ಹೆಚ್ಚು ಬಾರಿ ನಾನು ಓದಿದ್ದೇನೆ, ಭಾಷಣ ಆಲಿಸಿದ್ದೇನೆ, ಕತೆಯನ್ನು ಓದಿ ಭಾವುಕನಾಗಿದ್ದೇನೆ. ಆದರೆ, ಬಕೀಉಲ್ ಗರ್‌ಖದ್‌ನ ಅನುಭವ ಈ ಎಲ್ಲವುಗಳಿಗಿಂತಲೂ ಮಿಗಿಲಾದುದು. ಅದು ನಮ್ಮನ್ನು ಗಾಢವಾಗಿ ತಟ್ಟುತ್ತದೆ. ತಲ್ಲಣಗೊಳಿಸುತ್ತದೆ. ನೀವು ಕಬರ್‌ಗಳ ನಡುವೆ ಒಂದಷ್ಟು ದೂರ ಸಾಗಿದಾಗ ನೀವೇನು ಎಂದು ಅದು ಹೇಳುತ್ತದೆ. ಆ ಬಳಿಕ ನೀವು ಓರ್ವ ಕುತೂಹಲಗೊಂಡ ಯಾತ್ರಿಕರಾಗಿರುವುದಿಲ್ಲ. ನಿಮ್ಮದೇ ಕಬರನ್ನು ಹುಡುಕುವ ವಾಸ್ತವವಾದಿಯಾಗುತ್ತೀರಿ. ಯಾವಾಗ ನೀವು ಈ ಭಾವಕ್ಕೆ ಹೊರಳುತ್ತೀರೋ ಆ ಬಳಿಕ ನೀವು ನಿಮ್ಮೆಲ್ಲ ಬಿರುದು–ಬಾವಲಿಗಳಿಂದ ಮುಕ್ತರಾಗುತ್ತೀರಿ. 'ನಾನು ಏನೂ ಅಲ್ಲ, ಹೀಗೆ ಮಲಗುವುದಕ್ಕೆ ಸಿದ್ಧವಾಗಿರಬೇಕಾದ ಜೀವ...' ಎಂಬ ಸ್ಥಿತಪ್ರಜ್ಞೆಗೆ ತಲುಪುತ್ತೀರಿ. ಬಹುಶಃ, ಜನ್ನತುಲ್ ಬಕೀಅ್‌ನ ವಿಶೇಷತೆ ಇದು. ನನ್ನನ್ನು ಬಿಡದೇ ಕಾಡಿದ ಮತ್ತು ಸದಾ ಕಾಡುತ್ತಿರುವ ನೆನಪುಗಳಲ್ಲಿ ಬಕೀಉಲ್ ಗರ್‌ಖದ್ ಕೂಡ ಒಂದು. ಮದೀನಕ್ಕೆ ಹೋದವರು ಒಮ್ಮೆಯಾದರೂ ಬಕೀಉಲ್ ಗರ್‌ಖದ್‌ಗೆ ಭೇಟಿ ಕೊಡಲೇ ಬೇಕು ಎಂದು ನಾನು ವಿನಂತಿಸುತ್ತೇನೆ.

ಇಲ್ಲಿ ಇನ್ನೊಂದು ವಿಷಯವನ್ನು ಹಂಚಿಕೊಳ್ಳಬೇಕೆನಿಸುತ್ತದೆ. ನಮ್ಮಲ್ಲಿ ಗೋರಿ ತೋಡುವ ಕ್ರಮಕ್ಕೂ ಇಲ್ಲಿಯ ಗೋರಿಗಳಿಗೂ ನಡುವೆ ತುಸು ವ್ಯತ್ಯಾಸ ಇದೆ. ನಮ್ಮಲ್ಲಿ ಗುಂಡಿಯೊಂದನ್ನು ಅಗೆದು ಅದರ ತಳಭಾಗದಲ್ಲಿ ಸಣ್ಣ ಗುಂಡಿಯನ್ನು ತೋಡಲಾಗುತ್ತದೆ. ಅದಕ್ಕೆ ಗ್ರಾಮ್ಯ ಭಾಷೆಯಲ್ಲಿ 'ತಾಯಿ ಕಬರ್' ಎಂಬ ಹೆಸರಿದೆ. ಅದರಲ್ಲಿ ಮೃತದೇಹವನ್ನು ಇರಿಸಲಾಗುತ್ತದೆ. ಆದರೆ ಬಕೀಉಲ್ ಗರ್‌ಖದ್‌ನಲ್ಲಿ ಹಾಗಿಲ್ಲ. ಅಲ್ಲಿ ಒಂದೇ ಗುಂಡಿಯನ್ನು ತೋಡಲಾಗುತ್ತದೆ. ನಮ್ಮಲ್ಲಿರುವಂತೆ





ಗುಂಡಿಯ ತಳಭಾಗದಲ್ಲಿ ತಾಯಿ ಕಬರ್ ಇಲ್ಲ. ಅದು ಗುಂಡಿಯ ಮಧ್ಯಭಾಗದಲ್ಲಿ ಒಂದು ಬದಿಯಲ್ಲಿರುತ್ತದೆ. ಮೃತದೇಹವನ್ನು ಇರಿಸುವುದಕ್ಕೆ ಬೇಕಾಗುವಷ್ಟು ಅಗಲದಲ್ಲಿ ಜಾಗವನ್ನು ಕೊರೆಯಲಾಗುತ್ತದೆ. ನಮ್ಮಲ್ಲಿ ಮೃತದೇಹವನ್ನು ಗುಂಡಿಯ ತಳಭಾಗದಲ್ಲಿ ಇಟ್ಟರೆ ಇಲ್ಲಿ ಗುಂಡಿಯ ಬದಿಯಲ್ಲಿ ಇಡಲಾಗುತ್ತದೆ. ಇಂಥ ಖಾಲಿ ಕಬರ್‌ಗಳು ಬಕೀಉಲ್ ಗರ್‌ಖದ್‌ನಲ್ಲಿದೆ. ಮೃತ ದೇಹಗಳನ್ನು ಕಾಯುತ್ತಿರುವ ಕಬರ್‌ಗಳು. ಇಲ್ಲಿ ಇನ್ನೊಂದು ವಿಷಯವನ್ನೂ ಹೇಳಿಬಿಡುತ್ತೇನೆ. ಮಕ್ಕಾದ ಮಸ್ಜಿದುಲ್ ಹರಾಮ್ ಮತ್ತು ಮದೀನಾದ ಮಸ್ಜಿದುನ್ನಬವಿಯ ನಡುವಿನ ಹೋಲಿಕೆಯಲ್ಲಿ ನನಗೆ ಕಂಡ ವಿಷಾದದ ಅಂಶ ಏನೆಂದರೆ, ಎರಡೂ ಮಸೀದಿಗಳ ಮುಖ್ಯ ಪ್ರವೇಶ ದ್ವಾರಕ್ಕೆ ಇಡಲಾದ ಹೆಸರುಗಳು. ಮಸ್ಜಿದುನ್ನಬವಿಯ ದ್ವಾರಗಳು ಪ್ರವಾದಿಯವರ ಅನುಯಾಯಿಗಳ ಹೆಸರಿನಿಂದ ಗುರುತಿಸಿಕೊಂಡರೆ ಮಕ್ಕಾದ ಮಸ್ಜಿದುಲ್ ಹರಾಮ್‌ನ ಪ್ರಮುಖ ಪ್ರವೇಶದ್ವಾರಗಳು ಸೌದಿ ಅರೇಬಿಯಾವನ್ನು ಆಳಿದ ರಾಜರುಗಳ ಹೆಸರಿನಿಂದ ಗುರುತಿಸಿಕೊಂಡಿದೆ. ಕಿಂಗ್ ಅಬ್ದುಲ್ಲಾ, ಕಿಂಗ್ ಫಹದ್... ಮುಂತಾದ ಹೆಸರುಗಳನ್ನು ಮಸ್ಜಿದುಲ್ ಹರಾಮ್‌ನ ಪ್ರವೇಶದ್ವಾರಕ್ಕೆ ಇಡಲಾಗಿದೆ. ಆದರೆ, ಮದೀನಾದ ಮಸ್ಜಿದುನ್ನಬವಿ ಹಾಗಲ್ಲ. ಅಬೂಬಕರ್(ರ), ಉಮರ್‌ರ(ರ) ಹೆಸರುಗಳಿಂದ ಕೂಡಿದ ಪ್ರವೇಶದ್ವಾರಗಳು ನಮ್ಮನ್ನು ಸ್ವಾಗತಿಸುತ್ತವೆ. ಮಸ್ಜಿದುಲ್ ಹರಾಮ್‌ನ ಪ್ರಮುಖ ಪ್ರವೇಶದ್ವಾರಗಳು ಕೂಡಾ ಇಂಥ ಹೆಸರುಗಳಿಂದ ಕೂಡಿರುತ್ತಿದ್ದರೆ ಎಷ್ಟು ಚೆನ್ನಾಗಿತ್ತು ಅಂತ ನಾನಂತೂ ಭಾವಿಸಿದೆ. ಮಕ್ಕಾದ ಮಸ್ಜಿದುಲ್ ಹರಾಮ್‌ನ ವಿಸ್ತರಣೆಯ ಕಾಲದಲ್ಲಿ ಸೌದಿ ರಾಜರುಗಳು ಸಾಕಷ್ಟು ಶ್ರಮವಹಿಸಿರಬಹುದು. ಸೌದಿಯ ವರಮಾನದಲ್ಲಿ ಒಂದು ಉತ್ತಮ ಮೊತ್ತವನ್ನು ಅವರು ಅದಕ್ಕೆ ವಿನಿಯೋಗಿಸುತ್ತಿರಬಹುದು. ಯಾತ್ರಾರ್ಥಿಗಳಿಗೆ ಸೌಲಭ್ಯವನ್ನು ಒದಗಿಸುವುದಕ್ಕಾಗಿ ನಿಸ್ವಾರ್ಥ ಸೇವೆಯಲ್ಲಿ ತೊಡಗಿರಬಹುದು. ಆದರೆ, ಮಸ್ಜಿದುಲ್ ಹರಾಮ್‌ಗೆ ಕಿಂಗ್ ಫಹದ್ ಗೇಟ್‌ನ ಮೂಲಕ ಪ್ರವೇಶಿಸುವುದಕ್ಕೂ ಉಮರ್ ಬಿನ್ ಖತ್ತಾಬ್ ಗೇಟ್‌ನ ಮೂಲಕ ಪ್ರವೇಶಿಸುವುದಕ್ಕೂ ಪದಗಳಲ್ಲಿ ವಿವರಿಸಲಾಗದಷ್ಟು ಅಂತರ ಇದೆ. ಉಮರ್ ಬಿನ್ ಖತ್ತಾಬ್ ಅಂದರೆ ಅದೊಂದು ಹೆಸರು ಮಾತ್ರ ಅಲ್ಲ, ಅದೊಂದು ಭಾವುಕತೆ. ಅದೊಂದು ಎದೆಗಾರಿಕೆ. ಅದು ನಿಷ್ಕಪಟತೆಗೆ, ನಿಷ್ಠುರ ನ್ಯಾಯಕ್ಕೆ, ಧೈರ್ಯಕ್ಕೆ, ಅನುಸರಣೆಗೆ, ಮಾದರಿ ಆಡಳಿತಕ್ಕೆ, ಸ್ವ ಅವಲೋಕನಕ್ಕೆ, ಮುಲಾಜು ರಹಿತ ವ್ಯಕ್ತಿತ್ವಕ್ಕೆ, ಸೇವಾಗುಣಕ್ಕೆ, ಕರುಣೆ ಮತ್ತು ಕಾಠಿಣ್ಯಗಳ ಜುಗುಲ್ ಬಂದಿಗೆ, ಪ್ರಾಮಾಣಿಕತೆಗೆ... ಹೀಗೆ ಮಾನವ ಜಗತ್ತಿನ ಪರಿಪೂರ್ಣ ವ್ಯಕ್ತಿತ್ವ ಎಂದು ಒಂದು ಹಂತದವರೆಗೆ ಹೇಳಬಹುದಾದವರ ಸಂಕೇತನಾಮ. ಮಾನವ ಸಹಜ ದೌರ್ಬಲ್ಯಗಳನ್ನೆಲ್ಲ ಕಡೆಗಣಿಸಬಹುದಾದಷ್ಟು ಸದ್‌ಮೌಲ್ಯಗಳ ಭಂಡಾರ ಅವರಾಗಿದ್ದರು. ಅವರನ್ನು 'ಮಾದರಿ ಆಡಳಿತಗಾರ' ಎಂದು ಇಸ್ಲಾಮೀ ಇತಿಹಾಸ ಮಾತ್ರ ಕೊಂಡಾಡುವುದಲ್ಲ, ಗಾಂಧೀಜಿಯಿಂದ ಹಿಡಿದ ಈಗಿನ ಕೇಜ್ರಿವಾಲ್ ತನಕ... ಎಲ್ಲರೂ

ಅವರ ಅಭಿಮಾನಿಗಳು. ಇದು ಕೇವಲ ಉದಾಹರಣೆಗೆ ಅಷ್ಟೇ. ಕಿಂಗ್ ಫಹದ್ ಎಂಬ ಹೆಸರು ಮಸುಕುಗೊಳ್ಳುವುದೇ ಇಲ್ಲಿ. ಓರ್ವ ರಾಜರೆಂಬ ನೆಲೆಯಲ್ಲಿ ಪರ ಮತ್ತು ವಿರುದ್ಧವಾದ ಅಭಿಪ್ರಾಯಗಳು ಅವರ ಬಗ್ಗೆ ಇದ್ದೇ ಇದೆ ಮತ್ತು ಅದು ಸಹಜ ಕೂಡ. ಓರ್ವ ರಾಜರಾಗಿ ಅವರ ಆಡಳಿತ ಕಾಲದಲ್ಲಿ ಅವರು ತೆಗೆದುಕೊಂಡ ತೀರ್ಮಾನಗಳಲ್ಲಿ ಸರಿಗಳೂ ಇರಬಹುದು. ತಪ್ಪುಗಳೂ ಇರಬಹುದು, ಫೆಲೆಸ್ತೀನ್, ಸಿರಿಯಾ, ಈಜಿಪ್ಟ್, ಇರಾನ್, ಇರಾಕ್, ಯಮನ್, ಟರ್ಕಿ, ಸುಡಾನ್, ಅಲ್ಜೀರಿಯಾ, ಲಿಬಿಯಾ ಟ್ಯುನೀಶಿಯಾ, ಲೆಬನಾನ್, ಕತಾರ್, ಚೆಚನ್ಯಾ, ಅಫಘಾನಿಸ್ತಾನ್, ಪಾಕಿಸ್ತಾನ್, ಅಝುರ್ ಬೈಝಾನ್, ಕಝುಕಿಸ್ತಾನ್.. ಮುಂತಾದ ಮುಸ್ಲಿಮ್ ರಾಷ್ಟ್ರಗಳು ಮತ್ತು ಭಾರತ, ಅಮೇರಿಕ, ಇಸ್ರೇಲ್, ಫ್ರಾನ್ಸ್, ಬ್ರಿಟನ್, ಜರ್ಮನಿ, ರಷ್ಯಾ, ಚೀನಾ, ಶ್ರೀಲಂಕಾ, ಬ್ರೆಝಿಲ್, ವೆನೆಝುವೆಲಾ... ಮುಂತಾದ ಮುಸ್ಲಿಮೇತರ ರಾಷ್ಟ್ರಗಳು ಅವರನ್ನು ಒಂದೇ ಭಾವದಲ್ಲಿ ಸ್ವೀಕರಿಸಲು ಖಂಡಿತ ಸಾಧ್ಯವಿಲ್ಲ. ಅವರ ಬಗ್ಗೆ ವಿವಿಧ ರಾಷ್ಟ್ರಗಳ ಅಭಿಪ್ರಾಯ ವಿವಿಧ ರೀತಿಯಲ್ಲಿರಬಹುದು. ಫೆಲೆಸ್ತೀನ್‌ನ ಮಂದಿ ಫಹದ್‌ರ ಬಗ್ಗೆ ಯಾವ ಅಭಿಪ್ರಾಯವನ್ನು ಇಟ್ಟುಕೊಂಡಿರುವರೋ ಅದೇ ಅಭಿಪ್ರಾಯ ಇರಾಕ್‌ನ ಮಂದಿಗೆ ಇರಬೇಕೆಂದಿಲ್ಲ. ಇರಾನ್‌ನ ಜನರು ಫಹದ್‌ರನ್ನು ಏನನ್ನುತ್ತಾರೋ ಇರಾಕ್‌ನವರು ಒಂದೊಮ್ಮೆ ಹಾಗನ್ನದೇ ಇರಬಹುದು. ಹಾಗಂತ, ಫಹದ್‌ರ ಬಗ್ಗೆ ನಕಾರಾತ್ಮಕ ಮತ್ತು ಸಕಾರಾತ್ಮಕ ಅಭಿಪ್ರಾಯವುಳ್ಳ ಎಲ್ಲ ರಾಷ್ಟ್ರಗಳ ಮಂದಿಯೂ ಮಸ್ಜಿದುಲ್ ಹರಾಮ್‌ಗೆ ಭೇಟಿ ಕೊಡುತ್ತಾರಲ್ಲವೇ? ಒಂದು ವೇಳೆ, ಫಹದ್‌ರ ಬಗ್ಗೆ ನಕಾರಾತ್ಮಕ ಅಭಿಪ್ರಾಯವುಳ್ಳವರು ಕಿಂಗ್ ಫಹದ್ ಗೇಟ್‌ನ ಮೂಲಕ ಮಸ್ಜಿದುಲ್ ಹರಾಮ್‌ಗೆ ಪ್ರವೇಶಿಸುವಾಗ ಯಾವ ಭಾವದೊಂದಿಗೆ ಪ್ರವೇಶಿಸಬಹುದು? ಹಾಗೆಯೇ ಪ್ರವಾದಿ ಇಬ್ರಾಹೀಮ್, ಮೂಸಾ(ಅ) ಅಥವಾ ಪ್ರವಾದಿ ಯೂಸುಫ್ ಮತ್ತು ಪ್ರವಾದಿ ನೂಹ್‌ರ(ಅ) ಹೆಸರಿನ ಗೇಟ್‌ನ ಮೂಲಕ ಪ್ರವೇಶಿಸುವಾಗ ಯಾವ ಭಾವದೊಂದಿಗೆ ಪ್ರವೇಶಿಸಬಹುದು? ಇಲ್ಲಿ ಇನ್ನೂ ಒಂದು ಪ್ರಮುಖ ಸಂಗತಿಯಿದೆ.

ಮದೀನದ ಮಸ್ಜಿದುನ್ನಬವಿಯ ಇತಿಹಾಸ ಆರಂಭವಾಗುವುದೇ ಪ್ರವಾದಿ ಮುಹಮ್ಮದ್‌ರೊಂದಿಗೆ(ಸ). ಮಸ್ಜಿದುನ್ನಬವಿಯನ್ನು ಪ್ರವಾದಿ ಮುಹಮ್ಮದ್‌ರ ನೇತೃತ್ವದಲ್ಲಿ ನಿರ್ಮಿಸಲಾಯಿತು. ಅದಕ್ಕಾಗಿ ಸಹಲ್ ಮತ್ತು ಸುಹೈಲ್ ಎಂಬ ಅನಾಥ ಮಕ್ಕಳ ಜಾಗವನ್ನು ಖರೀದಿಸಲಾಯಿತು ಎಂಬ ಚಾರಿತ್ರಿಕ ಹಿನ್ನೆಲೆಯೂ ಅದಕ್ಕಿದೆ. ಆದರೆ ಮಸ್ಜಿದುಲ್ ಹರಾಮ್ ಹಾಗಲ್ಲ. ಅದರ ಚಾರಿತ್ರಿಕ ಕೊಂಡಿ ಮಾನವ ಉಗಮದೊಂದಿಗೆ ಜೋಡಿಕೊಂಡಿದೆ. ಆದಿಪಿತ ಪ್ರವಾದಿ ಆದಮ್(ಅ)ರ ಕಾಲದಿಂದ ಮಸ್ಜಿದುಲ್ ಹರಾಮ್‌ನ ಇತಿಹಾಸ ಆರಂಭವಾಗುತ್ತದೆ. ಪ್ರವಾದಿ ಇಬ್ರಾಹೀಮ್‌ರ ಮೂಲಕ ಅದು ಜೀರ್ಣೋದ್ಧಾರವನ್ನು ಕಂಡಿತು. ಒಂದು ರೀತಿಯಲ್ಲಿ, ಮಾನವ ಮಾರ್ಗದರ್ಶಕರಾಗಿ ಆಗಮಿಸಿದ ಎಲ್ಲ ಪ್ರವಾದಿಗಳ ಜೊತೆ ಮತ್ತು ಅಂದಿನಿಂದ





ಇಂದಿನ ವರೆಗಿನ ಮತ್ತು ಪ್ರಳಯ ಕಾಲದ ವರೆಗಿನ ಜನರ ಜೊತೆ ಮಸ್ಜಿದುಲ್ ಹರಾಮ್‌ಗೆ ಸಂಬಂಧ ಇದೆ. ಒಂದು ವೇಳೆ, ಮಸ್ಜಿದುಲ್ ಹರಾಮ್‌ನ ಪ್ರವೇಶದ್ವಾರಗಳಿಗೆ ಇಡುವ ಹೆಸರಿನ ಆಯ್ಕೆ ಪ್ರಕ್ರಿಯೆ ನಡೆಸುವುದೇ ಆದರೆ ಪ್ರವಾದಿಗಳ ಹೆಸರೇ ಅತ್ಯಂತ ಸೂಕ್ತ ಮತ್ತು ಅನಿವಾರ್ಯ ಆಗುತ್ತಿತ್ತು. ಈ ಕಾರಣದಿಂದಲೂ ಕಿಂಗ್ ಫಹದ್, ಕಿಂಗ್ ಅಬ್ದುಲ್ಲಾ... ಹೆಸರುಗಳು ಪ್ರಶ್ನಾರ್ಹವೆನಿಸುತ್ತವೆ. ನನಗೇಕೋ ಈ ಹೆಸರುಗಳು ಮಸ್ಜಿದುಲ್ ಹರಾಮ್‌ನ ಪ್ರವೇಶದ್ವಾರಗಳಲ್ಲಿ ಕಾಣಿಸಿಕೊಂಡದ್ದು ಇಷ್ಟವಾಗಲಿಲ್ಲ. ಇದು ಸೌದಿ ರಾಜ ಕುಟುಂಬವನ್ನು ಚಿರಸ್ಥಾಯಿಯಾಗಿಸುವ ರಾಜಕೀಯ ದುರುದ್ದೇಶದ ನಾಮಕರಣವಾಗಿ ಅದು ನನಗೆ ಕಂಡಿತು.

## ಭಾಗ: 11

ಉಮ್ರಾ ಯಾತ್ರೆಗೆ ಅತ್ಯಂತ ಕಡಿಮೆ ಸಿದ್ಧತೆ ಮಾಡಿಕೊಂಡವರಲ್ಲಿ ನಾನೇ ಮೊದಲಿಗನೇನೋ ಎಂದು ಯಾತ್ರೆಯುದ್ದಕ್ಕೂ ನನಗೆ ಅನಿಸಿದೆ. ಉಡುಪುಗಳನ್ನು ಹೊರತುಪಡಿಸಿ ಉಳಿದಂತೆ ನನ್ನ ಬ್ಯಾಗ್‌ನಲ್ಲಿ ಬೇರೇನೂ ಇರಲಿಲ್ಲ. ಮುಖ್ಯವಾಗಿ ಹಣ್ಣು-ಹಂಪಲುಗಳು ಮತ್ತು ಬೇಕರಿ ಸಾಮಾನುಗಳು. ನನ್ನ ಸಂಗಡಿಗರ ಜೊತೆಯಲ್ಲಿ ಇವು ಧಾರಾಳವಾಗಿ ಇದ್ದುವು. ಆದರೆ ನನ್ನ ಬ್ಯಾಗ್‌ನಲ್ಲಿ ಇದ್ದದ್ದು 10ರಷ್ಟು ಪ್ಯಾರಾಸಿಟಮಾಲ್ ಮಾತ್ರೆಗಳು ಮಾತ್ರ. ಎಲ್ಲಾದರೂ ತಲೆನೋವು, ಜ್ವರ ಬಾಧಿಸಿದರೆ ಉಪಯೋಗಕ್ಕೆ ಬಂದೀತೆಂದು ಉಮ್ರಾ ಯಾತ್ರೆಗಿಂತ ಮೊದಲು ನಡೆಸಲಾದ ತರಬೇತಿ ಶಿಬಿರದಲ್ಲಿ ಹೇಳಿದ್ದರು. ಅದರಾಚೆಗೆ ನಾನು ಏನನ್ನೂ ತೆಗೆದುಕೊಂಡಿರಲಿಲ್ಲ. ಬಹುಶಃ, ಉಮ್ರಾಕ್ಕೆ ತೆರಳುವ ಅತಿ ಉತ್ಸಾಹದಲ್ಲಿ ನಾನು ಇವೆಲ್ಲವನ್ನೂ ಮರೆತೆನೇನೋ ಎಂದೆನಿಸುತ್ತದೆ. ಮಕ್ಕಾದ ಬಿರುಬಿಸಿಲಿಗೆ ನನ್ನ ಪಾದದ ಹಿಮ್ಮಡಿ ಒಡೆಯಿತು. ನಡೆಯಲು ತ್ರಾಸ ಆಗುವಷ್ಟು ಅದರ ಪ್ರಭಾವ ಇತ್ತು. ಇದನ್ನು ನಾನು ನಿರೀಕ್ಷಿಸಿಲ್ಲವಾದುದರಿಂದ ಹಚ್ಚುವುದಕ್ಕೆಂದು ನನ್ನಲ್ಲಿ ಯಾವುದೇ ಮುಲಾಮೂ ಇರಲಿಲ್ಲ. ನನ್ನ ಕೊಠಡಿಯ ಗೆಳೆಯರು ಇದನ್ನು ಮೊದಲೇ ಗ್ರಹಿಸಿ ಸಜ್ಜಾಗಿ ಬಂದಿದ್ದರು. ಅದು ನನ್ನ ಸಮಸ್ಯೆಗೂ ಪರಿಹಾರವನ್ನು ಒದಗಿಸಿತು.

ಮಸ್ಜಿದುಲ್ ಹರಾಮ್‌ನಲ್ಲಿ ನಾನು ಐದಾರು ರಾಷ್ಟ್ರಗಳ ಮಂದಿಯನ್ನು ಭೇಟಿಯಾದೆ. ಈಜಿಪ್ಟ್, ಚೆಚ್ನಿಯಾ, ಫೆಲೆಸ್ತೀನ್, ಪಾಕಿಸ್ತಾನ್, ಅಲ್ಜೀರಿಯಾ, ಯುಗೊಸ್ಲಾವಿಯಾದ ಮುಂತಾದ ರಾಷ್ಟ್ರಗಳ ಮಂದಿ. ವಿಶೇಷ ಏನೆಂದರೆ, ನನಗೆ ಅವರ ಭಾಷೆ ಬರಲ್ಲ. ಅವರಿಗೆ ಇಂಗ್ಲಿಷ್ ಬರಲ್ಲ. ಫೆಲೆಸ್ತೀನಿನ ವ್ಯಕ್ತಿ ತನ್ನ ಮಗ ಭಾರತದಲ್ಲಿ ಕಲಿಯುತ್ತಿದ್ದಾನೆಂದು ಹೇಳಿದರು. ಕೈ ಸನ್ನೆ-ಬಾಯಿ ಸನ್ನೆಗಳ ಮೂಲಕ ನಾವು ಒಂದಷ್ಟು ಮಾತಾಡಿದೆವು. ಭಾಷೆ ಎಷ್ಟು ಪ್ರಬಲ ಅಸ್ತ್ರ ಎಂಬುದು ಮನದಟ್ಟಾದ ಕ್ಷಣ ಅದು. ನನ್ನ ಮುಂದಿರುವ ವ್ಯಕ್ತಿ ನನಗೆ ಒಗಟಾಗುವುದು ಯಾವಾಗ ಅಂದರೆ, ಆತ ಬಾಯಿ ಇದ್ದೂ, ಮಾತು ಬರುತ್ತಿದ್ದೂ ಮಾತಾಡದಾದಾಗ.





ಅದೇವೇಳೆ ನಮ್ಮ ಕಣ್ಣು, ಮೂಗು, ಬಾಯಿ ಮತ್ತು ಒಟ್ಟು ಇಡೀ ಶರೀರ ಮಾತಾಡುವ ತವಕವನ್ನು ವ್ಯಕ್ತಪಡಿಸುತ್ತದೆ. ಆದರೆ ಮಾತು ಮೌನವಾಗುತ್ತದೆ. ಸಾಮಾನ್ಯವಾಗಿ, ನಮ್ಮ ಭಾಷೆ ಗೊತ್ತಿರುವವರು ನಮ್ಮ ಜೊತೆ ಇರುವವರೆಗೆ ಸಂವಹನದಲ್ಲಿ ಭಾಷೆಯ ಪ್ರಾಮುಖ್ಯತೆ ನಮ್ಮ ಗಮನಕ್ಕೆ ಬಂದಿರುವುದಿಲ್ಲ ಅಥವಾ ನಾವು ಆ ಬಗ್ಗೆ ಯೋಚಿಸುವುದೂ ಇಲ್ಲ. ಅದೊಂದು ಸಹಜ ಪ್ರಕ್ರಿಯೆಯೆಂಬಂತೆ ನಡೆದು ಹೋಗುತ್ತದೆ. ಆದರೆ, ಅಪರಿಚಿತರು ಪರಸ್ಪರ ಮುಖಾಮುಖಿಯಾದಾಗ ಮತ್ತು ಮಾತಾಡಲು ಧಾರಾಳ ವಿಷಯಗಳಿದ್ದೂ ಅದನ್ನು ವ್ಯಕ್ತಪಡಿಸಲು ಅಸಾಧ್ಯವಾಗುವಾಗ ಆಗುವ ಸಂಕಟ ಅನುಭವಿಸಿದವರಿಗೇ ಗೊತ್ತು. ಮುಖ್ಯವಾಗಿ, ಫೆಲೆಸ್ತೀನ್ ಮತ್ತು ಈಜಿಪ್ಶಿಯನ್‌ರನ್ನು ಭೇಟಿಯಾದಾಗ ನಾನು ಈ ಸಂದಿಗ್ಧತೆಯನ್ನು ಎದುರಿಸಿದೆ. ಅವರೊಂದಿಗೆ ಮಾತಾಡಬೇಕು ಮತ್ತು ಅಲ್ಲಿನ ಪರಿಸ್ಥಿತಿಯನ್ನು ತಿಳಿದುಕೊಳ್ಳಬೇಕೆಂಬ ಅತೀವ ಹಂಬಲ ನನ್ನಲ್ಲಿತ್ತು. ಆದರೆ ಭಾಷಾ ತೊಡಕು ನನ್ನ ಈ ಉತ್ಸಾಹಕ್ಕೆ ತಣ್ಣೀರೆರಚಿದಾಗ ಅತೀವ ನಿರಾಶೆಯಾಯಿತು.

ನನ್ನ ಹೊಟೇಲ್ ರೂಮ್‌ನ ಪಕ್ಕ ಓರ್ವ ಈಜಿಪ್ಶಿಯನ್ ಇದ್ದರು. ವೀಲ್‌ಚೇರ್‌ನಲ್ಲೇ ಸದಾ ಇರುತ್ತಿದ್ದರು. ಪ್ರತಿ ಸಾರಿ ನಾನು ಹೋಗುತ್ತಾ ಬರುತ್ತಾ ಇರುವಾಗಲೂ ಅವರಿಗೆ ಸಲಾಮ್ ಹೇಳುತ್ತಿದ್ದೆ. ಒಂದು ದಿನ ಅವರು ನನ್ನನ್ನು ಹತ್ತಿರ ಕರೆದರು. ವೀಲ್‌ಚೇರ್‌ನಿಂದ ಎದ್ದು ನಿಂತು ನನ್ನನ್ನು ಆಲಂಗಿಸಿದರು. ಪಟಪಟನೆ ಚುಂಬಿಸಿದರು. ಹಿಂದಿ ಹಿಂದಿ ಎಂದು ಬೆನ್ನು ತಟ್ಟಿದರು. ಅವರದೇ ಭಾಷೆಯಲ್ಲಿ ಮತ್ತೂ ಏನೇನೋ ಹೇಳಿದರು. ಅನಿರೀಕ್ಷಿತ ಘಟನೆಯಾದುದರಿಂದ ನಾನು ತುಸು ಅವಾಕ್ಕಾದೆ. ಈಗಲೂ ಆ ಹಿರಿಯ ವ್ಯಕ್ತಿಯ ಅಭಿಮಾನ ತುಂಬಿದ್ದ ಕಣ್ಣು, ಖುಷಿ, ನಿರ್ಮಲ ಪ್ರೀತಿ ಆಗಾಗ ಸ್ಮರಣೆಗೆ ಬರುತ್ತಲೇ ಇರುತ್ತದೆ.

ಮಕ್ಕಾದಲ್ಲಿದ್ದಷ್ಟು ದಿನ ನನ್ನ ಮತ್ತು ಮಸ್ಜಿದುಲ್ ಹರಾಮ್‌ನ ನಡುವಿನ ಸಾಂಗತ್ಯ ಅತ್ಯಂತ ಅನ್ಯೋನ್ಯವಾಗಿತ್ತು. ತಹಜ್ಜುದ್ ನಮಾಝನ್ನು ಮುತುವರ್ಜಿಯಿಂದ ನಿರ್ವಹಿಸಿದೆ. ಕುರ್‌ಆನ್ ಪಠಣಕ್ಕೆ ಮತ್ತು ದುಆಕ್ಕೆ, ದ್ಸಿಕ್ರ್, ಸಲಾತ್‌ಗಳಿಗೆ ಸಮಯ ಮೀಸಲಿರಿಸಿದೆ. ಅಸರ್ ನಮಾಝ್‌ಗೆಂದು ಮಸ್ಜಿದುಲ್ ಹರಾಮ್‌ಗೆ ತೆರಳಿದರೆ ಇಶಾ ನಮಾಝ್‌ನ ಬಳಿಕವೇ ರೂಮ್‌ಗೆ ಮರಳುತ್ತಿದ್ದೆ. ಪ್ರತಿ ನಮಾಝನ್ನೂ ಹರಮ್‌ನ ಬೇರೆ ಬೇರೆ ಕಡೆ ನಿರ್ವಹಿಸುವುದಕ್ಕೆ ಆದ್ಯತೆ ನೀಡಿದೆ. ಇದರಿಂದಾಗಿ ಜಗತ್ತಿನ ವಿವಿಧ ರಾಷ್ಟ್ರಗಳ ಮತ್ತು ವಿವಿಧ ನಿಲುವುಗಳ ಜನರೊಂದಿಗೆ ಸರತಿ ಸಾಲಲ್ಲಿ ನಿಂತು ನಮಾಝ್ ನಿರ್ವಹಿಸುವುದಕ್ಕೆ ಅವಕಾಶ ಒದಗಿತು. ಅಲ್ಲಾಹು ಅಕ್ಬರ್ ಎಂದು ತಕ್ಬೀರ್ ಉಚ್ಚರಿಸಿ ನಮಾಝ್‌ಗೆ ನಿಂತವರಲ್ಲಿ ಕೈ ಕಟ್ಟದವರೂ ಇದ್ದರು. ಕೈ ಕಟ್ಟಿದವರೂ ಇದ್ದರು. ಎದೆಗೆ, ಹೊಟ್ಟೆಗೆ ಮತ್ತು ಹೊಟ್ಟೆಯಿಂದ ಕೆಳಗೆ ಕೈಕಟ್ಟಿದವರೂ ಇದ್ದರು. ತಕ್ಬೀರ್ ಉಚ್ಚರಿಸಿದ ಬಳಿಕ ಕೈ ಎತ್ತುವುದರಲ್ಲೂ ತರಹೇವಾರಿಗಳು ಇದ್ದವು. ಕೆಲವರು ಕೈಯನ್ನು ಸಂಪೂರ್ಣ ಮೇಲಕ್ಕೆತ್ತಿದರೆ, ಇನ್ನು

ಕೆಲವರು ಅರ್ಧ, ಮುಕ್ಕಾಲು ಮತ್ತು ಕಿವಿಯ ಬಳಿಗೆ... ಹೀಗೆ ವಿವಿಧ ರೀತಿಯಲ್ಲಿ ಕೈ ಎತ್ತಿ ಕಟ್ಟುವವರಿದ್ದರು. ತಲೆಗೆ ಟೊಪ್ಪಿ ಧರಿಸಿದವರೂ ಧರಿಸದವರೂ ಮುಂಡಾಸು ಸುತ್ತಿದವರೂ ಸುತ್ತದವರೂ ಎಲ್ಲರೂ ಸರತಿಯಲ್ಲಿ ಜೊತೆ ಜೊತೆಯಾಗಿಯೇ ನಮಾಝ್‌ಗಾಗಿ ನಿಲ್ಲುತ್ತಿದ್ದರು. ಹಾಗಂತ, ಜಗತ್ತಿನ ನೂರಾರು ರಾಷ್ಟ್ರಗಳಿಂದ ಬರುವ ಯಾತ್ರಾರ್ಥಿಗಳು ಈ ವಿಭಿನ್ನತೆಯನ್ನು ಸಹಜವಾಗಿಯೇ ಸ್ವೀಕರಿಸುತ್ತಾರೆ. ಟೊಪ್ಪಿ ಧರಿಸಿದವನೂ ಧರಿಸದವನೂ ಎದೆಗೆ ಕೈ ಕಟ್ಟುವವನೂ ಕೈಯನ್ನೇ ಕಟ್ಟದವನೂ ಭುಜಕ್ಕೆ ಭುಜ ಸೇರಿಸಿ ಜೊತೆಯಾಗಿಯೇ ಸರತಿ ಸಾಲಿನಲ್ಲಿ ನಿಲ್ಲುತ್ತಾರೆ. ನಿಜವಾಗಿ, ಇಸ್ಲಾಮ್ ಅಂದರೆ ಇದುವೇ. ಅದೊಂದು ಜೀವನ ಕ್ರಮ. ಅಲ್ಲಿ ವೈವಿಧ್ಯತೆ ಇರಲೇಬೇಕು. ಆಹಾರದಲ್ಲಿ, ಉಡುಪಿನಲ್ಲಿ, ಭಾಷೆಯಲ್ಲಿ, ಅಭಿರುಚಿಯಲ್ಲಿ, ಅಭಿಪ್ರಾಯದಲ್ಲಿ... ಹೀಗೆ ಒಂದು ರಾಷ್ಟ್ರದಿಂದ ಇನ್ನೊಂದು ರಾಷ್ಟ್ರಕ್ಕೆ, ಒಂದು ಖಂಡದಿಂದ ಇನ್ನೊಂದು ಖಂಡಕ್ಕೆ ಮತ್ತು ಒಂದು ಧ್ರುವದಿಂದ ಇನ್ನೊಂದು ಧ್ರುವಕ್ಕೆ ವ್ಯತ್ಯಾಸಗಳಿರಬೇಕಾದುದು ಸಹಜ. ಸೌದಿ ಅರೇಬಿಯಾದ ಓರ್ವ ಮುಸ್ಲಿಮ್ ವ್ಯಕ್ತಿ ಬೆಳಗಿನ ಆಹಾರವಾಗಿ ಏನನ್ನು ತಿನ್ನುತ್ತಾನೋ/ಳೋ ಅದನ್ನೇ ಅಮೇರಿಕದ ಓರ್ವ ಮುಸ್ಲಿಮ್ ಕೂಡಾ ತಿನ್ನಬೇಕು ಎಂದು ಬಯಸುವುದು ಅತ್ಯಂತ ಅತಾರ್ಕಿಕ ಮತ್ತು ಅಪ್ರಾಕೃತಿಕವಾದುದು. ಆಫ್ರಿಕನ್ ಖಂಡದ ಜನರ ಉಡುಪಿನ ವಿಧಾನವೇ ಬೇರೆ, ಥ್ಯಾಲೆಂಡ್‌ನ ಮುಸ್ಲಿಮರ ಉಡುಪಿನ ವಿಧಾನವೇ ಬೇರೆ. ಸೌದಿಯಲ್ಲಿ ಜನರ ಸಂವಹನದ ಭಾಷೆ ಅರಬಿ ಎಂಬುದರಿಂದ ಅಥವಾ ಪ್ರವಾದಿ ಮುಹಮ್ಮದರ(ಸ) ಆಡುಭಾಷೆ ಅರಬಿಯಾಗಿರುವುದರಿಂದ ಜಗತ್ತಿನ ಎಲ್ಲ ಮುಸ್ಲಿಮರೂ ಅರಬಿಯಲ್ಲಿ ಮಾತ್ರ ಮಾತಾಡಬೇಕು ಎಂದು ಇಸ್ಲಾಮ್ ಯಾಕೆ ವಾದಿಸುವುದಿಲ್ಲ ಎಂದರೆ, ಅದು ಮಾನವನ ಜೀವನ ಕ್ರಮವಾಗಿರುವುದರಿಂದ. ಜೀವನ ಕ್ರಮ ಯಾವಾಗಲೂ ಸ್ಥಾವರ ಆಗಿರುವುದಿಲ್ಲ, ಜಂಗಮವಾಗಿರುತ್ತದೆ. ಸ್ಥಾವರವಾಗಿರುವುದಕ್ಕೆ ಜೀವನ ಕ್ರಮವಾಗಿ ಗುರುತಿಸಿಕೊಳ್ಳುವುದಕ್ಕೆ ಸಾಧ್ಯವೂ ಇಲ್ಲ. ಉದಾಹರಣೆಗೆ, ಭಾರತದಲ್ಲಿ ಹುಟ್ಟಿದ ಜೈನ ಧರ್ಮವನ್ನೇ ಎತ್ತಿಕೊಳ್ಳಿ. ಅದರ ಬಿಗಿ ಕಟ್ಟಳೆಗಳನ್ನೇ ಪರಿಶೀಲನೆಗೆ ಒಳಪಡಿಸಿಕೊಳ್ಳಿ. ಭಾರತೀಯ ಪರಿಸರವನ್ನು ಮತ್ತು ಇಲ್ಲಿನ ವಾತಾವರಣವನ್ನು ಮಾತ್ರ ಪರಿಗಣಿಸಿಕೊಂಡು ರೂಪು ನೀಡಲಾದ ನಿಯಮಗಳನ್ನಷ್ಟೇ ಅದು ಹೊಂದಿದೆ. ಕಠಿಣ ಸಸ್ಯಾಹಾರವು ಅದರ ನಿಯಮಗಳಲ್ಲಿ ಪ್ರಮುಖವಾದುದು. ಆದರೆ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಭಾರತ ಏಕ ಪ್ರಕಾರವಾಗಿಯೇನೂ ಇಲ್ಲವಲ್ಲ. ವಾತಾವರಣ, ಆಹಾರ ಲಭ್ಯತೆ, ಉದ್ಯೋಗ... ಎಲ್ಲದರಲ್ಲೂ ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸ ಇದೆ. ಕರಾವಳಿ ಭಾಗದಲ್ಲಿ ಮೀನುಗಾರಿಕೆ ಮುಖ್ಯ ಕಸುಬು. ಕೇವಲ ಭಾರತದಲ್ಲೇ ಕೆಲವು ಕಡೆ ಮಾಂಸಾಹಾರವನ್ನು ಮೆನುವಿನಲ್ಲಿ ಅಳವಡಿಸಲೇಬೇಕಾದ ಅನಿವಾರ್ಯತೆ ಇದೆ. ಹೀಗಿರುವಾಗ, ಭಾರತ ಬಿಟ್ಟು ಹೊರ ರಾಷ್ಟ್ರಗಳಲ್ಲಿ ಕೇವಲ ಸಸ್ಯಾಹಾರ ಎಂಬ ಕಠಿಣ ನಿಯಮವನ್ನು ಎಲ್ಲಿಯವರೆಗೆ ಪಾಲಿಸಲು





ಸಾಧ್ಯವಾಗಬಹುದು? ಶ್ರೀಲಂಕಾದಂತಹ ಮೀನುಗಾರಿಕೆಯೇ ಪ್ರಮುಖ ಕಸುಬಾಗಿರುವ ರಾಷ್ಟ್ರಗಳಲ್ಲಿ ಜೈನ ಧರ್ಮದ 'ಸಸ್ಯಾಹಾರ' ನಿಯಮಕ್ಕೆ ಯಾವ ಮಟ್ಟಿನ ಸ್ವಾಗತ ಸಿಗಬಹುದು? ಬಹುಶಃ, ಜೈನ ಧರ್ಮ ಭಾರತದಲ್ಲಿ ನಿಧಾನಕ್ಕೆ ಅಳಿವಿನತ್ತ ಸಾಗಿದ್ದರೆ ಮತ್ತು ವಿದೇಶಗಳಲ್ಲಿ ಜೈನ ಧರ್ಮಕ್ಕೆ ಅನುಯಾಯಿಗಳು ಸಿಗದೇ ಹೋಗಿದ್ದರೆ ಅದಕ್ಕೆ ಅದರ ಬಿಗು ನಿಯಮಗಳೇ ಕಾರಣ ಎಂದು ಅನಿಸುತ್ತದೆ. ಅದು ಒಂದೇ ಪ್ರದೇಶದಲ್ಲಿ, ಒಂದೇ ವಾತಾವರಣದಲ್ಲಿ, ಒಂದೇ ಆಹಾರ ಕ್ರಮದಲ್ಲಿ ಸ್ಥಿರವಾಗಿ ನಿಲ್ಲುವ (ಸ್ಥಾವರ) ಇದಮಿತ್ಥಂ ನಿಲುವನ್ನು ಪ್ರಸ್ತುತಪಡಿಸಿತು. ವಿಭಿನ್ನತೆಯನ್ನು ನಿರಾಕರಿಸಿತು. ಅದರ ಪರಿಣಾಮ ಏನಾಯಿತೆಂದರೆ ನಿಂತಲ್ಲೇ ನಿಲ್ಲಬೇಕಾಯಿತು. ಚಲಿಸುವುದಕ್ಕೆ (ಜಂಗಮ) ಅದರ ಇದಮಿತ್ಥಂ ನಿಯಮಗಳು ಅಡ್ಡಿಪಡಿಸಿದುವು. ಇಸ್ಲಾಮ್ ಯಾಕೆ ಜಾಗತಿಕ ಧರ್ಮವಾಯಿತು ಎಂಬುದಕ್ಕಿರುವ ಉತ್ತರವೂ ಇದುವೇ. ಅದು ಸ್ಟೀರಿಯೋಟೈಪ್ಡ್ ಸ್ವರೂಪದಲ್ಲಿ ತನ್ನನ್ನು ಗುರುತಿಸಿಕೊಳ್ಳಲೇ ಇಲ್ಲ. ಅದು ಮಾಂಸಾಹಾರವನ್ನು ಪ್ರೀತಿಸಲೂ ಇಲ್ಲ. ಸಸ್ಯಾಹಾರವನ್ನು ದ್ವೇಷಿಸಲೂ ಇಲ್ಲ. ಆಹಾರ ಕ್ರಮವಾಗಿ ಅದು ಎರಡನ್ನೂ ಅಂಗೀಕರಿಸಿತು. ಪುರುಷರಿಗಾಗಲಿ ಮಹಿಳೆಯರಿಗಾಗಲಿ ಹೀಗೆಯೇ ಎಂದು ಗೆರೆ ಎಳೆದು ಹೇಳಬಹುದಾದ ರೀತಿಯಲ್ಲಿ ಉಡುಪು ಸಂಹಿತೆಯನ್ನು ಅದು ನಿರ್ದೇಶಿಸಲಿಲ್ಲ. ಮಹಿಳೆ ಮತ್ತು ಪುರುಷ ಸಭ್ಯ ಉಡುಪನ್ನು ಧರಿಸಲಿ ಎಂದು ಅದು ಹೇಳಿತೇ ಹೊರತು, ಅದು ಚೂಡಿದಾರವೇ ಆಗಬೇಕು ಎಂದೋ ಬುರ್ಖಾವೇ ಆಗಬೇಕು ಎಂದೋ ಅಥವಾ ಪ್ಯಾಂಟು, ಲುಂಗಿ ಇಲ್ಲವೇ ಕುರ್ತಾ-ಪೈಜಾಮವೇ ಆಗಬೇಕು ಎಂದೋ ನಿರ್ದಿಷ್ಟತೆಗೆ ತನ್ನ ಅನುಯಾಯಿಗಳನ್ನು ದೂಡಲೇ ಇಲ್ಲ. ಅದನ್ನು ತೀರ್ಮಾನಿಸಬೇಕಾದುದು ಹೆಣ್ಣು ಮತ್ತು ಗಂಡು. ಆಕೆ ಸೀರೆಯನ್ನೂ ಆಯ್ಕೆ ಮಾಡಿಕೊಳ್ಳಬಹುದು, ಲಂಗ-ದಾವಣಿಯನ್ನೂ ಆಯ್ಕೆ ಮಾಡಿಕೊಳ್ಳಬಹುದು ಅಥವಾ ಇನ್ನಿತರ ಉಡುಪುಗಳ ಮೊರೆಯೂ ಹೊಗಬಹುದು. ಇದೇ ಸ್ವಾತಂತ್ರ್ಯ ಪುರುಷನಿಗೂ ಅನ್ವಯವಾಗುತ್ತದೆ. ಉಡುಪು ಯಾವುದೇ ಇರಲಿ ಅದು ಅಸಭ್ಯ ರೀತಿಯಲ್ಲಿ ಇರಬಾರದು ಎಂಬುದಷ್ಟೇ ಇಸ್ಲಾಮ್‌ನ ಕಳಕಳಿ. ಈ ಕಳಕಳಿಯನ್ನು ಈಡೇರಿಸುವ ವಸ್ತ್ರ ಯಾವುದೇ ಆದರೂ ಅದು ಸ್ವೀಕಾರಾರ್ಹ. ಒಂದು ವೇಳೆ, ಪ್ರವಾದಿ ಮುಹಮ್ಮದರು(ಸ) ಏನನ್ನು ತಿಂದಿದ್ದರೋ ಅದೇ ಆಹಾರವನ್ನು ಎಲ್ಲ ಮುಸ್ಲಿಮರೂ ಕಡ್ಡಾಯವಾಗಿ ತಿನ್ನಬೇಕು ಎಂಬ ನಿಯಮವಿರುತ್ತಿದ್ದರೆ, ಬಸಳೆ, ತೊಂಡೆಕಾಯಿ, ಸೌತೆಕಾಯಿ, ಅಳಸಂಡೆ ಇತ್ಯಾದಿ ಇತ್ಯಾದಿ ಯಥೇಚ್ಛವಾಗಿ ಸಿಗುವ ಪ್ರದೇಶದ ಮಂದಿ ಏನು ಮಾಡಬೇಕಿತ್ತು? ದೋಸೆ, ಇಡ್ಲಿ, ಅನ್ನ-ಸಾಂಬಾರು, ಸಜ್ಜಿಗೆ, ಅವಲಕ್ಕಿ, ಬ್ರೆಡ್, ಬಟರ್, ಚಾ, ಕಾಫಿ ಮುಂತಾದುವುಗಳೊಂದಿಗೆ ಅವಿನಾಭಾವ ಸಂಬಂಧ ಹೊಂದಿರುವ ಜನರು ಯಾವ ನಿರ್ಧಾರ ಕೈಗೊಳ್ಳಬೇಕಿತ್ತು? ಪ್ರವಾದಿ ಮುಹಮ್ಮದರು(ಸ) ಹುಟ್ಟಿದ್ದು ಮಕ್ಕಾದಲ್ಲಿ. ಅಲ್ಲಿನ ಭಾಷೆ ಅರಬಿ. ಅವರ ವೇಷದಲ್ಲೂ ಸ್ಥಳೀಯತೆ ಇದೆ. ಒಂದು ವೇಳೆ,

ಅರಬಿ ಭಾಷೆಯನ್ನು ಮತ್ತು ಅರಬಿ ದಿರಿಸನ್ನು ಇಸ್ಲಾಮಿನ ಕಡ್ಡಾಯ ನಿಯಮಗಳಾಗಿ ಅವರು ಮಾಡಿರುತ್ತಿದ್ದರೆ ಇಸ್ಲಾಮ್ ಸೌದಿ ಅರೇಬಿಯಾದಿಂದ ಅಥವಾ ಗಲ್ಫ್ ರಾಷ್ಟ್ರಗಳಿಂದ ಹೊರಗೆ ಜನಪ್ರಿಯವಾಗುವುದಕ್ಕೆ ಸಾಧ್ಯವೇ ಇರಲಿಲ್ಲ. ಸೌದಿ ಅರೇಬಿಯಾದಲ್ಲಿ ಕುರ್‌ಆನನ್ನು ಪಠಿಸುವ ಶೈಲಿಯಲ್ಲಲ್ಲ ಮಲೇಶ್ಯಾದಲ್ಲಿ ಕುರ್‌ಆನನ್ನು ಪಠಿಸುವುದು. ಟ್ಯೂನ್ ಬೇರೆ. ಉಚ್ಚಾರದ ಶೈಲಿ ಬೇರೆ. ಆದರೆ ಕುರ್‌ಆನ್ ಒಂದೇ. ಜಾಗತಿಕವಾಗಿ ಕೋಟ್ಯಂತರ ಮಸೀದಿಗಳಲ್ಲಿ ಕೊಡಲಾಗುವ ಅದಾನ್‌ಗಳು ಒಂದೇ. ಆದರೆ ಶೈಲಿ ಬೇರೆ. ಇವು ಮತ್ತು ಇಂತಹ ಅನೇಕಾರು ವಿಭಿನ್ನತೆಗಳನ್ನು ಇಸ್ಲಾಮ್ ಗೌರವಿಸಿದುದರಿಂದಲೇ ಅದು ಜಂಗಮವಾಯಿತು. ದುರಂತ ಏನೆಂದರೆ, ಮಸ್ಜಿದುಲ್ ಹರಾಮ್‌ನಲ್ಲಿ ಈ ವಿಭಿನ್ನತೆಗೆ ಸಾಕ್ಷ್ಯ ವಹಿಸುವ ಮತ್ತು ಅದನ್ನು ಧರ್ಮದ ಭಾಗವಾಗಿ ಅಂಗೀಕರಿಸುವ ವ್ಯಕ್ತಿಗಳೇ ಅಲ್ಲಿಂದ ಊರಿಗೆ ಮರಳಿದ ಬಳಿಕ ಅದಕ್ಕೆ ತದ್ವಿರುದ್ಧವಾಗಿ ನಡೆದುಕೊಳ್ಳುವುದಿದೆ. ಹೊಟ್ಟೆಗೆ ಕೈ ಕಟ್ಟುವ ವ್ಯಕ್ತಿ ಎದೆಗೆ ಕೈ ಕಟ್ಟುವ ವ್ಯಕ್ತಿಯ ಭುಜಕ್ಕೆ ಭುಜ ತಾಗಿಸಿ ನಿಂತು ಮಸ್ಜಿದುಲ್ ಹರಾಮ್‌ನಲ್ಲಿ ನಮಾಝ್ ಮಾಡಿದ್ದರೂ ಮತ್ತು ಅದರಿಂದ ಯಾವ ತೊಂದರೆಯನ್ನು ಅನುಭವಿಸಿರದಿದ್ದರೂ ಊರಿಗೆ ಮರಳಿದ ಬಳಿಕ ಅದನ್ನು ಇಸ್ಲಾಮಿಗೆ ಅನ್ಯವಾಗಿ ಕಾಣುವುದಿದೆ. ಅಂಥವರನ್ನು ದ್ವೇಷಿಸುವುದಿದೆ. ಅಂಥವರ ವಿರುದ್ಧ ಅಪಹಾಸ್ಯಕರ ಮಾತು ಆಡುವುದಿದೆ. ಹಾಗಂತ, ಇದು ಏಕಮುಖ ಅಲ್ಲ. ತದ್ವಿರುದ್ಧವೂ ನಡೆಯುತ್ತದೆ. ಅಷ್ಟಕ್ಕೂ, ಮಸ್ಜಿದುಲ್ ಹರಾಮ್‌ನಿಂದಲೂ ಪಾಠ ಕಲಿಯದವರು ಇನ್ನು ಕಲಿಯುವುದಾದರೂ ಎಲ್ಲಿಂದ? ಮಸ್ಜಿದುಲ್ ಹರಾಮ್ ಎಂಬುದು ಬರೇ ನಮಾಝ್ ಮಾಡುವ ತಾಣವಷ್ಟೇ ಅಲ್ಲ, ಹತ್ತಾರು ಪಾಠಗಳನ್ನು ಹೇಳಿಕೊಡುವ ಮತ್ತು ಅನೇಕಾರು ಇದಮಿತ್ಥಂಗಳನ್ನು ಇಲ್ಲವಾಗಿಸುವ ಮಸೀದಿಯೂ ಹೌದು. ಆದ್ದರಿಂದಲೇ, ಅಲ್ಲಿ ನಮಾಝ್ ಮಾಡುವುದಷ್ಟೇ ಓರ್ವ ಯಾತ್ರಿಕನ ಏಕೈಕ ಗುರಿ ಆಗಬಾರದು. ಅದನ್ನು ಪಾಠವಾಗಿಯೂ ಪರಿಗಣಿಸಬೇಕು. ಭೂಮಿಯ ಮೇಲಿನ ಅತ್ಯಂತ ಶ್ರೇಷ್ಠ ಮಸೀದಿ ಎಂಬ ಬಿರುದನ್ನು ಮಸ್ಜಿದುಲ್ ಹರಾಮ್‌ಗೆ ಇಸ್ಲಾಮ್ ಕೊಟ್ಟಿದ್ದರೆ ಅದರ ಹಿಂದೆ ಒಂದಕ್ಕಿಂತ ಅಧಿಕ ಸತ್ಯಗಳಿರುವ ಸಾಧ್ಯತೆ ಇದೆ. ಜಗತ್ತಿನ ವಿವಿಧ ರಾಷ್ಟ್ರಗಳ ಮಂದಿ ಒಂದೆಡೆ ಸೇರುವಾಗ ಅಲ್ಲೊಂದು ಮುಖಾಮುಖಿ ಏರ್ಪಡುತ್ತದೆ. ಅದು ಬರೇ ದೈಹಿಕ ಮುಖಾಮುಖಿ ಮಾತ್ರವಲ್ಲ, ಆಧ್ಯಾತ್ಮಿಕ ಮುಖಾಮುಖಿ, ವೈಚಾರಿಕ ಮುಖಾಮುಖಿ, ಜ್ಞಾನದ ಮುಖಾಮುಖಿ, ಅಜ್ಞಾನದ ಮುಖಾಮುಖಿ ಇತ್ಯಾದಿಗಳ ಮುಖಾಮುಖಿಯೂ ಆಗಿರುತ್ತದೆ. 'ತಾನೇ ಜ್ಞಾನಿ, ತನ್ನದೇ ಸರಿಯಾದ ಇಸ್ಲಾಮ್...' ಎಂದು ನಂಬಿಕೊಂಡು ಬಂದವ ತನ್ನ ಪಕ್ಕವೇ ತಾನು ಆ ವರೆಗೆ ಒಪ್ಪದೇ ಇರುವ ಅಥವಾ ಗೊತ್ತೇ ಇಲ್ಲದ ಶೈಲಿಯಲ್ಲಿ ಆರಾಧನೆಯಲ್ಲಿ ತೊಡಗುತ್ತಾನೆ. ಇನ್ನೊಬ್ಬ ಇನ್ನೊಂದು ರೀತಿ. ಮತ್ತೋರ್ವ ಮತ್ತೊಂದು ರೀತಿ. ಹಾಗಂತ, ನಮಾಝ್‌ನಲ್ಲಿ, ಅದರ ರಕಅತ್‌ನಲ್ಲಿ ರುಕೂಅ್, ಸುಜೂದ್‌ನಲ್ಲಿ ವ್ಯತ್ಯಾಸ ಇಲ್ಲದೇ ಇರಬಹುದು ಮತ್ತು ಅವು ಏಕ ಪ್ರಕಾರ ಆಗಿರಬಹುದು. ಆದರೆ ಇವುಗಳ ನಡುವೆ ನಡೆಸಲಾಗುವ ವಿವಿಧ ಆಂಗಿಕ ಚಲನೆಯಲ್ಲಿ ಏಕರೂಪವೇನೂ ಇರುವುದಿಲ್ಲ. ಕೈ ಕಟ್ಟದಿದ್ದರೆ ನಮಾಝ್ ಆಗುವುದಿಲ್ಲ ಎಂದು ನಂಬಿದ ವ್ಯಕ್ತಿಯ ಪಕ್ಕವೇ ಕೈಕಟ್ಟದೇ ವ್ಯಕ್ತಿಯೋರ್ವ ನಮಾಝ್‌ಗೆ ನಿಂತರೆ ಆತನಲ್ಲಾಗುವ ತಳಮಳಗಳು ಯಾವ ಸ್ವರೂಪದ್ದು? ಮಹಿಳೆಗೆ ಸಂಬಂಧಿಸಿಯೂ ಇದು ಪ್ರಸ್ತುತ. ಒಂದು ರೀತಿಯಲ್ಲಿ, ಮಸ್ಜಿದುಲ್ ಹರಾಮ್ ಎಂಬುದು ವ್ಯಕ್ತಿಯನ್ನು (ಪುರುಷ ಮತ್ತು ಮಹಿಳೆ) ಆಲೋಚನೆಗೆ ಹಚ್ಚುವ ಒಂದು ಚಿಂತನಾಗೃಹ. ಅದು ವ್ಯಕ್ತಿಯನ್ನು ಜಿಗುಟತನದಿಂದ ಮೃದುತನಕ್ಕೆ ಒಯ್ಯುತ್ತದೆ. ತಾನು ಮಾತ್ರ ಸರಿ ಎಂಬಲ್ಲಿಂದ ನಾವೆಲ್ಲರೂ ಸರಿ ಎಂಬ ವಿಶಾಲತೆಯೆಡೆಗೆ ತಲುಪಿಸುತ್ತದೆ. ಮುಸ್ಲಿಮರಲ್ಲಿ ಧಾರ್ಮಿಕ ವೈಚಾರಿಕತೆಯನ್ನು, ಆಧ್ಯಾತ್ಮಿಕ ವೈಶಾಲ್ಯತೆಯನ್ನು ಮತ್ತು ವಿಭಿನ್ನತೆಯಲ್ಲಿ ಸೌಂದರ್ಯವನ್ನು ಮೂಡಿಸುತ್ತದೆ. ಮಸ್ಜಿದುಲ್ ಹರಾಮ್‌ಗೆ ಭೇಟಿ ಕೊಡುವವರು ತಮ್ಮದಲ್ಲದ ವಿಚಾರಧಾರೆಯ ವ್ಯಕ್ತಿಗಳ ಜೊತೆ ಬೆರೆಯಲೇಬೇಕಾದ ಮತ್ತು ಹೆಚ್ಚು ಸ್ಪಷ್ಟವಾಗಿ ಹೇಳಬೇಕೆಂದರೆ ಅವರ ಜೊತೆ ನಿಂತು ನಮಾಝ್ ಮಾಡಲೇಬೇಕಾದ ಅನಿವಾರ್ಯತೆಗೆ ಒಳಗಾಗುತ್ತಾರೆ. ಒಂದು ರೀತಿಯಲ್ಲಿ, ಅದು ಮಸ್ಜಿದುಲ್ ಹರಾಮ್‌ನ ಸಾಮರ್ಥ್ಯ ಮತ್ತು ಹೆಚ್ಚುಗಾರಿಕೆ. ಇಲ್ಲಿಗೆ ಯಾತ್ರಿಕರಾಗಿ ಬಂದವರು ವಾರಗಟ್ಟಲೆ ಇಲ್ಲಿ ತಂಗೇ ತಂಗುತ್ತಾರೆ ಮತ್ತು ಹೀಗೆ ತಂಗುವುದರಿಂದ ವಿಭಿನ್ನತೆಯೊಂದಿಗೆ ಮತ್ತೆ ಮತ್ತೆ ಅನಿವಾರ್ಯವಾಗಿ ರಾಜಿ ಮಾಡಿಕೊಳ್ಳಲೇ ಬೇಕಾಗುತ್ತದೆ. ಇದು ವ್ಯಕ್ತಿಯಲ್ಲಿ ಪರಿವರ್ತನೆಯನ್ನು ತರುವುದಕ್ಕೆ ಸಾಧ್ಯವಿದೆ. ಕನಿಷ್ಠ, 'ತಾನು ಮಾತ್ರ ಸರಿ ಅಲ್ಲ' ಎಂಬ ಭಾವನೆಯನ್ನಾದರೂ ಮೂಡಿಸಿ ಬಿಡುವುದಕ್ಕಾದರೂ ಅವಕಾಶ ಇದೆ. ಬಹುಶಃ, ಈ ಎಲ್ಲ ಕಾರಣಗಳಿಂದಲೇ ಮಸ್ಜಿದುಲ್ ಹರಾಮ್ ಅನ್ನು ಭೂಮಿಯ ಅತಿ ಶ್ರೇಷ್ಠ ಮಸೀದಿಯಾಗಿ ಇಸ್ಲಾಮ್ ಸಾರಿರಬಹುದು. ಅದು ಇಸ್ಲಾಮಿನ ಬಹುತ್ವವನ್ನು ಮತ್ತು ವಿಶಾಲತೆಯನ್ನು ಸಾರುವ ಕೇಂದ್ರ. ನನ್ನ ಪ್ರಕಾರ, ಇಸ್ಲಾಮ್ ಅನ್ನು ಮಸ್ಜಿದುಲ್ ಹರಾಮ್‌ನಷ್ಟು ಚೆನ್ನಾಗಿ ಇನ್ನಾವ ಮಸೀದಿಯೂ ಪ್ರಸ್ತುತ ಪಡಿಸುವುದಿಲ್ಲ.



ಎಣ್ಣೆ ಬತ್ತಿದ ಲಾಟೀನು

# ಭಾಗ: 13

ಪ್ರವಾದಿ ಮುಹಮ್ಮದರನ್ನು(ಸ) ಸಮಗ್ರವಾಗಿ ಕಟ್ಟಿಕೊಡುವ ಹಲವು ಸಂಕೇತಗಳು ಮಕ್ಕಾ ಮತ್ತು ಮದೀನಾದಲ್ಲಿವೆ. ಪ್ರವಾದಿ ಮುಹಮ್ಮದ್‌ರು ಮಕ್ಕಾದಲ್ಲಿ 53 ವರ್ಷಗಳ ಕಾಲ ಬದುಕಿದರು. ಮದೀನಾದಲ್ಲಿ 10 ವರ್ಷಗಳ ಕಾಲ ಬದುಕಿದರು. ಈ ಎರಡೂ ಬದುಕು ಮುಸ್ಲಿಮರು ಮಾತ್ರವಲ್ಲ ಮುಸ್ಲಿಮೇತರರಾದ ಸರ್ವರ ಪಾಲಿಗೂ ಅಧ್ಯಯನಕ್ಕೆ ಯೋಗ್ಯವಾದವು. ಬಾಹ್ಯ ನೋಟಕ್ಕೆ ಓರ್ವ ಸಾಮಾನ್ಯ ಯುವಕನಾಗಿರುವ ಮುಹಮ್ಮದ್ ಎಂಬ ವ್ಯಕ್ತಿ, ಜನಮುಂದಾಳುವಾಗಿ ಬೆಳೆಯುವುದು ಮತ್ತು ತನ್ನ ಬೃಹತ್ ಅನುಯಾಯಿ ಗುಂಪಿನಲ್ಲಿ ಯಾರಿಗೂ ಕೈ ಎತ್ತಿ ತೋರಿಸಲೂ ಆಸ್ಪದ ನೀಡದಷ್ಟು ಪಾರದರ್ಶಕವಾಗಿ ಬದುಕುವುದು ಚಾರಿತ್ರಿಕ ವಿಸ್ಮಯವೆನ್ನಬೇಕು. ಅವರ ಕಾರ್ಯಶೈಲಿ ಹೇಗಿತ್ತೆಂದರೆ, ತನಗೆ ಸವಾಲಾಗುವ ಪ್ರತಿಯೊಂದಕ್ಕೂ ಪರ್ಯಾಯವನ್ನು ಹುಡುಕುತ್ತಿದ್ದರು. ಮದೀನಾ ಮಾರುಕಟ್ಟೆ ಇದಕ್ಕೆ ಬಹಳ ಉತ್ತಮ ನಿದರ್ಶನ. ಮಸ್ಜಿದುನ್ನಬವಿಯಿಂದ ಕಾಲ್ನಡಿಗೆ ದೂರದಲ್ಲಿ ಮದೀನಾ ಮಾರುಕಟ್ಟೆಯ ಸ್ಥಳ ಇದೆ. ಸ್ಥಳ ಎಂಬ ಪದವನ್ನು ಯಾಕೆ ಇಲ್ಲಿ ಪ್ರಯೋಗಿಸಿರುವೆನೆಂದರೆ, ಇವತ್ತು ಅಲ್ಲಿ ಮಾರುಕಟ್ಟೆ ಇಲ್ಲ. ಅಭಿವೃದ್ಧಿಯ ಹೊಡೆತಕ್ಕೆ ಮಾರುಕಟ್ಟೆ ಧ್ವಂಸವಾಗಿದ್ದು, ಬರೇ ಒಂದು ಸಂಕೇತವಾಗಿ ರಸ್ತೆ ಬದಿಯಲ್ಲಿ ಖರ್ಜೂರ ಮರದ ಬೋಳು ಬೋಳಾದ ಕಂಭ ಇದೆ. ಅದಕ್ಕೆ ಲಾಟೀನನ್ನು ತೂಗಿ ಬಿಡಲಾಗಿದೆ. ಜೊತೆಗೇ ಮಾರುಕಟ್ಟೆಯ ಕೆಲ ಭಾಗಗಳನ್ನು ಗೋಡೆ ಕಟ್ಟಿ ಪ್ರತ್ಯೇಕಿಸಿ ಇಡಲಾಗಿದೆ. ಗೋಡೆಯ ಕೆಲವು ಕಡೆ ಸೂಖು ಮದೀನತಿಲ್ ಖದೀಂ (ಹಳೆ ಮದೀನಾ ಮಾರುಕಟ್ಟೆ) ಎಂದು ಬರೆದಿಡಲಾಗಿದೆ. 1914ರ ಮೊದಲ ವಿಶ್ವಯುದ್ಧದ ವರೆಗೆ ಇದು ಮದೀನಾದ ಪ್ರಮುಖ ಮಾರುಕಟ್ಟೆಯಾಗಿ ಅಸ್ತಿತ್ವದಲ್ಲಿತ್ತು. ಒಂದು ರೀತಿಯಲ್ಲಿ, ಈ ಮಾರುಕಟ್ಟೆಯ ಹುಟ್ಟೇ ಪ್ರವಾದಿಯವರ ಮುತ್ಸದ್ಧಿತನವನ್ನು ವಿವರಿಸುತ್ತದೆ. ಮದೀನಾಕ್ಕೆ ಪ್ರವಾದಿಯವರು ಬರುವಾಗ ಮದೀನವೇನೂ ಖಾಲಿ ಬಿದ್ದಿರಲಿಲ್ಲ. ಅಲ್ಲಿ ಮಾರುಕಟ್ಟೆಯಿತ್ತು ಮತ್ತು ಯಹೂದಿಯರು ಆ ಮಾರುಕಟ್ಟೆಯಲ್ಲಿ ಪ್ರಾಬಲ್ಯವನ್ನು ಸ್ಥಾಪಿಸಿಕೊಂಡಿದ್ದರು. ಆ



ಎಣ್ಣೆ ಬತ್ತಿದ ಲಾಟೀನು

ಮಾರುಕಟ್ಟೆಯು ಸ್ಥಾಪಿತ ಹಿತಾಸಕ್ತಿಗಳಿಗೆ ಪೂರಕವಾಗಿ ನಡೆಯುತ್ತಿತ್ತು. ಅಂದಿನ ಬಂಡವಾಳಶಾಹಿತ್ವದ ಹಿತವನ್ನು ಪೋಷಿಸುವ ರೀತಿಯಲ್ಲಿ ಇಡೀ ಮಾರುಕಟ್ಟೆ ರೂಪುಗೊಂಡಿತ್ತು. ಬಡ್ಡಿ ವ್ಯವಹಾರವಷ್ಟೇ ಆ ಮಾರುಕಟ್ಟೆಯ ಶೋಷಣಾ ವಿಧಾನವಾಗಿರಲಿಲ್ಲ. ಅಲ್ಲಿ ಬಲಾಢ್ಯರು ಮತ್ತು ಪರಂಪರಾಗತ ಕುಟುಂಬಗಳು ಮಾತ್ರವೇ ಅಂಗಡಿ ತೆರೆಯಲು ಅವಕಾಶ ಇತ್ತು. ಶೋಷಣೆಗೆ ಬೇಕಾದ ಮೂಲಭೂತ ಬೇಡಿಕೆ ಇದು. ಪ್ರವಾದಿ ಮುಹಮ್ಮದರು(ಸ) ಮದೀನಾದಲ್ಲಿ ಜನ ನಾಯಕ ಎನಿಸಿಕೊಂಡ ಬಳಿಕ ಮಾಡಿದ ಬಹುಮುಖ್ಯ ಕೆಲಸ ಏನೆಂದರೆ, ಈ ಮಾರುಕಟ್ಟೆಯನ್ನು ರದ್ದುಪಡಿಸದೆಯೇ ಇದಕ್ಕೊಂದು ಪರ್ಯಾಯ ಮಾರುಕಟ್ಟೆಯನ್ನು ಹುಟ್ಟುಹಾಕಿದ್ದು ಮತ್ತು ಎರಡನ್ನೂ ಸಾರ್ವಜನಿಕರ ಪಾಲಿಗೆ ಮುಕ್ತವಾಗಿಸಿದ್ದು. ಪ್ರವಾದಿ ಮುಹಮ್ಮದರ ಮಾರುಕಟ್ಟೆಯನ್ನು ಇಂದಿನ ಭಾಷೆಯಲ್ಲಿ 'ಸಂತೆ' ಎಂದು ಕರೆಯಬಹುದು. ಅಲ್ಲಿ ಕೊತ್ವಾಲರೆಂದು ಯಾರೂ ಇರಲಿಲ್ಲ. ಬೆಳಗಿನ ನಮಾಝಿನ ಬಳಿಕ ಆ ಮಾರುಕಟ್ಟೆ ಜೀವ ಪಡೆಯುತ್ತಿತ್ತು. ಆ ಮಾರುಕಟ್ಟೆಯಲ್ಲಿ ಸ್ಥಳದ ಮೇಲೆ ಯಾರಿಗೂ ಹಕ್ಕುವಾದ ಮಂಡಿಸುವುದಕ್ಕೆ ಅವಕಾಶ ಇರಲಿಲ್ಲ. ಶ್ರಮಿಕ ತನ್ನ ಉತ್ಪನ್ನವನ್ನು ಆ ಮಾರುಕಟ್ಟೆಗೆ ತಂದು ಮಾರುವಷ್ಟು ಮುಕ್ತ ವಾತಾವರಣ ಅಲ್ಲಿತ್ತು. ಬಹುಶಃ, ಈ ಜಗತ್ತಿಗೆ ಸಂತೆಯ ಕಲ್ಪನೆಯನ್ನು ಮೊಟ್ಟ ಮೊದಲು ಕೊಟ್ಟವರು ಪ್ರವಾದಿ ಮುಹಮ್ಮದ್(ಸ) ಆಗಿರಬಹುದು ಎಂದೇ ನನ್ನ ಬಲವಾದ ನಂಬಿಕೆ. ಮಕ್ಕಾದಿಂದ ಮದೀನಾಕ್ಕೆ ಬರಿಗೈಲಿ ಬಂದ ಅಬ್ದುರ್ರಹ್ಮಾನ್ ಬಿನ್ ಔಫ್ ಎಂಬ ಪ್ರವಾದಿ ಅನುಯಾಯಿ ಶೂನ್ಯ ಬಂಡವಾಳದಿಂದ ಅಗರ್ಭ ಶ್ರೀಮಂತರಾಗಿ ಬೆಳೆದದ್ದು ಈ ಮಾರುಕಟ್ಟೆಯಲ್ಲಿ ವ್ಯಾಪಾರ ಮಾಡಿಯೇ. ನಿಜವಾಗಿ, ಪ್ರವಾದಿ ಮುಹಮ್ಮದರು ಮದೀನಾಕ್ಕೆ ಬಂದಾಗ ಅಲ್ಲಿರುವ ಮಾರುಕಟ್ಟೆಯು ದುರ್ಬಲ ವಿರೋಧಿ, ಸಬಲರ ಪರ ಎಂಬುದು ಅವರಿಗೆ ಗೊತ್ತಿತ್ತು. ಮರ್ದಕ ಮತ್ತು ಮರ್ದಿತರ ನಡುವಿನ ಆಯ್ಕೆಯಲ್ಲಿ ಮರ್ದಿತರ ಪರ ನಿಲುವು ತಾಳಬೇಕು ಎಂಬುದೂ ಅವರಿಗೆ ಗೊತ್ತಿತ್ತು. ಗೊತ್ತಿತ್ತು ಎಂಬುದಕ್ಕಿಂತ ಅವರ ಧ್ಯೇಯವೂ ಅದುವೇ ಆಗಿತ್ತು. ಮರ್ದಿತರು ಮತ್ತು ದೇವನ ನಡುವೆ ಪರದೆಯಿರುವುದಿಲ್ಲ ಎಂಬುದು ಅವರ ಬೋಧನೆಯೂ ಆಗಿತ್ತು. ಶೋಷಕರಿಂದ ಶೋಷಿತರನ್ನು ವಿಮೋಚನೆಗೊಳಿಸುವುದೇ ಅವರ ಜನ ಚಳವಳಿಯ ಧ್ಯೇಯವಾಗಿದ್ದುದರಿಂದ ಯಹೂದಿ ಪ್ರಾಬಲ್ಯದ ಶೋಷಕ ಮಾರುಕಟ್ಟೆಯನ್ನು ತಕ್ಷಣಕ್ಕೆ ರದ್ದುಗೊಳಿಸುತ್ತಿದ್ದರೆ ಅದು ಅನಿರೀಕ್ಷಿತ ನಡೆಯೇನೂ ಆಗುತ್ತಿರಲಿಲ್ಲ. ಆದರೆ ಪ್ರವಾದಿಯವರು ಈ ನಿರೀಕ್ಷೆಗೆ ವಿರುದ್ಧವಾಗಿ ನಡೆದುಕೊಂಡರು. ಶೋಷಕ ಮಾರುಕಟ್ಟೆಯನ್ನು ಉಳಿಸಿಕೊಂಡೇ ಅದಕ್ಕಿಂತಲೂ ಉತ್ತಮವಾದ ಪರ್ಯಾಯ ಮಾರುಕಟ್ಟೆ ವಿಧಾನವನ್ನು ಪ್ರಸ್ತುತಪಡಿಸಿದರು. ಅವೆರಡರ ನಡುವೆ ಸಹಜ ಸ್ಪರ್ಧೆಯನ್ನು ಏರ್ಪಡಿಸಿದರು. ನಿರ್ದಿಷ್ಟ ಮಾರುಕಟ್ಟೆಯ ಗ್ರಾಹಕರಾಗುವಂತೆ ಜನರನ್ನು ನಿರ್ಬಂಧಿಸುವುದಕ್ಕಿಂತ ಆಯ್ಕೆಯ ಸ್ವಾತಂತ್ರ್ಯವನ್ನು

ಕೊಡಮಾಡಿದರು. ಎರಡೂ ಮಾರುಕಟ್ಟೆಗಳ ಅಳಿವು-ಉಳಿವನ್ನು ಜನರಿಗೆ ಬಿಟ್ಟುಕೊಟ್ಟರು. ದುರಂತ ಏನೆಂದರೆ, ಜಾಗತಿಕ ಮುಸ್ಲಿಮ್ ಸಮುದಾಯವು ಪ್ರವಾದಿ ಮುಹಮ್ಮದ್‌ರು ಪ್ರಸ್ತುತ ಪಡಿಸಿದ ಈ ಪರ್ಯಾಯ ಚಿಂತನೆಯನ್ನು ಇವತ್ತು ಬಹುತೇಕ ಕೈಬಿಟ್ಟಿದೆ. ಮದೀನಾ ಮಾರುಕಟ್ಟೆಯಲ್ಲಿ ಬೋರಲಾಗಿ ನಿಂತಿರುವ ಕಂಭದಂತೆ ಸಮುದಾಯ ಸ್ಥಾವರವಾಗಿಬಿಟ್ಟಿದೆ. ಚಲನೆಯನ್ನು ಕಳಕೊಂಡಿದೆ. ಯಾವುದಕ್ಕೂ ಪರ್ಯಾಯವನ್ನು ಒದಗಿಸಲಾಗದ ಮತ್ತು ಅಸ್ತಿತ್ವದಲ್ಲಿರುವ ಪ್ರತಿ ಶೋಷಕ ನೀತಿಗೂ ಬರೇ ಬಾಯ್ಮಾತಿನ ವಿರೋಧ ವ್ಯಕ್ತಪಡಿಸುವುದನ್ನೇ 'ಪರ್ಯಾಯ ಚಿಂತನೆ' ಎಂದು ನಮೂದಿಸುವ ಅಸಹಾಯಕತೆಗೆ ತಲುಪಿಬಿಟ್ಟಿದೆ. ಬಡ್ಡಿ ವ್ಯವಸ್ಥೆಯನ್ನು 'ಹರಾಮ್' ಆಗಿಸುವುದರಲ್ಲಿರುವ ಉತ್ಸಾಹವು ಅದಕ್ಕೆ ಪರ್ಯಾಯವಾದುದನ್ನು ಪ್ರಸ್ತುತಪಡಿಸುವುದರಲ್ಲಿ ಕಾಣುತ್ತಲೇ ಇಲ್ಲ. ಇವತ್ತು ಮದುವೆ, ಕೌಟುಂಬಿಕ ಜೀವನಕ್ರಮ ಮತ್ತು ಸಾಮಾಜಿಕ-ರಾಜಕೀಯ ಆಗು-ಹೋಗುಗಳು ಕಲುಷಿತಗೊಂಡಿವೆ ಮತ್ತು ಗೊಳ್ಳುತ್ತಿವೆ ಎಂಬುದು ಎಲ್ಲರಿಗೂ ಗೊತ್ತು. ಎಲ್ಲರೂ ಅದನ್ನೇ ಹೇಳುತ್ತಿದ್ದಾರೆ. ಆದರೆ ಪ್ರವಾದಿ ಮುಹಮ್ಮದ್‌ರನ್ನು ನಾಯಕರಾಗಿ ಒಪ್ಪಿಕೊಂಡಿರುವ ಮುಸ್ಲಿಮ್ ಸಮುದಾಯವೂ ಅದೇ ಮಾತನ್ನು ಹೇಳುತ್ತಾ ಕಾಲ ಕಳೆಯಬೇಕಾದುದಲ್ಲವಲ್ಲ. ಅದಕ್ಕೆ ಪರ್ಯಾಯವನ್ನು ಪ್ರಸ್ತುತಪಡಿಸಬೇಕು. ಆ ಪರ್ಯಾಯದ ಸ್ವಯಂ ಮಾದರಿಗಳಾಗಿ ಗುರುತಿಗೀಡಾಗಬೇಕು. ಬಡ್ಡಿರಹಿತ ಗ್ರಾಮ, ವರದಕ್ಷಿಣೆ ಮುಕ್ತ ಗ್ರಾಮ, ಮದ್ಯಮುಕ್ತ ನಾಡು, ಜೂಜು, ಕಳ್ಳತನ, ಶೋಷಣೆರಹಿತ ಊರು... ಮುಂತಾದುವು ಸದ್ಯದ ದಿನಗಳಲ್ಲಿ ಪ್ರಸ್ತುತ ಮಾತ್ರವಲ್ಲ, ಅದ್ಭುತ ಪರ್ಯಾಯ ಚಿಂತನೆ ಕೂಡ. ಆದರೆ ನಾವು ಬಡ್ಡಿಯನ್ನು ಹರಾಮ್ ಅನ್ನುತ್ತೇವೆ. ಮದ್ಯವನ್ನು ಕೆಡುಕಿನ ತಾಯಿ ಅನ್ನುತ್ತೇವೆ, ವರದಕ್ಷಿಣೆಯನ್ನು ಖಂಡಿಸುತ್ತೇವೆ, ಸಂದರ್ಭಕ್ಕೆ ತಕ್ಕಂತೆ ಕೊಕೋಕೋಲಾ, ಪೆಪ್ಸಿ ಸಹಿತ ಹಲವು ಉತ್ಪನ್ನಗಳನ್ನು ಅಥವಾ ಹಲವು ದೇಶಗಳಿಗೆ ಸೇರಿದ ಉತ್ಪನ್ನಗಳನ್ನು ಬಹಿಷ್ಕರಿಸುವಂತೆ ಆಗ್ರಹಿಸುತ್ತೇವೆ. ಆದರೆ ಈ ವಿರೋಧ ಮತ್ತು ಖಂಡನೆಗಳಿಗೆ ಹೊರತಾಗಿ ಪೆಪ್ಸಿಗೆ ಪರ್ಯಾಯವನ್ನು ನಮ್ಮಿಂದ ಪ್ರಸ್ತುತಪಡಿಸುವ ಪ್ರಯತ್ನ ನಡೆದಿದೆಯೇ? ಬಡ್ಡಿಗೆ ಪರ್ಯಾಯವನ್ನು ಎಲ್ಲಿ, ಹೇಗೆ, ಎಷ್ಟರ ಮಟ್ಟಿಗೆ ಪ್ರಸ್ತುತ ಪಡಿಸುತ್ತಿದ್ದೇವೆ? ಪ್ರಚಲಿತ ಚಾಲ್ತಿಯಲ್ಲಿರುವ ಅದ್ದೂರಿ ಮತ್ತು ವರದಕ್ಷಿಣೆಯ ಮದುವೆಗೆ ಪರ್ಯಾಯವಾಗಿ ಮಾದರಿ ಮದುವೆಯನ್ನು ಜನಪ್ರಿಯಗೊಳಿಸುವಲ್ಲಿ ಮುಸ್ಲಿಮ್ ಸಮುದಾಯದ ಪ್ರಯತ್ನಗಳು ಏನೇನು? ಬಂಡವಾಳ ಹೂಡಿಕೆ ಎಂಬುದು ಇವತ್ತಿನ ಜನಪ್ರಿಯ ವ್ಯಾವಹಾರಿಕ ಶೈಲಿ. ದುಡ್ಡನ್ನು ಬ್ಯಾಂಕ್‌ನಲ್ಲಿ ಕೂಡಿಡುವುದಕ್ಕಿಂತ ವ್ಯಾಪಾರ, ಉದ್ದಿಮೆ, ಶೇರು ಮಾರುಕಟ್ಟೆ, ಭೂ ವ್ಯವಹಾರಗಳಲ್ಲಿ ತೊಡಗಿಸಲಾಗುತ್ತದೆ. ಇದೊಂದು ಬಗೆಯ ಮಾರುಕಟ್ಟೆ. ಶೋಷಕ ಮತ್ತು ಶೋಷಿತರನ್ನು ಧಾರಾಳವಾಗಿ ತಯಾರಿಸುವ ಸಾಮರ್ಥ್ಯ ಇವತ್ತು ಈ ಬಂಡವಾಳ ಹೂಡಿಕೆ ಮಾರುಕಟ್ಟೆಗಿದೆ. ಪ್ರವಾದಿ ಮುಹಮ್ಮದ್‌ರು ವಿರೋಧಿಸಿದ ಬಡ್ಡಿ ಸಹಿತ ಅನೇಕಾರು ವ್ಯಾಪಾರಿ





ನಿಯಮಗಳು ಇಲ್ಲಿ ಪ್ರತಿದಿನ ಉಲ್ಲಂಘನೆಗೆ ಒಳಗಾಗುತ್ತಲೇ ಇವೆ. ಮುಸ್ಲಿಮ್ ಸಮುದಾಯದ ಸದ್ಯದ ಸ್ಥಿತಿ ಏನೆಂದರೆ, ಇವೆಲ್ಲವನ್ನೂ ಒಂದೇ ಏಟಿಗೆ ತಪ್ಪು ಎಂದು ಘೋಷಿಸಿ ಬಿಟ್ಟು ಸುಮ್ಮನಾಗುವುದು ಮಾತ್ರವೇ ಆಗಿದೆ. ಪ್ರವಾದಿ ಮುಹಮ್ಮದ್‌ರ ಕಾರ್ಯನೀತಿ ಇದಾಗಿರಲಿಲ್ಲ. ಅವರು ಪರ್ಯಾಯ ಆರ್ಥಿಕ ನೀತಿಯನ್ನು ಪ್ರಸ್ತುತ ಪಡಿಸಿದರು. ಪರ್ಯಾಯ ಮಾರುಕಟ್ಟೆ ನೀತಿಯನ್ನು ಮಂಡಿಸಿದರು. ಚಾಲ್ತಿಯಲ್ಲಿದ್ದ ಮದುವೆಗೆ ಪರ್ಯಾಯ ಮದುವೆ ಚೌಕಟ್ಟನ್ನು ಪ್ರಸ್ತುತಪಡಿಸಿದರು. ಅಸ್ತಿತ್ವದಲ್ಲಿದ್ದ ನೈತಿಕ ಚೌಕಟ್ಟಿಗೆ ಪರ್ಯಾಯವಾದುದನ್ನು ಎದುರು ಇಟ್ಟರು. ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ... ಹೀಗೆ ಎಲ್ಲ ಕ್ಷೇತ್ರಗಳ ಎಲ್ಲ ರೀತಿಯ ಶೋಷಕ ನೀತಿಗಳನ್ನು ಅವರು ವಿರೋಧಿಸಿದುದಷ್ಟೇ ಅಲ್ಲ, ಅದಕ್ಕೆ ಪರ್ಯಾಯವಾದುದನ್ನು ಅಷ್ಟೇ ಪ್ರಬಲವಾಗಿ ಮಂಡಿಸಿದರು. ಶೋಷಕ ವ್ಯವಸ್ಥೆಯನ್ನು ಅನಾಮತ್ತಾಗಿ ರದ್ದುಗೊಳಿಸದೆಯೇ ಅದಕ್ಕೆ ಪರ್ಯಾಯ ವ್ಯವಸ್ಥೆಯನ್ನು ನಿರ್ಮಿಸಿ ಶೋಷಕ ವ್ಯವಸ್ಥೆ ಸ್ವಯಂ ಕುಸಿದು ಹೋಗುವಂತೆ ಮಾಡಿದರು. ಇವತ್ತು ಮುಸ್ಲಿಮ್ ಸಮುದಾಯದಲ್ಲಿ ಪ್ರಸ್ತುತ ಪಡಿಸಲು ಇಂಥ ಪರ್ಯಾಯ ಚಿಂತನೆಗಳೇ ಇಲ್ಲ ಅಥವಾ ಪ್ರಸ್ತುತ ಅಸ್ತಿತ್ವದಲ್ಲಿರುವ ವ್ಯವಸ್ಥೆಗಿಂತ ಇದು ಹೇಗೆ ಉತ್ತಮ ಎಂದು ತಾರ್ಕಿಕವಾಗಿ ಮಂಡಿಸುವ ಪ್ರಬುದ್ಧತೆ ಇಲ್ಲ. ಅಂದಹಾಗೆ, ಕನಿಷ್ಠ ನಮ್ಮಲ್ಲಿರುವ ಮಸೀದಿಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಪ್ರಯತ್ನ ನಡೆದರೂ ದೊಡ್ಡ ಕ್ರಾಂತಿಯನ್ನೇ ಸಾಧಿಸಲು ಸಮುದಾಯಕ್ಕೆ ಸಾಧ್ಯವಾಗಬಹುದು. ಪ್ರತಿ ತಾಲೂಕಿನ ಒಂದೋ ಎರಡೋ ಪ್ರಮುಖ ಮಸೀದಿಗಳನ್ನು ಅಥವಾ ಒಂದು ಗ್ರಾಮದ ಇಷ್ಟೇ ಮಸೀದಿಗಳನ್ನು ಆಯ್ಕೆಮಾಡಿಕೊಂಡು ಬಡ್ಡಿರಹಿತ ಸಾಲ ಯೋಜನೆಯನ್ನು ಈ ಮಸೀದಿಗಳಿಂದ ಪ್ರಾರಂಭಿಸುವುದಕ್ಕೆ ಯಾಕೆ ಪ್ರಯತ್ನಿಸಬಾರದು? ಗ್ರಾಮದ ಅಥವಾ ತಾಲೂಕಿನ ಎಲ್ಲ ಮಸೀದಿಗಳು ಒಟ್ಟು ಸೇರಿ ಸಾರ್ವಜನಿಕರಿಗೆ ಅನುಕೂಲವಾಗಬಹುದಾದ ಮತ್ತು ಹೆಚ್ಚಿನ ಸೌಲಭ್ಯಗಳನ್ನು ಹೊಂದಿರುವ ಒಂದೆರಡು ಮಸೀದಿಗಳನ್ನು ಈ ಯೋಜನೆಯ ಜಾರಿಗೆ ಆಯ್ಕೆ ಮಾಡಿಕೊಳ್ಳುವ ಸನ್ನಿವೇಶವನ್ನೊಮ್ಮೆ ಊಹಿಸಿಕೊಳ್ಳಿ. ಆಯಾ ಮಸೀದಿ ವ್ಯಾಪ್ತಿಯ ಮುಸ್ಲಿಮ್ ಮತ್ತು ಮುಸ್ಲಿಮೇತರರೆಂಬ ಭೇದವಿಲ್ಲದೇ ಎಲ್ಲರಿಗೂ ಬಡ್ಡಿರಹಿತವಾಗಿ ಸಾಲ ದೊರಕುವಂಥ ವ್ಯವಸ್ಥೆ ತಯಾರಾಗುವುದನ್ನೊಮ್ಮೆ ಕಲ್ಪಿಸಿಕೊಳ್ಳಿ. ಇದಕ್ಕೆ ಬಂಡವಾಳ ಬೇಕು ನಿಜ. ಮಾತ್ರವಲ್ಲ, ಸಾಲ ವಸೂಲಾತಿ, ಉದ್ಯೋಗಿಗಳಿಗೆ ವೇತನ ಮುಂತಾದುವುಗಳನ್ನು ನಿಭಾಯಿಸುವ ಜವಾಬ್ದಾರಿಯೂ ಇದೆ. ಈ ಬಡ್ಡಿರಹಿತ ಬ್ಯಾಂಕ್‌ನಲ್ಲಿ ಜಮೆಯಾಗುವ ಹಣವನ್ನು ಇನ್ನೆಲ್ಲೋ ಹೂಡಿಕೆ ಮಾಡಿ ಖರ್ಚು-ವೆಚ್ಚಗಳಿಗೆ ಹಣ ಹೊಂದಿಸುವ ಅಗತ್ಯವೂ ಇದೆ. ಇದೇನೂ ಕಷ್ಟದ ಕೆಲಸವಲ್ಲ. ತಜ್ಞರ ನೆರವಿನಿಂದ ಬಡ್ಡಿರಹಿತ ವ್ಯವಸ್ಥೆಯನ್ನು ಅತ್ಯಂತ ಪ್ರಾಯೋಗಿಕಗೊಳಿಸಲು ಇವತ್ತು ಖಂಡಿತ ಸಾಧ್ಯವಿದೆ. ಮುಸ್ಲಿಮ್ ಮತ್ತು ಮುಸ್ಲಿಮೇತರರ ಸಹಿತ ತೀರಾ ಬಡವರು, ಕಾರ್ಮಿಕರು, ಮಧ್ಯಮ ವರ್ಗದವರು ಮುಂತಾದವರು ತಮ್ಮ

ಅಗತ್ಯಗಳಿಗಾಗಿ ಇವತ್ತು ಬ್ಯಾಂಕ್‌ಗಳನ್ನೇ ಅವಲಂಬಿಸಬೇಕಾಗಿದೆ. ಕಾಯಿಲೆ ಬಿದ್ದರೆ ಕತ್ತಿನ ಸರವನ್ನು ಅಡವಿಡಬೇಕಾಗುತ್ತದೆ. ಹೆರಿಗೆಗೆ ಕೈಯ ಬಳೆ, ಮಗುವಿನ ಶಾಲಾ ಫೀಸ್ ತುಂಬಲು ಮನೆಯನ್ನೇ ಅಡವಿಡಬೇಕಾದ ಪ್ರಸಂಗವೂ ಎದುರಾಗುತ್ತದೆ. ಇಂಥವರನ್ನು ಬಡ್ಡಿರಹಿತ ಸಾಲ ವ್ಯವಸ್ಥೆ ಬಹುವಾಗಿ ಆಕರ್ಷಿಸಬಹುದು. ಪ್ರವಾದಿ ಮುಹಮ್ಮದ್‌ರು ಅಂದಿನ ಜನರಿಗೆ ಇಷ್ಟವಾದದ್ದು ಅವರಲ್ಲಿ ಪ್ರತಿಯೊಂದಕ್ಕೂ ಪರ್ಯಾಯವನ್ನು ಕಂಡಾಗ. ಅವರು ಅಸ್ತಿತ್ವದಲ್ಲಿರುವ ಶೋಷಣೆಗೆ ಪರ್ಯಾಯವಾಗಿದ್ದರು. ನಾವು ಇವತ್ತು ಅವರಂತೆ ಪರ್ಯಾಯವಾಗುವುದನ್ನು ಬಿಟ್ಟು ಬರೇ ವಿರೋಧಿಸುವುದನ್ನೇ ಪರ್ಯಾಯ ಅಂದುಕೊಂಡಿದ್ದೇವೆ. ಮುಸ್ಲಿಮ್ ಸಂಘಟನೆಗಳು ತಮ್ಮ ನಡುವಿನ ಸಂಘಟನಾತ್ಮಕ ಮತ್ತು ಆಶಯಾತ್ಮಕ ಭಿನ್ನಾಭಿಪ್ರಾಯಕ್ಕೆ ಕಡಿಮೆ ಮಹತ್ವವನ್ನು ಕೊಟ್ಟರೆ ಮತ್ತು ಪ್ರವಾದಿಯವರ ಮಾದರಿಯಂತೆ 'ಪರ್ಯಾಯ'ವಾಗುವುದನ್ನೇ ಧ್ಯೇಯವಾಗಿಸಿಕೊಂಡರೆ ವಿವಿಧ ಸಂಘಟನೆಗಳ ಅಧೀನದಲ್ಲಿರುವ ಮಸೀದಿಗಳು ಒಂದುಗೂಡುವುದಕ್ಕೆ ಕಷ್ಟವಿಲ್ಲ. ಮಾತ್ರವಲ್ಲ, ಸಮಾಜವನ್ನು ಪ್ರಭಾವಿತಗೊಳಿಸಬಲ್ಲಂಥ ಮಾದರಿ ಗ್ರಾಮಗಳ ನಿರ್ಮಾಣವೂ ಅಸಾಧ್ಯವಲ್ಲ. ಕೈಕಟ್ಟುವ, ಟೊಪ್ಪಿ ಧರಿಸುವ, ಗಡ್ಡ ಬಿಡುವ ವಿಷಯದ ಮೇಲೆ ಮತ್ತು ಬಟ್ಟೆಯ ಉದ್ದಳತೆ, ಕುನೂತ್, ತರಾವೀಹ್, ಪ್ರವಾದಿಯವರು ಹುಟ್ಟಿದ ಮತ್ತು ಮೃತಪಟ್ಟ ದಿನಾಂಕಗಳ ಬಗೆಗಿನ ಜಿಜ್ಞಾಸೆ, ದರ್ಗಾ, ಉರೂಸ್, ಮೌಲಿದ್, ರಾತೀಬ್, ಮಹಿಳಾ ಮಸೀದಿ ಪ್ರವೇಶ ಇತ್ಯಾದಿ ಇತ್ಯಾದಿಗಳ ಚರ್ಚೆಗೆ ಕೊಡುವ ಸಮಯದ ಸಣ್ಣ ಭಾಗವನ್ನು ಪರ್ಯಾಯ ಚಿಂತನೆಗೆ ಮತ್ತು ಅದರ ಜಾರಿಗೆ ಕೊಡುವ ಪ್ರಯತ್ನ ನಡೆಯುತ್ತಿದ್ದರೆ, 'ಮಕ್ಕಾ ಫತಹ್' ಪ್ರತಿ ಗ್ರಾಮಗಳಲ್ಲೂ ಸಾಧ್ಯವಾಗುತ್ತಿತ್ತು. ನಿಜವಾಗಿ, ಕೈಕಟ್ಟುವ, ಕುನೂತ್, ಮೌಲಿದ್.. ಇತ್ಯಾದಿಗಳು ಮುಸ್ಲಿಮರಿಗೆ ಮಾತ್ರ ಸಂಬಂಧಿಸಿದವು ಮತ್ತು ಮುಸ್ಲಿಮೇತರರಿಗೆ ಸಂಬಂಧಿಸಿ ಅದರಲ್ಲಿ ಏನೇನೂ ಇಲ್ಲ. 80% ಮುಸ್ಲಿಮೇತರರೇ ಇರುವ ದೇಶವೊಂದರಲ್ಲಿ ಮುಸ್ಲಿಮರ ಅಧಿಕ ಸಮಯವೂ ಕರ್ಮಶಾಸ್ತ್ರಕ್ಕೆ ಸಂಬಂಧಿಸಿದ ಭಿನ್ನಾಭಿಪ್ರಾಯಗಳಿಗೆ ವ್ಯಯವಾಗುವುದು ಅಂದರೆ ಏನರ್ಥ? ಮುಸ್ಲಿಮರು ಸಾಮಾಜಿಕವಾಗಿ, ರಾಜಕೀಯವಾಗಿ ಮತ್ತು ಆರ್ಥಿಕವಾಗಿ ತೀರಾ ಹಿಂದುಳಿದಿರುವುದಕ್ಕೂ ಸಮುದಾಯದ ಈ ಸಮಯ ವ್ಯಯಕ್ಕೂ ನಡುವೆ ಸಂಬಂಧ ಇದೆಯೆಂದು ಅನಿಸುವುದಿಲ್ಲವೇ? ಮಕ್ಕಾ ಮತ್ತು ಮದೀನಾದ ಜನರು ಪ್ರವಾದಿ ಮುಹಮ್ಮದರ ಮೇಲೆ ಆಕರ್ಷಿತರಾಗಿರುವುದಕ್ಕೆ ಪ್ರಮುಖ ಕಾರಣ ಅವರ 'ಸರ್ವೇ ಜನ ಸುಖಿನೋ ಭವಂತು' ನೀತಿಯಿಂದಾಗಿ. ಆರಂಭದಲ್ಲಿ ಅವರು ಮಕ್ಕಾ ಮತ್ತು ಮದೀನಾದಲ್ಲಿ ಅಲ್ಪರಲ್ಲಿ ಅಲ್ಪರಾಗಿದ್ದರು. ಆದರೆ ಬರೇ 23 ವರ್ಷಗಳೊಳಗೆ ಅವರು ಬಹುಸಂಖ್ಯಾತ ಸಮುದಾಯದ ಪ್ರತಿನಿಧಿಯಾಗಿ ಮಾರ್ಪಟ್ಟರು. ಕರ್ಮಶಾಸ್ತ್ರವನ್ನು ವಿವರಿಸುವುದರಲ್ಲೇ ಅವರು ಮುಳುಗಿಬಿಡುತ್ತಿದ್ದರೆ ಅವರಿಂದ ಈ ಬದಲಾವಣೆ ಖಂಡಿತ ಸಾಧ್ಯವಿರಲಿಲ್ಲ. ಅವರು





ಸಮಾಜದ ಸಮಸ್ಯೆಯನ್ನು ತನ್ನ ಸಮಸ್ಯೆಯೆಂದು ಬಗೆದರು. ಆ ಸಮಸ್ಯೆಯ ಪರಿಹಾರಕ್ಕೆ ಅತ್ಯುತ್ತಮ ವಿಧಾನವನ್ನು ಮಂಡಿಸಿದರು. ಎಲ್ಲೆಲ್ಲಾ ಸಮಸ್ಯೆಗಳಿವೆಯೋ ಅಥವಾ ಶೋಷಕ ವ್ಯವಸ್ಥೆಯಿದೆಯೋ ಅಲ್ಲೆಲ್ಲಾ ಪ್ರವಾದಿ ಮುಹಮ್ಮದರು ಪರ್ಯಾಯವಾಗಿ ಗುರುತಿಸಿಕೊಂಡರು. ಮದ್ಯ ಮುಕ್ತ, ಬಡ್ಡಿ ಮುಕ್ತ, ಕೆಡುಕು ಮುಕ್ತ ಸಮಾಜವನ್ನು ಅವರು ಕಟ್ಟಿ ಬೆಳೆಸಿದುದು ಹಾಗೆ. ಇರುವ ವ್ಯವಸ್ಥೆಯನ್ನು ಧ್ವಂಸಗೊಳಿಸುವುದಕ್ಕಿಂತ ಅದಕ್ಕೆ ಪರ್ಯಾಯವನ್ನು ಪ್ರಸ್ತುತ ಪಡಿಸಿ ಶೋಷಕ ವ್ಯವಸ್ಥೆ ಸಹಜವಾಗಿ ಸಾವನ್ನಪ್ಪುವಂತೆ ಮಾಡುವುದು ಅವರ ಕಾರ್ಯನೀತಿ. ಸದ್ಯ ಮುಸ್ಲಿಮ್ ಸಮುದಾಯ ತನ್ನ ಸಮಯ ಮತ್ತು ಸಂಪತ್ತನ್ನು ವ್ಯಯಿಸಬೇಕಾದ ಜಾಗ ಇದು. ಮದೀನಾ ಮಾರುಕಟ್ಟೆಯಲ್ಲಿ ಬೋರಲಾಗಿ ನಿಂತಿರುವ ಖರ್ಜೂರದ ಕಂಬ ಮತ್ತು ಅದಕ್ಕೆ ತೂಗುಹಾಕಲಾಗಿರುವ ಎಣ್ಣೆ ಬತ್ತಿ ಹೋದ ಲಾಟೀನು ಮುಸ್ಲಿಮ್ ಸಮುದಾಯದ ಸದ್ಯದ ಸ್ಥಿತಿಗೆ ರೂಪಕದಂತೆ ನನಗೆ ಕಾಣಿಸಿತು. ಮುಸ್ಲಿಮ್ ಸಮುದಾಯ ಆ ಖರ್ಜೂರದ ಕಂಭದಂತೆ ಆಕರ್ಷಣೆಯನ್ನು ಕಳೆದುಕೊಂಡಿದೆ. ಇತರರಿಗೆ ಬೆಳಕನ್ನು ನೀಡಬೇಕಾದ ಸಮುದಾಯದಲ್ಲಿ ಇವತ್ತು ಎಣ್ಣೆ ಬತ್ತಿಹೋದ ಆ ಲಾಟೀನ್‌ನಂತೆ ಬೆಳಕೇ ಇಲ್ಲ.

## ಭಾಗ: 14

ನಿಜವಾಗಿ, ಪ್ರವಾದಿ ಮುಹಮ್ಮದ್‌ರು ಪರ್ಯಾಯ ಚಿಂತನೆಯ ಪ್ರತೀಕವಾಗುವುದು ಬರೇ ಮದೀನಾ ಮಾರುಕಟ್ಟೆಗೆ ಸಂಬಂಧಿಸಿ ಮಾತ್ರವೇ ಅಲ್ಲ. ಹಿಜರಿ 5ನೇ ವರ್ಷದಲ್ಲಿ ನಡೆದ ಕಂದಕ್ (ಹೊಂಡ) ಯುದ್ಧ ಕೂಡಾ ಇದಕ್ಕೆ ಉತ್ತಮ ನಿದರ್ಶನ. ಕಂದಕ್ ಯುದ್ಧಕ್ಕೆ ಸಜ್ಜಾದ ಸ್ಥಳ ಮದೀನಾದ ಪೂರ್ವ ದಿಕ್ಕಿನಲ್ಲಿದೆ. ಪವಿತ್ರ ಕುರ್‌ಆನ್ ಈ ಯುದ್ಧವನ್ನು ಅಹ್‌ಝಾಬ್ (ಸೇನಾ ಕೂಟ) ಎಂದು ಉಲ್ಲೇಖಿಸಿದೆ. ಜಬಲುಸಲ್‌ಅ್ ಎಂಬ ಹೆಸರಿನ ಸುಮಾರು ಎರಡೂವರೆ ಕಿಲೋ ಮೀಟರ್ ಉದ್ದದ ಪರ್ವತದ ಒಳ–ಹೊರಗೆ ನಡೆದ ಯುದ್ಧ ಇದು. ನಾನು ಈ ಪರ್ವತದ ತಳದಲ್ಲಿ ನಿಂತು ಒಟ್ಟು ಯುದ್ಧ ಕಲ್ಪನೆಯಲ್ಲಿ ತೊಡಗಿದೆ. ಇವತ್ತು ಇಲ್ಲಿ 7 ಮಸೀದಿ(ಸಬ್‌ಅ ಮಸಾಜಿದ್)ಗಳಿವೆ. ಪ್ರವಾದಿಯವರು ತಂಗಿದ ಸ್ಥಳವು ಮಸ್ಜಿದುಲ್ ಫತಹ್ ಎಂಬ ಹೆಸರಲ್ಲಿ ಮಸೀದಿಯಾಗಿ ಪರಿಚಿತವಾಗಿದೆ. ವಿಶೇಷ ಏನೆಂದರೆ, ಊರಲ್ಲಿ ನಿಂತು ಕಂದಕ್ ಯುದ್ಧದ ಬಗ್ಗೆ ವರ್ಣಿಸುವುದಕ್ಕೂ ಕಂದಕ್ ಯುದ್ಧ ನಡೆದ ಸ್ಥಳದಲ್ಲೇ ನಿಂತು ಆ ಯುದ್ಧವನ್ನು ಕಲ್ಪಿಸಿಕೊಳ್ಳುವುದಕ್ಕೂ ಸಾಕಷ್ಟು ವ್ಯತ್ಯಾಸಗಳಿವೆ. ಹಾಗಂತ, ಈ ವ್ಯತ್ಯಾಸ ಕೇವಲ ಕಂದಕ್ ಯುದ್ಧಕ್ಕೆ ಸಂಬಂಧಿಸಿ ಮಾತ್ರ ಇರುವುದಲ್ಲ. ಉಹುದ್‌ಗೆ ಸಂಬಂಧಿಸಿಯೂ ಇದೆ. ಹಾಗೆಯೇ ಜಬಲುಸ್ಸೌರ್ ಮತ್ತು ಜಬಲುನ್ನೂರ್‌ಗೆ ಸಂಬಂಧಿಸಿಯೂ ಇದೆ. ನಿಜವಾಗಿ, ಕಂದಕ್ ಯುದ್ಧಕ್ಕೆ ಪ್ರವಾದಿ ಮುಹಮ್ಮದ್(ಸ)ರು ನಡೆಸಿದ ಸಿದ್ಧತೆಯು ಮಕ್ಕಾ ಮತ್ತು ಮದೀನಾಕ್ಕೆ ಸಂಬಂಧಿಸಿ ತೀರಾ ಹೊಚ್ಚ ಹೊಸ ಚಿಂತನೆ. 10 ಸಾವಿರದಷ್ಟು ಸಂಖ್ಯೆಯ ಬೃಹತ್ ಸೇನಾ ಕೂಟದೊಂದಿಗೆ ಅಬೂ ಸುಫಿಯಾನ್‌ರು ಮಕ್ಕಾದಿಂದ ಮದೀನಾಕ್ಕೆ ಹೊರಟಿದ್ದಾರೆ ಎಂಬ ಸುದ್ದಿ ಪ್ರವಾದಿ(ಸ) ಮುಹಮ್ಮದ್‌ರಿಗೆ ತಲುಪುತ್ತದೆ. ಈ ಸುದ್ದಿಯನ್ನು ಮಕ್ಕಾದಿಂದ ಮದೀನಾಕ್ಕೆ ರವಾನಿಸಿದ್ದು ಮಕ್ಕಾದಲ್ಲಿದ್ದ ಪ್ರವಾದಿಯವರ ಚಿಕ್ಕಪ್ಪ ಅಬ್ಬಾಸ್(ರ). ಮದೀನಾದಲ್ಲಿ ಪ್ರವಾದಿಯವರ ಜೊತೆಗಿದ್ದುದು ಮೂರು ಸಾವಿರ ಮಂದಿ. ಇವರಲ್ಲಿ ಯುದ್ಧ ಕೌಶಲ್ಯವನ್ನು ಬಲ್ಲವರ ಸಂಖ್ಯೆ ಇದರ ಅರ್ಧದಷ್ಟೇ ಇತ್ತು. ಅಬೂ ಸುಫಿಯಾನ್ ನೇತೃತ್ವದ ಅಷ್ಟು ದೊಡ್ಡ ಸೇನಾ





ಕೂಟವನ್ನು ಇಷ್ಟು ಸಣ್ಣ ಸಂಖ್ಯೆ ಎದುರಿಸುವುದು ಹೇಗೆ ಎಂಬ ಜಿಜ್ಞಾಸೆ ಮುಸ್ಲಿಮರಲ್ಲಿ ಉಂಟಾಯಿತು. ಆಗ ಸಲ್ಮಾನುಲ್ ಫಾರಿಸಿ ಎಂಬ ಪ್ರವಾದಿಯವರ ಅನುಯಾಯಿಯೋರ್ವರು ಕಂದಕ ತಂತ್ರವನ್ನು ಪ್ರಸ್ತಾಪಿಸಿದರು. ಪ್ರವಾದಿಯವರಿಗೂ ಅದು ಹೊಸತು. ಅವರ ಅನುಯಾಯಿಗಳಿಗೂ ಹೊಸತು. ಅಲ್ಲದೇ ಮದೀನಾದ ಭೌಗೋಳಿಕ ರಚನೆಯೂ ಈ ಯುದ್ಧ ತಂತ್ರಕ್ಕೆ ಅತ್ಯಂತ ಸೂಕ್ತವಾಗಿತ್ತು. ಮದೀನಾದ ಪೂರ್ವ ಭಾಗವೊಂದನ್ನು ಬಿಟ್ಟರೆ ಉಳಿದಂತೆ ದಕ್ಷಿಣ, ಪಶ್ಚಿಮ ಮತ್ತು ಉತ್ತರ ಭಾಗಗಳು ತೀರಾ ಜಿಗುಟಾಗಿದ್ದುವು. ಮರಳು, ಕಲ್ಲುಗಳು, ಬೆಟ್ಟಗಳು ಮತ್ತು ಖರ್ಜೂರದ ತೋಟಗಳಿಂದ ಅವು ಆವೃತ್ತವಾಗಿದ್ದುವು. ಆದ್ದರಿಂದ ಆ ಭಾಗಗಳ ಮೂಲಕ ಅಬೂ ಸೂಫಿಯಾನ್ ನೇತೃತ್ವದ ಸೇನೆಗೆ ಮದೀನದ ಮೇಲೆ ದಾಳಿ ಮಾಡಲು ಸಾಧ್ಯವೇ ಇರಲಿಲ್ಲ. ಅದು ಮದೀನವನ್ನು ಪ್ರವೇಶಿಸಬೇಕಾದರೆ ಪೂರ್ವ ಭಾಗದ ಮೂಲಕವೇ ಬರಬೇಕು. ಈ ಹಿನ್ನೆಲೆಯಲ್ಲಿ 'ಕಂದಕ' ಯುದ್ಧ ತಂತ್ರವು ಹೊಸತು ಮಾತ್ರವಲ್ಲ, ಅತ್ಯಂತ ಚಾಣಾಕ್ಷತನದ್ದೂ ಆಗಿತ್ತು. ಹೀಗೆ 4 ಮೀಟರ್ ಅಗಲ ಮತ್ತು 3 ಮೀಟರ್‌ಗಿಂತಲೂ ಹೆಚ್ಚು ಆಳದಲ್ಲಿ ಎರಡೂ ಮುಕ್ಕಾಲು ಕಿಲೋ ಮೀಟರ್‌ನಷ್ಟು ಉದ್ದದ ಕಂದಕವನ್ನು ತೋಡುವುದಕ್ಕೆ ಪ್ರವಾದಿ ಮತ್ತು ಅನುಯಾಯಿಗಳು ನಿರ್ಧರಿಸಿದರು. ಸಾಮಾನ್ಯವಾಗಿ, ಮಕ್ಕಾದಿಂದ ಮದೀನಕ್ಕೆ ತಲುಪಲು ಅಂದಿನ ಕಾಲದಲ್ಲಿ 7 ದಿನಗಳು ಬೇಕಾಗುತ್ತಿತ್ತು. ಆದ್ದರಿಂದ 6 ದಿನಗಳೊಳಗೆ ಸಮರೋಪಾದಿಯಲ್ಲಿ ಕಂದಕ ತೋಡುವ ಕೆಲಸಗಳು ನಡೆದುವು. ಹಸಿವನ್ನು ತಡೆಯಲಾಗದೇ ಓರ್ವ ಅನುಯಾಯಿ ಒಂದು ಕಲ್ಲನ್ನು ಹೊಟ್ಟೆಗೆ ಕಟ್ಟಿಕೊಂಡಿರುವ ಬಗ್ಗೆ ಹೇಳಿಕೊಂಡಾಗ ಪ್ರವಾದಿ ಮುಹಮ್ಮದರು(ಸ) ತನ್ನ ಹೊಟ್ಟೆಗೆ ಎರಡು ಕಲ್ಲನ್ನು ಕಟ್ಟಿರುವುದನ್ನು ಬಟ್ಟೆ ಸರಿಸಿ ತೋರಿಸಿದ ಪ್ರಸಂಗ ನಡೆದುದು ಇದೇ ಸಂದರ್ಭದಲ್ಲಿ. ಅಬೂಸುಫಿಯಾನ್ ಮತ್ತು ಅವರ 10 ಸಾವಿರ ಸಂಖ್ಯೆಯ ತಂಡವು 24 ದಿನಗಳ ಕಾಲ ಕಂದಕದ ಆ ಕಡೆ ಬಿಡಾರ ಹೂಡಿದುವು. ತೀರಾ ತೀರಾ ಈ ಕಡೆ ಪ್ರವಾದಿ ಮುಹಮ್ಮದ್ ಮತ್ತು ಅವರ ಅನುಯಾಯಿಗಳಿದ್ದರು. ವಿಶೇಷ ಏನೆಂದರೆ, ಈ ಕಂದಕದ ಬಳಿ ತಲುಪುವವರೆಗೆ ಅಬೂ ಸುಫಿಯಾನರ ಸೇನೆಗೆ ಇಂಥದ್ದೊಂದು ಯುದ್ಧ ತಂತ್ರದ ಬಗ್ಗೆ ಯಾವ ಮಾಹಿತಿಯೂ ಇರಲಿಲ್ಲ. ಆದ್ದರಿಂದಲೇ ಅವರ ಸೇನಾ ಪಡೆಯ ಮುಂಚೂಣಿಯಲ್ಲಿದ್ದ ಅಶ್ವ ಪಡೆಯು ಈ ಕಂದಕಕ್ಕೆ ಬಿದ್ದು ಸಾವನ್ನಪ್ಪಿದುವು. ಉಳಿದವು ಕಂದಕವನ್ನು ದಾಟಲಾಗದೇ ಅತ್ತ ಕಡೆಯೇ ಉಳಿದುವು. 24ನೇ ದಿನ ಪ್ರವಾದಿಯವರ ಬಳಿಗೆ ದೇವಚರ ಜಿಬ್ರೀಲ್ ಮಾನವ ರೂಪದಲ್ಲಿ ಆಗಮಿಸಿದರು. ಸಲ್‌ಅ್ ಪರ್ವತದ ಬಂಡೆಯೊಂದರಲ್ಲಿ ಕುಳಿತಿದ್ದ ಪ್ರವಾದಿಯವರಿಗೆ ವಿಜಯದ ಸುವಾರ್ತೆಯನ್ನು ನೀಡಿದರು. ಬಳಿಕ ಎಲ್ಲವೂ ಪವಾಡದಂತೆ ನಡೆಯಿತು. ಅಬೂ ಸುಫಿಯಾನ್ ಪಾಳಯ ಬಿಡಾರ ಹೂಡಿದ ಪ್ರದೇಶದಲ್ಲಿ ಸುಂಟರ ಗಾಳಿ ಬೀಸಿತು. ಟೆಂಟ್‌ಗಳ ಸಮೇತ ಇಡೀ ಸೇನಾ ಪಾಳಯವೇ ಚೆಲ್ಲಾಪಿಲ್ಲಿಯಾಗಿ ಹಾರಿ

ಹೋದುವು. ಬೆಳಗ್ಗೆದ್ದು ಪ್ರವಾದಿ ಮುಹಮ್ಮದ್ ಮತ್ತು ಅವರ ಅನುಯಾಯಿಗಳು ನೋಡುವಾಗ ಕಂದಕದ ಆ ಕಡೆಯ ದೃಶ್ಯವೇ ಬದಲಾಗಿತ್ತು. ಸೇನಾಪಾಳಯ ಕಾಣೆಯಾಗಿತ್ತು. ಆಗ ಪ್ರವಾದಿ ಮುಹಮ್ಮದ್(ಸ) ತನ್ನ ಅನುಯಾಯಿಗಳೊಂದಿಗೆ ಹೇಳಿದ್ದು–

'ಇನ್ನು ಅವರು ಈ ಕಡೆಗೆ ಬರಲಾರರು. ನಾವೇ ಅತ್ತ ಹೋಗುವೆವು ಮತ್ತು ಅವರೊಂದಿಗೆ ಯುದ್ಧ ಹೂಡುವೆವು.'

ಅದುವೇ ಮಕ್ಕಾ ಫತಹ್. ಒಂದು ರೀತಿಯಲ್ಲಿ, ಇದು ಯುದ್ಧಕ್ಕೆ ಸಂಬಂಧಿಸಿ ಪ್ರವಾದಿ ಮುಹಮ್ಮದರ ಪರ್ಯಾಯ ನೀತಿಗೆ ಸಿಕ್ಕ ಗೆಲುವು.

ಸಲ್‌ಅ್ ಪರ್ವತದಲ್ಲಿ (ಜಬಲುಸಲ್‌ಅ್) ಅಡ್ಡಾಡಿ ನಾನು ರೋಮಾಂಚಿತನಾದೆ. ಅಭಿವೃದ್ಧಿಯ ಕಾಟ ಈ ಪರ್ವತವನ್ನು ಇನ್ನೂ ತಟ್ಟಿಲ್ಲವಾದುದರಿಂದ ಅದು ಗತ ವೈಭವವನ್ನು ಸಾರುತ್ತಾ ಹಾಗೆಯೇ ಉಳಿದುಕೊಂಡಿದೆ. ಹಾಗಂತ, ಪ್ರವಾದಿ(ಸ) ಮತ್ತು ಅನುಯಾಯಿಗಳು ತೋಡಿದ ಕಂದಕ ಹಾಗೆಯೇ ಉಳಿದಿದೆ ಎಂದಲ್ಲ. ಅದು ಸಂಪೂರ್ಣ ಮುಚ್ಚಿ ಹೋಗಿದೆ. ಎಷ್ಟೆಂದರೆ, ಅದರ ಯಾವ ಕುರುಹೂ ಇವತ್ತು ಅಲ್ಲಿ ಉಳಿದಿಲ್ಲ. ಆದರೂ ಸಲ್‌ಅ್ ಪರ್ವತ, ಹಳೆಯ ಪರ್ವತವಾಗಿಯೇ ಇನ್ನೂ ಉಳಿದುಕೊಂಡಿದೆಯಲ್ಲ ಎಂದು ನಾನು ತೃಪ್ತಿಪಟ್ಟುಕೊಂಡೆ. ಹೀಗೆ ನಾಶವಾಗದೆ ಅಥವಾ ಅಭಿವೃದ್ಧಿಯ ಬುಲ್ಡೋಜರ್‌ಗೆ ಸಿಕ್ಕದೇ ಉಳಿದುಕೊಂಡಿರುವ ಇನ್ನೊಂದು ಪರ್ವತ ಎಂದರೆ ಉಹುದ್ ಪರ್ವತ ಐತಿಹಾಸಿಕವಾಗಿ ಅತ್ಯಂತ ಮಹತ್ವಪೂರ್ಣವಾದ ಕಾಳಗ ನಡೆದ ಸ್ಥಳ ಇದು. ಇಲ್ಲಿ ಇಸ್ಲಾಮೀ ಸೇನೆಗೆ ಅತ್ಯಂತ ಹೆಚ್ಚು ನಾಶ–ನಷ್ಟ ಎದುರಾಗುತ್ತದೆ. ಪ್ರವಾದಿಯವರು ಮೃತ ಪಟ್ಟಿದ್ದಾರೆ ಎಂದು ವದಂತಿ ಹಬ್ಬಿದ ಜಾಗ. ಪ್ರವಾದಿಯವರು ತೀವ್ರವಾಗಿ ಗಾಯಗೊಂಡ ಜಾಗ. 9ರಷ್ಟು ಪ್ರಮುಖ ಸಂಗಾತಿಗಳು ಅವರನ್ನು ಎತ್ತಿಕೊಂಡು ಪಕ್ಕದ ಗುಹೆಯಂಥ ಪೊಟರೆಯಲ್ಲಿ ಉಪಚರಿಸಲು ಕಾರಣವಾದ ಜಾಗ. ಪ್ರವಾದಿಯವರು ಎಷ್ಟು ತೀವ್ರವಾಗಿ ಗಾಯಗೊಂಡಿದ್ದರೆಂದರೆ ಅವರಿಗೆ ಬಲಗಾಲು ಊರಲಾಗುತ್ತಿರಲಿಲ್ಲ. ಗೆಲುವನ್ನೂ ಸೋಲನ್ನೂ ಒಂದೇ ಸಂದರ್ಭದಲ್ಲಿ ಅನುಭವಿಸಬೇಕಾಗಿ ಬಂದ ಜಾಗವೂ ಹೌದು. ವಿಶೇಷ ಏನೆಂದರೆ, ಊರಲ್ಲಿರುವಾಗ ಓದಿದ ಉಹುದ್‌ಗೂ ಉಹುದ್‌ನಲ್ಲಿ ನಿಂತು ನೋಡಿದ ಉಹುದ್‌ಗೂ ನಡುವೆ ಭೌಗೋಳಿಕ ವ್ಯತ್ಯಾಸಗಳಷ್ಟೇ ಇರುವುದಲ್ಲ, ಭಾವನಾತ್ಮಕವಾಗಿಯೂ ವ್ಯತ್ಯಾಸಗಳಿವೆ. ಉಹುದ್ ದೊಡ್ಡ ಮೈದಾನವೇನೂ ಅಲ್ಲ. 8 ಕಿ. ಮೀಟರ್ ಉದ್ದ ಮತ್ತು 2 ಕಿ. ಮೀಟರ್ ಅಗಲಕ್ಕೆ ಚಾಚಿರುವ ಪರ್ವತ ಉಹುದ್. ಅದರ ಪಕ್ಕವೇ ಜಬಲುರ್‍ರುಮಾತ್ (ಬಿಲ್ಲುಗಾರರ ಗುಡ್ಡ) ಎಂಬ 180 ಮೀಟರ್ ಉದ್ದ ಹಾಗೂ 40 ಮೀಟರ್ ಅಗಲದ ಸಣ್ಣ ಗುಡ್ಡ ಇದೆ. ನಿಜವಾಗಿ, ಉಹ್‌ದ್ ಯುದ್ಧಕ್ಕಿಂತ ಮೊದಲು ಈ ಗುಡ್ಡವು ಜಬಲು ಐನೈನ್ ಎಂಬ ಹೆಸರಿನಿಂದ ಗುರುತಿಸಿಕೊಂಡಿತ್ತು. ಪ್ರವಾದಿಯವರು ಬಿಲ್ಲುಗಾರರನ್ನು ಅದರಲ್ಲಿ





ನಿಲ್ಲಿಸಿದ ಬಳಿಕ ಅದು ಜಬಲುರ್‍ರುಮಾತ್ ಎಂದು ಪ್ರಸಿದ್ಧವಾಯಿತು. ಇದನ್ನು ಗುಡ್ಡ ಅನ್ನುವುದಕ್ಕಿಂತಲೂ ಉಬ್ಬು ಎಂದೇ ಹೇಳಬಹುದು. ತೀರಾ ಸಲೀಸಾಗಿ ಕೆಲವೇ ಕ್ಷಣಗಳಲ್ಲಿ ಹತ್ತಿ ನಿಲ್ಲಬಹುದಾದ ಮತ್ತು 50–60 ರಷ್ಟು ಮಂದಿಗೆ ಮಾತ್ರ ತುದಿಯಲ್ಲಿ ನಿಲ್ಲಲು ಅವಕಾಶ ಇರುವಂತಹ ಸಣ್ಣ ಉಬ್ಬು. ಯುದ್ಧದ ಸಮಯದಲ್ಲಿ ಪ್ರವಾದಿ ಮುಹಮ್ಮದರು ಅಬ್ದುಲ್ಲಾ ಬಿನ್ ಝುಬೈರ್‌ರ ನೇತೃತ್ವದಲ್ಲಿ 50 ಮಂದಿ ಬಿಲ್ವಿದ್ಯೆ ಪ್ರವೀಣರನ್ನು ಈ ಗುಡ್ಡದಲ್ಲಿ ನಿಲ್ಲುವಂತೆ ಆದೇಶಿಸಿದ್ದರು. ಪ್ರವಾದಿ ಮುಹಮ್ಮದರು ತನ್ನ 700 ರಷ್ಟು ಮಂದಿ ಅನುಯಾಯಿಗಳೊಂದಿಗೆ ಉಹುದ್‌ಗೆ ಬರುವ ಮೊದಲೇ ಅಬೂಸುಫಿಯಾನ್ ನೇತೃತ್ವದಲ್ಲಿ ಸುಮಾರು 3 ಸಾವಿರ ಮಂದಿಯ ಸೇನೆ ಅಲ್ಲಿ ಜಮಾಯಿಸಿತ್ತು. ಪ್ರವಾದಿಯವರು ಅಲ್ಲೊಂದು ದಿಟ್ಟ ನಿರ್ಧಾರ ಕೈಗೊಂಡರು. ಉಹುದ್ ಬೆಟ್ಟದ ತಪ್ಪಲಲ್ಲಿ ನಿಂತು ಕೆಳಗಡೆಯಿರುವ ವಿರೋಧಿ ಪಾಳಯದ ವಿರುದ್ಧ ಹೋರಾಡಬಹುದಾದ ಸಹಜ ಮತ್ತು ಸುರಕ್ಷಿತ ವಿಧಾನವನ್ನು ಕೈ ಬಿಟ್ಟು ಬೆಟ್ಟದ ತಳಭಾಗದಲ್ಲಿ ಅನುಯಾಯಿಗಳನ್ನು ನಿಲ್ಲಿಸಿದರು. ಈ ಮೂಲಕ ಒಂದೋ ಗೆಲುವು ಇಲ್ಲವೇ ಸಾವು– ಈ ಎರಡರಲ್ಲಿ ಒಂದನ್ನಷ್ಟೇ ಆಯ್ಕೆ ಮಾಡಿಕೊಳ್ಳಬಹುದಾದಂತಹ ಅವಕಾಶವನ್ನು ಅವರಿಗೆ ಅನಿವಾರ್ಯಗೊಳಿಸಿದರು. ಯುದ್ಧ ಭೂಮಿಯಿಂದ ಹಿಂತಿರುಗಿ ಹೋಗುವಂತಿಲ್ಲ. ಹಿಂದುಗಡೆ ಉಹುದ್ ಬೆಟ್ಟ ಇದೆ. ಮುಂದುಗಡೆ ವಿರೋಧಿ ಸೇನೆಯಿದೆ. ಇದೇ ಸಂದರ್ಭದಲ್ಲಿ ಪ್ರವಾದಿಯವರು ಸುಮಾರು 50 ರಷ್ಟು ಬಿಲ್ಲುಗಾರರನ್ನು ಜಬಲುರ್‍ರುಮಾತ್‌ನಲ್ಲಿ ನಿಲ್ಲಿಸಿದರು. ಮುಂದಿನ ಆದೇಶ ನೀಡುವ ವರೆಗೆ ಆ ಉಬ್ಬಿನಿಂದ ಕದಲಬಾರದೆಂದು ಬಿಲ್ಲುಗಾರರಿಗೆ ಎಚ್ಚರಿಕೆಯನ್ನೂ ನೀಡಿದರು. ಆದರೆ ಬಿಲ್ಲುಗಾರರಲ್ಲಿ ಹೆಚ್ಚಿನವರು ಈ ಎಚ್ಚರಿಕೆಯನ್ನು ಸಂಪೂರ್ಣವಾಗಿ ಪಾಲಿಸದೇ ಹೋದುದು ಗೆಲುವು ಸೋಲಾಗಿ ಪರಿವರ್ತನೆಯಾಗಲು ಕಾರಣವಾಯಿತು. ವಿರೋಧಿ ಸೇನೆಯು ಸೋಲೊಪ್ಪಿಕೊಂಡು ಯುದ್ಧ ಭೂಮಿಯಿಂದ ಓಡಿ ಹೋಗುತ್ತಿರುವುದನ್ನು ಕಂಡ ಬಿಲ್ಲುಗಾರರು ಇನ್ನು ಇಲ್ಲಿರಬೇಕಾದ ಅಗತ್ಯವಿಲ್ಲವೆಂದು ಸ್ವಯಂ ತೀರ್ಮಾನಿಸಿಕೊಂಡು ಉಬ್ಬಿನಿಂದ ಕೆಳಗಿಳಿದರು. ಸುಮಾರು 10 ರಷ್ಟು ಬಿಲ್ಲುಗಾರರನ್ನು ಬಿಟ್ಟರೆ ಉಳಿದ 40ರಷ್ಟು ಮಂದಿಯೂ ಈ ನಿರ್ಧಾರಕ್ಕೆ ಬಂದುದು ವಿರೋಧಿ ಪಾಳಯದ ನಾಯಕರಾಗಿದ್ದ ಖಾಲಿದ್ ಬಿನ್ ವಲೀದ್‌ರಲ್ಲಿ ಉತ್ಸಾಹವನ್ನು ತುಂಬಿತು. ಬಹುತೇಕ ಹೊರಟು ಹೋಗಿದ್ದ ಅವರು ಮತ್ತು ಅವರ ಸೇನಾ ತುಕಡಿಯು ಮರಳಿ ಬಂದು ಜಬಲುರ್‍ರುಮಾತ್‌ನ ಮೇಲಿದ್ದ 10ರಷ್ಟು ಮಂದಿಯ ಮೇಲೆ ದಾಳಿ ನಡೆಸಿ ಕೊಂದು ಹಾಕಿತು. ಪ್ರವಾದಿಯವರ ಅನುಯಾಯಿಗಳು ಯುದ್ಧ ಗೆದ್ದ ಖುಷಿಯಲ್ಲಿದ್ದರು. ಅದೇ ಖುಷಿಯಿಂದ ಯುದ್ಧ ಭೂಮಿಯಲ್ಲಿ ಸಾವಿಗೀಡಾದವರನ್ನು, ಗಾಯಗೊಂಡವರನ್ನು ಗುರುತಿಸುವ ಕೆಲಸದಲ್ಲಿ ತೊಡಗಿದ್ದರು. ವಿರೋಧಿ ಸೇನೆ ಬಿಟ್ಟು ಹೋಗಿರುವ ವಸ್ತುಗಳ ಸಂಗ್ರಹವೂ ನಡೆಯುತ್ತಿತ್ತು. ಇದೇ ವೇಳೆ ಜಬಲುರ್‍ರುಮಾತ್‌ನ ತಪ್ಪಲಲ್ಲಿದ್ದ

ಯೋಧರನ್ನು ಉರುಳಿಸಿ ಖಾಲಿದ್‌ರ ಸೇನೆ ದಿಢೀರನೇ ಈ ಮಂದಿಯ ಮೇಲೆ ದಾಳಿ ನಡೆಸಿತು. ಅದು ಅನಿರೀಕ್ಷಿತ ಹೊಡೆತವಾದುದರಿಂದ ಎಲ್ಲಿ, ಏನು ನಡೆಯುತ್ತಿದೆಯೆಂಬುದನ್ನು ತಕ್ಷಣಕ್ಕೆ ಗ್ರಹಿಸಿಕೊಳ್ಳಲು ಅವರಿಂದ ಸಾಧ್ಯವಾಗಲಿಲ್ಲ. ಅದೇ ವೇಳೆ, ಖಾಲಿದ್ ಬಿನ್ ವಲೀದ್‌ರ ನೇತೃತ್ವದ ಸೇನಾ ತುಕಡಿಯು ಮರು ದಾಳಿ ಸಂಘಟಿಸಿದೆ ಎಂಬ ಸುದ್ದಿಯು ಸೋತು ಹೊರಟು ಹೋಗುತ್ತಿದ್ದ ಅಬೂಸುಫಿಯಾನ್ ಸೇನಾ ಪಾಳಯಕ್ಕೆ ತಲುಪಿದೊಡನೆ ಯುದ್ಧದ ಒಟ್ಟು ಚಿತ್ರಣವೇ ಬದಲಾಯಿತು. ಅವರೆಲ್ಲ ಹಿಂತಿರುಗಿ ಬಂದು ದಾಳಿಗಿಳಿದರು. ಯುದ್ಧ ಭೂಮಿಯ ಮಧ್ಯದಲ್ಲಿ ಪ್ರವಾದಿಯವರ ಅನುಯಾಯಿಗಳು. ಉಳಿದ ನಾಲ್ಕೂ ಕಡೆಯಿಂದ ವಿರೋಧಿಗಳ ದಾಳಿ. ತಮ್ಮವರು ಯಾರು, ವಿರೋಧಿಗಳು ಯಾರು ಎಂಬುದನ್ನೇ ಸ್ಪಷ್ಟಪಡಿಸಿಕೊಳ್ಳಲಾಗದ ಸಂದಿಗ್ಧತೆಯಲ್ಲಿ ಪ್ರವಾದಿಯವರ ಅನುಯಾಯಿಗಳು ಸಿಲುಕಿಕೊಂಡರು. ತಮ್ಮವರ ವಿರುದ್ಧವೇ ಅಸ್ತ್ರ ಪ್ರಯೋಗಿಸಿದರು. ಪ್ರವಾದಿಯವರ ಚಿಕ್ಕಪ್ಪ ಹಂಝ(ರ), ಮಿಸ್‌ಅಬ್ ಬಿನ್ ಉಮೈರ್(ರ), ಅಬ್ದುಲ್ಲಾ ಬಿನ್ ಜಹ್‌ಶ್(ರ), ಶಮ್ಮಾಸ್ ಬಿನ್ ಉಸ್ಮಾನ್(ರ), ಹಂಝರ ಮುಂತಾದ ಪ್ರಮುಖ ಸಹಾಬಿಗಳು ಹುತಾತ್ಮರಾದುದು ಇದೇ ಸಂದರ್ಭದಲ್ಲಿ.

ಉಹುದ್‌ನಲ್ಲಿ ನಾನು ತುಂಬಾ ಸಮಯವನ್ನು ಕಳೆದೆ. ಉಹುದ್ ಬೆಟ್ಟಕ್ಕಿಂತ ನನ್ನನ್ನು ತೀವ್ರವಾಗಿ ಅಲುಗಾಡಿಸಿದ್ದು ಮತ್ತು ಆಕರ್ಷಿಸಿದ್ದು ಜಬಲುರ್‍ರುಮಾತ್. ಅದು ಉಬ್ಬು ಮಾತ್ರ ಅಲ್ಲ, ಅದೊಂದು ಸಂಕೇತ. ಗೆಲುವು ಹೇಗೆ ಸೋಲಾಗಬಹುದು ಎಂಬುದನ್ನು ಮಾರ್ಮಿಕವಾಗಿ ಹೇಳುವ ರೂಪಕ. ಒಂದು ಕುರುಹು ಆಗಿ ಅದು ಸದಾ ಉಳಿಯಬೇಕಾದುದು ಜಾಗತಿಕ ಮುಸ್ಲಿಮ್ ಸಮುದಾಯದ ಮಟ್ಟಿಗೆ ಬಹಳ ಅಗತ್ಯ. ನಾನು ಸುಮ್ಮನೆ ಆ ಉಬ್ಬನ್ನು ನೋಡುತ್ತಾ ನಿಂತೆ. ಯಾತ್ರಾರ್ಥಿಗಳು ಹತ್ತುತ್ತಾ ಇಳಿಯುತ್ತಾ ಇದ್ದರು. ಆ ಉಬ್ಬಿನಿಂದ ಯಾತ್ರಾರ್ಥಿಗಳು ಮಣ್ಣನ್ನು ಸಂಗ್ರಹಿಸುತ್ತಿರುವಂತೆಯೂ ಕಂಡಿತು. ಹಾಗಂತ, ಈ ಮಣ್ಣು ಸಂಗ್ರಹಿಸುವವರ ಭಾವುಕತೆಯನ್ನು ನಾನು ಪ್ರಶ್ನಿಸುತ್ತಿಲ್ಲ ಅಥವಾ ಈ ಭಾವುಕತೆ ಉಹುದ್‌ಗೆ ಮಾತ್ರ ಸೀಮಿತವೂ ಅಲ್ಲ. ಮಣ್ಣು, ಮರಳುಗಳನ್ನು ಸಂಗ್ರಹಿಸುವುದು, ಬಂಡೆಗೆ ಚುಂಬಿಸುವುದು, ಸಂಕೇತಗಳನ್ನು ಕಣ್ಣಿಗೊತ್ತಿಕೊಳ್ಳುವುದು... ಇವೆಲ್ಲ ಮಕ್ಕಾ ಮದೀನಕ್ಕೆ ಯಾತ್ರಾರ್ಥಿಗಳಾಗಿ ಬಂದವರಲ್ಲಿ ಅಸಂಖ್ಯಾತ ಮಂದಿಯ ಸಹಜ ಭಾವಾಭಿವ್ಯಕ್ತಿ. ಇದಕ್ಕೆ ಕಾರಣಗಳು ಹಲವು ಇರಬಹುದು. ಪ್ರವಾದಿ ಮುಹಮ್ಮದರು ನೇತೃತ್ವ ನೀಡಿದ ಇಸ್ಲಾಮೀ ಚಳವಳಿಗೆ ಇವತ್ತು 1500 ವರ್ಷಗಳೇ ಸಂದಿವೆ. ಅಂದರೆ, ಅವರನ್ನು, ಅವರ ಅನುಯಾಯಿಗಳನ್ನು, ಅವರ ಚಳವಳಿಯನ್ನು ನೇರವಾಗಿ ಕಂಡವರು ಮತ್ತು ಅನುಭವಿಸಿದವರು ಇವತ್ತು ಜಗತ್ತಿನಲ್ಲಿ ಎಲ್ಲೂ ಇಲ್ಲ. ಈಗಿನ ಜನರಿಗೂ 1500 ವರ್ಷಗಳ ಹಿಂದಿನ ಪ್ರವಾದಿ ಕಾಲದವರಿಗೂ ನಡುವೆ ಅನೇಕಾರು ತಲೆಮಾರುಗಳ ಅಂತರ ಇದೆ. ಯಾವುದೇ ಚಳವಳಿಗೂ ಮತ್ತು ಅದನ್ನು ಓದುವ ತಲೆಮಾರಿಗೂ ನಡುವೆ ಅಂತರಗಳು ಹೆಚ್ಚುತ್ತಾ ಹೋದಂತೆ ವಿಸ್ಮೃತಿಗಳು ಕಾಡುವುದು ಸಹಜ. ಪ್ರವಾದಿಯವರ ಜೊತೆ ಬದುಕಿದವರಿಗೆ ಮತ್ತು ಅವರೊಂದಿಗೆ ಹತ್ತಿರದ ನಂಟನ್ನು ಇಟ್ಟುಕೊಂಡವರಿಗೆ ಪ್ರವಾದಿಯವರು ಹೇಗೆ ಕಂಡಿದ್ದರೋ ಮತ್ತು ಅವರನ್ನು ಅವರು ಹೇಗೆ ಅನುಸರಿಸಿದ್ದರೋ ಅದೇ ರೂಪದಲ್ಲಿ ಅವರನ್ನು ಕಂಡೇ ಇಲ್ಲದ ತಲೆಮಾರು ಅನುಸರಿಸಲು ಸಾಧ್ಯವಿಲ್ಲ ಮತ್ತು ಅದು ಸುಲಭವೂ ಅಲ್ಲ. ಇವತ್ತು ಜಗತ್ತಿನ ನೂರಾರು ರಾಷ್ಟ್ರಗಳಲ್ಲಿ ಮುಸ್ಲಿಮರು ಹರಡಿಕೊಂಡಿದ್ದಾರೆ. ಅವರೆಲ್ಲರ ನಾಯಕ ಪ್ರವಾದಿ ಮುಹಮ್ಮದ್(ಸ). ಅವರೆಲ್ಲರ ಆದರ್ಶ ಗ್ರಂಥ ಪವಿತ್ರ ಕುರ್‌ಆನ್. ಆದರೆ ಈ ಎಲ್ಲ ರಾಷ್ಟ್ರಗಳಲ್ಲಿ ಪ್ರವಾದಿ ಮುಹಮ್ಮದರು ಮತ್ತು ಅವರು ಹುಟ್ಟು ಹಾಕಿದ ಚಳವಳಿ, ಹೋರಾಟ, ಅದರ ಉದ್ದೇಶ.. ಎಲ್ಲವೂ ಒಂದೇ ರೀತಿಯಲ್ಲಿ ವ್ಯಾಖ್ಯಾನಕ್ಕೆ ಒಳಗಾಗಿರುವ ಸಾಧ್ಯತೆ ಇದೆಯೇ? ಕೆಲವು ಕಡೆ ಬರೇ ಭಾವುಕತೆಗೆ ಮಾತ್ರ ಒತ್ತುಕೊಟ್ಟು ಈ ಚಳವಳಿ ವ್ಯಾಖ್ಯಾನಕ್ಕೆ ಒಳಪಟ್ಟಿರಬಹುದು. ಕೆಲವು ಕಡೆ ಈ ಚಳವಳಿಯನ್ನು ಹೋರಾಟದ ಭಾಗವಾಗಿ ಕಂಡಿರಬಹುದು. ಕೆಲವು ಕಡೆ, ಪುಣ್ಯಗಳಿಕೆ ಮತ್ತು ಪವಾಡಗಳ ಮೂರ್ತ ರೂಪವಾಗಿ ಪ್ರಸ್ತುತಪಟ್ಟಿರಬಹುದು. ಉದಾಹರಣೆಗೆ, ಉಹುದ್ ಪರ್ವತದ ಬುಡದಲ್ಲಿ ನಡೆದ ಕಾಳಗವನ್ನೇ ಎತ್ತಿಕೊಳ್ಳಿ. ಹಂಝ(ರ) ಸಹಿತ ಪ್ರಮುಖ ಸಹಾಬಿಗಳು ಹುತಾತ್ಮರಾದುದು ಮತ್ತು ಪ್ರವಾದಿಯವರ ಪಾವನ ಶರೀರಕ್ಕೆ ಗಾಯವಾದುದನ್ನು ಉಲ್ಲೇಖಿಸುತ್ತಾ ಇಡೀ ಘಟನೆಯನ್ನು ಅತ್ಯಂತ ಭಾವುಕವಾಗಿ ಕಟ್ಟಿಕೊಡುವುದಕ್ಕೆ ಅವಕಾಶ ಇದೆ. ಅಬೂ ಸುಫಿಯಾನ್‌ರ ಪತ್ನಿ ಹಿಂದ್‌ರ ಷಡ್ಯಂತ್ರಕ್ಕೆ ಹಂಝ(ರ) ಬಲಿಯಾದುದನ್ನು ಹೇಳಿಕೊಂಡು ದುಃಖಿಸಬಹುದು. ಹುತಾತ್ಮರಿಗೆ ದುಆ ಮಾಡಬಹುದು. ಉಹುದ್‌ನ ಮಣ್ಣಿನಲ್ಲಿ, ಜಬಲುರ್‍ರುಮಾತ್‌ನ ತಪ್ಪಲಲ್ಲಿ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಪ್ರವಾದಿಯವರ ದೇಹದಿಂದ ರಕ್ತ ತೊಟ್ಟಿಕ್ಕಿದ ಮಣ್ಣು ಎಂಬ ನೆಲೆಯಲ್ಲಿ ಆ ಇಡೀ ಪ್ರದೇಶವನ್ನು ಪವಿತ್ರ ಎಂದು ಬಣ್ಣಿಸಬಹುದು. ಆದರೆ, ಪ್ರವಾದಿಯವರ ನೇತೃತ್ವದಲ್ಲಿ ನಡೆದ ಸಂದೇಶ ಪ್ರಚಾರವನ್ನು ಒಂದು ಚಳವಳಿಯಾಗಿ ಮತ್ತು ಪರಿವರ್ತನೆಗಾಗಿ ನಡೆದ ಹೋರಾಟವಾಗಿ ಪರಿಗಣಿಸುವವರು ಉಹುದನ್ನು ಈ ಭಾವುಕತೆಗಿಂತ ಹೊರತಾದ ಕಾರಣಕ್ಕಾಗಿ ಮುಖ್ಯವಾಗಿಸಬಹುದು. ನಾಯಕನ ಅನುಸರಣೆಯನ್ನು ನಿರ್ಲಕ್ಷಿಸಿದರೆ ಏನಾಗಬಹುದು ಎಂಬುದಕ್ಕೆ ಉತ್ತರವಾಗಿ ಅವರು ಉಹುದ್ ಅನ್ನು ಎತ್ತಿಕೊಳ್ಳಬಹುದು. ಪವಿತ್ರ ಕುರ್‌ಆನ್‌ನಲ್ಲಿ ಬದ್ರ್‌ನ ವಿಜಯಕ್ಕಿಂತ ಉಹುದ್‌ನ ಸೋಲಿಗೆ ಹೆಚ್ಚು ಮಹತ್ವ ಕೊಟ್ಟಿರುವುದು ಮತ್ತು ಆ ಬಗ್ಗೆ ವಿಸ್ತೃತವಾಗಿ ಚರ್ಚಿಸಿರುವುದನ್ನು ವಿಮರ್ಶೆಗೆ ಒಡ್ಡಬಹುದು. ಅಲ್ಲಾಹನ ಪ್ರವಾದಿಯಾಗಿದ್ದೂ ಮುಹಮ್ಮದ್‌ರು(ಸ) ತೀವ್ರ ಗಾಯಗೊಳ್ಳುವುದರಲ್ಲಿರುವ ಸಂದೇಶವನ್ನು ವಿಶ್ಲೇಷಿಸಬಹುದು. ಪ್ರವಾದಿಯವರನ್ನು ಅನುಸರಿಸುವುದೆಂದರೆ ಏನು, ಹೇಗೆ, ಯಾವ ರೀತಿಯಲ್ಲಿ ಎಂಬುದನ್ನೆಲ್ಲಾ ಉಹುದ್ ಅನ್ನು ಎದುರಿಟ್ಟುಕೊಂಡು ಚರ್ಚಿಸಬಹುದು. ನಿಜವಾಗಿ,


ಎಣ್ಣೆ ಬತ್ತಿದ ಲಾಟೀನು

ಪ್ರವಾದಿಯವರನ್ನು ಕೇವಲ ಭಾವುಕವಾಗಿ ನೋಡುವವರಿಗೂ ಅವರನ್ನು ಹೋರಾಟದ ಪ್ರತೀಕವಾಗಿ ಎತ್ತಿಕೊಳ್ಳುವವರಿಗೂ ನಡುವೆ ಇರುವ ಇಂಥ ವ್ಯತ್ಯಾಸಗಳೇ ಮರಳು, ಮಣ್ಣು.. ಇತ್ಯಾದಿಗಳ ಸಂಗ್ರಹದಲ್ಲಿ ವ್ಯಕ್ತವಾಗುವುದು. ಪ್ರವಾದಿ ಮುಹಮ್ಮದ್‌ರು ಜಾಗತಿಕ ಮುಸ್ಲಿಮರ ನಾಯಕ, ಅಭಿಮಾನ, ಪ್ರೀತಿ ಪಾತ್ರ ಎಲ್ಲವೂ ಹೌದು. ಹಾಗೆಯೇ, ಅವರನ್ನು ನೋಡಿಲ್ಲದ ಈಗಿನ ತಲೆಮಾರಿಗೆ ಅವರ ನೇತೃತ್ವದ ಚಳವಳಿಯು ವಿವಿಧ ರೀತಿಯಲ್ಲಿ ವ್ಯಾಖ್ಯಾನಕ್ಕೆ ಒಳಗಾಗುತ್ತಾ ತಲುಪಿರುವುದಕ್ಕೂ ಅವಕಾಶ ಇದೆ. ಆದ್ದರಿಂದ, ಪ್ರವಾದಿಯವರ ಕಾಲದ ಕುರುಹುಗಳನ್ನು ಕಂಡಾಗ ವಿವಿಧ ರಾಷ್ಟ್ರಗಳಿಂದ ಆಗಮಿಸಿದ ಯಾತ್ರಾರ್ಥಿಗಳು ಅದಕ್ಕೆ ವಿವಿಧ ರೀತಿಯಲ್ಲಿ ಪ್ರತಿಕ್ರಿಯಿಸುವುದು ಸಹಜವಾದದ್ದೇ. ಬಿಲ್ಲುಗಾರರು ನಿಂತ ಆ ದಿಣ್ಣೆಗೆ ಯಾತ್ರಾರ್ಥಿಗಳು ಹತ್ತುತ್ತಲೂ ಇಳಿಯುತ್ತಲೂ ಇರುವುದನ್ನು ನಾನು ತುಂಬಾ ಹೊತ್ತು ವೀಕ್ಷಿಸಿದೆ. ನನಗದು ಬರೇ ಹತ್ತಿಳಿಯುವಿಕೆಯಂತೆ ಕಾಣಿಸಲಿಲ್ಲ. ಹತ್ತಿದವರು ಹೆಚ್ಚು ಹೊತ್ತು ದಿಣ್ಣೆಯ ಮೇಲೆ ನಿಲ್ಲುತ್ತಿರಲಿಲ್ಲ. ಕೆಳಗಿಳಿಯುತ್ತಿದ್ದರು. ಇತರರು ದಿಣ್ಣೆ ಹತ್ತುತ್ತಿದ್ದರು. ಹೀಗೆ ಜಬಲುರ್ರುಮಾತ್‌ನ ತುದಿಯಲ್ಲಿ ಕೆಲವು ನಿಮಿಷ ನಿಂತುಕೊಳ್ಳುವ ಮತ್ತು ಉಳಿದ ಬಹು ಅವಧಿಯನ್ನು ದಿಣ್ಣೆಯ ತಳಭಾಗದಲ್ಲಿ ನಿಂತುಕೊಂಡು ವ್ಯಯಿಸುವ ಆ ಇಡೀ ಪ್ರಕ್ರಿಯೆ ಇವತ್ತಿನ ಮುಸ್ಲಿಮ್ ಸಮುದಾಯದ ಸ್ಥಿತಿಗೆ ಅನ್ವರ್ಥದಂತೆ ಕಾಣಿಸಿತು. ಮುಸ್ಲಿಮರು ಇವತ್ತು ಜಾಗತಿಕ ಮಟ್ಟದಲ್ಲಿ ತುದಿಯಲ್ಲಿರುವ ಸಮುದಾಯವಾಗಿ ಗುರುತಿಸಿಕೊಂಡಿಲ್ಲ. ತಳಭಾಗದಲ್ಲಿರುವ ಸಮುದಾಯವಾಗಿ ಗುರುತಿಸಿಕೊಂಡಿದೆ. ಎಲ್ಲಾ ಕ್ಷೇತ್ರಗಳಿಗೂ ಈ ಮಾತು ಅನ್ವಯ ಎಂದೇ ಹೇಳಬೇಕಾಗುತ್ತದೆ. ವಿಜ್ಞಾನ ಕ್ಷೇತ್ರದಲ್ಲಿ ತುದಿಯಲ್ಲಿರುವವರ ಪಟ್ಟಿಯಲ್ಲಿ ಮುಸ್ಲಿಮ್ ಹೆಸರಿಲ್ಲ. ಮುಸ್ಲಿಮ್ ಎಂಬ ಐಡೆಂಟಿಟಿಗೆ ಹೆಮ್ಮೆ ಪಡುವ ಸಾಹಿತಿಯು ಸಾಹಿತ್ಯ ಕ್ಷೇತ್ರದ ತುದಿವರೆಗೆ ತಲುಪುತ್ತಿಲ್ಲ. ಸಾಮಾಜಿಕ ಕ್ಷೇತ್ರ ಮುಸ್ಲಿಮರಿಗೆ ಸಂಬಂಧಿಸಿ ಬಹುತೇಕ ಬಡವಾಗಿದೆ. ಪ್ರತಿವರ್ಷ ಸಾಹಿತ್ಯ, ವಿಜ್ಞಾನ, ಸಂಶೋಧನೆಗೆ ನೀಡಲಾಗುವ ನೋಬೆಲ್, ಬೂಕರ್ ಸಹಿತ ಪ್ರತಿಷ್ಠಿತ ಪ್ರಶಸ್ತಿಗಳಿಗೆ 'ಮುಸ್ಲಿಮ್' ಆಯ್ಕೆಯಗುವುದು ಶೂನ್ಯ ಅನ್ನುವಷ್ಟು ಕಡಿಮೆ. ಜಾಗತಿಕವಾಗಿ ಇವತ್ತು ಹತ್ತು ಹಲವು ಬಗೆಯ ಸಂಶೋಧನೆಗಳಾಗುತ್ತಿವೆ. ರೋಗಗಳಿಗೆ ಮದ್ದುಗಳನ್ನು ಕಂಡು ಹಿಡಿಯಲಾಗುತ್ತಿದೆ. ಬಾಹ್ಯಾಕಾಶಕ್ಕೆ ಯಾನ ನಡೆಯುತ್ತಿದೆ. ಆದರೆ ಎಲ್ಲದರಲ್ಲೂ 'ಮುಸ್ಲಿಮ್' ವಿರಳವಾಗಿದ್ದಾರೆ. ಎಲ್ಲರೂ ಬಹುತೇಕ ತಳಭಾಗದಲ್ಲಿ ನಿಂತು ತುದಿಯಲ್ಲಿರುವವರನ್ನು ನೋಡುತ್ತಿದ್ದಾರೆ. ಮಣ್ಣು, ಮರಳನ್ನು ಸಂಗ್ರಹಿಸುವಂತೆ ತುದಿಯಲ್ಲಿರುವವರ ಸಂಶೋಧನೆಯ ಫಲಗಳನ್ನು ಅನುಭವಿಸುತ್ತಾ ತಳಭಾಗದಲ್ಲಿ ನಿಶ್ಚಿಂತವಾಗಿರುವಂತೆ ಅನಿಸುತ್ತಿದೆ.

ನಿಜವಾಗಿ, ಪ್ರವಾದಿ ಮುಹಮ್ಮದ್‌ರು ತನ್ನ ಸಂದೇಶವನ್ನು ಮೊಟ್ಟ ಮೊದಲು ಜನರಿಗೆ ತಿಳಿಸಲು ಆಯ್ಕೆ ಮಾಡಿಕೊಂಡದ್ದೇ ಸಫಾ ಪರ್ವತದ ತುದಿಯನ್ನು.





ಅದಕ್ಕಿಂತಲೂ ಮೊದಲು ಇಕ್‌ರಅ್ ಅನ್ನು ಕೇಳಿಸಿಕೊಂಡದ್ದೂ ಜಬಲುನ್ನೂರ್(ನೂರ್ ಪರ್ವತ)ನ ತುದಿಯಲ್ಲಿ. ಹಿರಾ ಎಂಬ ಪೊಟರೆಯಂಥ ಗುಹೆ ಇರುವುದು ಈ ನೂರ್ ಪರ್ವತದ ತುದಿಯಲ್ಲೇ. ಮಕ್ಕಾದಿಂದ ಮದೀನಕ್ಕೆ ವಲಸೆ ಹೋಗುವಾಗ ವಿರೋಧಿಗಳ ತಂತ್ರವನ್ನು ವಿಫಲಗೊಳಿಸುವುದಕ್ಕಾಗಿ ಆಯ್ಕೆ ಮಾಡಿಕೊಂಡ ಸ್ಥಳವೂ ಜಬಲುಸ್ಸೌರ್(ಸೌರ್ ಪರ್ವತ)ನ ತುದಿಯನ್ನೇ. ಅಂದರೆ ಪ್ರವಾದಿಯವರು ಮೊದಲ ಬಾರಿ ಸಂದೇಶವನ್ನು ಘೋಷಿಸಿದ ಸ್ಥಳ ಮತ್ತು ಹಿರಾ ಗುಹೆ ಹಾಗೂ ಸೌರ್ ಗುಹೆ ಈ ಮೂರೂ ಪ್ರವಾದಿಯವರ ಬದುಕಿಗೆ ಬಹುಮುಖ್ಯ ತಿರುವು ನೀಡಿದ ಸ್ಥಳಗಳಾಗಿದ್ದುವು. ಇವು ಮೂರೂ ಭೂಮಿಯ ತಳದಲ್ಲಿಲ್ಲ. ಪರ್ವತದ ತುದಿಯಲ್ಲಿದೆ. ಅವರ ಸಂದೇಶವನ್ನು ಆಲಿಸುವವರು ಮಾತ್ರ ತಳದಲ್ಲಿದ್ದರು. ಇದರ ಅರ್ಥವೇನು? ಆ ಸಂದೇಶ ಜನರನ್ನು ತಳಭಾಗದಿಂದ ತುದಿಗೆ ಕೊಂಡೊಯ್ಯುವ ಸಾಮರ್ಥ್ಯ ಉಳ್ಳದ್ದು ಎಂದೇ ಅಲ್ಲವೇ? ನೈತಿಕವಾಗಿ, ಸಾಮಾಜಿಕವಾಗಿ, ವೈಚಾರಿಕವಾಗಿ ತಳಭಾಗದಲ್ಲಿದ್ದ ಸಮುದಾಯವು ಪ್ರವಾದಿತ್ವದ 23 ವರ್ಷಗಳ ಕಿರು ಅವಧಿಯಲ್ಲಿ ಅರಬ್ ಜಗತ್ತಿನ ತುತ್ತ ತುದಿಗೆ ತಲುಪಿದುದು ಏನನ್ನು ಸೂಚಿಸುತ್ತದೆ? ಮುಸ್ಲಿಮ್ ಸಮುದಾಯ ಪ್ರವಾದಿಯವರನ್ನು ನೇರಾತಿನೇರ ಅನುಸರಿಸಿದರೆ ತುದಿಯೇ ಅದರ ವಾಸಸ್ಥಳವಾಗಿರುತ್ತದೆ ಎಂಬುದನ್ನೇ ಅಲ್ಲವೇ?

## ಭಾಗ: 15

ಮಕ್ಕಾದಿಂದ ಸುಮಾರು 3 ಕಿಲೋ ಮೀಟರ್ ದೂರದ ದಕ್ಷಿಣ ದಿಕ್ಕಿನಲ್ಲಿರುವ ಜಬಲುಸ್ಸೌರ್ (ಸೌರ್ ಪರ್ವತ) ಮತ್ತು ಮಸ್ಜಿದುಲ್ ಹರಾಮ್‌ನಿಂದ 3 ಕಿ. ಮೀಟರ್ ದೂರದ ಉತ್ತರ ದಿಕ್ಕಿನಲ್ಲಿರುವ ಜಬಲುನ್ನೂರ್ (ನೂರ್ ಪರ್ವತ– ಇದರಲ್ಲೇ ಹಿರಾ ಗುಹೆ ಇದೆ)ಗಳನ್ನು ವೀಕ್ಷಿಸಿದೆ. ಸೌರ್ ಎಂದರೆ ಎತ್ತು ಎಂದರ್ಥ. ಈ ಬೆಟ್ಟದ ತಳಭಾಗದಲ್ಲಿ ಅಬ್ದುಮನಾಫ್‌ರಿಗೆ ಗಂಡು ಮಗುವಿನ ಜನನವಾಗುತ್ತದೆ. ಆಗ ಅವರು ಆ ಮಗುವಿಗೆ ಸೌರ್ ಎಂದು ನಾಮಕರಣ ಮಾಡುತ್ತಾರೆ. ಆ ನಾಮಕರಣವೇ ಬಳಿಕ ಪರ್ವತದ ಜೊತೆಗೂ ಸೇರಿ ಹೋಗುತ್ತದೆ. ಈ ಪರ್ವತವು ಸಮುದ್ರ ಮಟ್ಟದಿಂದ 759 ಮೀಟರ್ ಎತ್ತರದಲ್ಲಿದೆ. ಪ್ರವಾದಿ ಮುಹಮ್ಮದರು ಮಸ್ಜಿದುಲ್ ಹರಾಮ್‌ನ ಪಕ್ಕದಲ್ಲಿರುವ ತಮ್ಮ ಮನೆಯಿಂದ ಮದೀನಕ್ಕೆಂದು ಹೊರಟು ಈ ಪರ್ವತದ ತುದಿಯಲ್ಲಿರುವ ಗುಹೆಯಲ್ಲಿ 3 ದಿನಗಳ ಕಾಲ ತಂಗುತ್ತಾರೆ. ಅವರಿಗೆ ಅಬೂಬಕರ್ ಜೊತೆ ನೀಡುತ್ತಾರೆ. ನಿಜವಾಗಿ, ಮದೀನವು ಮಕ್ಕಾದ ಉತ್ತರ ಭಾಗದಲ್ಲಿದೆ. ಜಬಲುಸ್ಸೌರ್ ಆದರೋ ಮಕ್ಕಾದ ದಕ್ಷಿಣ ಭಾಗದಲ್ಲಿ. ಮದೀನಕ್ಕೆ ಹೊರಟ ಪ್ರವಾದಿಯವರು ನಿಜವಾಗಿ ಉತ್ತರ ಭಾಗದ ಮೂಲಕ ಹೋಗಬೇಕಾಗಿತ್ತು. ಆದರೆ ಅವರು ದಕ್ಷಿಣಕ್ಕೆ ಹೊರಟರು. ಇದಕ್ಕೆ ಕಾರಣ ಅವರ ವಿರೋಧಿಗಳು. ಪ್ರವಾದಿಯವರು ಮದೀನಕ್ಕೆ ವಲಸೆ ಹೋಗಲು ಅವರ ವಿರೋಧಿಗಳ ಹಿಂಸೆಯೇ ಮುಖ್ಯ ಕಾರಣವಾಗಿತ್ತು. ಆದ್ದರಿಂದ, ಈ ವಲಸೆಯ ಸುದ್ದಿ ವಿರೋಧಿಗಳಿಗೆ ತಲುಪಿದರೆ ಅವರು ಬೆನ್ನಟ್ಟುವುದು ಖಂಡಿತ. ಆದ್ದರಿಂದಲೇ, ಪ್ರವಾದಿಯವರು ಸಾಮಾನ್ಯ ದಾರಿಗಿಂತ ಭಿನ್ನ ದಾರಿಯನ್ನು ಆಯ್ಕೆ ಮಾಡಿಕೊಂಡರು. ಒಂದು ರೀತಿಯಲ್ಲಿ, ಇದು ಮಾಮೂಲಿ ವಲಸೆ ನೀತಿಗೆ ಪ್ರವಾದಿಯವರು ಮಂಡಿಸಿದ ಪರ್ಯಾಯ ವಲಸೆ ನೀತಿ. ಸಾಂಪ್ರದಾಯಿಕ ಚಿಂತನೆಗೆ ವ್ಯತಿರಿಕ್ತವಾದ ಚಿಂತನೆ. ಪ್ರವಾದಿಯವರು ತನ್ನ ಬದುಕಿನುದ್ದಕ್ಕೂ ಈ ಪರ್ಯಾಯ ಚಿಂತನೆಯನ್ನು ಪ್ರತಿಪಾದಿಸುತ್ತಲೇ ಮತ್ತು ಪ್ರಯೋಗಕ್ಕೆ ಒಡ್ಡುತ್ತಲೇ ಬದುಕಿದರು. ರೂಢಿಗತ





ಚಿಂತನೆಯನ್ನು ಅವರು ವಿಫಲಗೊಳಿಸಿದುದು ಅದಕ್ಕೆ ಪರ್ಯಾಯ ಚಿಂತನೆಯನ್ನು ಮಂಡಿಸುವ ಮೂಲಕವೇ ಹೊರತು ಬಲವಂತದ ದಾರಿಯ ಮೂಲಕ ಅಲ್ಲ.

ನಾನು ಸೌರ್ ಪರ್ವತದ ಬುಡದಲ್ಲಿ ನಿಂತು ಅದರ ಎತ್ತರವನ್ನು ಕಣ್ಣಲ್ಲೇ ಅಳೆದೆ. ಅತೀ ಎತ್ತರವನ್ನು ಹೊಂದಿರುವ ಪರ್ವತ ಅದು. ಸಾಮಾನ್ಯ ಮಧ್ಯ ವಯಸ್ಕ ವ್ಯಕ್ತಿಯೊಬ್ಬ ಅದರ ತುದಿಯಲ್ಲಿರುವ ಗುಹೆಯನ್ನು ತಲುಪಬೇಕಾದರೆ ಕನಿಷ್ಠ ಒಂದೂವರೆ ಗಂಟೆಯಷ್ಟು ಅವಧಿ ಬೇಕಾಗುತ್ತದೆ. ಜಬಲುನ್ನೂರನ್ನಾಗಲಿ, ಜಬಲುಸ್ಸೌರನ್ನಾಗಲಿ ಸೌದಿ ಸರಕಾರವು ಪ್ರವಾಸಿ ತಾಣವಾಗಿ ಅಭಿವೃದ್ಧಿ ಪಡಿಸದೇ ಇರುವುದರಿಂದ ಕಾಲ್ನಡಿಗೆಯಲ್ಲೇ ಸಾಗಬೇಕಾದ ಅನಿವಾರ್ಯತೆ ಇದೆ. ಕಲ್ಲು–ಬಂಡೆಗಳ ನಡುವಿನ ಇಕ್ಕಟ್ಟಾದ ದಾರಿಯಲ್ಲಿ ಯಾತ್ರಾರ್ಥಿಗಳು ಸೌರ್ ಗುಹೆಗೆ ಸಾಗುವುದನ್ನು ನಾನು ನೋಡುತ್ತಾ ನಿಂತೆ. ಪ್ರವಾದಿಯವರು ತಮ್ಮ 53ನೇ ಪ್ರಾಯದಲ್ಲಿ ಆ ಪರ್ವತವನ್ನು ಹತ್ತಿದ್ದರು ಎಂಬುದು ನನ್ನನ್ನು ವಿಸ್ಮಯಕ್ಕೆ ಒಳಪಡಿಸಿತು. ಸೈದ್ಧಾಂತಿಕ ಬದ್ಧತೆ ಮತ್ತು ಹೋರಾಟದ ಕೆಚ್ಚಿನ ಹೊರತು 53ರ ಹರೆಯದ ಓರ್ವ ವ್ಯಕ್ತಿಗೆ ಆ ಪರ್ವತವನ್ನು ಹತ್ತಲು ಸಾಧ್ಯವೇ ಇಲ್ಲ ಎಂದೇ ನನ್ನ ಭಾವನೆ. ಮಕ್ಕಾದ ವಾತಾವರಣ ಹೇಗಿದೆ ಎಂದರೆ ಒಂದೋ ಬಿರು ಬಿಸಿಲು ಇಲ್ಲವೇ ಕಠಿಣ ಚಳಿ. ನಾನು ಉಮ್ರಾ ಯಾತ್ರೆ ಕೈಗೊಂಡಿರುವುದು ಬಿರುಬಿಸಿಲಿನ ಆರಂಭದ ಅವಧಿಯಲ್ಲಿ. ತುಸು ದೂರಕ್ಕೆ ಕಣ್ಣು ಹಾಯಿಸಲೂ ಸಾಧ್ಯವಾಗದಷ್ಟು ಬಿಸಿಲು ಕಠಿಣವಾಗಿತ್ತು. ಪ್ರವಾದಿಯವರು ಆ ಪ್ರಾಯದಲ್ಲಿ ಆ ಬೆಟ್ಟವನ್ನು ಹತ್ತಿರುವರೆಂದರೆ ಅದು ಅವರೊಳಗಿನ ಹೋರಾಟ ಮನೋಭಾವದ ಪ್ರತೀಕ. ತನ್ನ ಸಿದ್ಧಾಂತದ ಮೇಲೆ ಅವರಿಗೆ ಎಷ್ಟು ಭರವಸೆ ಇತ್ತೆಂದರೆ ಯಾವ ಪ್ರಯೋಗಕ್ಕೂ ತನ್ನನ್ನು ಒಡ್ಡಿಕೊಳ್ಳಲು ಅವರು ಸಿದ್ಧವಾಗಿದ್ದರು. ತನ್ನ ಸಿದ್ಧಾಂತದ ವಿಜಯಕ್ಕಾಗಿ ಯಾವ ಸಾಹಸವನ್ನು ಮಾಡಲೂ ಅವರು ಹಿಂಜರಿಯಲಿಲ್ಲ. ಜಬಲುನ್ನೂರ್ ಕೂಡ ಇಂಥದ್ದೇ ಒಂದು ಪರ್ವತ. ಸಮುದ್ರ ಮಟ್ಟದಿಂದ 634 ಮೀಟರ್ ಎತ್ತರದಲ್ಲಿರುವ ಈ ಪರ್ವತಕ್ಕೆ ಜಬಲುನ್ನೂರ್ ಎಂಬ ಹೆಸರು ಬರಲು ಮುಖ್ಯ ಕಾರಣ, ಪವಿತ್ರ ಕುರ್‌ಆನ್. ಸೂರಃ ಅಲಖ್‌ನ ಆರಂಭದ 5 ವಚನಗಳು ಪ್ರವಾದಿ ಮುಹಮ್ಮದರಿಗೆ(ಸ) ಅವತೀರ್ಣವಾದ ಜಾಗ ಇದು. ಮಾನವ ಕುಲಕ್ಕೆ ಸನ್ಮಾರ್ಗದ ಪ್ರಕಾಶವನ್ನು ಹಬ್ಬಿಸಿದ ಪರ್ವತವೆಂಬ ನೆಲೆಯಲ್ಲಿ ಇದನ್ನು ಜಬಲುನ್ನೂರ್ (ಪ್ರಕಾಶದ ಪರ್ವತ) ಎಂದು ಕರೆಯಲಾಗುತ್ತದೆ. ಕಲ್ಲು ಬಂಡೆಗಳ ಇಕ್ಕಟ್ಟಾದ ಕಾಲು ದಾರಿಯನ್ನು ತುಳಿಯುತ್ತಾ ಇದರ ತುದಿಗೆ ತಲುಪಿದರೆ ಅಲ್ಲಿ ಹಿರಾ ಗುಹೆ (ಪೊಟರೆ) ಸಿಗುತ್ತದೆ. ಪ್ರವಾದಿಯವರು ತಮ್ಮ 40ನೇ ಪ್ರಾಯದಲ್ಲಿ ಧ್ಯಾನಾಸಕ್ತರಾಗಿ ಕುಳಿತುಕೊಂಡದ್ದು ಇದೇ ಗುಹೆಯಲ್ಲಿ. ನಾನು ಈ ಪರ್ವತದ ಬುಡದಲ್ಲಿ ನಿಂತು ಪ್ರವಾದಿಯವರಿಗಿಂತ ಅವರ ಪತ್ನಿ ಖದೀಜಾರ ಬಗ್ಗೆ ಆಲೋಚಿಸಿದೆ. ಪ್ರವಾದಿಯವರು ಹಿರಾ ಗುಹೆಯಲ್ಲಿ ಧ್ಯಾನಾಸಕ್ತರಾಗುವಾಗ ಖದೀಜಾರ ಪ್ರಾಯ 55. ಮಕ್ಕಾದ ಹರಮ್‌ನ ಎದುರಿನ

ಮನೆಯಿಂದ ಖದೀಜಾ ಪ್ರವಾದಿಯವರಿಗಾಗಿ ಊಟದ ಬುತ್ತಿಯನ್ನು ಹಿಡಿದುಕೊಂಡು ಈ ಪರ್ವತವನ್ನು ಹತ್ತಿಳಿಯುತ್ತಿದ್ದರು. ಆ ಸಂದರ್ಭದಲ್ಲಿ ಅವರ ಮನದಲ್ಲಿ ಸುಳಿಯುತ್ತಿದ್ದ ಪ್ರಶ್ನೆಗಳು ಏನಾಗಿರಬಹುದು? ಆ ಕಲ್ಲು–ಬಂಡೆಗಳೊಂದಿಗೆ ಅವರು ಏನು ಮಾತಾಡಿರಬಹುದು? ಆ ಕೊರಕಲು ದಾರಿಯಲ್ಲಿ ಸಾಗುವಾಗ ಅವರು ಹೆಜ್ಜೆ ತಪ್ಪಿರಬಹುದೇ? ಅವರಿಗೆ ಸುಸ್ತಾಗಿರಬಹುದೇ? ಪ್ರವಾದಿಯವರ ಜೊತೆ ಅವರು ಏನು ಮಾತಾಡಿರಬಹುದು? ಕೊರಕಲು ದಾರಿಯ ಬಗ್ಗೆ ದೂರಿಕೊಂಡಿರಬಹುದೇ? ಆಯಾಸದ ಬಗ್ಗೆ ಹೇಳಿಕೊಂಡಿರಬಹುದೇ? ಓರ್ವ ಮಹಿಳೆಯಾಗಿ ಅವರ ಅಭಿಪ್ರಾಯಗಳು ಏನಿರಬಹುದು? ಪ್ರವಾದಿಯವರು ತನ್ನ ಪತ್ನಿಯ ಸೇವೆಯನ್ನು ಹೇಗೆ ಪರಿಗಣಿಸಿರಬಹುದು? ಹೇಗೆ ಸಂತೈಸಿರಬಹುದು? ಅವರಿಬ್ಬರೂ ಆಧ್ಯಾತ್ಮದ ಬಗ್ಗೆ ಏನೆಲ್ಲ ಹಂಚಿಕೊಂಡಿರಬಹುದು? ಖದೀಜ ಬರೇ ಬುತ್ತಿಯನ್ನು ಮಾತ್ರ ಸಾಗಿಸುತ್ತಿದ್ದರೇ ಅಥವಾ ಆ ಬುತ್ತಿಯ ಜೊತೆಗೆ ಊರಿನ ಸುದ್ದಿಗಳನ್ನೂ ಪ್ರವಾದಿಯವರಿಗೆ ರವಾನಿಸುತ್ತಿದ್ದರೇ? ಆ ಸುದ್ದಿಗಳ ಸ್ವರೂಪ ಏನಾಗಿದ್ದುವು? ಅದರಲ್ಲಿ ಮನೆಯ ಸುದ್ದಿಗೆ ಎಷ್ಟು ಮಹತ್ವ ಇದ್ದಿರಬಹುದು? ಸಮಾಜದ ಸುದ್ದಿಗೆ ಎಷ್ಟು ಪ್ರಾಮುಖ್ಯತೆ ಲಭ್ಯವಾಗಿರಬಹುದು? ಅವರ ಸಮಾಜಕ್ಕೆ ಖದೀಜಾರ ಈ ಬುತ್ತಿ ಸಾಗಿಸುವಿಕೆ ಗೊತ್ತಿತ್ತೆ? ಗೊತ್ತಿದ್ದರೆ ಸಮಾಜದ ಪ್ರತಿಕ್ರಿಯೆ ಏನಾಗಿತ್ತು? ಕುಹುಕವಿತ್ತೆ? ವ್ಯಂಗ್ಯವಿತ್ತೇ? ಒಂದು ವೇಳೆ ಗೊತ್ತಿಲ್ಲ ಎಂದಾದರೆ, ಅವರು ಆ ರಹಸ್ಯವನ್ನು ಹೇಗೆ ಕಾಪಾಡಿಕೊಂಡರು? ಪರ್ವತಕ್ಕೆ ಏರುವ ಮತ್ತು ಇಳಿಯುವ ಆ ಇಡೀ ಪ್ರಕ್ರಿಯೆಯನ್ನು ಅವರು ಹೇಗೆ ಗುಟ್ಟಾಗಿಟ್ಟರು? ಒಂದು ಕಾಲದ ಆಗರ್ಭ ಶ್ರೀಮಂತೆಯಾದ ಖದೀಜಾ ಸ್ವತಃ ಬುತ್ತಿಯನ್ನು ಹಿಡಿದುಕೊಂಡು ಪರ್ವತವನ್ನು ಏರುವ ಆ ಸನ್ನಿವೇಶ ಪ್ರವಾದಿಯವರಲ್ಲಿ ಏನೆಲ್ಲ ಭಾವನೆಗಳನ್ನು ಹುಟ್ಟಿಸಿರಬಹುದು? ಅವರು ಸಂಕಟಪಟ್ಟಿರಬಹುದೇ? ಖದೀಜರಲ್ಲಿ ಕ್ಷಮೆ ಯಾಚಿಸಿರಬಹುದೇ? ಖದೀಜಾರ ಮರಣದ ಬಳಿಕವೂ ಅವರನ್ನು ಪ್ರವಾದಿ ಅತೀ ಹೆಚ್ಚು ಸ್ಮರಿಸುತ್ತಿದ್ದುದಕ್ಕೆ ಮತ್ತು ತನ್ನ ಪ್ರೀತಿ ಪಾತ್ರ ಪತ್ನಿಯರಲ್ಲಿ ಅವರಿಗೆ ಪ್ರಥಮ ಸ್ಥಾನ ನೀಡಿರುವುದಕ್ಕೆ ಅವರ ಈ ಸೇವಾ ಗುಣ ಕಾರಣವಾಗಿರಬಹುದೇ? ಅಂದಹಾಗೆ,

ಜಬಲುಸ್ಸೌರ್ ಮತ್ತು ಜಬಲುನ್ನೂರ್ ಪರ್ವತಗಳಿಗೆ ಹತ್ತುವ ಮತ್ತು ಇಳಿಯುವ ಯಾತ್ರಾರ್ಥಿಗಳು ಒಂದು ವೇಳೆ ಪ್ರವಾದಿ ಕಾಲದ ಸನ್ನಿವೇಶಗಳನ್ನು ಕಲ್ಪಿಸುತ್ತಾ ಆ ಪ್ರಕ್ರಿಯೆಯಲ್ಲಿ ತೊಡಗಿದರೆ ಆ ಹತ್ತಿಳಿಯುವಿಕೆ ಎಷ್ಟು ಅದ್ಭುತವೆನಿಸಬಹುದು? ಭಾವುಕತೆಗಿಂತ ಆಚೆಗೆ ಅದು ಓರ್ವ ಯಾತ್ರಾರ್ಥಿಯನ್ನು ಹೇಗೆ ಹೋರಾಟಗಾರನಾಗಿ ರೂಪಿಸುವುದಕ್ಕೆ ಪ್ರೇರಣೆ ಒದಗಿಸಿರಬಹುದು? ಮರಳು, ಮಣ್ಣು... ಇತ್ಯಾದಿಗಳನ್ನು ಸಂಗ್ರಹಿಸುವ ಯಾತ್ರಾರ್ಥಿಗೂ ಹೀಗೆ ಪ್ರವಾದಿ ಕಾಲದ ಸನ್ನಿವೇಶವನ್ನು ಮರು ಕಲ್ಪಿಸಿಕೊಳ್ಳುತ್ತಾ ಪ್ರತಿಕ್ರಿಯೆಯನ್ನೂ ಜೀವಂತಗೊಳಿಸುವ ಯಾತ್ರಾರ್ಥಿಗೂ ನಡುವೆ ವ್ಯತ್ಯಾಸ ಸ್ಪಷ್ಟವಾಗುವುದು ಇಂಥ ಸಂದರ್ಭದಲ್ಲಿ. ಮಣ್ಣು, ಮರಳಿನಲ್ಲಿ ಭಾವುಕತೆಯಷ್ಟೇ





ಇದೆ. ಇನ್ನಷ್ಟು ಹೇಳಬೇಕೆಂದರೆ ಪುಣ್ಯ ಗಳಿಕೆಯ ಉದ್ದೇಶವೂ ಇದೆ. ಊರಿಗೆ ಕೊಂಡುಹೋಗಿ ಈ ಮಣ್ಣು, ಮರಳನ್ನು ಇತರರಿಗೆ ಹಂಚಬಹುದು. ಬೇಕಾದರೆ ಮನೆಯಲ್ಲಿ ಜೋಪಾನವಾಗಿಡಬಹುದು. ಆದರೆ ಅದರಾಚೆಗೆ ಸಾಮಾಜಿಕ ಪರಿವರ್ತನೆಗೆ ಅದು ಪ್ರೇರಣೆ ಒದಗಿಸುವ ಸಾಧ್ಯತೆ ತೀರಾ ತೀರಾ ಕಡಿಮೆ. ಇದೇ ವೇಳೆ, ಪ್ರವಾದಿಯವರ ಕಾಲವನ್ನು ಕಲ್ಪಿಸಿಕೊಳ್ಳುತ್ತಾ ಮತ್ತು ಪ್ರತಿಕ್ರಿಯೆಯನ್ನು ಆ ಕಾಲಕ್ಕೆ ಹೋಲಿಸುತ್ತಾ ಸಾಗುವ ವ್ಯಕ್ತಿ ಹೋರಾಟಗಾರನಾಗಿ ರೂಪುಗೊಳ್ಳುವುದಕ್ಕೆ ಅವಕಾಶ ಇದೆ. ಆತ ಉಮ್ರಾದಿಂದ ಮರಳುವಾಗ ಬರೇ ಪುಣ್ಯಗಳಿಕೆಯ ಜೋಳಿಗೆಯನ್ನಷ್ಟೇ ಜೊತೆಗೊಯ್ಯುವುದಲ್ಲ, ಪ್ರವಾದಿಯವರ ಸೈದ್ಧಾಂತಿಕ ಬದ್ಧತೆ ಮತ್ತು ಹೋರಾಟ ಮನೋಭಾವದ ಸ್ಫೂರ್ತಿಯನ್ನೂ ಕೊಂಡೊಯ್ಯುತ್ತಾನೆ/ಳೆ.

ಜಬಲುನ್ನೂರ್ ಮತ್ತು ಜಬಲುಸ್ಸೌರ್‌ನ ಬಳಿಕ ಮಕ್ಕಾದಲ್ಲಿ ನೋಡಲೇಬೇಕಾದ ಕೆಲವು ಸ್ಥಳಗಳಿವೆ. ಅದರಲ್ಲಿ ಒಂದು ಅರಫಾ ಮೈದಾನ. ಇದು ಮಸ್ಜಿದುಲ್ ಹರಾಮ್‌ನಿಂದ 22 ಕಿ. ಮೀಟರ್ ದೂರದಲ್ಲಿದೆ. ಸಾಮಾನ್ಯವಾಗಿ ಮೈದಾನ ಎಂಬ ಪದವನ್ನು ಓದುವಾಗ ನಮ್ಮ ಫುಟ್ಬಾಲ್ ಮೈದಾನದಂತೆ ಸಮತಟ್ಟಾಗಿ ಇರಬಹುದೇನೋ ಎಂಬ ಭಾವನೆ ಮೂಡುವುದು ಸಹಜ. ಹಸುರು ಮರಗಳಿಂದ ತುಂಬಿದ ಮತ್ತು 1700 ಹೆಕ್ಟೇರ್ ವಿಸ್ತಾರವಿರುವ ಪ್ರದೇಶವೇ ಅರಫಾ ಮೈದಾನ. ಹಜ್ಜ್ ಯಾತ್ರಾರ್ಥಿಗಳು ಇಲ್ಲಿ ಒಟ್ಟು ಸೇರುತ್ತಾರೆ. ದುಲ್‌ಹಜ್ಜ್ 9 ರಂದು ಹಾಜಿಗಳು ಇಲ್ಲಿಗೆ ಬರದೇ ಇದ್ದರೆ ಅವರ ಹಜ್ಜ್ ಪೂರ್ತಿಯಾಗುವುದಿಲ್ಲ ಎಂಬ ನಿಯಮ ಇದೆ. ಈ ಮೈದಾನಕ್ಕೆ ತಾಗಿಕೊಂಡಂತೆ ಜಬಲುರ್ರಹ್ಮಃ ಎಂಬ ಗುಡ್ಡ ಇದೆ. ಇದರ ಬುಡದಲ್ಲಿ ನಿಂತು ಪ್ರವಾದಿಯವರು ಹಜ್ಜ್‌ನ ಸಮಯದಲ್ಲಿ ವಿದಾಯ ಭಾಷಣ ಮಾಡಿದ್ದರು. ಈ ಮೈದಾನದಲ್ಲಿ ಮಸ್ಜಿದುನಮಿರ ಇದೆ. ಒಮ್ಮೆಗೆ 3 ಲಕ್ಷ ಮಂದಿ ನಮಾಝ್ ಮಾಡಬಹುದಾದಷ್ಟು ವಿಸ್ತಾರವಾದ ಮಸೀದಿ ಇದು. ಇಲ್ಲಿಂದ ತುಸು ದೂರ ಚಲಿಸಿದರೆ ಪ್ರವಾದಿ ಇಸ್ಮಾಈಲ್‌ರನ್ನು ಬಲಿ ನೀಡಲು ಕರೆದೊಯ್ಯಲಾದ ಪರ್ವತ ಇದೆ. ಆ ಬಳಿಕ ಅಬ್ರಹನ ಸೇನೆಯನ್ನು ನಾಶಮಾಡಲಾದ ಮುಹಸ್ಸಿರ್ ಕಣಿವೆ ಸಿಗುತ್ತದೆ. ಜೊತೆ ಜೊತೆಗೆ ಮುಝ್ದಲಿಫ, ಮಿನಾ, ಜಮರಾತ್(ಹಾಜಿಗಳು ಕಲ್ಲೆಸೆಯುವ ಸ್ಥಳ)ಗಳನ್ನು ನೋಡಿದೆ. ಇಲ್ಲಿಯ ಪ್ರದೇಶಗಳೆಲ್ಲ ಪರ್ವತಗಳಿಂದ ಆವರಿಸಿಕೊಂಡಿದೆ. ಪ್ರವಾದಿಯವರ ಕಾಲದಲ್ಲಿ ಈ ಪ್ರದೇಶಗಳೆಲ್ಲ ಹೇಗಿದ್ದಿರಬಹುದು ಎಂಬ ಜಿಜ್ಞಾಸೆ ನನ್ನಲ್ಲಿ ಹುಟ್ಟಿಕೊಂಡಿತು. ಇವತ್ತಿನಂತೆ ರಸ್ತೆಗಳಿಲ್ಲದ, ನೀರಿನ ಸೌಕರ್ಯವಿಲ್ಲದ ಮತ್ತು ವಾಹನ ಸೌಲಭ್ಯವಿಲ್ಲದ ಆ ಕಾಲದಲ್ಲಿ ಅವರು ಹೇಗೆ ಸಂಚಾರ ಮಾಡಿರಬಹುದು? ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ತಲುಪಲು ಎಷ್ಟು ಸಮಯ ತಗುಲಿರಬಹುದು? ಈ ಮಧ್ಯೆ ಹಾಜಿಗಳಿಗೆ ನೀರನ್ನು ಒದಗಿಸಲು ಚಕ್ರವರ್ತಿ ಹಾರೂನ್ ರಶೀದ್‌ರ ಪತ್ನಿ ಝುಬೈದಾರು ನಿರ್ಮಿಸಿದ ಮತ್ತು ಐನ್ ಝುಬೇದ ಎಂಬ ಹೆಸರಲ್ಲಿ ಗುರುತಿಸಿಕೊಂಡಿರುವ ಕಿಲೋ ಮೀಟರ್

ಉದ್ದದ ಕಾಲುವೆಯನ್ನು ನೋಡಿದೆ. ನಮ್ಮಲ್ಲಿ ಕಂಗಿನ ತೋಟಕ್ಕೆ ನೀರು ಹಾಯಿಸಲು ಮಾಡಲಾಗುವ ಸಣ್ಣ ತೋಡಿನಂತೆ ಈ ಕಾಲುವೆಯನ್ನು ನಿರ್ಮಿಸಲಾಗಿದೆ. ಬಳಿಕ ಮಸ್ಜಿದು ಜಿಅ್‌ರಾನ್‌ನಲ್ಲಿ ಉಮ್ರಾ ಉಡುಪನ್ನು ಧರಿಸಿ ದ್ವಿತೀಯ ಉಮ್ರಾಕ್ಕೆ ಸಜ್ಜಾದೆ.

ಮಕ್ಕಾ ಮತ್ತು ಮದೀನಾದಲ್ಲಿ ನಾವು ಭೇಟಿ ನೀಡಲೇಬೇಕಾದ ಮ್ಯೂಸಿಯಂಗಳು ಇವೆ. ಮಕ್ಕಾದಲ್ಲಿರುವ ಮ್ಯೂಸಿಯಂಗೆ ಮಕ್ಕಾ ಮ್ಯೂಸಿಯಂ ಎಂದು ಹೆಸರು. ಝುಮ್ ಝುಮ್ ಬಾವಿಯಿಂದ ನೀರೆತ್ತಲು ಹಿಂದಿನ ಕಾಲದ ಮಂದಿ ಬಳಸುತ್ತಿದ್ದ ರಾಟೆ, ಬಾಲ್ದಿ, ಉಸ್ಮಾನ್ ಬಿನ್ ಅಫ್ಫಾನ್‌ರ ಕಾಲದ ಕುರ್‌ಆನ್ ಪ್ರತಿ, ಝುಮ್ ಝುಮ್ ಬಾವಿಯ ನಕಲು ರೂಪ.. ಸಹಿತ ಅನೇಕಾರು ಪಳೆಯುಳಿಕೆಗಳು ಮಕ್ಕಾ ಮ್ಯೂಸಿಯಂನಲ್ಲಿವೆ. ಈ ಮ್ಯೂಸಿಯಂಗೆ ಹೋಲಿಸಿದರೆ ಮದೀನಾದಲ್ಲಿರುವ ಮ್ಯೂಸಿಯಂ ತುಂಬಾ ದೊಡ್ಡದು ಮತ್ತು ವಿಪುಲ ಮಾಹಿತಿಕೋಶವೂ ಹೌದು. ಇದರ ಹತ್ತಿರವೇ ಅಂದರೆ ಮಸ್ಜಿದುನ್ನಬವಿಯಿಂದ 200 ಮೀಟರ್‌ನಷ್ಟು ದೂರದಲ್ಲಿ ಬನೂ ಸಕೀಫ ಎಂಬ ಬೋರ್ಡು ಹಾಕಿರುವ ಚಿಕ್ಕ ಜಾಗ ಇದೆ. ಅದನ್ನು ಕಂಪೌಂಡು ಕಟ್ಟಿ ರಕ್ಷಿಸಿಡಲಾಗಿದೆ. ಪ್ರವಾದಿಯವರು ನಿಧನರಾದ ಬಳಿಕ ಅಬೂಬಕರ್ ಸಿದ್ದೀಕ್‌ರನ್ನು ಖಲೀಫಾ ಆಗಿ ಆಯ್ಕೆ ಮಾಡಿದ ಸ್ಥಳ ಇದು. ಶಿಯಾಗಳು ಇಲ್ಲಿಗೆ ಬಂದು ಶಾಪ ಹಾಕಿ ಹೋಗುತ್ತಾರೆ ಎಂದು ಹೇಳಲಾಗುತ್ತದೆ. ಯಾಕೆಂದರೆ ಪ್ರವಾದಿಯವರ ಬಳಿಕ ಖಲೀಫ ಆಗಬೇಕಿದ್ದುದು ಅಲೀ(ರ) ಎಂಬುದು ಅವರ ವಾದವಾಗಿದೆ. ಅಬೂಬಕರ್ ಅವರ ಆಯ್ಕೆಯನ್ನು ಮೋಸ ಎಂದವರು ಟೀಕಿಸುತ್ತಾರೆ.

ಮದೀನಾದಲ್ಲಿ ಕುರ್‌ಆನ್‌ಗೆ ಸಂಬಂಧಿಸಿದ ಮ್ಯೂಸಿಯಂ, ಪ್ರವಾದಿಯವರಿಗೆ ಸಂಬಂಧಿಸಿದ ಮ್ಯೂಸಿಯಂ ಮತ್ತು ಮದೀನಾಕ್ಕೆ ಸಂಬಂಧಿಸಿದ ಮ್ಯೂಸಿಯಂ ಹೀಗೆ ಮೂರು ವಿಶಾಲ ಮ್ಯೂಸಿಯಂಗಳಿವೆ. ಎಲ್ಲವೂ ಆಕರ್ಷಕ. ನಾನು ಮ್ಯೂಸಿಯಂನಲ್ಲಿದ್ದಾಗ ನನ್ನ ಪತ್ನಿ ಮೂರನೇ ಮಗುವಿಗೆ ಜನ್ಮ ನೀಡಿದ ಸಂತಸದ ಸುದ್ದಿಯನ್ನು ಆಲಿಸಿದೆ.





## ಭಾಗ: 16

ಮಕ್ಕಾ ಮತ್ತು ಮದೀನಗಳ ನಡುವೆ ಸುಮಾರು 450 ಕಿ. ಮೀಟರ್‌ಗಳಷ್ಟು ಅಂತರವಿದೆ. ಪ್ರವಾದಿಯವರು(ಸ) ತಮ್ಮ ಆಯುಷ್ಯದ 63 ವರ್ಷಗಳಲ್ಲಿ 53 ವರ್ಷವನ್ನೂ ಕಳೆದುದು ಮಕ್ಕಾದಲ್ಲಿ. ಸಂಸ್ಕೃತಿಯ ಹೆಸರಲ್ಲಿ, ಜನಾಂಗೀಯತೆಯ ಹೆಸರಲ್ಲಿ ಮತ್ತು ಶ್ರೀಮಂತಿಕೆಯ ಹೆಸರಲ್ಲಿ ನಡೆಯುತ್ತಿದ್ದ ಎಲ್ಲ ರೀತಿಯ ಅನ್ಯಾಯ ಮತ್ತು ಅನೈತಿಕತೆಗಳನ್ನು ಅವರು ಮಕ್ಕಾ ಜೀವನದಲ್ಲಿ ಬಾಲ್ಯದಲ್ಲಿಯೇ ಕಂಡು ಬೆಳೆದಿದ್ದರು. ಹೆಣ್ಣು ಮಗುವನ್ನು ಜೀವಂತವಾಗಿ ಹೂಳುತ್ತಿದ್ದ ಪ್ರದೇಶವೊಂದು ಮಸ್ಜಿದುಲ್ ಹರಾಮ್‌ನ ತುಸು ದೂರದಲ್ಲೇ ಇದೆ. ಆ ಪ್ರದೇಶದ ಅಕ್ಕ-ಪಕ್ಕ ಬೃಹತ್ ಕಟ್ಟಡಗಳು ತಲೆ ಎತ್ತಿ ನಿಂತಿವೆಯಾದರೂ ಆ ಜಾಗವನ್ನು ಮಾತ್ರ ಕುರುಹಾಗಿ ಖಾಲಿ ಬಿಟ್ಟು ಉಳಿಸಿಕೊಳ್ಳಲಾಗಿದೆ. ನಿಜವಾಗಿ, ಮಸ್ಜಿದುಲ್ ಹರಾಮ್ ಎಂಬುದು ಪ್ರವಾದಿಯವರು ಜನಿಸುವುದಕ್ಕಿಂತ ಮೊದಲೇ ಇತ್ತು. ಝುಂ ಝುಂ ಪ್ರವಾದಿಯವರ ಕೊಡುಗೆಯಲ್ಲ. ಸಫಾ-ಮರ್ವಾಗಳು ಮತ್ತು ಅದರ ಸುತ್ತ ಇರುವ ಐತಿಹಾಸಿಕ ಸಂಗತಿಗಳಲ್ಲೂ ಪ್ರವಾದಿಯವರಿಗೆ ಯಾವ ಪಾತ್ರವೂ ಇಲ್ಲ. ಕಅಬಾಲಯವೂ ಪ್ರವಾದಿಯವರ ಕೊಡುಗೆಯಲ್ಲ. ಒಂದು ರೀತಿಯಲ್ಲಿ, ಮಕ್ಕಾವು ಪ್ರವಾದಿಯವರ ಜನನಕ್ಕಿಂತ ಮೊದಲೇ ಒಂದಕ್ಕಿಂತ ಹೆಚ್ಚು ಐತಿಹಾಸಿಕ ಕುರುಹುಗಳನ್ನು ಮತ್ತು ಪಾವಿತ್ರ್ಯದ ಸ್ಥಳಗಳನ್ನು ಹೊಂದಿದ್ದ ಪ್ರಸಿದ್ಧ ಪ್ರದೇಶವಾಗಿತ್ತು. ಪ್ರವಾದಿಯವರ ಕೌಟುಂಬಿಕ ಬೇರುಗಳೆಲ್ಲ ಇದ್ದುದು ಮಕ್ಕಾದಲ್ಲಿ. ಚಿಕ್ಕಪ್ಪ, ದೊಡ್ಡಪ್ಪರಿಂದ ಹಿಡಿದು ಇಸ್ಲಾಮಿನ ಆರಂಭ ಕಾಲದ ಅನುಯಾಯಿಗಳ ಸಹಿತ ಎಲ್ಲರೂ ಮಕ್ಕಾದವರೇ ಆಗಿದ್ದರು. ಖದೀಜ ಪತ್ನಿಯಾಗಿ ಅವರ ಬದುಕನ್ನು ಪ್ರವೇಶಿಸಿದ್ದೂ ಮಕ್ಕಾದಲ್ಲೇ. ಖದೀಜಾರನ್ನು ದಫನ ಮಾಡಿರುವುದೂ ಮಕ್ಕಾದಲ್ಲೇ. ಅವರಿಗೆ ಬಹಿಷ್ಕಾರ ಹಾಕಿದವರು, ಅವರ ಮೇಲೆ ಕಸ ಎಸೆದವರು, ಅವರನ್ನು ಹಿಂಸಿಸಿದವರು, ಸಾಷ್ಟಾಂಗದಲ್ಲಿದ್ದಾಗ ಒಂಟೆಯ ಕರುಳನ್ನು ತಲೆಗೆ ಹಾಕಿದವರು... ಎಲ್ಲರೂ ಮಕ್ಕಾದಲ್ಲೇ ಇದ್ದರು. ಆದರೆ ಮದೀನಾ ಹಾಗಲ್ಲ. ಈಗ ಅಸ್ತಿತ್ವದಲ್ಲಿರುವ ಎಲ್ಲ ಕುರುಹುಗಳಿಗೂ ಅವರೇ ಕಾರಣರು. ಮಸ್ಜಿದುನ್ನಬವಿಯನ್ನು ಅವರ ಕಾಲದಲ್ಲೇ

ಕಟ್ಟಲಾಯಿತು. ಜನ್ನತುಲ್ ಬಕೀಅ್‌ಗೆ ಚಾಲನೆ ಸಿಕ್ಕಿದ್ದು ಅವರಿಂದಲೇ. ಒಂದು ರೀತಿಯಲ್ಲಿ, ಮದೀನಾವನ್ನು ಪ್ರವಾದಿಯವರ ಮಾದರಿ ನಗರ ಎಂದು ಕರೆಯಬಹದು. ಅಲ್ಲಿ ಎಲ್ಲವೂ ಪ್ರವಾದಿಯವರಿಂದಲೇ ಆರಂಭವಾಯಿತು. ಮಕ್ಕಾದಿಂದ ಮದೀನಕ್ಕೆ ಸಾಗುವ 450 ಕಿ. ಮೀಟರ್‌ಗಳಷ್ಟು ಉದ್ದದ ಹಾದಿ ಮೌನವನ್ನೇ ಹೊದ್ದುಕೊಂಡ ಮರುಭೂಮಿಯೇ ಆಗಿದ್ದರೂ ಮತ್ತು ಬೃಹತ್ ಪರ್ವತಗಳಂತೆ ಬಿದ್ದುಕೊಂಡಿರುವ ಮರಳಿನ ದಿಬ್ಬಗಳೇ ಸರ್ವವ್ಯಾಪಿಯಾಗಿದ್ದರೂ ಮದೀನಾ ಹಾಗಲ್ಲ. ಮಕ್ಕಾದಿಂದ ಮದೀನಕ್ಕೆ ಬಸ್ಸಿನ ಮೂಲಕ ಸಾಗುವ ದಾರಿ ಅತ್ಯಂತ ನಿರ್ಜನವಾದುದು. ಮೈದಾನದಂತೆ ಕಾಣುವ ಮರುಭೂಮಿ. ಅಪರೂಪಕ್ಕೆ ಕಾಣಸಿಗುವ ಮಣ್ಣಿನಿಂದ ಕಟ್ಟಲಾಗಿರುವಂತೆ ಭಾಸವಾಗುವ ಪುಟ್ಟ ಪುಟ್ಟ ಮನೆಗಳು. ಉಳಿದಂತೆ ಒಂಟೆಗಳ ಸಾಲು. ಮಕ್ಕಾದಿಂದ ಸುಮಾರು 150 ಕಿ. ಮೀಟರ್ ದೂರಕ್ಕೆ ತಲುಪಿದಾಗ ಬದ್ರ್ ಯುದ್ಧ ನಡೆದ ಸ್ಥಳ ಸಿಗುತ್ತದೆ. ಜೊತೆಗೆ ಬದ್ರ್‌ನಲ್ಲಿ ಹುತಾತ್ಮರಾದ ಪ್ರವಾದಿ ಅನುಯಾಯಿಗಳ ಸಮಾಧಿ ಸ್ಥಳವೂ ಇದೆ. ಆದರೆ ಆ ಇಡೀ ಪ್ರದೇಶವನ್ನು ಕಂಪೌಂಡು ಕಟ್ಟಿ ಸಂರಕ್ಷಿಸಿ ಇಡಲಾಗಿದೆ. ಅಲ್ಲಿಗೆ ಪ್ರವೇಶವೂ ಇಲ್ಲ. ಈ ಒಂದು ಐತಿಹಾಸಿಕ ಸ್ಥಳವನ್ನು ಬಿಟ್ಟರೆ ಉಳಿದಂತೆ ಈ ದಾರಿಯಲ್ಲಿ ನಿಂತು ವೀಕ್ಷಿಸಲೇಬೇಕಾದ ಚಾರಿತ್ರಿಕ ಹಿನ್ನೆಲೆಯ ಸ್ಥಳಗಳು ಇಲ್ಲವೇ ಇಲ್ಲ ಅನ್ನುವಷ್ಟು ಕಡಿಮೆ. ಮರುಭೂಮಿಯ ಮರಳು, ದಿಬ್ಬ, ಒಂಟೆಗಳು ಮತ್ತು ಮೌನ... ಇವೇ ಮಕ್ಕಾ ಮತ್ತು ಮದೀನಾದ ನಡುವಿನ 450 ಕಿ. ಮೀಟರ್ ಹಾದಿಯ ವಿಶೇಷತೆ. ಆದರೆ ಮದೀನಕ್ಕೆ ತಲುಪಿದ ಕೂಡಲೇ ಎಲ್ಲವೂ ಬದಲಾಗಿ ಬಿಡುತ್ತದೆ. ಅತ್ಯಂತ ಶಾಂತಿಪೂರ್ಣ ಮತ್ತು ಶಾಂತ ವಾತಾವರಣದ ನಗರ ಇದು. ಮಸ್ಜಿದುಲ್ ಹರಾಮ್‌ನಲ್ಲಿ ನಿರ್ಮಾಣ ಕಾಮಗಾರಿಯ ಕರ್ಕಶ ಮತ್ತು ಅಡೆ–ತಡೆ ಇದ್ದರೆ ಮದೀನದಲ್ಲಿ ಎಲ್ಲವೂ ಶಾಂತ ಶಾಂತ. ಮಸ್ಜಿದುನ್ನಬವಿಯ ನಿರ್ಮಾಣವೂ ಮಸ್ಜಿದುಲ್ ಹರಾಮ್‌ಗಿಂತ ತೀರಾ ಭಿನ್ನ. ಪಂಚ ಭುಜಾಕೃತಿಯಲ್ಲಿ ಕಟ್ಟಲಾದ ಮಸೀದಿ ಇದು. ಅಂತಸ್ತು ಇಲ್ಲದ ಮತ್ತು ನೆಲದಲ್ಲಿ ವಿಶಾಲವಾಗಿ ಹರಡಿಕೊಂಡಿರುವ ಮಸೀದಿ. ನಮಾಝ್‌ನ ಒಂದು ಸಾಲಿನಲ್ಲಿ ಸುಮಾರು 750ರಷ್ಟು ಜನರು ಒಮ್ಮೆಗೇ ನಿಲ್ಲಬಹುದಾದಷ್ಟು ವಿಶಾಲವಾಗಿ ಈ ಮಸೀದಿಯನ್ನು ನಿರ್ಮಿಸಲಾಗಿದೆ. ಬಿಸಿಲನ್ನು ತಪ್ಪಿಸುವುದಕ್ಕೆ ಎತ್ತರದಲ್ಲಿ ದೊಡ್ಡ ದೊಡ್ಡ ಕೊಡೆಗಳಿವೆ. ಈ ಕೊಡೆಗಳು ಎಷ್ಟು ವಿಶಾಲವಾಗಿವೆ ಎಂದರೆ ಒಂದು ಕೊಡೆಯು ಸುಮಾರು 250 ಮಂದಿಗೆ ನೆರಳನ್ನು ಕೊಡಬಹುದಾದಷ್ಟು ಅಗಲವಾಗಿದೆ. ಈ ಕೊಡೆಗಳು ರಿಮೋಟ್ ಕಂಟ್ರೋಲ್‌ನಿಂದ ನಿಯಂತ್ರಿಸಲ್ಪಡುತ್ತಿದ್ದು ಸಂಜೆಯಾಗುತ್ತಲೇ ಮಡಚಿಕೊಳ್ಳುತ್ತವೆ. ಮಡಚಿಕೊಂಡ ಕೊಡೆಯನ್ನು ನೋಡುವಾಗ ನಮ್ಮ ಕಡೆಯ ಬಾವಲಿಯ ನೆನಪಾಗುತ್ತದೆ. ಕೊಡೆ ಎಂದು ಗೊತ್ತಾಗದಷ್ಟು ಚಿಕ್ಕದಾಗಿ ಅದು ಕಂಭಕ್ಕೆ ಅಂಟಿಕೊಂಡಿರುತ್ತದೆ. ಮಸ್ಜಿದುಲ್ ಹರಾಮ್‌ನಲ್ಲಿ ಬಿರು ಬಿಸಿಲಿದ್ದರೂ ಈ ಕೊಡೆಯ ವ್ಯವಸ್ಥೆಯಿಲ್ಲ.





ನಾನು ಅತ್ಯಂತ ಭಾವುಕನಾದದ್ದು ಪ್ರವಾದಿಯವರ ಸಮಾಧಿಗೆ ಮುಖಾ ಮುಖಿಯಾದಾಗ. ಅದೊಂದು ಅವಿಸ್ಮರಣೀಯ ಕ್ಷಣ. ಅವರ್ಣನೀಯ ಸಂದರ್ಭ. ನಮಗೆ ಬರೇ ಮೂರು ತೂತುಗಳಷ್ಟೇ ಕಾಣುತ್ತವೆ. ಮೂರು ತೂತುಗಳಲ್ಲಿ ಒಂದು ತೂತು ಪ್ರವಾದಿಯವರ ಸಮಾಧಿಗೆ ಸಂಬಂಧಿಸಿದ್ದರೆ ಇನ್ನೆರಡು ತೂತುಗಳು ಅಬೂಬಕರ್ ಮತ್ತು ಉಮರ್(ರ)ರಿಗೆ ಸಂಬಂಧಿಸಿವೆ. ತೂತುಗಳ ಹೊರತಾಗಿ ಇವತ್ತು ಬರಿಗಣ್ಣಿಗೆ ಬೇರೇನೂ ಕಾಣಿಸುವುದಿಲ್ಲ. ಪ್ರವಾದಿಯವರ ಸೊಂಟದ ನೇರಕ್ಕೆ ತಲೆಯ ಭಾಗ ಬರುವಂತೆ ಅಬೂಬಕರ್ ಅವರ ಸಮಾಧಿಯಿದೆ. ಅಬೂಬಕರ್ ಅವರ ಸೊಂಟದ ನೇರಕ್ಕೆ ತಲೆಯ ಭಾಗ ಬರುವಂತೆ ಉಮರ್(ರ) ಅವರ ಸಮಾಧಿಯಿದೆ. ಅದಕ್ಕೆ ನೇರವಾಗಿರುವುದೇ ಈ ಮೂರು ತೂತುಗಳು. ಆರಂಭ ಕಾಲದಲ್ಲಿ ಪ್ರವಾದಿ(ಸ), ಅಬೂಬಕರ್(ರ) ಮತ್ತು ಉಮರ್(ರ) ಸಮಾಧಿಗಳು ಬರಿಗಣ್ಣಿಗೆ ಕಾಣುವಷ್ಟು ಮುಕ್ತವಾಗಿದ್ದುವು. ಮಸ್ಜಿದುನ್ನಬವಿಯ ಸುತ್ತ ಪ್ರವಾದಿ ಪತ್ನಿಯರ ಮನೆಗಳು ಇದ್ದುವು. ಬಳಿಕ ಬಂದ ಆಡಳಿತಾಧಿಕಾರಿಗಳು ಮಸ್ಜಿದುನ್ನಬವಿಯ ಜೀರ್ಣೋದ್ಧಾರ ನಡೆಸಿದರು. ಆಕರ್ಷಕ ಕುಸುರಿ ಕೆಲಸಗಳ ಮೂಲಕ ಮಸ್ಜಿದುನ್ನಬವಿಯ ಸೌಂದರ್ಯಕ್ಕೆ ಮಹತ್ವ ನೀಡಿದರು. ಉಮರ್ ಬಿನ್ ಅಬ್ದುಲ್ ಅಝೀಝ್‌ರು ಖಲೀಫರಾಗಿದ್ದ ಕಾಲದಲ್ಲಿ ಮಸ್ಜಿದುನ್ನಬವಿಯ ಸುತ್ತ ಇದ್ದ ಪ್ರವಾದಿ ಪತ್ನಿಯರ ಮನೆಗಳನ್ನು ಕೆಡವಿ ಮಸ್ಜಿದುನ್ನಬವಿಯನ್ನು ವಿಸ್ತರಿಸಿದರು. ಆಯಿಷಾರ(ರ) ಮನೆಯನ್ನು ಮಸ್ಜಿದುನ್ನಬವಿಯ ಒಳಗೆ ಸೇರಿಸಿಕೊಂಡರು. ಅಲ್ಲದೇ ಬರೇ ಕಣ್ಣಿಗೆ ಕಾಣುತ್ತಿದ್ದ ಅವರ ಸಮಾಧಿಗಳ ಸುತ್ತ ಕರಿಗಲ್ಲುಗಳನ್ನು ಹಾಸಿದರು. ನಂತರದ ಕಾಲದಲ್ಲಿ ಮೂರು ಸಮಾಧಿಯ ಸುತ್ತ ಆಳ ಕಂದಕವನ್ನು ಅಗೆದು ಕಾಂಕ್ರೀಟಿನ ಮೂಲಕ ಭದ್ರ ಗೋಡೆಯನ್ನು ಕಟ್ಟಲಾದ ಪ್ರಸಂಗವೂ ನಡೆಯಿತು. ಅದರ ಹಿಂದೆಯೂ ಒಂದು ಕತೆಯಿದೆ. ಹಿಜರಿ 557ರಲ್ಲಿ ನಡೆದ ಘಟನೆ ಅದು. ಸುಲ್ತಾನುಲ್ ನೂರುದ್ದೀನ್ ಜಂಗಿಯವರು ಆಡಳಿತ ನಡೆಸುತ್ತಿದ್ದ ಕಾಲ. ಪ್ರವಾದಿಯವರ(ಸ) ಮೃತದೇಹವನ್ನು ಹೊತ್ತೊಯ್ಯುವ ಉದ್ದೇಶದೊಂದಿಗೆ ಬಂದ ಸ್ಪೈಯಿನ್‌ನ ತಂಡವೊಂದು ಮದೀನದ ಮನೆಯೊಂದರಲ್ಲಿ ತಂಗುತ್ತದೆ. ಆ ಮನೆಯಿಂದ ಪ್ರವಾದಿಯವರ ಸಮಾಧಿಗೆ ನೆಲದಡಿಯಲ್ಲಿ ಸುರಂಗ ಕೊರೆಯಲು ಪ್ರಾರಂಭಿಸುತ್ತದೆ. ಆದರೆ ಗುರಿ ತಲುಪುವುದಕ್ಕಿಂತ ಮೊದಲೇ ಸಂಚು ಬಹಿರಂಗವಾಗುತ್ತದೆ. ಆ ಕಾರಣದಿಂದಾಗಿ ಪ್ರವಾದಿ(ಸ), ಅಬೂಬಕರ್(ರ) ಮತ್ತು ಉಮರ್(ರ) ಸಮಾಧಿಗಳ ಸುತ್ತ ನೀರು ಸಿಗುವಷ್ಟು ಆಳಕ್ಕೆ ಕಂದಕವನ್ನು ಕೊರೆದು ಕಾಂಕ್ರೀಟಿನ ಗೋಡೆಯನ್ನು ಕಟ್ಟಲಾಗುತ್ತದೆ. ಇವತ್ತು ಪ್ರವಾದಿ ಮುಹಮ್ಮದ್‌ರದ್ದಾಗಲಿ, ಅಬೂಬಕರ್ ಮತ್ತು ಉಮರ್‌ರದ್ದಾಗಲಿ ಸಮಾಧಿಯನ್ನು ನೋಡುವ ಅವಕಾಶ ಯಾರಿಗೂ ಇಲ್ಲ. ಸರತಿ ಸಾಲಿನಲ್ಲಿ ನಿಂತು ಮೂರು ತೂತುಗಳ ಹತ್ತಿರದಿಂದ ಸಾಗುವ ಅವಕಾಶವಷ್ಟೇ ಯಾತ್ರಾರ್ಥಿಗಳಿಗಿದೆ. ಅಲ್ಲಿ ನಿಲ್ಲುವುದಕ್ಕೂ ಅಧಿಕಾರಿಗಳು ಅವಕಾಶ ಕೊಡುವುದಿಲ್ಲ.

ಆದರೂ ಪ್ರವಾದಿಯವರ ತೀರಾ ಸನಿಹಕ್ಕೆ ತಲುಪಿದ್ದೇನೆ ಅನ್ನುವ ಖುಷಿ ಮತ್ತು ಅದು ಕೊಡುವ ರೋಮಾಂಚನವು ಬದುಕಿಡೀ ಕಾಪಿಡಬಹುದಾದಷ್ಟು ಬೆಲೆಬಾಳುವಂತಹದ್ದು. ನಾನಂತೂ ಅಂಥದ್ದೊಂದು ಘಳಿಗೆಯನ್ನು ನಿರೀಕ್ಷಿಸಿರಲೇ ಇಲ್ಲ. ಅಚಾನಕ್ಕಾಗಿ ನಾನು ಉಮ್ರಾ ಯಾತ್ರಾರ್ಥಿಗಳ ಭಾಗವಾದೆ. ಮಸ್ಜಿದುಲ್ ಹರಾಮನ್ನು ಪ್ರವೇಶಿಸಿದೆ. ಕಅಬಾವನ್ನು ಸಂದರ್ಶಿಸಿದೆ. ಮಸ್ಜಿದುನ್ನಬವಿಯನ್ನು ಕಣ್ತುಂಬಿಸಿಕೊಂಡೆ. ಕೊನೆಗೆ ಪ್ರವಾದಿಯವರ ತೀರಾ ತೀರಾ ಸನಿಹಕ್ಕೂ ಹೋದೆ. ಸಲಾಂ ಹೇಳಿದೆ. ಭಾವೋದ್ವೇಗಗೊಂಡೆ. ಪ್ರವಾದಿಯವರ ಮನೆ ಮತ್ತು ಮಸೀದಿಯ ನಡುವಿನ ಜಾಗದಲ್ಲಿ (ರೌಳ) ಎರಡು ರಕಅತ್ ನಮಾಝ್ ನಿರ್ವಹಿಸಿದೆ. ಪ್ರವಾದಿಯವರು ಈ ಜಾಗವನ್ನು ಸ್ವರ್ಗ ಎಂದು ಕರೆದಿದ್ದಾರೆ. ಅತ್ಯಂತ ನೂಕು ನುಗ್ಗಲು ಇರುವ ಸಣ್ಣ ಸ್ಥಳ ಇದು. 22 ಮೀಟರ್ ಉದ್ದ ಮತ್ತು 15 ಮೀಟರ್ ಅಗಲ ಇರುವ ತೀರಾ ಕಿರಿದಾದ ಜಾಗ. ಇಲ್ಲಿ ನಮಾಝ್ ಮಾಡುವುದೇ ಒಂದು ಸಾಹಸ. ಹಿಂದೆ ಇರುವ ಜನರ ಒತ್ತಡದ ಮಧ್ಯೆ ಸಾವಕಾಶವಾಗಿ ನಮಾಝ್ ಮಾಡುವುದು ಸುಲಭ ಅಲ್ಲ. ಒಬ್ಬರ ಮೇಲೆ ಇನ್ನೊಬ್ಬರು ಬೀಳಬಹುದಾದ ಸಂದರ್ಭಗಳು ಎದುರಾಗುತ್ತಲೇ ಇರುತ್ತವೆ. ನಮಾಝ್‌ನಲ್ಲಿ ಏಕಾಗ್ರತೆಗೆ ಭಂಗವೂ ಉಂಟಾಗುತ್ತದೆ. ಹಿಂದೆ ಇರುವವರು ಎಲ್ಲಿ ಮೈ ಮೇಲೆ ಬೀಳುತ್ತಾರೋ ಅನ್ನುವ ಒದ್ದಾಟದೊಂದಿಗೆ ನಮಾಝ್ ನಿರ್ವಹಿಸಬೇಕಾದ ಸಂಕಟ ಎದುರಾಗುತ್ತದೆ. ಮುಖ್ಯವಾಗಿ ಸುಜೂದ್ ಹಾಕುವ ಸಂದರ್ಭದಲ್ಲಿ ಈ ಸಮಸ್ಯೆ ಹೆಚ್ಚು. ಬಹುಶಃ, ಆ ಜಾಗದಲ್ಲಿ ನಮಾಝ್‌ನ ಸ್ವರೂಪವೇ ಹಾಗಿರಬಹುದು ಎಂದು ನನಗನಿಸಿತು. ಅಲ್ಲಿ ನಿಲ್ಲುವುದಕ್ಕೆ ಜಾಗ ಸಿಗುವುದೇ ಒಂದು ಭಾಗ್ಯ. ವ್ಯಕ್ತಿ ಅಲ್ಲಿಗೆ ತಲುಪಿದ ಮೇಲೆ ಯಾವ ಏಕಾಗ್ರತೆಯೊಂದಿಗೆ ನಮಾಝ್ ಮಾಡಿದ ಎಂಬುದು ಮುಖ್ಯವಾಗುವುದಿಲ್ಲ. ನಮಾಝ್‌ನ ಬಯಕೆಯೇ ಆತನ ನಮಾಝಿನ ಸಿಂಧುತ್ವಕ್ಕೆ ಸಾಕಾಗಬಹುದು ಎಂದು ಅಂದುಕೊಂಡೆ. ಅಲ್ಲಿಂದ ಹೊರಬರುವಾಗ ನಾನು ಅತ್ಯಂತ ನಿರಾಳವಾಗಿದ್ದೆ. ಅತ್ಯಂತ ಸಂತೃಪ್ತ ವ್ಯಕ್ತಿ.

❖ ❖ ❖

ಊರಿಗೆ ಮರಳಿದ ಕೂಡಲೇ ತಾಯಿಯನ್ನು ಭೇಟಿಯಾದೆ. ಅವರು ನನ್ನ ಹತ್ತಿರ ಕುಳಿತರು. ಕಣ್ತುಂಬ ನೋಡಿದರು. ಬಳಿಕ ನನ್ನ ಎರಡೂ ಅಂಗೈಯನ್ನು ಮುಂದೆ ಮಾಡುವಂತೆ ವಿನಂತಿಸಿದರು. ಕಣ್ಣಿಗೊತ್ತಿಕೊಂಡರು. ಆ ಸಂದರ್ಭದಲ್ಲಿ ತಾಯಿಯ ಮುಖದಲ್ಲಿ ಕಂಡ ತೃಪ್ತಿ ಮತ್ತು ಆನಂದವನ್ನು ನಾನೆಂದೂ ಮರೆಯಲಾರೆ. ನನ್ನೆರಡು ಕೈಗಳಿಂದ ಅವರು ಪಡೆದುಕೊಂಡ ಆಧ್ಯಾತ್ಮಿಕ ಅನುಭೂತಿಯು ನಾನು ಸ್ವತಃ ಯಾತ್ರೆಗೈದು ಪಡೆದುಕೊಂಡುದಕ್ಕಿಂತಲೂ ಹೆಚ್ಚಿರುವಂತೆ ಅನಿಸಿತು. ಮಾತು ಮೌನವಾಯಿತು.





## ನನ್ನ ಪ್ರಕಟಿತ ಕೃತಿಗಳು

1. **ದಾಯಿರ** (ಕಥಾ ಸಂಕಲನ)
   (2007ರ ಮುಸ್ಲಿಮ್ ಸಾಹಿತ್ಯ ಪ್ರಶಸ್ತಿ ಪುರಸ್ಕೃತ)
2. **ಜಾಗತೀಕರಣ ಮತ್ತು ಸಂಸ್ಕೃತಿ** (ವೈಚಾರಿಕ ಕೃತಿ)
3. **ಚಾಟಿಯೇಟು** (ಸನ್ಮಾರ್ಗ ಸಂಪಾದಕೀಯ ಸಂಗ್ರಹ)
4. **ಮದ್ಯಪಾನ: ಪರ–ವಿರೋಧ ಮತ್ತು ನಿಜ** (ವಿಶ್ಲೇಷಣಾ ಕೃತಿ)
5. **ಸರಸ–ಸಲ್ಲಾಪ** (ಲಲಿತ ಪ್ರಬಂಧ)

■ ಎಣ್ಣೆ ಬತ್ತಿದ ಲಾಟೀನು ■

## ಓದು ಪ್ರಕಾಶನದಲ್ಲಿ ಪ್ರಕಟವಾದ ಕೃತಿಗಳು

ವಿದ್ಯಾರ್ಥಿಗಳು ಮತ್ತು ವ್ಯಕ್ತಿತ್ವ ವಿಕಸನ– ✍ ಮುರಳೀಧರನ್ ಮುಲ್ಲಮಟ್ಟಮ್
(ಅನು: ಅಬ್ದುಲ್ ಸಲಾಮ್ ದೇರಳಕಟ್ಟೆ)